TIGHT BINDING BOOK

UNIVERSAL LIBRARY
OU_198473
UNIVERSAL LIBRARY

ಆನಂದಗ್ರಂಥಮಾಲಾ- ವರುಷ ೧-ಕುಸುಮ-೨.

# ಹೂ ಅರಳಿತು

(ತೆಲುಗಿನ ಪ್ರಸಿದ್ಧ ಕಥೆಗಳ ಸಂಗ್ರಹ)

ಶ್ರೀ ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ.

ಮೇ ೧೯೫೦ ]

[ ಬೆಲೆ :- ೨-೮-೦

## ಸಲಹೆಗಾರರು

ಪ್ರೊ. ಎಸ್. ಆರ್. ಮಳಗಿ ಎಂ. ಎ, ಬಿ. ಟಿ.,
ಶ್ರೀ. ಎಸ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ.,
ಶ್ರೀ. ಆರ್. ವ್ಹಿ. ಕುಲಕರ್ಣಿ ಎಂ. ಎ.,
ಶ್ರೀ. ದೇಸಾಯಿ ದತ್ತಮೂರ್ತಿ

[ ಎಲ್ಲ ಹಕ್ಕುಗಳೂ ಗ್ರಂಥಕರ್ತರವು ]

### ಶ್ರೀ ವೆಂಕೋಬಾಚಾರ್ಯರ ಇತರ ಕೃತಿಗಳು

೧. ವಿಧಿ ತಂದ ವಧು (ಎರಡನೆಯ ಆವೃತ್ತಿ ಅಚ್ಚಿನಲ್ಲಿ)
೨. ಕುಲವಿಲ್ಲದ ಹೆಣ್ಣು (ಕಾದಂಬರಿ)
೩. ವೃಂದ (ಕಾದಂಬರಿ)
೪. ಅರ್ಪಣ (ಮೊಪಾಸನ ಕಥಾಸಂಗ್ರಹ)

### ಅಚ್ಚಿನಲ್ಲಿ

೧. ಮೊಪಾಸನ ಓಲೆಗಳು
೨. 'ನಾರಾಯಣರಾವು' (ಪ್ರಸಿದ್ಧ ತೆಲುಗು ಕಾದಂಬರಿ)

ಪ್ರಕಾಶಕರು
**ಶ್ರೀ ಪಿ. ವೆಂಕೋಬಾಚಾರ್ಯ**
ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಮುದ್ರಕರು
**ಶ್ರೀ ಎಸ್. ವ್ಹಿ. ಶ್ರೇಷ್ಠಿ**
ರಾಯಲ್ ಪ್ರಿಂ. ಪ್ರೆಸ್, ಹುಬ್ಬಳ್ಳಿ.

# ಮುನ್ನುಡಿ

ನನ್ನ ಹಿರಿಯ ಮಿತ್ರರಾದ ಶ್ರೀ ಪಿ. ವೆಂಕೋಬಾಚಾರ್ಯರ ಈ ಕಥಾ ಸಂಗ್ರಹಕ್ಕೆ ಮುನ್ನುಡಿ ಬರೆಯುವಾಗ ನನಗೆ ಸಂತೋಷವೆನ್ನಿಸುತ್ತದೆ. ಈ ಲೇಖಕರ ಪರಿಚಯ ಮಾಡಿಕೊಡುವ ಉದ್ದೇಶ ಈ ಮುನ್ನುಡಿಯದಲ್ಲ. ಲೇಖಕರ ಪರಿಚಯಾತ್ಮಕ ಮುನ್ನುಡಿ ಬರೆಯುವ ರೀತಿ ಹಿರಿಯ ಸಾಹಿತಿಗಳಿಗೆ ಯೋಗ್ಯವಾದದ್ದು. ಈ ಲೇಖಕರ ಈ ಸ್ತುತ್ಯ ಪ್ರಯತ್ನದ ಬಗ್ಗೆ ಎರಡು ಮಾತು ಮಾತ್ರ ಹೇಳುವುದು ಇಲ್ಲಿ ಅವಶ್ಯ ಹಾಗೂ ಪ್ರಸ್ತುತ.

ಸಣ್ಣಕತೆಗಳನ್ನು ರಚಿಸುವ ಕಲೆ ಸಾಮಾನ್ಯವಾಗಿ ತಿಳಿದುಕೊಂಡಷ್ಟು ಸುಲಭವಲ್ಲ. ಕಾದಂಬರಿಗಳಲ್ಲಿಯ ಕಥಾ ನಿರೂಪಣೆಗಿಂತ ಲೇಖಕ ಇಲ್ಲಿ ಹೆಚ್ಚಿನ ಕೌಶಲ್ಯವನ್ನು ತೋರಿಸಬೇಕಾಗುತ್ತದೆ. ಕಾದಂಬರಿಯ ರೀತಿಯಲ್ಲಿ ಗೊಮ್ಮಟೇಶ್ವರನ ವಿಸ್ತಾರ-ಉನ್ನತಿಗಳಿದ್ದರೆ ಸಣ್ಣಕತೆಯಲ್ಲಿ ಶಿಲಾಬಾಲಿಕೆಯರ ನಯ-ನಾಜೂಕುಗಳಿವೆ. ಸಣ್ಣಕತೆಗಾರನಿಗೆ ಇರುವ ಅವಕಾಶವೇ ಕಡಿಮೆ. ಕಾದಂಬರಿಕಾರನಂತೆ ಅನೇಕ ಪಾತ್ರಗಳನ್ನಾಗಲಿ, ಹೊಸ ಸನ್ನಿವೇಶಗಳನ್ನಾಗಲಿ ಅವನು ನಿರ್ಮಿಸಿಕೊಳ್ಳಲಾರ. ಪರಿಣಾಮೈಕ್ಯತೆ ಸಣ್ಣಕತೆಯ ಜೀವಾಳ. ಅದನ್ನು ಸಾಧಿಸಲು ಅವನು ಭಾವನೆಗಳ ಉತ್ಕಟತೆಯನ್ನು ಹೊಂದಿರಲೇಬೇಕು. ಒಂದು ಕಾದಂಬರಿಯನ್ನು ಕುಗ್ಗಿಸಿ ಬರೆದರೆ ಅದು ಉತ್ತಮ ಸಣ್ಣಕತೆಯಾಗಲಾರದು. ಹೂವು ಅರಳಿ ಹಣ್ಣಾಗುವಂತೆ ಸಣ್ಣಕತೆ ಲೇಖಕನ ಮನಸ್ಸಿನಲ್ಲಿ ರೂಪುಗೊಳ್ಳುವಾಗಿನಿಂದ ಮೊದಲೊಂದು ಕೃತಿಯಾಗುವವರೆಗೆ ಅದರ ಸ್ವರೂಪ ಸುನಿಶ್ಚಿತವಾಗಿರಬೇಕು. ಆದ್ದರಿಂದ ಉತ್ತಮ ಸಣ್ಣಕತೆಗಳನ್ನು ಬರೆಯಲು ಒಂದು ವಿಶಿಷ್ಟ ಮನೋವೃತ್ತಿಯೇ ಬೇಕೆಂಬ ಮಾತನ್ನು ಅನುಭವವುಳ್ಳವರು ಒಪ್ಪುತ್ತಾರೆ. ಈ ಅವರ ಸ್ವಭಾವದ ಮೂಲಕವೇ ಅದೊಂದು ರಸಬಿಂದುವೆಂದೂ, ಗದ್ಯದಲ್ಲಿ ಬರೆದ ಭಾವಗೀತವೆಂದೂ ಅದನ್ನು ಕರೆಯುವುದುಂಟು.

ಇಂದಿನ ಓದುಗ ಸಣ್ಣಕತೆಯನ್ನೇ ಹೆಚ್ಚಾಗಿ ಮೆಚ್ಚಿದರೆ ಆಶ್ಚರ್ಯವಿಲ್ಲ. ಹೆಚ್ಚು ವಿರಾಮವಿಲ್ಲದ ಈ ಕಾಲದಲ್ಲಿ ಸಾಮಾನ್ಯ ಜನತೆಯ ಒಲವು ಸಣ್ಣಕತೆಯ ಕಡೆಗಿದೆ. ಜನಮನವನ್ನು ಸೆರೆಹಿಡಿದು, ತಿದ್ದಿ ಸಂಸ್ಕಾರಗೊಳಿಸುವ

ಶಕ್ತಿ ಸಣ್ಣಕತೆಯಲ್ಲಿ ವಿಶೇಷವಾಗಿದೆ. ಸರಿಯಾಗಿ ಉಪಯೋಗಿಸಿಕೊಂಡರೆ ಸಣ್ಣಕತೆ ಮನರಂಜನೆಯೊಡನೆ ಮನಕ್ಕೆ ಸಂಸ್ಕಾರವನ್ನು ಈಯಲು ತಕ್ಕ ಸಾಧನವಾಗಿದೆ. ಮರಾಠಿ, ತೆಲುಗು ಸಾಹಿತ್ಯಗಳಲ್ಲಿಯಂತೆ ಕನ್ನಡದಲ್ಲಿ ಅನೇಕ ಸಣ್ಣಕತೆಗಳು ದಿನಾಲು ಜನ್ಮತಾಳುತ್ತಿದ್ದರೂ ಅನೇಕ ಕತೆಗಳಲ್ಲಿ ಸತ್ತ್ವವಾಗಲಿ, ಗುರಿಯಾಗಲಿ ಇಲ್ಲ. ಎಷ್ಟೋ ವಾರ-ಮಾಸಿಕ-ಪತ್ರಿಕೆಗಳಲ್ಲಿ, ಕತೆಗಾಗಿಯೇ ಮೀಸಲಾದ ಪತ್ರಿಕೆಗಳಲ್ಲಿ ಕಂಡುಬರುವ ಸಣ್ಣಕತೆಗಳಲ್ಲಿ ಅದರಲ್ಲಿರಬೇಕಾದ ಜೀವಾಳವೇ ಇಲ್ಲ. ನಡೆದು ಹೋದ ಇಲ್ಲವೆ ಕಲ್ಪಿತ ಒಂದು ಪ್ರಸಂಗವನ್ನು ನಾಲ್ಕೈದು ಪುಟವಲ್ಲಿ ಹೇಳಿದರೆ ಸಣ್ಣಕತೆಯಾಯಿತೆಂದು ಕೆಲವರ ಭಾವನೆ ಇದ್ದಂತೆ ತೋರುತ್ತದೆ. ಸಾಹಿತ್ಯದ ಬೆಳೆ ಹುಲುಸಾಗಿ ಬರುತ್ತಿರುವುದು ಶ್ಲಾಘ್ಯವೇ ಆದರೂ ಸಣ್ಣಕತೆಯೆಂದರೆ ರಸನಿರ್ಮಿತಿ ಎಂಬ ದೃಷ್ಟಿಯಿಂದ ನೋಡಿದಾಗ ಅಸಮಾಧಾನವಾಗುತ್ತದೆ.

ಇಂದು ಕನ್ನಡದಲ್ಲಿ ಸಣ್ಣ ಕತೆ ಒಂದು ನೆಲೆಗೆ ಬಂದಿದೆ ಮಾತ್ರವಲ್ಲ, ಬಂದು ನಿಂತಿದೆ ಎಂದು ಹೇಳಿದರೆ ವಸ್ತುಸ್ಥಿತಿಯನ್ನು ಹೇಳಿದಂತೆಯೆ. ಹಿರಿಯ ಸಣ್ಣಕತೆಗಾರರಾದಂಥ ಶ್ರೀಗಳಾದ ಮಾಸ್ತಿ, ಆನಂದ, ಅ. ನ. ಕೃ, ಮುಗಳಿ, ಬೆಟಗೇರಿ ಕೃಷ್ಣಶರ್ಮ ಮೊದಲಾದ ಅನೇಕರ ಉತ್ತಮ ಸಣ್ಣ ಕತೆಯ ಸೃಷ್ಟಿಗೂ ಇಂದು ಅನೇಕ ಪತ್ರಿಕೆಗಳಲ್ಲಿ ಕಂಡುಬರುವ ಸಣ್ಣ ಕತೆಗಳಿಗೂ ಗುಣದಲ್ಲಿ ಅಂತರ ಬಹಳವಾಗಿದೆ. ಎಲ್ಲೋ ಅಲ್ಲೊಂದು ಇಲ್ಲೊಂದು ಒಳ್ಳೆಯ ಕತೆ, ಕಥಾಸಂಗ್ರಹ ಕಂಡುಬರುತ್ತಿದೆ. ಇಂದಿನ ತರುಣ, ಹೊಸ ಹುರುಪಿನ ಸಣ್ಣ ಕತೆಗಾರನಿಗೆ ಜೀವನದ ಜಟಿಲತೆಯ ಅನುಭವವಿಲ್ಲ; ಉತ್ತಮ ಸಾಹಿತ್ಯದ ಪರಿಚಯ ಸಾಕಷ್ಟಿಲ್ಲ ಎಂದು ಹೇಳಿದರೆ ಅವನಲ್ಲಿದ್ದ 'ಕ್ರಿಯಾತ್ಮಕ ಪ್ರತಿಭೆ'ಯ (Creative Genius) ಕಿಡಿಯನ್ನು ಅಲ್ಲಗಳೆದಂತಾಗಲಿಲ್ಲ. ಆ ಕಿಡಿಯನ್ನು ಜೀವನದ ಅನುಭವಗಳಿಂದ, ಪರಿಶ್ರಮದಿಂದ ಉಜ್ವಲವಾಗಿಸುವುದು ಅವನ ಕರ್ತವ್ಯವಾಗಿದೆ. ಇದೇ ಕಥಾಸಂಗ್ರಹದಲ್ಲಿ ಬಂದಿರುವ 'ಕತೆಗಾರನ ಕನಸು' ಎಂಬ ಕತೆಯಲ್ಲಿ ಅದ್ಭುತ ಕತೆಗಾರನಾದ ಕಾಲನು ಹೇಳುವ ಮಾತುಗಳನ್ನು ಇಲ್ಲಿ ಉದಾಹರಿಸಬಹುದು :

" ಜೀವನದ ಪೂರ್ಣಗುರಿಯನ್ನು ತಿಳಿಯುವ ಮನಸ್ಸುಳ್ಳವನಿಗೇ

ಕತೆ ಬರೆಯುವ ಯೋಗ್ಯತೆ ಇದೆ........ಕತೆಗಳನ್ನು ಬರೆದು ಸಾಹಿತಿಯಾಗ ಬೇಕೆಂದು ನಿನ್ನ ಇಚ್ಛೆ ಇದ್ದರೆ ಮೊದಲಿಗೆ ಜೀವನದ ರಹಸ್ಯ ತಿಳಿದುಕೋ. ಉದಾರ ಮನಸ್ಸಿನವನಾದಾಗಲೇ ನಿನಗೆ ಕತೆ ಬರೆಯುವ ಅರ್ಹತೆ ಬರುವದು. ''

ನೆರೆಯ ಸೋದರ ಸಾಹಿತ್ಯಗಳಲ್ಲಿಯ ಉತ್ತಮ ಕೃತಿಗಳನ್ನು ಅವ ಲೋಕಿಸುವುದು ಇಂಥ ಪ್ರಯತ್ನಗಳಲ್ಲೊಂದಾಗಿದೆ. ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಬೇರೆ ಬೇರೆ ಸಾಹಿತ್ಯಗಳ ನಿಕಟಪರಿಚಯ ಅವಶ್ಯ. ತೆಲುಗು ಭಾಷೆ ಅರ್ಥವಾಗದ ಕನ್ನಡಿಗರ ಸಲುವಾಗಿ ಈ 'ಹೂ ಅರಳಿತು' ಕಥಾ ಸಂಗ್ರಹ ಅರಳಿದೆ. ತೆಲುಗು ಕನ್ನಡಗಳ ಸಂಬಂಧ ಬಹಳ ಪ್ರಾಚೀನ ಕಾಲದ್ದು. ಹಿಂದೆ ಕನ್ನಡ ಸಾಹಿತ್ಯದಿಂದ ತೆಲುಗು ತುಂಬ ಉಪಕೃತವಾಗಿದೆ. ಇಂದು ತೆಲುಗು-ಕನ್ನಡಗಳು ಅನ್ಯೋನ್ಯವಾಗಿ ಸಹಕಾರದಿಂದ ಬೆಳೆಯ ಬೇಕಾಗಿವೆ. ನೆರೆಯ ಪ್ರಾಂತಗಳ ಸಾಹಿತ್ಯದಲ್ಲಿ ಯಾವ ಒಲವುಗಳಿವೆ ಎಂಬುದನ್ನು ಗಮನಿಸುವುದರಿಂದ ಕನ್ನಡ ಮತ್ತು ನೆರೆಯ ಪ್ರಾಂತಗಳಲ್ಲಿ ಸರಿಯಾದ ತಿಳಿವಳಿಕೆ ಹೆಚ್ಚಾಗಲು ಅನುಕೂಲ. ಈಯೆಲ್ಲ ದೃಷ್ಟಿಯಿಂದ ಈ ತೆಲುಗು ಕಥಾ ಸಂಗ್ರಹ ತುಂಬ ಸ್ತುತ್ಯ ಪ್ರಯತ್ನ.

ಈ ಸಂಗ್ರಹದಲ್ಲಿ ಬಂದಿರುವ ಕತೆಗಳೆಲ್ಲ ಪ್ರಾಯಶಃ ಸುಪ್ರಸಿದ್ಧ ಲೇಖಕರಿಂದಲೇ ತೆಗೆದುಕೊಂಡವುಗಳು. ಈ ಸಂಗ್ರಹದ ಮೊದಲನೆಯ 'ಹೂ ಅರಳಿತು' ಎಂಬ ಕತೆಯನ್ನು ಬರೆದವರು ಪ್ರಸಿದ್ಧ ತೆಲುಗು ಕತೆ ಗಾರರಾದ ಶ್ರೀ ಗುಡಿಪಾಟಿ ವೆಂಕಟಚಲಂ ಎಂಬವರು. ಇದೊಂದು ಸುಂದರ ರೂಪಕ ಕಥೆ. ಗದ್ಯದಲ್ಲಿ ಬರೆದ ಭಾವಗೀತ ಎನ್ನಿಸುವಷ್ಟು ಮನೋಹರವಾಗಿದೆ ಶೈಲಿ. ಇದರ ಕನ್ನಡದ ಅನುವಾದವಾದರೂ ತುಂಬ ಸೊಗಸಾಗಿದೆ. ಉಳಿದ ಕಥೆಗಳಲ್ಲಿ ವಿಷಯದ ದೃಷ್ಟಿಯಿಂದ ಹಾಗೂ ನಿರೂಪಣದ ದೃಷ್ಟಿಯಿಂದ ವೈವಿಧ್ಯವಿದೆ. 'ಆಶಾಜ್ಯೋತಿ'ಯಲ್ಲಿ ಸಾಂಕೇತಿಕತೆಯ ಸುಂದರ ಉಪಯೋಗವಿದ್ದರೆ, 'ಕತೆಗಾರನ ಕನಸಿ'ನಲ್ಲಿ ಕನಸಿನ ಉಪಯೋಗ ಲೇಖಕರು ಚೆನ್ನಾಗಿ ಮಾಡಿಕೊಂಡಿದ್ದಾರೆ. ಸಮಾ ಜದ ದೋಷಗಳನ್ನು ಎತ್ತಿ ತೋರಿಸುವ ವಿಡಂಬನೆ-ಟೀಕೆಗಳು 'ತಪ್ಪು ತಿಳಿವಳಿಕೆ' 'ಸಭ್ಯತೆ' ಕತೆಗಳಲ್ಲಿ ಕಂಡುಬರುತ್ತವೆ. 'ಆಣೆಕಲ್ಲಿನ ಮಳೆ'

ಹಾಗೂ ' ನಿನ್ನ ಋಣ ತೀರಿಸಿಕೊಂಡೆ ' ಇವುಗಳಲ್ಲಿ ದೈವ ಹೇಗೆ ಮಾನವ ನನ್ನು ತನ್ನ ಕೈಗೊಂಬೆಗಳಾಗಿ ಕುಣಿಸುತ್ತಿದೆ ಎಂಬುದು ಸೊಗಸಾಗಿ ಚಿತ್ರಿತ ವಾಗಿದೆ. ಮೊದಲನೆಯದರಲ್ಲಿ ದೈವದ ಅನಿರೀಕ್ಷಿತ ಸಹಾಯದ ಚಿತ್ರಣ ವಿದ್ದರೆ, ಎರಡನೆಯದರಲ್ಲಿ ವಿಧಿಯ ದುರ್ವಿಲಾಸವಿದೆ. ' ನಮಶ್ಶಿವಾಯ ' ದಲ್ಲಿ ಆ ಹೆಸರಿನ ವ್ಯಕ್ತಿಯ ಘನತೆಯನ್ನು ಚಿತ್ರಿಸಲಾಗಿದೆ. ಇದನ್ನು ವ್ಯಕ್ತಿಪ್ರಧಾನ ಸಣ್ಣಕತೆಯೆಂದು ಕರೆಯಬಹುದು. ' ಧರ್ಮಬುದ್ಧಿ ' ' ಮೂವರು ಮುದುಕರು ' ಇವುಗಳಲ್ಲಿ ಮಾನವಸ್ವಭಾವದ, ಮನಸ್ಸಿನ ದೌರ್ಬಲ್ಯವನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ ' ಸಂಕ್ರಾಂತಿ ಹಬ್ಬ ' ಮನೆಮನೆಗಳಲ್ಲಿ ನಡೆಯುವ 'ದಶಮಗ್ರಹ'ನ ಹಾವಳಿಯನ್ನು ವಿನೋದ ಮಯವಾಗಿ ವರ್ಣಿಸುತ್ತದೆ. ಹೆಣ್ಣಿನ ಹೃದಯದ ಮಾರ್ದವ, ತ್ಯಾಗ ಬುದ್ಧಿ, ಶ್ರದ್ಧೆ ಹಾಗೂ ತದ್ವಿರುದ್ಧವಾಗಿ ಗಂಡಿನ ಸ್ವಾರ್ಥ—ಇವುಗಳನ್ನು ಮಾರ್ಮಿಕವಾಗಿ ಚಿತ್ರಿಸುವ ಶ್ರೀಮತಿ ಇಲ್ಲಿಂದಲ ಸರಸ್ವತಿದೇವಿಯವರ ' ಪಿತೃಹೃದಯ ' ತುಂಬ ಸೊಗಸಾದ ಕತೆಯಾಗಿದೆ. ಶ್ರೀಮತಿಯವರು ಈ ಕತೆಯಲ್ಲಿ ಸ್ತ್ರೀ ಸ್ವಭಾವದ ಘನತೆಯನ್ನು ಚೆನ್ನಾಗಿ ಚಿತ್ರಿಸಿದ್ದಾರೆ. " ಹಸಿವು " ಸ್ವತಂತ್ರ ವಿಚಾರದ ಪ್ರಗತಿಪರ ಸ್ತ್ರೀಯೋರ್ವಳಕಡೆಗೆ ಸಮಾಜ ಹೇಗೆ ನೋಡುತ್ತದೆ ಎಂಬುದನ್ನು ತೋರಿಸುತ್ತಿದ್ದರೆ, ಅಣ್ಣ-ತಮ್ಮಂದಿರ ವೈಮನಸ್ಸು ಆಸ್ತಿ ಪಾಲು ಮಾಡಿಕೊಳ್ಳುವ ಬುದ್ಧಿಗಳನ್ನು ಗೆದ್ದಲುಗಳು ಹೇಗೆ ಮರೆಸಿವ ವೆಂಬುದನ್ನು " ಗೆದ್ದಲು " ನಿರೂಪಿಸುತ್ತದೆ

ಹೀಗೆ ಇಲ್ಲಿಯ ಕತೆಗಳಲ್ಲಿ ವೈವಿಧ್ಯವಿದೆ; ಅವು ಹೆಚ್ಚಾಗಿ ಜೀವನದ ವಾಸ್ತವ ಹಾಗೂ ಆದರ್ಶ ಚಿತ್ರಗಳೇ ಆಗಿವೆ ಎನ್ನಬಹುದು. ಈ ತೆಲುಗು ಲೇಖಕರ ಪರಿಚಯವನ್ನು ಈ ಪುಸ್ತಕದ ಕೊನೆಗೆ ಶ್ರೀ ವೆಂಕೋಬಾಚಾರ್ಯರು ಮಾಡಿಕೊಟ್ಟದ್ದು ಅನುಕೂಲವೂ, ಯೋಗ್ಯವೂ ಆಗಿದೆ.

ಆನಂದ ಗ್ರಂಥಮಾಲೆಯ ಎರಡನೆಯ ಕುಸುಮವಾದ ಈ ' ಹೂ-ಅರಳಿತು ' ಕಥಾ ಸಂಗ್ರಹ ತನ್ನ ಪರಿಮಳವನ್ನು ಎಲ್ಲೆಡೆಗೆ ಬೀರಲಿ

ಕೆ.ಇ.ಬೋರ್ಡ್ಸ್ ಕಾಲೇಜ,
ಧಾರವಾಡ
೬—೫—೫೦

**ಜಿ. ಡಿ. ನಾಡಕರ್ಣಿ**

# ತೆಲುಗಿನ ನೂತನ ಕಥಾ ಸಾಹಿತ್ಯದ ರೂಪ ರೇಷೆಗಳು

ಸುಮಾರು ಅರವತ್ತು ವರುಷಗಳ ಹಿಂದೆ ಆಂಧ್ರ ಕಥಾಸಾಹಿತ್ಯ ಸಮಾಜ ಸುಧಾರಣೆಗೆ ಸಾಹಿತ್ಯವನ್ನುಪಯೋಗಿಸಿದ ದಿವಂಗತ ಶ್ರೀ ವೀರೇಶ ಲಿಂಗಂಪಂತುಲು ಮತು ಶ್ರೀ ಗುರುಜಾಡ ಅಪ್ಪಾರಾಯರಿಂದ ಆರಂಭ ವಾಯಿತೆನ್ನಬಹುದು. ಶ್ರೀ ಅಪ್ಪಾರಾಯರ ತಿಳಿಯಾದ ಶೈಲಿ, ಉತ್ತಮ ಪಾತ್ರ ಪೋಷಣೆ, ಸನ್ನಿವೇಶ ಚಿತ್ರಣಗಳಿಗೆ ಹೆಸರಾದ ಇವರ ಕೃತಿಗಳು ಅನೇಕರಿಗೆ ಆದರ್ಶ ಕೃತಿಗಳಾಗಿವೆ.

ತೆಲುಗು ಕಥಾ ಸಾಹಿತ್ಯದ ಬೆಳವಣಿಗೆಗೆ ಪಾಶ್ಚಾತ್ಯಕಥಾ ಸಾಹಿತ್ಯದ ಪ್ರಭಾವ ಹೆಚ್ಚಾಗಿದೆಯೆಂದು ಹಲವರ ಅಭಿಪ್ರಾಯ. ಮೋಪಸಾ ಕುಪ್ರಿನ್, ಚಕೋವ್, ಗಾರ್ಕಿ, ಲಾರೆನ್ಸ್ಪರವರ ನಿಕಟ ಪರಿಚಯ ಮಾಡಿ ಕೊಂಡು ಸಾಹಿತ್ಯದಲ್ಲಿ ವಾಸ್ತವತೆಯ ಸ್ವರೂಪವನ್ನುಉತ್ತಮ ಅಂತಸ್ತಿಗೆ ತಂದು ಸಣ್ಣಕತೆಯನ್ನುಪ್ರತಿಭಾಪೂರ್ಣಸ್ಥಾನದಲ್ಲಿರಿಸಿದ ಕೀರ್ತಿ ಶ್ರೀ ಗುಡಿ ಪಾಟಿ ವೆಂಕಟಚಲಂರವರದು. ಇವರ "ವಿಧಿತಂದವಧು" ಎಂಬ ಕಾದಂಬರಿ ಕನ್ನಡದಲ್ಲಿ ಈಗಾಗಲೇ ಅನುವಾದವಾಗಿದೆ. ಇವರ ಕೃತಿಗಳು ಮೂವತ್ತಕ್ಕೆ ಹೆಚ್ಚು ಪ್ರಕಟವಾಗಿವೆ. "ನಾಯುಡು ಹುಡುಗಿ" ಎಂಬ ಇವರ ಕತೆ ತೆಲುಗಿನ ಅತ್ಯುತ್ತಮ ಕತೆಯೆಂದು ಹೆಸರಾಗಿದೆ. ಅದನ್ನು ದೊರಕಿಸಿ ಮುಂದಿನ ಸಂಗ್ರಹದಲ್ಲಿ ಕನ್ನಡಿಗರಿಗೆ ಕೊಡುವ ಭರವಸೆಯನ್ನೀಯುತ್ತೇನೆ. ಜೀವನದ ಪ್ರತಿಯೊಂದು ವಿಶಿಷ್ಟ ಸನ್ನಿವೇಶವನ್ನು ಆರಿಸಿ ತನ್ನದೇ ಆದ ದೃಷ್ಟಿಕೋನದಿಂದ ಅಳೆದು ಸಣ್ಣಕತೆಯ ತಂತ್ರಕ್ಕೆ ಹೊಸರೂಪವನ್ನು ತಂದು ಕೊಟ್ಟಿದ್ದಾರೆ.

ಆಧ್ಯಾತ್ಮದೃಷ್ಟಿಯ ಧರ್ಮವಿಶ್ವಾಸದ, ಮತ್ತು ಸಾಂಕೇತಿಕ ಕತೆ ಗಳನ್ನು ನೀಡಿದ ಶ್ರೀಗಳಾದ ಚಿಂತಾದೀಕ್ಷಿತರು, ವೇಲೂರು ಶಿವರಾಮ ಶಾಸ್ತ್ರಿಗಳು, ಶ್ರೀಪಾದ ಸುಬ್ರಮ್ಮಣ್ಯ ಶಾಸ್ತ್ರಿಗಳು, ವಿಶ್ವನಾಥ ಸತ್ಯ

ನಾರಾಯಣ, ಅಡವಿ ಬಾಪಿರಾಜು, ನಾರ್ಲ ವೆಂಕಟೇಶರಾಯರು, ಪಾಲಗುಮ್ಮಿ ಪದ್ಮರಾಜು, ಬುಚ್ಚಿಬಾಬು (ಶಿ. ವಿ. ಸುಬ್ಬರಾವು) ಮುಂತಾದವರು ಕಥಾ ಸಾಹಿತ್ಯದ ಬೆಳವಣಿಗೆಗೆ ಕಾರಣರಾಗಿದ್ದಾರೆ. 'ಚಲಂ'ರ ಪೀಳಿಗೆಯಲ್ಲಿ ಉತ್ತಮ ಕತೆಗಳನ್ನು ಬರೆದು ಪ್ರಗತಿಶೀಲ ಸಾಹಿತ್ಯದ ಬೆಳವಣಿಗೆಗೆ ಕಾರಣರಾದ ಶ್ರೀ ಕೊಡವಟಿಗಂಟಿ ಕುಟುಂಬರಾಯರು ಅಭ್ಯುದಯ ರಚಯಿತರ ಗುಂಪಿನ ಮುಖ್ಯರು. ಆನೆಟೊಲ್ ಫ್ರಾನ್ಸ್ ಇವರು ಮೆಚ್ಚಿದ ಕತೆಗಾರ. ಇವರಂತೆ ಅನೇಕ ಯುವಕ ಕತೆಗಾರರ ಹೆಸರನ್ನು ಕೊಡುತ್ತ ಹೋದಲ್ಲಿ ಈ ಲೇಖನ ಬಹು ದೊಡ್ಡದಾಗಬಹುದು. ಆದರೂ ಶ್ರೀಯುತ 'ಅಮರೇಂದ್ರ' ಲಿಂಗರಾಜು, ಗೋಪಿಚಂದ್, ಕಪ್ಪಗಂತಲ, ಕೇ. ಕೃಷ್ಣಮೂರ್ತಿ, ಧನಿಕೊಂಡ ಹನುಮಂತರಾವು, ಮುಂತಾದವರು ಹೊಸ ಸಾಹಿತ್ಯದ ಬೆಳವಣಿಗೆಗೆ ಕಾರಣರಾಗಿರುವರು. ಭಮಿಡಿಪಾಟಿ, ಮೊಕ್ಕಪಾಟಿ, ಇಂದ್ರಗಂಟಿ, ಶ್ರೀರಂಗಂ ಶ್ರೀನಿವಾಸರಾವು, ಶ್ರೀನಿವಾಸ ಶಿರೋಮಣಿ, ಪಿ. ಶ್ರೀನಿವಾಸರಾವು, ನಂದಗಿರಿ ಇಂದಿರಾದೇವಿ, ಪ್ರಶಾಪರೆಡ್ಡಿ, ಸ. ರಾಮಚಂದ್ರ ಅಗಸ್ತ್ಯ, ಪಿಲಕಾ ಗಣಪತಿ ಶಾಸ್ತ್ರಿ, ರಾ. ಸಿ. ಆಂಜನೇಯುಲು, ಜಮದಗ್ನಿ, ತಲ್ಲಾವಜ್ಝುಲ, ತ್ರಿಪುರನೇನಿ ಶಕುಂತಲಾದೇವಿ, ಶ್ರೀಮತಿ ಬಿ. ಅನುರಾಧ, ಮಾಲತಿ ಚಂದೂರ, ಪಂತುಲ ಶ್ರೀ ರಾಮಶಾಸ್ತ್ರಿ, ಚಾವಲಿ ವೆಂಕಟಶಾಸ್ತ್ರಿ, ತ್ರಿಪುರನೇನಿ ವೀರರಾಘವಶರ್ಮ, ಮುಂತಾದವರ ಕಶೆಗಳನ್ನು ಕ್ರಮೇಣ ಕನ್ನಡಿಗರ ಮುಂದೆ ಇಡುವ ಮನಸ್ಸಿದೆ.

ಸೂಕ್ಷ್ಮ ಹಾಸ್ಯ ಚಿತ್ರಗಳನ್ನು ಆರಂಭಿಸಿದ ಕೀರ್ತಿ ಶ್ರೀ ಚಿಂತಾ ದೀಕ್ಷಿತರಿಗೆ ಸಲ್ಲಿದರೂ, ಅದನ್ನು ಬೆಳೆಯಿಸಿ, ಜನಪ್ರಿಯವಾಗುವಂತೆ ಮಾಡಿ, ಆಂಧ್ರದೇಶದಲ್ಲಿ ಮನೆಮನೆಗಳಲ್ಲಿಯೂ 'ಕಾಂತಂಮೊಗುಡು' (ಕಾಂತಂ ಗಂಡ) ಎಂಬ ಸಲುಗೆಯ ಹೆಸರಿನಿಂದ ಪರಿಚಿತರಾದ ಶ್ರೀ ಮುನಿ ಮಾಣಿಕ್ಯಂ ನರಸಿಂಹರಾಯರ ಕೆಲಸ ಸ್ತುತ್ಯವೂ, ಗಮನಾರ್ಹವೂ ಆಗಿದೆ. ತಮ್ಮ ಸಾಧ್ವಿಯಾದ ದಿವಂಗತ ಕಾಂತಂರನ್ನು ನೂರಾರು ಕತೆಗಳ ನಾಯಕಿಯನ್ನಾಗಿ ಮಾಡಿ ಜೀವನದ ಸತ್ಯ ಚಿತ್ರಗಳನ್ನು, ಎಲ್ಲ ಬಗೆಯ ಸನ್ನಿವೇಶಗಳನ್ನು "ಮಧುರವಾಗಿ, ಹಗುರವಾಗಿ, ವಿನೋದದಿಂದ, ಸರಳತೆಯಿಂದ" ಕಥಾರೂಪದಲ್ಲಿ ಹೆಣೆದ ಅದ್ಭುತ ಶಕ್ತಿ ಇವರದು. ಕನ್ನಡ

ದಲ್ಲಿ ಶ್ರೀ ಮಾಸ್ತಿ (ಶ್ರೀನಿವಾಸರು) ಗೋರೂರು, ಕಸ್ತೂರಿ, ಎಸ್. ಕೆ, ಗದಗಕರ, ಬಳ್ಳಾರಿ ಬೀಚಿ ಮುಂತಾದವರು ಇಂತಹ ಚಿತ್ರಗಳನ್ನು ಈಗಾಗಲೇ ಕೊಟ್ಟಿದ್ದಾರೆ, "ಉಷಾ" ಮಾಸಪತ್ರಿಕೆಯಲ್ಲಿ ನನ್ನಿಂದ ಅನುವಾದಿಸಲ್ಪಡುತ್ತಿರುವ "ಕಾಂತಂ" ಎಂಬ ಮುನಿಮಾಣಿಕ್ಯಂರ ನೀಳ್ಗತೆಯಂತೆ ಕನ್ನಡದಲ್ಲಿ ಈ ಬಗೆಯ ಪ್ರಯೋಗಗಳು ಹೆಚ್ಚಿದರೆ ಒಳಿತಲ್ಲವೆ? ಶ್ರೀ ಮುನಿಮಾಣಿಕ್ಯಂ ಮುನ್ನೂರಕ್ಕೆ ಹೆಚ್ಚಿನ ಕತೆಗಳನ್ನು ಬರೆದು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ.

ಜೀವನದ ದುರಂತ ಚಿತ್ರಗಳನ್ನು, ಸಮಾಜದ ಲೋಪದೋಷಗಳನ್ನು, ಸಂಸಾರದ ಮಾರ್ಮಿಕ ಸತ್ಯ ಸನ್ನಿವೇಶಗಳನ್ನು ಒದಗಿಸಿದ ಕನ್ನಡ ಕತೆಗಾರರಾದ ಶ್ರೀ ಟೇಂಗ್ಸೆ, ಪಂಜೆ, ಮಾಸ್ತಿ, ಆನಂದ, ಆನಂದಕಂದ, ಮುಗಳಿ, ಅ. ನ. ಕೃಷ್ಣರಾಯ, ಈಶ್ವರನ್, ವರದರಾಜ ಹುಯಿಲಗೋಳ, ಎಲ್.ಎಸ್. ಶೇಷಗಿರಿರಾವ್, ಗೋಪಾಲಕೃಷ್ಣರಾವ್, (ದಿವಂಗತ) ಶ್ರೀಮತಿ ಗೌರಮ್ಮ, ಚಿನ್ನಮ್ಮ, ರಸ್ತೋಗಿ, ಜಯಲಕ್ಷ್ಮಿ, ಶ್ರೀನಿವಾಸನ್ ಮಿಸ್. ಕಾಮತರಂತೆ ಆಂಧ್ರರಲ್ಲಿ ಶ್ರೀಯುತ ಕರುಣಾಕುಮಾರ್, ಅಮರೇಂದ್ರ, ಲಿಂಗರಾಜು, ಗೋಪಿಚಂದ, ಇಲ್ಲಿಂದಲ ಸರಸ್ವತೀದೇವಿ, ನಂದಗಿರಿ ಇಂದಿರಾದೇವಿ, ಕೊಮ್ಮೂರಿ ಪದ್ಮಾವತಿದೇವಿ, ಮುಂತಾದವರು ಸಾಧಿಸಿರುವರು. ಸ್ಥಳಾಭಾವದಿಂದ ಹೆಚ್ಚಿನ ವಿವರಗಳನ್ನು ಇಲ್ಲಿ ಕೊಡಲಾಗದಿದ್ದುದಕ್ಕೆ ಕ್ಷಮೆ ಇರಲಿ.

ಆಂಧ್ರ ಪ್ರಾಂತದಲ್ಲಿಯ ನದಿ ಮತ್ತು ಸಾಗರ ಪ್ರದೇಶದ ಚಿತ್ರಗಳು ನಿಸರ್ಗದಲ್ಲಿಯ ಸುಂದರ ಸನ್ನಿವೇಶಗಳು, ಗಲಭೆ ಕ್ರಾಂತಿಕಾರಕ ಚಟುವಟಿಕೆಗಳು, ಮೊನ್ನೆ ತಾನೇ ಮುಗಿದ ಹೈದರಾಬಾದ್ ಆಂದೋಲನ ಪ್ರಕರಣದ ದಾರುಣ ದೃಶ್ಯಗಳು, ಈಗಲೂ ನಡೆಯುತ್ತಿರುವ ಕಮ್ಯೂನಿಸ್ಟರ ಉಪಟಳದ ಹಾಳ್ನೋಟಗಳು, ಸಣ್ಣ ಕತೆಗಳ ನಿರ್ಮಾಣಕ್ಕೆ ವಸ್ತು ಸಾಮಗ್ರಿಯನ್ನೊದಗಿಸಿವೆ. ಆಂಧ್ರರು, ಕತೆ, ಕಾದಂಬರಿ ಲೇಖನ, ಮತ್ತು ವೃತ್ತಪತ್ರಿಕೆಗಳಲ್ಲಿ (ಅಗ್ರಲೇಖನಗಳು ಸಹ) ಸರಳವಾಗಿ ಉಪಯೋಗಿಸುತ್ತಿರುವ ಬಳಕೆಯ ಶೈಲಿ ಕಳೆದ ಐವತ್ತು ವರುಷಗಳಿಂದ ಶ್ರಮಿಸಿದ ಫಲವೆನ್ನಬಹುದು. ಎಲ್ಲ ಬರಹಗಾರರು ಈ ನೂತನ ಸಾಂಪ್ರ

ದಾಯದ ಮಾರ್ಗಹಿಡಿದು ಒಂದು ನಿರ್ದಿಷ್ಟ ನೆಲೆಗೆ ಬಂದಿರುವರು. ಈ ಬಗೆಯಾಗಿ ಬಳಕೆ ಮಾತಿನ ಶೈಲಿ ಗ್ರಂಥಗಳ ಭಾಷೆಯಾಗಲು ತೆಲುಗು ಭಾಷೆಯ ಸರಳತೆ ಕಾರಣವಾಗಿರಬಹುದು. ಮಾತನಾಡುವ ಮತ್ತು ಗ್ರಾಂಥಿಕ ಭಾಷೆಗೆ ಹೆಚ್ಚು ಅಂತರ ವಿದ್ದುದರಿಂದ ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವ ಲವಲವಿಕೆ ಅವರನ್ನು ಈ ಮಾರ್ಗವನ್ನು ಅನುಸರಿಸಲು ಪ್ರೇರೇಪಿಸಬಹುದು. ಅದು ಏನೇ ಇರಲಿ ನಾವು ಇತ್ತ ಕಡೆ ಲಕ್ಷ್ಯಕೊಡುವುದು ಒಳಿತಲ್ಲವೆ? ಒಂದೇ ಪಂಕ್ತಿಯ ವಾಕ್ಯವೃಂದಗಳು, (ಪ್ಯಾರಾಗಳು) ಒಂದೆರಡು ಶಬ್ದದ ವಾಕ್ಯಗಳು ಕತೆಗಳಲ್ಲಿ ತಂತ್ರದ ದೃಷ್ಟಿ ಯಿಂದ ಹೆಚ್ಚಾಗಿ ಉಪಯೋಗಿಸುವ ಇವರ ವಿಧಾನ, ನಮ್ಮಲ್ಲಿ ಬಳಕೆಯಲ್ಲಿ ದ್ದರೂ, ಅದನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುವುದು ಅನುಕೂಲವೆಂದು ನನ್ನ ನಮ್ರ ಸೂಚನೆ. ಶ್ರೀ ಮುನಿಮಾಣಿಕ್ಯಂರಂತೆ ನಿತ್ಯ ಜೀವನದ ಎಲ್ಲ ಸೂಕ್ಷ್ಮ ಚಿತ್ರಗಳನ್ನು ಕಥಾರೂಪದಲ್ಲಿ ಹೆಣೆಯುವ ವಿಧಾನ ಕನ್ನಡದಲ್ಲಿ ಹೊಸ ಲೇಖಕರು ಹೆಚ್ಚು ಬಳಕೆಗೆ ತಂದರೆ ಒಳಿತೆಂದು ಸೂಚಿಸ ಬಯಸುತ್ತೇನೆ.

ಕನ್ನಡದಲ್ಲಿ ಎಲ್ಲ ಬಗೆಯ ಸಾಹಿತ್ಯ ನಿರ್ಮಾಣವಾಗುವುದಕ್ಕೆ ಕೇಂದ್ರ ಸಂಸ್ಥೆಯಾದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಇದ್ದಂತೆ, ಆಂಧ್ರರ ಮುಖ್ಯ ನಗರಗಳಾದ ವಿಶಾಲಪಟ್ಟಣ, ಬರಹಂಪೂರ, ರಾಜಮಹೇಂದ್ರವರ ವಿಜಯವಾಡ, ಗುಂಟೂರು, ತೆನಾಲಿ, ಹೈದರಾಬಾದ ನಗರಗಳಲ್ಲಿ ಸಾಹಿತ್ತಿ ಸಮಿತಿಗಳು ಪರಿಷತ್ತುಗಳು ಕಳೆದ ಮೂವತ್ತು ವರುಷಗಳಿಂದ ದುಡಿಯುತ್ತಿವೆ.

ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಮೂಲ ಲೇಖಕರ ಪರಿಚಯ ನಿಮಗೆ ಹೆಚ್ಚಿನ ಮಾಹಿತಿಯನ್ನು ಮಾಡಿಕೊಡುವುದು.

ಆನಂದ ಗ್ರಂಥಮಾಲೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ನನ್ನ ಈ ಅಲ್ಪಸೇವೆ ಸಲ್ಲಿಸಲು ಸಂತೋಷವೆನಿಸುತ್ತದೆ. ಇದು ಸಹೃದಯರಿಗೆ ರುಚಿಸಿದರೆ ನನ್ನ ಹಿಗ್ಗು ಹೇಳತೀರದು.

ಹುಬ್ಬಳ್ಳಿ
೧೫—೫—೧೯೫೦

**ಪಿ. ವೆಂಕೋಬಾಚಾರ್ಯ**

# ಸಂಪಾದಕರ ಮಾತು

ನಮ್ಮ ನೆರೆಪ್ರಾಂತದವರಾದ ಆಂಧ್ರರ ಕಥಾಸಾಹಿತ್ಯದ ಉತ್ತಮ ಕತೆಗಳನ್ನು "ಹೂ ಅರಳಿತು" ಎಂಬ ಪುಸ್ತಕ ರೂಪದಲ್ಲಿ ಕೊಡಲು ಸಂತೋಷವೆನಿಸುತ್ತದೆ. ಕನ್ನಡದಲ್ಲಿ, ಭಾರತ ಕಥಾವಳಿಯ ಮಾಲೆಯಲ್ಲಿ ಹೊರಬಿದ್ದ (ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ) "ತೆಲುಗಿನಕತೆಗಳು" ಎಂಬ ಸಂಕಲನ ಈ ಮಾರ್ಗದಲ್ಲಿ ಮೊದಲನೆಯದು. ಮುಂಬಯಿಯಿಂದ ಹೊರಡುವ ಮಾಸಪತ್ರಿಕೆಯಾದ ಕನ್ನಡ "ಭಾರತಿ" ಭಾರತದ ಮತ್ತು ವಿಶ್ವಕಥಾ ಸಾಹಿತ್ಯವನ್ನು ಕನ್ನಡಿಗರಿಗೆ ಕೊಡುತ್ತಿರುವುದು ಸ್ತುತ್ಯ ಪ್ರಯತ್ನ. ಈ ಮೊದಲೇ ಶ್ರೀಚಲಂ, ಕುಟುಂಬರಾವು, ಧನಿಕೊಂಡ ಮುನಿ ಮಾಣಿಕ್ಯಂ, ಇವರ ಕತೆ ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಶ್ರೀ ವೆಂಕೋಬಾಚಾರ್ಯರು, ಈಶ್ವರರಾಯರು ಕೆಲವು ತೆಲುಗು ಕಾದಂಬರಿಗಳನ್ನು ಕನ್ನಡಿಸಿದ್ದಾರೆ. ಇವುಗಳು ಕನ್ನಡಿಗರ ಮನ್ನಣೆಯನ್ನು ಪಡೆದಿವೆ. ಈ ನಮ್ಮ ಹೂ ಅರಳಿ ಸುವಾಸನೆಯನ್ನು ಕನ್ನಡ ಲೋಕದಲ್ಲಿ ಹರಡಿ ಜನಪ್ರಿಯವಾಗುವುದೆಂದು ನಮ್ಮಾಶೆ.

ಶ್ರೀ ಚಿಂತಾದೀಕ್ಷಿತರು, ಶ್ರೀಪಾದರು, ಶ್ರೀ ಪಾಲಗುಮ್ಮಿ ಪದ್ಮರಾಜ, ಬುಚ್ಚಿಬಾಬು ಇವರ ಕತೆಗಳು ತೀರ ದೊಡ್ಡವಾದುದರಿಂದ ಈ ಸಂಕಲನದಲ್ಲಿ ಅವುಗಳನ್ನು ಸೇರಿಸಲು ಸಾಧ್ಯವಾಗದಿದ್ದುದಕ್ಕೆ ವಿಷಾದವೆನಿಸುತ್ತದೆ. ಇವುಗಳನ್ನು ಕಾಲಕ್ರಮೇಣ ಉಪಯೋಗಿಸಿಕೊಳ್ಳುವೆವು.

ತೆಲುಗು ಸಾಹಿತಿಗಳ ಪರಿಚಯ ಮಾಡಿಕೊಟ್ಟು ತೆಲುಗು "ಭಾರತಿ" ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಶಂಭುಪ್ರಸಾದರವರಿಗೂ, ಕೇಳಿದೊಡನೆ ತಮ್ಮ ಕತೆಗಳನ್ನು ಈ ಸಂಗ್ರಹದಲ್ಲಿ ಉಪಯೋಗಿಸಿಕೊಳ್ಳಲು ಅನುಮತಿಯನ್ನಿತ್ತು ಪ್ರೋತ್ಸಾಹಪರ ಮಾತುಗಳಿಂದ ಸಹಕರಿಸಿದ ಎಲ್ಲ ಕತೆಗಾರರಿಗೂ ನಾವು ಚಿರಋಣಿಗಳು. ಹೆಚ್ಚಿನ ಆಸ್ಥೆವಹಿಸಿ ಸಲಹೆ,

ಸೂಚನಗಳಿಂದ ಬೆಂಬಲವನಿತ್ತ ಶ್ರೀಮುನಿಮಾಣಿಕ್ಯಂ, ಕೆ. ಕುಟುಂಬರಾಯರು ಮತ್ತು ಅಮರೇಂದ್ರರಿಗೆ ನಮ್ಮ ಅನಂತ ಧನ್ಯವಾದಗಳು.

ತರುಣ ಮಿತ್ರರಾದ ಪ್ರೊ. ಜಿ. ಡಿ. ನಾಡಕರ್ಣಿ ಎಂ. ಎ. ಇವರು ತಮ್ಮ ಮುನ್ನುಡಿಯಿಂದ ನಮ್ಮ ಈ ಪುಸ್ತಕಕ್ಕೆ ನೂತನ ಕಳೆ ತಂದಿದ್ದಾರೆ. ಅವರಿಗೆ ನಮ್ಮ ವಂದನೆಗಳು. ಎಂದಿನಂತೆ ನಮ್ಮ ಸಲಹೆಗಾರರು ತಮ್ಮ ನೆರವನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ನಾವು ಕೃತಜ್ಞರು. ಅವರ ಸಹಕಾರದಿಂದ ನಮ್ಮ ಮಾಲೆ ಹೆಜ್ಜೆ ಹೆಜ್ಜೆಗೂ ಅಭಿವೃದ್ಧಿ ಹೊಂದಿ ಕನ್ನಡಮ್ಮನ ಸೇವೆ ಮಾಡಲು ಬಲಯುತವಾಗುವುದೆಂದು ನಂಬಿದ್ದೇವೆ. ಎಲ್ಲ ಬಗೆಯನೆರವನ್ನಿತ್ತು ಬೇಗ ಮುದ್ರಣ ಕೆಲಸ ಮುಗಿಸಿ ಕೊಟ್ಟ ರಾಯಲ್ ಮುದ್ರಣಾಲಯದ ಒಡೆಯರಾದ ಶ್ರೀ ಎಸ್. ವ್ಹಿ. ಶ್ರೇಷ್ಠಿ ಇವರಿಗೆ ನಮ್ಮ ವಂದನೆಗಳು.

ಹೂ ಅರಳಿದೆ; ಆಸ್ವಾದಿಸಿ ಆನಂದ ಪಡೆಯಿರಿ.

ಸಂಪಾದಕ :

ಆನಂದ ಗ್ರಂಥಮಾಲಾ

---

## ಮಾಲೆಗೆ ಹರಕೆಗಳು

ನಿಮ್ಮ ಗ್ರಂಥಮಾಲೆಯ ಮೊದಲನೆಯ ಕುಸುಮ " ಅರ್ಪಣ " ಸಹೃದಯರಿಗೆ ಅರ್ಪಣ ವಾಗಿ ಅನ್ವರ್ಥವೆ ಆಗಿದೆ. ಒಂದೊಂದು ಕತೆಯೂ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಮಾಡುತ್ತಿದ್ದು ಇವು ಮೊಪಾಸನ ಅನುವಾದಗಳೆಂದು ಅನುವಾದಕರೇ ಹೇಳಲಾರರೆಂದು ನಂಬಬೇಕಾಗಿದೆ. ಅಷ್ಟು ಕನ್ನಡದ ಮನೆಮಾತಿನಲ್ಲೇ ಹೆಣೆದಿರುವ ಶ್ರೀವೆಂಕೋಬಾಚಾರ್ಯರು ಧನ್ಯರೇ.

ಶ್ರೀ ಜಗದ್ಗುರು ಕರಿಬಸವರಾಜೇಂದ್ರಸ್ವಾಮಿಗಳು

ಉರವಕೊಂಡ

# ಅರ್ಪಣ

ಬಾಳುವೆಯು
ಮಾಮರದಿ ಹಣ್ಣಾಗಿ
ಸವಿಯುವ ಮುನ್ನ
ನಮ್ಮನ್ನಗಲಿದ

## ರಾಜ—ಲಲಿತ
ರಿಗೆ

# ಪರಿವಿಡಿ


| | | | |
|---|---|---|---|
| ೧. | ಹೂ ಅರಳಿತು | ಶ್ರೀ ಗುಡಿಪಾಟಿ ವೆಂಕಟಾಚಲಂ | ೧ |
| ೨. | ಮೂವರು ಮುದುಕರು | ಶ್ರೀ ಕಪ್ಪಗಂತುಲ ಸತ್ಯನಾರಾಯಣ | ೧೫ |
| ೩. | ಆಣೆಕಲ್ಲಿನ ಮಳೆ | ಶ್ರೀ ಅಡವಿ ಬಾಪಿರಾಜು | ೨೪ |
| ೪. | ತಪ್ಪು ತಿಳುವಳಿಕೆ | ಶ್ರೀ ಕೆ. ಕುಟುಂಬರಾವು | ೩೨ |
| ೫. | ಸಭ್ಯತೆ | ಶ್ರೀ ನಾರ್ಲ ವೆಂಕಟೇಶ್ವರರಾವು | ೪೩ |
| ೬. | ನಿನ್ನ ಋಣ ತೀರಿಸಿಕೊಂಡೆ | ಪ್ರೊ. ವಿಶ್ವನಾಥ ಸತ್ಯನಾರಾಯಣ | ೫೨ |
| ೭. | ಸಂಕ್ರಾಂತಿ ಹಬ್ಬ | ಶ್ರೀ ಮುನಿಮಾಣಿಕ್ಯಂ ನರಸಿಂಹರಾವು | ೬೭ |
| ೮. | ಪಿತೃ ಹೃದಯ | ಶ್ರೀಮತಿ ಇಲ್ಲಿಂದಲ ಸರಸ್ವತೀದೇವಿ | ೮೫ |
| ೯. | ಧರ್ಮಬುದ್ಧಿ | ಶ್ರೀ ಧನಿಕೊಂಡ ಹನುಮಂತರಾವು | ೯೭ |
| ೧೦. | ಕತೆಗಾರನ ಕನಸು | ಶ್ರೀ ಅಮರೇಂದ್ರ | ೧೦೪ |
| ೧೧. | ಆಶಾಜ್ಯೋತಿ | ಶ್ರೀ ಟಿ. ಗೋಪಿಚಂದ | ೧೧೧ |
| ೧೨. | ಗೆದ್ದಲು | ಶ್ರೀ ಕೆ. ಕೃಷ್ಣಮೂರ್ತಿ | ೧೨೨ |
| ೧೩. | ಹಸಿವು | ಶ್ರೀ ಕೇ. ಲಿಂಗರಾಜು | ೧೨೮ |
| ೧೪. | ನಮಶ್ಶಿವಾಯ | ಶ್ರೀ ವೇಲೂರ ಶಿವರಾಮಶಾಸ್ತ್ರಿ | ೧೩೬ |
| | ಮೂಲ ಲೇಖಕರ ಪರಿಚಯ | | ೧೪೮ |

# ಹೂ ಅರಳಿತು

ನಡುರಾತ್ರಿ ಸಮಯ. ಅದೊಂದು ಹೊಸ ಹೂ ಜನ್ಮ ತಾಳಿತು. ಮೊಗ್ಗೆಯಾಗಿದ್ದು, ಹೂವಾಗಿ ಅರಳಿತು: ಸುತ್ತಲಿನ ಕತ್ತಲನ್ನು ಕಂಡು ಭಯದಿಂದ "ಅಮ್ಮಾ" ಎಂದು ಅಳುತ್ತಿರಲು ಆ ಟೊಂಗೆಯಲ್ಲಿದ್ದ ಎಲೆಗಳು ಹತ್ತಿರ ಬಂದು ಧೈರ್ಯದ ಮಾತನ್ನು ಹೇಳಿದವು. ಅದೇ ವಿಕಾಸಗೊಂಡ ಆ ಹೂವನ್ನು ಸಂತೈಸಿದವು.

"ಅತನೆಲ್ಲಿ" ಎಂದಿತು ಆ ಹೊಸ ಹೂ.

"ಯಾರು?" ಎಂದು ಕೇಳಿದಳು ತಾಯಿಯಾದ ಆ ಬಳ್ಳಿ.

"ನನ್ನನ್ನು ನಿನ್ನ ಹತ್ತಿರ ತಂದಿರಿಸಿದವನು!"

"ಯಾರದು? ನಾನಲ್ಲವೆ ನಿನ್ನನ್ನು ಇಲ್ಲಿಗೆ ತಂದಿರಿಸಲು ಕಾರಣಳು? ನನ್ನ ಅರಗಿಣಿ ನನ್ನ ಮುದ್ದಿನ ಕಣಿ, ನನ್ನ ಬಂಗಾರ."

"ನೀನೇ? ಮತ್ತಾರೋ ಇರಬಹುದೆಂದು ನೆನೆದೆ. ನಕ್ಷತ್ರಗಳ ಮಧ್ಯೆ ಆನಂದ ಭರದಲ್ಲಿ ಸುಖ ಸಲ್ಲಾಪದಲ್ಲಿದ್ದ ನನ್ನನ್ನು ನೀನು ಇಲ್ಲಿ ತಂದಿರಿಸಿದಿಯಾ? ಎಲ್ಲಿ—ನನಗೆ ನಿನ್ನ ದರ್ಶನ ಕೊಡು."

"ಬೆಳಗಾಗಲಿ, ಮಗು. ಆಗ ನಾ ಕಾಣಿಸುವೆ. ಈಗ ಮಲಗು."

"ಕೆಳಗೆ ಬೀಳುವೆನೆಂದು ನನಗೆ ಭಯವೆನಿಸುತ್ತಿದೆ."

"ನಾನು ನಿನ್ನ ಆಧಾರವಾಗಿರುವೆನಲ್ಲ"

"ಇರಲಿ, ಹಸಿವಾಗುತ್ತಿದೆ ಅಮ್ಮಾ!"

ಹೂವಿನ ಬಾಯಿತುಂಬ ಬೆಚ್ಚನೆಯ ಕಮ್ಮನೆಯ ಸವಿ ಹಾಲು ಬಂದವು. ಸಂತೋಷದಿಂದ ಅದು ಸೇವಿಸಿತು.

"ಬಂದೆಯಾ" ಎಂದು ಸಂತೈಸಿ ಮಂದ ಮಾರುತ ಆ ಹೂವನ್ನು ಆದರಿಸಿತು. ಆ ಜೋಲಿಯಲ್ಲಿ ನಿದ್ರೆ ಬರುವಂತೆನಿಸಿತು.

"ಅಮ್ಮಾ, ಯಾರದು? ನನ್ನನ್ನು ಹಿಂದಿನಿಂದ ತಿವಿಯುತ್ತಿರುವರು?"

ಏನೂ ಇಲ್ಲ ಮಗು, ಅದು ಹಾವು. ತಿಂಡಿಗಾಗಿ ಹರಿದಾಡುತ್ತಿದೆ"

"ನನ್ನನ್ನು ತಿಂದುಬಿಡುವುದೇ?"

"ನಿನ್ನನ್ನು ತಿನ್ನಲಾರದು. ಅದು ನಮ್ಮ ಬಂಧು. ಸಣ್ಣ ಪ್ರಾಣಿಗಳನ್ನು ನುಂಗುವುದು. ನಮ್ಮನ್ನದು ಕೆಣಕುವುದಿಲ್ಲ."

ಎದ್ದು ನಿಂತ ಗಿಡಗಳ ಹಿಂದಿನಿಂದ ಅರ್ಧ ಚಂದ್ರೋದಯವಾಗುತ್ತಿದೆ. ಆ ಹೂವು ತನ್ನ ಕಣ್ಣರಳಿಸಿ ನೋಡಿತು. ಗಿಡಗಳ ಕೊಂಬೆಗಳು ಮೆರೆಯುತ್ತಿವೆ. ನೆಲದ ಹರವಿನಲ್ಲಿ ಚಂದ್ರನ ಬೆಳಕು ಸಾಗುತ್ತಿದೆ. ಕತ್ತಲನ್ನು ಸರಿದೂಡುತ್ತ, ಜರಿದೋಡಿಸುತ್ತ ಬೆಳಕು ಹರಡುತ್ತಲಿದೆ........

"ನೋಡಮ್ಮಾ, ಈ............" ಎಂದು ಹೂ ನಕ್ಕಿತು.

ನಿದ್ದೆಗಣ್ಣಿನಿಂದ ಹಾಡನ್ನು ಹಾಡುತ್ತಲಿದ್ದಾಳೆ ತಾಯಿ.

ತಲೆಯನ್ನೆತ್ತಿ ತಾಯಿಯಕಡೆ ಹೂ ನೋಡುತ್ತಿದೆ.

"ನೀನೆಷ್ಟು ಅಂದವಾಗಿ ಕಾಣುವೆ ಅಮ್ಮಾ?"

ಆದರೆ ಎಲೆಗಳ ಮರೆಯಲ್ಲಿ ತಾಯಿಯ ರೂಪು ಚೆನ್ನಾಗಿ ಕಾಣಿಸದಿದ್ದರೂ ನೋಡುವ ಹುಮ್ಮಸವಿನ್ನೂ ಹೂವಿಗೆ ಕಡಮೆಯಾಗಲಿಲ್ಲ. ಪರಿಮಳವನ್ನು ಹರಡುತ್ತ ಆ ಕತ್ತಲಲ್ಲಿ ಗಿಡವೊಂದರ ತೊಂಗಲುಗಳಲ್ಲಿ ಬಳ್ಳಿ ಸುತ್ತಿಕೊಂಡಿದೆ. ಸೆರೆಯಲ್ಲಿದ್ದ ತಾಯಿಯನ್ನುದ್ದೇಶಿಸಿ—

"ಅಮ್ಮಾ, ನೀನಾರನ್ನು ಆಲಂಗಿಸಿರುವೆ? ಯಾರ ಸುತ್ತ ನೀನು ಹಬ್ಬಿಕೊಂಡು ಪ್ರೀತಿಯಿಂದ ನಲಿಯುತ್ತಿರುವೆ?" ಎಂದು ಕೇಳಿತು.

"ಆತ ನಿನ್ನ ತಂದೆ ಮಗು."

"ಅಮ್ಮಾ! ಏನದು? ಕಿರ್, ಕಿರ್, ಕೀಚು ಧ್ವನಿ? ಭಯವಾಗುತ್ತಿದೆ. ನನ್ನನ್ನು ಸ್ವಲ್ಪ ಹಿಡಿದುಕೊ."

"ಅವು ಕೋತಿಗಳು. ನಿನ್ನ ತಂದೆಯನ್ನುದ್ದೇಶಿಸಿ ಬಂದಿವೆ. ನಿನ್ನನ್ನೇನೂ ಮಾಡಲಾರವು."

"ತಂದೆ ಅವುಗಳನ್ನು............"

ತನ್ನನ್ನುದ್ದೇಶಿಸಿ ಯಾರೋ ಹಾಡುತ್ತಿರುವರು. ತಿಳಿ ಬೆಳುದಿಂಗಳಲ್ಲಿ ಪರಿಚಯದ ಪುಷ್ಪಕನ್ನಿಕೆಯರು ತನ್ನ ಸುತ್ತೂ ಗುಂಪುಗೂಡಿರುವರು.

" ಇಲ್ಲಿ ಜನ್ಮ ತಾಳಿರುವೆಯಾ? ನೀನು ಯಾವಾಗಜನ್ಮಿಸಿದೆ"....ಎಂದು ಸಂತೋಷದ ನುಡಿಗಳಿಂದ ಆನಂದ ಬಾಷ್ಪಗಳನ್ನು ಸುರಿಸಿದರು. ವೈಯೆಲ್ಲವೂ ಸ್ವಚ್ಛವಾಯಿತು. ಮಂಜಿನ ಮುತ್ತಿನ ಹಾರಗಳಿಂದ ಅಲಂಕರಿಸಿದರು· ಇವರ ಹಿಂದೆ ಕಾಣದಂತೆ ನೆರಳಿನಲ್ಲಿ ಯಾರದು ನಿಂತಿರುವವರು ? ಅವರೂ ಪರಿಚಯುದವರೇ! ಅನಂತ ಕಾಲದಿಂದ ಆನೇಕ ರೂಪಗಳಿಂದ ಅನೇಕ ಲೋಕಗಳಲ್ಲಿ ವಿವಿಧ ಆನಂದ ಲಹರಿಯಲ್ಲಿ ತನ್ನ ಹಿಂದೆ ನೆರಳಿನಂತೆ ಇರುವ ಇವರಾರು ?

ಆ ನಸುಕಿನಲ್ಲಿ ಯಾರಿಂದಲೋ ಮೇಲಿನಿಂದ ಒಂದು ಸವಿಯಾದ ಕರೆ! ಯಾರದು? ದೂರದಲ್ಲಿ ಯಾವುದಕ್ಕಾಗಿಯೋ ಒಂದು ಕೂಗು. ಎಲೆಗಳೆಲ್ಲವೂ ಆತುರದಿಂದ ಆ ಕೂಗನ್ನು ಆಲಿಸುತ್ತಿವೆ. ಗಾಳಿಯು ಸಣ್ಣ ತರಂಗಗಳಿಂದ ಪುಲಕಾಂಕಿತವಾಗಿದೆ.

ಯಾರದು ? ಯಾರದಾ ಕೂಗು ? ಎಷ್ಟು ಹುಡುಕಿದರೂ, ಕಾಣದಂತಿರುವವರಾರು ?

" ಅಮ್ಮಾ ! ಅಮ್ಮಾ ! ಯಾರದು ?

" ಕೋಗಿಲೆ !''

" ಯಾರನ್ನು ಕರೆಯುತ್ತದೆ. ?''

" ಪ್ರೀಯನನ್ನು ''

" ಆತನೇತಕ್ಕಿನ್ನೂ ಬರಲೊಲ್ಲನು ?''

" ಪೂರ್ಣ ಬೆಳಗಾಗಿಲ್ಲ ಇನ್ನೂ "

" ಮತ್ತೆ ಇನಿಯನನ್ನು ಕರೆಯೆಂದು ಹೇಳು. ''

" ಕರೆಯುತ್ತಿರುವಳು ಆ ಕೋಗಿಲೆ. ''

" ಏನು ಈ ಲೋಕವಮ್ಮಾ! ಇಷ್ಟು ದಿನಗಳು ಇಲ್ಲಿಗೆ ಬಾರದೆ ನಾನೆಲ್ಲಿದ್ದೆನಮ್ಮಾ ?........''

ಬೆಳಕಿನ ಪ್ರತಿಭೆ ಹರಡುತ್ತಿದೆ. ಕತ್ತಲು ನಾಚಿಕೆಯಿಂದ ಸರಿದೋಡುತ್ತಿದೆ. ಜಗತ್ತಿಗೆ ಹೊದ್ದಿಕೆಯಂತೆ ಕವಿದುಕೊಂಡಿದ್ದ ಮಬ್ಬು ಹರಿದು ಕಾಂತಿ ಹಬ್ಬುತ್ತಿದೆ. ಮೂಡಲ ಮನೆಯ ಬೆಳಗು ಬರಿ ಬೆಳಗಾಗದೆ ಶಾಂತಿ ರಸವನ್ನು ಪ್ರಸರಿಸುತ್ತ ಉತ್ಸಾಹವನ್ನು ನೆಲೆಸುತ್ತಿದೆ. ಜನರಲ್ಲಿ ಉದ್ರೇ

ಕವು ಹೆಚ್ಚಿ ಉತ್ಸವಾದಿಗಳಲ್ಲಿ ಸಂತೋಷದ ಸಂಭ್ರಮಗಳಲ್ಲಿ ನಿರತರಾಗುತ್ತಿದ್ದಾರೆ. ಜಯ ಜಯ ನಿನಾದಗಳಿಂದ ತಳಿರು ತೋರಣಗಳಿಂದ ಮನೆಗಳನ್ನಲಂಕರಿಸಿ ಉತ್ಸಾಹಭರಿತರಾಗುತ್ತಿದ್ದಾರೆ. ತಮ್ಮ ಸಂಭ್ರಮವನ್ನು ಹದ್ದಿನಲ್ಲಿಟ್ಟುಕೊಳ್ಳಲಾಗದೆ ನಲಿಯುತ್ತಿರುವರು. "ಕುಣಿಯೋಣು ಬಾರೆ" ಎಂದು ಹುಮ್ಮಸದಿಂದ ಕುಣಿಯುತ್ತಿರುವರು. ದಿನದ ನೂತನ ಆನಂದವನ್ನು ಸವಿಯಲು ಗಿಡ ಮರಗಳು ಗಾಳಿಯಲ್ಲಿ ಬಾಯ್ದೆರೆದು ಕಾದಿವೆ.

ಎಲ್ಲೆಲ್ಲಿಯೂ ಬೆಳಕು; ಪ್ರಕಾಶ. ದೇದೀಪ್ಯಮಾನವಾದ ಹರುಷವನ್ನುಂಟುಮಾಡುವ ಪ್ರಕಾಶ. ಆನಂದವೆಲ್ಲೆಲ್ಲಿಯೂ ತಾಂಡವವಾಡುತ್ತಿದೆ. ಜಗತ್ತೆಲ್ಲೆಲ್ಲಿಯೂ ಹೊಸತನವನ್ನೇ ಕಾಣುತ್ತ ನಲಿಯುತ್ತಿದೆ.

ಜಗತ್ತಿನ ರೂಪವೇ ಬೇರೆಯಾದಂತಿದೆ. ಇನ್ನೂ ಚಂದಿರನು ಮಾಸಿದ ಮುಖದಿಂದ "ನಾ ಹೋಗಿ ಬರಲೇ?" ಎಂಬ ನಮ್ರತೆಯ ನಮಸ್ಕಾರವನ್ನಿಡುವ ಸೇವಕನಂತೆ ವಿರಮಿಸುತ್ತಿದ್ದಾನೆ. ಕತ್ತಲಿನ ಮಬ್ಬಿನ ಛಾಯೆಗಳು ತಮ್ಮ ನಿರ್ಮಾಲ್ಯ ಬಣ್ಣಗಳನ್ನು ತೊಳೆದುಕೊಂಡು ಬೆಳಕಿನಂತೆ ಪ್ರಚ್ಛನ್ನ ರೂಪದಲ್ಲಿ ತೇಲುತ್ತಿವೆ; ಸೂರ್ಯನ ಬಿಳಿಯ ಪದರಿನಲ್ಲಿ ಸೇರಿಕೊಂಡು ಆನಂದದಲ್ಲಿ ಮಗ್ನವಾಗುತ್ತಿವೆ.

ಮಾರ್ತಾಂಡನು ನಿಷ್ಕಲ್ಮಷವಾದ ಯಾವ ಅಲ್ಪತೆಯನ್ನೂ ಸಹಿಸದ ಮನಸ್ಸಿನಿಂದ ದೇದೀಪ್ಯಮಾನನಾಗಿ ತನ್ನ ಕೆಂಪು ಕಿರಣಗಳನ್ನು ಚಿಮ್ಮುತ್ತ ವಿರಾಜಿಸುತ್ತಿರುವನು.

ಜಗತ್ತಿನಲ್ಲಿ ಹೊಸ ಚೈತ್ರ್ಯವುಂಟಾಗಿದೆ. ಪಕ್ಷಿಗಳು ಜಿಗಿದೆದ್ದು ನಿಂತು ನಭೋಮಂಡಲದಲ್ಲಿ ಹಾರತೊಡಗುತ್ತಿವೆ. ಪವನ ಕುಮಾರರು ಗಿಡದೆಲೆಗಳ ಮೇಲಿನ ಮಂಜಿನ ಹನಿಗಳನ್ನು ಸವಿಯುತ್ತ ಆನಂದದಲ್ಲಿ ಮಗ್ನರಾಗಿರುವರು.

ಅದೇ ಉದಯಿಸಿದ ಸೂರ್ಯಭಗವಾನನು ಮೈಮರೆತು ಬೆಳಗಿನ ಆನಂದದಲ್ಲಿ ಮುಳುಗಿದ್ದ ಹಸುಗೂಸಿನಂತಿದ್ದ ಹೊಸ ಹೂವಿನ ಮೇಲೆ ತನ್ನ ಕಿರಣವೊಂದನ್ನು ಚೆಲ್ಲಿದ.

ನಾ ಬದುಕಲಾರೆನೆಂದು "ಅಯ್ಯೋ" ಎಂದು ಆರ್ತನಾದವನ್ನು ಗೈಯುತ್ತ ಕಣ್ಣು ಮುಚ್ಚಿತು ಆ ನೂತನ ಪುಷ್ಪ ನಡುಗಿತು. ಅದರ

ಕಾಲುಗಳು ತತ್ತರಿಸಿದವು. ಘನವಾದ ಗಾಯವಾದಂತೆನಿಸಿತು ಅದರ ಹೃದಯಕ್ಕೆ. ಏನದು? ಎಷ್ಟು ಕಂದಿ ಹೋಗಿದೆ ಅದರ ಕೋಮಲ ಶರೀರ? ಆದರೂ ಒಂದು ಬಗೆಯ ಹೊಸ ಚೈತನ್ಯವುಂಟಾಗಿದೆ. ಉತ್ಸಾಹದಿಂದ ಅದು ಚೇತರಿಸಿಗೊಂಡು ಮೇಲಕ್ಕೆದ್ದು ನಿಂತಿತು.

"ಅಮ್ಮಾ" ಎಂದು ಕೂಗಿಕೊಂಡಿತು; ಭಯದಿಂದಲ್ಲ, ಸಂತೋಷದಿಂದಲ್ಲ; ಸತ್ತೆನೆಂಬ ನೋವಿನಿಂದಲ್ಲ; ಉಕ್ಕಿ ಬರುವ ಹುರುಪಿನಿಂದ; ನವ ಯೌವನದ ಬಲದಿಂದ.

ಆ ಎಳೆ ಬಿಸಿಲು ತನ್ನಲ್ಲೆಷ್ಟು ಚೈತನ್ಯವನ್ನುಂಟು ಮಾಡಿದೆ.? ಮಾಯವಾಗುತ್ತಿರುವ ಬೆಳುದಿಂಗಳು, ಇನ್ನೂ ಚಿಗುರು ಹುಲ್ಲಿನ ಚಿಗುರುತನ, ಆಕಾಶದಲ್ಲಿ ತಿಳಿಯಾಗಿ ಕಾಣುವ ನುಣುಪಾದ ನೀಲಿ ಬಣ್ಣ, ತಂದೆಯ ಆಸರದಿಂದ ತಾನು ಭಯವಿಲ್ಲದೆ ನಿಂತಿರುವ ಧೈರ್ಯ, ಕೋಗಿಲೆಯ ಸುಸ್ವರ, ಗಾಳಿಯಲ್ಲಿ ಕೇಳಿಬರುವ ಅರ್ಥವಿಲ್ಲದ ಧನಿ, ತಾಯಿಯ ಬೇರಿನಿಂದ ಬರುವ ಬುಗ್ಗೆಯಂತಿರುವ ಪಾನೀಯದ ಪ್ರವಾಹ, ಇವುಗಳೆಲ್ಲವೂ ಆ ಹೂವಿಗೆ ಶಕ್ತಿಯನ್ನಿತ್ತವು.

ಬೆಳಕಿನಲ್ಲಿ ಮಿನುಗುವ ತನ್ನ ಎಸಳುಗಳು, ಅವುಗಳ ಮೇಲಿನ ನುಣುಪಾದ ಸ್ಪರ್ಶಕೋಮಲತ್ವ, ತನ್ನ ಹೃದಯಾಂತರಾಳದಲ್ಲಿ ಉಕ್ಕಿ ಬರುವ ಆನಂದದ ರಸ, ಇವುಗಳ ಸಮ್ಮಿಳನದಿಂದ ತನ್ನ ಬಾಹುಗಳಿಗೆ ಬರುತ್ತಿರುವ ಹೊಸ ಶಕ್ತಿ ಎಲ್ಲವೂ ಸೂರ್ಯನಾರಾಯಣನ ಕಾಂತಿಯ ಪ್ರಭಾವವೆಂದು ಅದು ಮನಗಂಡಿದೆ.

ಇದೆಲ್ಲವೂ ಹೀಗಿರಲು ಘಮ್ಮೆಂದು ನರನಾಳಗಳಿಗೂ ಹಬ್ಬಿ ಹುಚ್ಚೆಬ್ಬಿಸುವ ಪರಿಮಳವು ತನ್ನನ್ನು, ತಾಯಿಯನ್ನು, ಗಾಳಿ—ಆಕಾಶಗಳನ್ನು—ಎಲ್ಲರನ್ನೂ ಮೈಮರೆಯುಂತೆ ಮಾಡಿ ವಶಪಡಿಸಿಕೊಳ್ಳುತ್ತಿದೆ.

ಉಕ್ಕಿ ಬರುವ ಆನಂದವನ್ನು ತಡೆಯುವದು ಅಸಾಧ್ಯವೆಂದು ನೆನೆದು ಬಹು ಹುರುಪಿನಿಂದ ಅದು ನಕ್ಕುಬಿಟ್ಟಿತು. ಆ ನಗುವಿನಿಂದ ಸೂರ್ಯನ ಕಾಂತಿಗೆ ಪ್ರತಿಭೆ ಬಂದಂತೆನಿಸಿತು.

ಏನೀ ಮಾಧುರ್ಯ? ಮನಮೋಹಕವಾದ, ಮೈಮರೆಯಿಸುವ ಈ ಆನಂದಕ್ಕೆ ಮನಸೋತು ಆಕಾಶವೇ ಕೆಳಗಿಳಿದು ಬರಬಹುದಾಗಿತ್ತು.

ಗಾಳಿಯು ಈ ಸುವಾರ್ತೆಯನ್ನು ಮೂರು ಲೋಕಗಳಿಗೂ ಹರಡಿಸಬಹು ದಾಗಿತ್ತು. ಹೂವಾಗಿ ತಾನು ಹರಡುತ್ತಿರುವ ಈ ಪರಿಮಳಕ್ಕೆ ಜಗತ್ತೇ ಅದನ್ನು ಮರ್ಯಾದೆ ಮಾಡಬಹುದಾಗಿತ್ತು. ಎಂತಹರಿಗೂ ಆನಂದವನ್ನುಂಟು ಮಾಡುವ ಅದರ ವಾಸನೆಗೆ ಬೆಲೆಯುಂಟೇ? ಈ ಗಿಡ ಮರಗಳು, ಪಕ್ಷಿಗಳು, ಕ್ರಿಮಿಕೀಟಗಳು, ಮೃಗಗಳು, ಅನಂತಾಕಾಶವು, ಸೂರ್ಯ ಚಂದ್ರರು, ಎಲ್ಲರೂ ಅದನ್ನು ಆದರದಿಂದ ಸ್ವಾಗತಿಸಬೇಕಾ ಗಿಲ್ಲವೆ? ಅದು ಹರಡುತ್ತಿರುವ ಪರಿಮಳ ಸೌಭಾಗ್ಯದಿಂದ ನಿಸರ್ಗಕ್ಕೆ ವಿಶಿಷ್ಟ ಶೋಭೆ ಬರುವುದಿಲ್ಲವೆ? ಹೀಗಾದ ಮೇಲೆ ಈ ಮರ್ಯಾದೆ ಸಲ್ಲತಕ್ಕದ್ದೇ.

ತನಗೆ ಸರಿಯಾರಿರುವರೆಂದು ಭಾವಿಸಿತು ಆ ಹೂ

ಹುಡುಗತನದ ಹುರುಪಿನಿಂದ ಕುಣಿಯಲಾರಂಭಿಸಿತು. ಅದರ ಅರ ಳಿದ ಕಣ್ಣುಗಳಲ್ಲಿ ಕಾಂತಿ ಮಿನುಗುತ್ತಿತ್ತು. ಎಲೆಗಳ ಮರೆಯಲ್ಲಿ ಅವಿತು ಕೊಂಡು ಕೂತು ತನ್ನನ್ನು ನೋಡಲು ಬಂದವರ ಕಡೆ ಇಣಿಕಿ ನೋಡುತ್ತ ನಗುತ್ತಿತ್ತು. ಪ್ರಪಂಚವೆಲ್ಲಕ್ಕೂ ತನ್ನ ಪರಿಮಳವು ಹಬ್ಬುವಂತೆ ಮಾಡಿತು.

ಸಂಗೀತ ನಿನಾದದಲ್ಲಿ, ಉತ್ಸಾಹದ ಗುಂಗಿನಲ್ಲಿ, ಮೈಮರೆತು ನೃತ್ಯ ಮಾಡುತ್ತ, ಅಲ್ಲಿಂದಿಲ್ಲಿಗೆ ಹಾರಾಡುತ್ತ, ಯೌವ್ವನದ ಭರದಲ್ಲಿ ಸೊಕ್ಕೇರಿ, ಮೈತುಂಬಾ ಹಸುರು ಗೆರೆಗಳಿಂದ ಅಲಂಕೃತವಾದ ತುಂಬಿಯು ನಲಿಯು ತ್ತಿರುವನು.

ಹೊಸ ಬಿಸಿಲಿನ ಮುಸುಕಾದ ಕಾಂತಿಯಲ್ಲಿ ಆ ತುಂಬಿಯ ದೇಹವು ಮೆರೆಯುತ್ತಿದೆ. ಕ್ರೂರವಾದ ಅವನ ಮೂಗು, ರಕ್ತವರ್ಣದ ಆ ಕಣ್ಣು ಗಳು, ಚೂಪಾದ ಮೊನೆಗಳಿಂದ ಉದ್ದವಾದ ಅವನ ಮೀಸೆ, ಇವನ ಈ ಕರಾಳರೂಪ ನೋಡಿ, ಹಸುಳೆಯಾದ ಹೂ ನಡುಗಿತು.

"ಇವರಾರು?" ಎಂದು ಚೀರಿ ತಾಯಿಯ ಎಲೆ ಹಸುರಿನ ಸೆರಗಿನಲ್ಲಿ ಸೇರಿಕೊಂಡಿತು.

ತನ್ನ ತಲೆಯನ್ನು ಮುಚ್ಚಿಕೊಂಡಿತು.

"ಏನೂ ಭಯವಿಲ್ಲಮ್ಮಾ! ಆತ ನಿನ್ನನ್ನೇನೂ ಮಾಡಲಾರನು." ಎಂದಳು ತಾಯಿ.

" ಆ, ಅವನು ನನ್ನ ಜೋಲಿಗೆ ಬರುವದಿಲ್ಲವೆ? ಏನವನ ಸೊಕ್ಕು?" ಎಂದು ಎಲೆಗಳನ್ನು ಸ್ವಲ್ಪ ಸರಿಸಿಕೊಂಡು ಮತ್ತೆ ಇಣಿಕಿ ನೋಡಿತು. ಮತ್ತೆ ತನ್ನ ಸುಗಂಧವನ್ನು ಪ್ರಸರಿಸಿತು. ಈ ಪರಿಮಳದ ಸೊಡರಿನಲ್ಲಿ ಸಿಕ್ಕಿಬಿದ್ದು ಉಸಿರಾಡಿಸುವುದು ಕಷ್ಟವಾಗಿರಲು ಸ್ವಲ್ಪ ಸಮಯ ವಿಶ್ರಾಂತಿಗೆಂದು ನಿಂತನು ಆ ಭ್ರಮರ ವೀರ.

" ಅಮ್ಮಾ! ಮತ್ತೇತಕ್ಕೋ, ಆತನು ನಿಂತು ನೋಡುತ್ತಿದ್ದಾನೆ." ಎಂದಿತು ಭಯದಿಂದ.

ಅವನಲ್ಲಿ ನಿಂತಿರುವಾಗ ತನಗೇಕೆ ಹೇಳಲಾರದ ವೇದನೆ? ಅವನ ಬರುವಿಕೆಯಿಂದ ತನಗೇಕೆ ಈ ನವೀನ ಆಕಾಂಕ್ಷೆ? ಇಷ್ಟೇಕೆ ಅವಸರ! ತನಗೆ ತಾನೇ ಅವನು ಬಂದರೆ ಅದರ ಪರಿವೇಕೆ? ಈ ಹೂ ಅವನಿಗೆ ಬೆಳೆದ ಹೆಣ್ಣಿಂತೆ ಕಾಣಿಸಿತು. ಅವನು ಅವಳ ಕಡೆ ದಿಟ್ಟಿಸಿ ನೋಡಿದ.

ಹಿಂದೆ ಬಂದ ಇತರ ಮಿತ್ರರನ್ನು ಹೋಗೆಂದು ಸನ್ನೆ ಮಾಡಿದ. ಆ ಗೆಳೆಯರು ಅವನಲ್ಲಿ ಹೆಚ್ಚಿನ ಹುರುಪನ್ನುಂಟುಮಾಡುವ ಝೇಂಕಾರವನ್ನು ಮಾಡಿ ಅವನ ಮೇಲೆ ಹೂ ಹುಡಿಯನ್ನು ಚೆಲ್ಲಿ ಅಲಂಕರಿಸಿದರು. ಸುತ್ತಲಿನ ಎಲೆಗಳ ಮೇಲೆ ಕುಳಿತು ಗಲಾಟೆ ಮಾಡಿದರು ಆ ತುಂಟ ತುಂಬಿಗಳು. ನಗು ನಗುತ್ತ ಹಾಸ್ಯಮಾಡಿ ಹಾರಿಹೋದರು.

ಮದವೇರಿದ ಆನೆಯಂತೆ ಹಾದು ಬರುತ್ತಿದ್ದಾನೆ ಆ ಭ್ರಮರ, ಆ ಕುಸುಮಳ ಕಡೆಗೆ. ಬಿಸಿಲಿನಲ್ಲಿ ಮೆರೆದು ಅದರಿಂದ ಕಾಂತಿಯನ್ನು ಪಡೆದು ಮುಂದವಾಗಿ ಬೀಸುತ್ತಿರುವ ಗಾಳಿಯಿಂದ ಶಕ್ತಿಯನ್ನು ಪಡೆದು ಬರುತ್ತಿದ್ದಾನೆ. ಇನ್ನು ಅವನ ಕಾಟ ತಪ್ಪುವುದು ಅಶಕ್ಯ.

ನಾಚಿಕೆ! ಒಳಗಿನಿಂದ ಹಾದು ಬರುವ ನಾಚಿಕೆ!

ಹಿಂದೆ ಇದ್ದ ಗರ್ವ, ಅಹಂಕಾರ ಎಲ್ಲವೂ ಮಾಯವಾದವು. ಇನ್ನಿಷ್ಟು ಒಳ ಒಳಗೆ ಬಚ್ಚಿಟ್ಟುಕೊಂಡಳು.

ಅವನು ಬರುವನೆಂಬ ಭಯ! ಆದರೆ ತಿಳಿಸಲಾಗದ ಹರುಷ ಬೇರೆ ಒಳಗೊಳಗೆ!

ಬಾರದೆ ಹಾಗೆಯೇ ಹೋಗಿಬಿಡುವನೇನೋ ಯೆಂಬ ದಿಗಿಲು, ಇದೊಂದು ಹೊಸ ಅನುಭವ ಆ ಹೂವಿಗೆ.

ಬಂದೇಬರುವನೆಂಬ ಶ್ರದ್ಧೆ; ಮತ್ತೆ ನಾಚಿಕೆ.

ಇದೆಲ್ಲವೂ ತೀರ ಹೊಸದಾದ ದಿವ್ಯ ಅನುಭವ!

ಆದರೆ ಅವನಿಗೆಲ್ಲಿದೆ ಹೀಗೆ ಹಾದು ಬರುವ ಸ್ವಾತಂತ್ರ?

ಅವನಿಗೆಲ್ಲಿದೆ ಆ ಧೈರ್ಯ.?

ಇನ್ನೂ ಏಕೆ ಬರಲೊಲ್ಲ?

ಅವನು ಬಂದನೆಂದರೆ ಅವನಿಗೆ ಕಾಣಿಸದಂತೆ ಮರೆಯಾಗಿರಲು ತನ್ನ ಗುಮುಗುಮುಗಾನದಿಂದ ಬೇಡಿಕೊಳ್ಳಬೇಕೆಂದು ನೆನೆದಳು.

ಆಗ ಕೈಗೆ ಸಿಗದಂತೆ ಎಲೆಗಳ ಹಿಂದೆ ಮೈತಪ್ಪಿಸಿಕೊಂಡು ನಿಂತು ಅವನನ್ನು ಕಾಡಬೇಕೆಂದು ನಿಶ್ಚಯಿಸಿದಳು.

ಏನವನ ಧೈರ್ಯ? ಪ್ರಮತ್ತನಂತೆ ಎಲೆಗಳನ್ನು ಪಕ್ಕಕ್ಕೆ ಸರಿಸಿ, ತನ್ನನ್ನು ಸೇರಲು ಹೂಂಕರಿಸುತ್ತಲಿದ್ದಾನೆ ಆ ಮದಾಂಧ! ಕಡೆಗಣ್ಣಿನಿಂದ ಅವನನ್ನು ನೋಡಿ ಆ ಕುಸುಮ "ಹೋಗೆಲವೋ, ಧೂರ್ತ" ಎಂದು ನುಡಿದಳು. ಆದರೆ ಆ ಬಿರುಸು ಮಾತಿನಲ್ಲಿ ಕಾಠಿಣ್ಯವಿರಲಿಲ್ಲ. ಆ ಸ್ವರದಲ್ಲಿ ಆಹ್ವಾನದ ಕರೆ ಇತ್ತು; ಹೃದಯದ ಮಿಡಿತವಿತ್ತು.

ಅವನು ಎತ್ತರದ ವಿಶಾಲವಾದ ಸ್ವರದಲ್ಲಿ ವಿರಾಮವಿಲ್ಲದ ಪ್ರೇಮಗೀತೆಯನ್ನು ಹಾಡುತ್ತ, ಸುತ್ತ ಹಾರಾಡುತ್ತಿರುವನು. ಅವನ ರೆಕ್ಕೆಗಳ ಆ ಮನಮೋಹಕ ಬಣ್ಣ ಆವನ ಮೈಯಿಂದ ಹೊರಬೀಳುತ್ತಿರುವ ಆ ಮದದವಾಸನೆ ತಲೆತಿರುಗುವಂತೆ ಮಾಡುತ್ತಿದೆ.

ಉಕ್ಕಿ ಬರುವ ಸಮುದ್ರದ ತೆರೆಯಂತೆ ಆ ಮಧುರಗಾನ ತನ್ನನ್ನು ಮುಳುಗಿಸುತ್ತದೆ; ಸಮುದ್ರದ ಘೋರ ನಿನಾದದಂತೆ ಮೈಮರೆಸುತ್ತದೆ.

ಹೂವಿನೆದುರು ನಿಂತು ಕೇಳುತ್ತಿರುವನು; ಬಾಗಿದ ತಲೆಯಿಂದ ತನ್ನನ್ನು ಬೇಡುತ್ತಿರುವನು "ನಿನಗಾಗಿ ಅನಂತ ಕಾಲದಿಂದ ಕಾಯುತ್ತಲಿದ್ದೇನೆ. ಹುಡುಕುತ್ತಲಿದ್ದೇನೆ. ನನ್ನ ಐಶ್ವರ್ಯವೆಲ್ಲವನ್ನೂ ನಿನ್ನ ಮುಂದಿರಿಸುವೆನು. ನನ್ನ ಮೇಲೆ ನಿನ್ನ ದೃಷ್ಟಿ ಒಂದು ಸಲ ಮಾತ್ರ ಬೀಳಲಿ" ಎಂದು ಪ್ರಾರ್ಥಿಸುತ್ತಿರುವನು.

ಎಲ್ಲಾ ಸುಳ್ಳಿನ ಕಂತೆ; ಈ ಸಟೆಯಲ್ಲಿ ಒಂದು ಬಗೆಯ ಮಾಧುರ್ಯವಿದೆಯೆಂದೆನಿಸಿತು ಆ ಕುಸುಮಕ್ಕೆ.

ನನಗಿನ್ನಾರ ಮೇಲೆಯೂ ಪ್ರೇಮವಿಲ್ಲ. ನಿನ್ನನ್ನೇ ಪ್ರೀತಿಸುತ್ತಿರುವೆನು. ಹೀಗೆಂದು ಹೇಳುವ ಸವಿಮಾತುಗಳಲ್ಲಿ ಅರ್ಥವಿದೆಯೇ? ಅವನೊಬ್ಬ ಧೂರ್ತ.

ಆದರೂ ಆ ಹೂ ಅವನ ಮೋಸದರೀತಿಯನ್ನು ತಿಳಿಯಲಿಲ್ಲ; ಅವನ ಮಾತಿನಲ್ಲಿ ಅಮಿತ ವಿಶ್ವಾಸವಿತ್ತು. ತನ್ನ ಬಿಳಿಯ ನುಣುಪಾದ ಎಸಳುಗಳನ್ನು ಮಿನುಗಿಸುತ್ತ ಒಂದು ಸಲ ನಕ್ಕು ಬಿಟ್ಟಿತು. ಗಾಳಿಗೆ ಅಲುಗಾಡುವ ಎಲೆಗಳ ನಡುವೆ ನಾಚಿಕೆಯಿಂದ ತಲೆಬಾಗಿಸಿ ನಕ್ಕು ಬಿಟ್ಟಿತು.

ಆ ತುಂಬಿಯ ಶಕ್ತಿ ಎಂತಹದು? ಏನವನ ಸಾಮರ್ಥ್ಯ.? ನೆನಸಿದ ಮಾತ್ರಕ್ಕೆ ಜಗತ್ತೆಲ್ಲವನ್ನೂ ಸುತ್ತಿಬರುವ ಬಲವಂತನಾದವನು ಓರ್ವ ಸಾಮಾನ್ಯ ಪುರುಷನಂತೆ ತನ್ನ ಮುಂದೆ ಪ್ರಾರ್ಥಿಸುತ್ತಿರುವುದು ಹೂವಿನ ಸುಯೋಗವಲ್ಲವೆ?

ಇನ್ನೂ ನಾಚಿಕೆ ದೂರವಾಗಲಿಲ್ಲ. ಎಲೆಗಳ ನಡುವೆ ಮರೆಯಾಗಿ ನಿಂತು ಇಣಿಕಿ ನೋಡುತ್ತ, ತನಗಾಗಿ ಕಾದಿರುವ ಅವನನ್ನು ಹೋಗೆನ್ನುವುದೆ? ಹೋಗೆಂದು ಹೇಳಿದರೆ ಮರುಕ್ಷಣದಲ್ಲಿಯೇ ಅವನು ಮಾಯವಾದರೆ?

ಆದರೂ ಭಯಕಂಪಿತ ಸ್ವರದಲ್ಲಿ 'ಹೋಗು' ಎಂದುಸುರಿದಳು.

ಆದರೆ ಈ ಮಾತಿನರ್ಥವನ್ನೇ ಬೇರೆಯಾಗಿ ನೆನೆದು ತನಗೆ ದರ್ಶನಭಾಗ್ಯವನ್ನಿತ್ತ ಆ ಹೂವು ತನ್ನವಳೇ ಆದಳೆಂಬ ಸಲುಗೆಯಿಂದ, ಧೈರ್ಯದಿಂದ,ಎಲ್ಲವೂ ಪರಿಚಿತವಾದುದೇಯೆಂಬ ಸರಳ ರೀತಿಯಲ್ಲಿ, ಕೋಮಲವಾದ ಈ ಹೂವಿನಗತಿ ಏನಾದೀತೆಂಬ ಭಾವನೆ ಇಲ್ಲದೆ, ಆ ಹೂವಿನ ಮೇಲೆ ಹಾರಿಬಂದು ಧೂರ್ತನಂತೆ ಕುಳಿತನು ಭೃಂಗರಾಜ.

"ಅಮ್ಮಾ" ಎಂದು ಕುಸುಮ ಚೀರಿದಳು; ಪ್ರಾಣಹಾರಿ ಹೋಗುವಂತೆ ಕೂಗಿ ಕೊಂಡಳು.

ತಾಯಿಯು ಮರುಮಾತಾಡಲಿಲ್ಲ. ಮತ್ತಾರೂ ಸಹಾಯಕ್ಕೆ ಬರಲೊಲ್ಲರೆ? ಎಲ್ಲರೂ ದೂರ ಸರಿದರೆ? ಹೀಗಾದುದೇತಕ್ಕೆ? ಪ್ರಾಣವಾಯುಗಳು ಹಾರಿಹೋದಂತೆನಿಸಿತು.

ಹೆಚ್ಚಿನ ಆಶೆಯಿಂದ ಬಂದ ಆ ಭೃಂಗರಾಜನು ಮನದಣಿಯ ಆ ಹೂವಿನಲ್ಲಿಯ ಮಧುವನ್ನು ಸೇವಿಸತೊಡಗಿದನು.

ಮೈ ದಣಿಯುತ್ತಿದೆ. ಕಣ್ಣು ಕತ್ತಲುಗೂಡಿಸುತ್ತಿದೆ. ಮೈ ಆದ್ಯಂತವೂ ನೋವು. ರಕ್ತವನ್ನೇ ಸವಿಯುತ್ತಿರುವನು. ಕಟುಕನಂತೆ ಭ್ರಮರರಾಜನು ಮಧುವನ್ನು ಪೂರ್ಣ ಸವಿಯುತ್ತಿರುವನು. ಇನ್ನು ತಾನೆಂತು ಜೀವಿಸುವುದು ? ಇವನ ಕ್ರೂರ ಬಾಹುಗಳಿಂದ ಪಾರಾಗಿ ಜೀವಿಸುವ ಆಶೆ ಉಂಟೇ ?

ಇಷ್ಟಾದರೂ ಅಪ್ರಯತ್ನವಾಗಿ ತನ್ನ ಎಸಳುಗಳಿಂದ ಅವನನ್ನು ಮುಚ್ಚಿದಳು. ಅವನನ್ನು ತೀರ ಹತ್ತಿರ ಬರಮಾಡಿಕೊಂಡಳು. ತನ್ನಲ್ಲಿಯ ಪರಿಮಳವನ್ನು ಅವನ ದೇಹಾದ್ಯಂತಕ್ಕೂ ಸವರಿದಳು. ತಾನೂ ಆ ಲೋಕದಲ್ಲಿ ಮೈಮರೆತಳು. ತನ್ನೆಲ್ಲವನ್ನೂ ಅರ್ಪಿಸಿದಳು.

" ಇನ್ನು ನನ್ನನ್ನು ತೊರೆಯಬೇಡ. ನಾನು ನಿನ್ನವಳು. ನಿನಗಿಂತಲೂ ಮತ್ತಾರು ನನಗೆ ಪ್ರೀತಿಪಾತ್ರರು ? ನನ್ನಿಂದ ದೂರಾಗಬೇಡ " ಎಂದು ಬಹುವಿಧವಾಗಿ ಬೇಡಿಕೊಂಡಳು

" ನನ್ನಲ್ಲಿಯ ಸವಿರಸವನ್ನು ಮಾಧುರ್ಯವನ್ನು ಮಧುವನ್ನು ಎಷ್ಟು ಬೇಕಾದರೂ ಸೇವಿಸು. ಯಾವರೀತಿಯಲ್ಲಿ ಬೇಕಾದರೂ ನನ್ನೊಂದಿಗೆ ಸುಖಿಸು. ಆದರೆ ನನ್ನಿಂದ ದೂರ ಸರಿಯಬೇಕೆಂಬ ಕಲ್ಪನೆಗೆ ನೀನು ಮನಗೊಡಬೇಡ " ಎಂದು ಮತ್ತೆ ಕೇಳಿಕೊಂಡಳು.

ಝಲ್ಲೆಂದಿತು ದೇಹ! ನಾನು ನೋಡಿದ ಸೂರ್ಯಭಗವಾನನನ್ನು ನೋಡಲು ಕಣ್ಣುಗಳಿಗೆ ಸಾಧ್ಯವಿರಲಿಲ್ಲ. ಸೂರ್ಯಚಂದ್ರಾದಿಗಳು ನರ್ತಿಸುವಂತಿತ್ತು. ರಾತ್ರಿ ಸುಖವನ್ನಿತ್ತ ನಕ್ಷತ್ರಾದಿಗಳು ಲಾಸ್ಯದಿಂದ ನಾಟ್ಯವಾಡುತ್ತಿರುವಂತೆ ಕಂಡು ಬಂತು. ಸಾಗರಗಳು ಭೋರೆಂದು ಸಂತೋಷದಿಂದ. ಒದರುತ್ತಿವೆ, ಏನೀ ಆನಂದ ! ರಭಸ ! ಸವಿ!

ಪ್ರೀತಿಯ ಹೃದಯಗಳು ಈ ವೇದನೆಯನ್ನು ತಡೆಯಬಲ್ಲವೆ ? ರಕ್ತನಾಳಗಳು ಒಡೆಯುವುದಿಲ್ಲವೆ ? ಕೋಮಲವಾದ ಎಸಳುಗಳು ಕಂದಿ ಹೋಗುವುದಿಲ್ಲವೆ ?

ಆನಂದದ ಭರದಲ್ಲಿ ಝೋಲಿ ಹೊಡೆದು ಬೀಳುವದರಲ್ಲಿದ್ದಳು; ತನ್ನೆಸಳುಗಳೆಲ್ಲವನ್ನು ಮುಚ್ಚಿಕೊಂಡು ಮೂರ್ಛೆ ಹೋದಳು.

ಮಧುರ ಮೂರ್ತಿ ಕರುಣಾಮಯನು ತನ್ನನ್ನು ತೊರೆದನೆ ? ದೂರ ಸರಿದು ಕಣ್ಣಲ್ಲಿ ದಿಟ್ಟಿಸಿ ನೋಡುತ್ತ ನಕ್ಕು ಬಿಡುತ್ತಿರುವನೆ ? ತಾನು ಮತ್ತೇನನ್ನು ಕೊಡಬಲ್ಲಳು ? ಅವನ ಆ ನಗುವಿನಲ್ಲೊಂದು ಬಗೆಯ ಸಂತುಷ್ಟತೆ ಇತ್ತು. ಅವನು ನಿರ್ದಯನಾಗಿ ಹೊರಟು ಹೋದ.

ಅವನ ಮೇಲಿನ ಈ ಸೇಡನ್ನು ತೀರಿಸಿಕೊಳ್ಳಲು ಸಾಧ್ಯವೆ ? ಅವನ ಮೇಲಿನ ಸಿಟ್ಟನ್ನು ಯಾವ ರೀತಿಯಲ್ಲಿ ಪರಿಹರಿಸಿಕೊಳ್ಳುವುದು? ಆ ಅನಾಥಳಾದ ಹೂವಿನ ಗತಿ ಏನು ?

ವಿನಯದಿಂದ ನಮಸ್ಕರಿಸಿದಳು; ನಮ್ರತೆಯಿಂದ ತಲೆಬಾಗಿದಳು.

ಆ ಭ್ರಮರ ರಾಜನು ಹೋದ ಭಂಗಿ ಒಂದು ರೀತಿಯದು. ಹೊರಡುವಾಗ ತನ್ನಕಡೆ ಸಾರಿದ ನೋಟದಲ್ಲಿ ಧೂರ್ತತೆಯ ಲಕ್ಷಣವಿರಲಿಲ್ಲ. ಹೋಗಲೇಬೇಕಾದ ತನ್ನ ಲೋಕಕ್ಕೆ ಹೋಗುವ ಅವನನ್ನು ತಡೆಯುವ ಶಕ್ತಿ ತನ್ನಲ್ಲಿರಲಿಲ್ಲ. ತನಗೆ ಅಗಮ್ಯವಾದ ಬಹುದೂರವಾದ ನಿಲುಕದ ಆ ಮೇಲಿನ ಮಂಗಳಲೋಕಕ್ಕೆ ಹೋಗುವ ಇವನನ್ನು ತಡೆಯುವ ಇಚ್ಛೆ ಆ ಹೂವಿಗಿರಲಿಲ್ಲ- ಮಂಗಳ ಲೋಕದ ಮಂಗಲ ಪುರುಷನು ಸೇರಲೇಬೇಕಾದ ಸ್ಥಾನಕ್ಕೆ ಹೋಗುತ್ತಿರುವುದನ್ನು ತಡೆಯುವುದು ಸರಿಯಲ್ಲವೆಂದೆನಿಸಿತು. ಕಣ್ಣಿಗೆ ಕಾಣುವ ವರೆಗೂ ಬಾಗಿದ ತಲೆಯಿಂದಲೇ ಕದ್ದು ನೋಡಿದಳು ತನ್ನಿನಿಯನನ್ನು. ಮುಂದೆಸರಿದು ಮತ್ತಿಷ್ಟು ನೋಡಲು ಶಕ್ತಿ ಇರಲಿಲ್ಲ.

ಎಲೆಗಳ ಮರೆಯಲ್ಲಿ ಆಸರದಲ್ಲಿ ಬೆಳೆದ ಈ ಬಾಲೆ ತಂದೆತಾಯಿಯರನ್ನು ಬಂಧುಗಳನ್ನು ತೊರೆದು ಹೋಗಲು ಶಕ್ಯವೇ ? ಗೃಹಿಣಿಯಾದವಳು ಇನ್ನೊಬ್ಬನೊಂದಿಗೆ ಹಾರಿಹೋಗುವುದು ಲಕ್ಷಣವಲ್ಲ. ಹೋಗುವುದಾದರೂ ಹೇಗೆ ?

ತಾನು ಅಬಲೆ.

ಸುತ್ತಲೂ ವನಕನ್ಯಯರು ಸೇರಿ ಸುಶ್ರಾವ್ಯವಾಗಿ ಹಾಡುತ್ತಿರುವರು; ಅವರ ಆ ಸೊಗಸಾದ ಗಾಯನ ಶಾಂತಿಯನ್ನುಂಟು ಮಾಡುತ್ತಿದೆ. ಬೆಳೆದು ನಿಂತ ತನ್ನ ದೇಹಾಕೃತಿಯನ್ನು ನೋಡಿಕೊಂಡು ಗರ್ವಪಡುತ್ತಾಳೆ.

ಸೂರ್ಯನು ತಲೆಯ ಮೇಲೇರಿ ಬಂದು ಗಿಡದ ನೆರಳುಗಳನ್ನು ಮಾಯವಾಗಿಸುತ್ತಿದ್ದಾನೆ. ನೆರಳಿನಲ್ಲಿ ವಿಶ್ರಾಂತಿ ಪಡೆಯುತ್ತಲಿದ್ದ ಗಿಳಿ ವಿಂಡುಗಳು ಹಾರಿ ಹೋಗುತ್ತಿವೆ. ಗರುಡ ಪಕ್ಷಿಗಳು ಗರ್ವದಿಂದ ಮೋಡಗಳ ನಡುವೆ ಹಾರಿ ಹೋಗುತ್ತಲಿವೆ.

ನೆರಳುಗಳ ಅಳತೆ ಕಡಮೆಯಾಗುತ್ತಿರಲು ಆ ಹೂವು ಸುಮ್ಮನೆ ಕುಳಿತಿದ್ದರೂ ಮನಶ್ಶಾಂತಿ ಇಲ್ಲದೆ ಯೋಚಿಸಿತು. ತನ್ನ ಚೆಲುವೆಲ್ಲವೂ ಮಾಯವಾದರೆ ಯಾರಿಗೆ ನಷ್ಟ? ತಾನು ಪರಿಮಳವನ್ನು ಹರಡದಿದ್ದರೆ ಏನಾಗುವದು? ಭ್ರಮರಗಳು ತನ್ನೆಡೆಗೆ ಬಾರದೇ ಹೋದರೇನು? ಹೀಗೆ ಯೋಚಿಸಿ ತಾನು ಜೀವಂತ ಇರುವುದು ಅಪ್ರಯೋಜಕವೆಂದು ಭಾವಿಸಿತು.

ಹೊಸ ಹುಮ್ಮಸ ತಲೆದೋರುತ್ತಿದೆ. ಇನ್ನೂ ಹೆಚ್ಚು ವಿಸ್ತಾರವಾದ ಪ್ರದೇಶ ಬೇಕೆಂದು ತನ್ನ ರೆಕ್ಕೆಗಳನ್ನು ಸಡಿಲು ಪಡಿಸುತ್ತಿದ್ದಾಳೆ. ಭ್ರಮರ ರಾಜನುಂಡು ತೇಗಿದ ಆ ಸ್ಥಾನದಲ್ಲಿ ಉದುರಿದ ಎಸಳುಗಳನ್ನು ಸೂರ್ಯನಿಗೊಪ್ಪಿಸಿ ನಿಸರ್ಗದಲ್ಲಿ ನಡೆಯುವ ಈ ವಸಂತೋತ್ಸವದಲ್ಲಿ ತಾನೂ ಭಾಗವಹಿಸಬೇಕೆಂದು ನಿಶ್ಚಯಿಸಿ ತನಗಿನ್ನೇನುಬೇಕೆಂಬ ತಾತ್ಸಾರಭಾವದಿಂದ ಅಬಲೆಯರ ಮೇಲೆ ದೌರ್ಜನ್ಯ ನಡೆಯಿಸಿ ತಾನೇ ತಾನಾಗಿ ಮೆರೆಯುವ ಸೃಷ್ಟಿಯನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾಳೆ ಈ ಪುಷ್ಪವನಿತೆ.

ಗಾಳಿಯನ್ನು ಒತ್ತಿ ಉರಿಯುತ್ತಿದೆ ಬಿಸಿಲು.

ಗಗನ ಮಧ್ಯದಲ್ಲಿ ವಿರಾಜಿಸುವ ಸೂರ್ಯನ ಕಣ್ಣಿಗೆ ಆ ಹೂ ಕಾಣಿಸಿತು. ರೂಪಿಯಾದ ತಾನು ಸ್ತಬ್ಧನಾಗಿ ನಿಂತು ನೋಡುತ್ತಿದ್ದಾನೆ. ಪರಿಮಳವಿಲ್ಲದ ಮಧುವಿಲ್ಲದ ಕಳೆತಪ್ಪಿದ ಈ ಹೂವು ಬೇಡವೆಂದು ಸೃಷ್ಟಿ ಹೇಳಿತು. ಎಸಳುಗಳು ಬಣ್ಣ ಬದಲಾಗಿ ಬಾಡಿದವು; ಕಳೆಗುಂದಿ ಮುಪ್ಪುರಿಕೊಂಡವು. ಒಂದೊಂದೇ ಮೆಲ್ಲನೆ ಜಾರಿ ಎಲೆಗಳ ನಡುವೆ ಬೀಳುತ್ತ ಗಾಳಿಯ ಧೂಳಲ್ಲಿ ಬೀಳುತ್ತವೆ. ಎಸಳಿಲ್ಲದ ಆ ಹೂವು ಏನನ್ನೂ ಮಾಡದೆ ತನ್ನನ್ನೂ ತನ್ನ ಚೆಲುವನ್ನೂ ಸುತ್ತಲಿನ ಪ್ರಪಂಚವನ್ನೂ ಮರೆತು ದೃಷ್ಟಿಯನ್ನು ಆ ಕಡೆ ತಿರುವಿದಳು.

ಗಿಡಗಳ ಕೊನೆಯಲ್ಲಿ ಕುಳಿತ ಗರುಡ ಪಕ್ಷಿಗಳನ್ನು ಕುರಿತು ಹೋಗಿ ಬರುವೆನೆಂದು ಹೇಳಿ ಸೂರ್ಯನು ತನ್ನ ಬಣ್ಣ ಬಣ್ಣದ ಪರಂಪರೆ

ಯೊಂದಿಗೆ ಮಾಯವಾದನೋ, ಶಾಂತಿ ಗೀತಗಳನ್ನು ಜಪಿಸುತ್ತ ವಾಯು ಕುಮಾರರು ಕೊಂಬೆಗಳಲ್ಲಿ ವಿಶ್ರಾಂತಿ ಪಡೆದರೋ, ವಿಶ್ರಾಂತಿ ಇಲ್ಲದೆ ಜಗತ್ತಿನ ಮೂಲೆ ಮೂಲೆಗೂ ಹರಿದಾಡಿ ದಣಿದ ಪ್ರಾಣಿಕೋಟಿಗಳೆಲ್ಲವೂ ಕತ್ತಲ ನೆರಳನ್ನಾಶ್ರಯಿಸಿದವೋ, ಅಂಥಹ ಸುಂದರ ಸಮಯದಲ್ಲಿ ಪಕ್ಷಿಗಳೂ ಕೋತಿಗಳೂ ತನ್ನ ತಲೆಯಮೇಲಿನ ಗೂಡಿನಲ್ಲಿ ಬಂದು ಕುಳಿತಿರುವುದರ ಅರಿವು ಹೂವಿಗಾಗಿರಲೇ ಇಲ್ಲ. ಸಾವಿರ ನಾಲಿಗೆಗಳಿಂದ ಮೂಲೆ ಮೂಲೆಗಳಲ್ಲಿ ಅವಿತುಕೊಂಡಿರುವ ಬೆಳಕನ್ನು ಕತ್ತಲೆ ಕರಾಳರೂಪದಿಂದ ನುಂಗುತ್ತಿದೆ. ಭೀಕರ ಕತ್ತಲು ಕವಿಯುತ್ತಿರುವ ಅರಿವೂ ಅದಕ್ಕೆ ಇರಲಿಲ್ಲ.

ಮೊದಲಿಗೆ ಉದಯಿಸಿದ ನಕ್ಷತ್ರದಿಂದ ಹೊರಬಿದ್ದ ಕಾಂತಿ ತನ್ನ ಎಸಳಿನ ಮೇಲೆ ಬಂದಿಳಿದು ಹೆಸರಿನಿಂದ ಕರೆಯುತ್ತಿದ್ದಾನೆ.

"ಯಾರು ?" ಎಂದು ಕೇಳಿತು ಹೂವು. ಅವರು ಯಾರೆಂಬುದು ತಿಳಿದಿದ್ದರೂ ಕೇಳಿಬಿಟ್ಟಳು.

ಭಯದಿಂದ ನಡುಗಿ ಸುತ್ತಲೂ ನೋಡಿದಳು; ಅಳುಮೋರೆಯಿಂದ ತೆರೆಯನ್ನೆತ್ತಿದಳು.

"ಇಲ್ಲಿ ಬಾ," ಎಂದನು.

"ನನ್ನ ಮಗು ?" ಎಂದಳು.

"ನಿನ್ನ ಪ್ರಾಣವಾಯುವನ್ನು ಮಗುವಿಗಿತ್ತು, ನನ್ನೊಂದಿಗೆ ಬಾ' ಎಂದನು ನಗುತ್ತ.

"ನಾನು ಹೇಗೆ ಬರಲಿ ?" ಎಂದು ಚೀರಿಕೊಂಡಳು. ಒಂದೇ ದಿನದಲ್ಲಿ ಜೀವನದ ವಾರ್ಧಕ್ಯವನ್ನು ಪಡೆದಿತು. ಆ ಹೂವು.

ಅವನು ಕೈ ಹಿಡಿದು ಅವಳ ಕಣ್ಣೀರನ್ನೊರಸುತ್ತ, "ಇಲ್ಲಿ ನೋಡು" ಎಂದನು.

ಮತ್ತೆ ಬೆಳಗಾಯಿತು. ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಬೆಳಕೇ. ಎಲ್ಲ ರೂಪವನ್ನೂ ಎಲ್ಲ ಭಿನ್ನತೆಯನ್ನೂ ತನ್ನಲ್ಲಿ ಇರಿಸಿಕೊಂಡ ಬೆಳಕು, ನೆಲದ ಹಾಸಿಗೆಯಲ್ಲಿ ಬಿದ್ದ ಒಣಗಿದ ಎಲೆಗಳಿಂದ ಮುಗಿಲ ಅಂಚಿನವರೆಗೂ ವ್ಯಾಪಿಸಿದ ದಿವ್ಯ ಪ್ರತಿಭೆ, ಎಲ್ಲೆಲ್ಲಿಯೂ ಅವನೇ ತಾನೇ ತಾನಾಗಿ ಕಾಂತಿಯುತನಾಗಿರುವನು.

ತೆರವಾದ ಹೊಟ್ಟೆಯಲ್ಲಿ ತಾಂಡವವಾಡುತ್ತಿದ್ದ ಹಸಿವೆಯನ್ನು ನೀಗಿಸುತ್ತ ಅಳುವ ಬಾಲಕರಿಗೆ ದಾಹ ಶಾಂತಿಯನ್ನು ನೀಡುತ್ತ ಬೀಳುತ್ತ ನಗುತ್ತ ಕೆಲೆಯುತ್ತ ನಲಿಯುತ್ತ ಆನಂದದಿಂದ ದುಮುಕುತ್ತ ಪ್ರತಿ ಮೂಲೆಯಲ್ಲಿಯೂ ಆತನೇ; ಅವನ ಪ್ರತಿಭಾಸ್ವರೂಪ ಎಲ್ಲೆಲ್ಲಿಯೂ ಕಾಣುತ್ತಿದೆ.

" ಬಾ "

ಆ ಒಂದು ನಸು ನಗು ಎಲ್ಲವನ್ನೂ ಮರೆಯುವಂತೆ ಮಾಡಿತು ಒಂದೇ ದಿನದ ಜೀವನದಲ್ಲಿ ತನ್ನ ವಾರ್ಧಕ್ಯವನ್ನು, ಜೀವನದ ನಿರರ್ಥಕತೆಯನ್ನು ಬಾಲಾವಸ್ಥೆಯನ್ನೂ, ತುಂಬಿದ ಯೌವನವನ್ನೂ ಬಲವನ್ನೂ ಸಂತೋಷವನ್ನೂ ಮಾತೃಪ್ರೇಮವನ್ನೂ ಎಲ್ಲವನ್ನೂ ಅವನಿಗೆ ಅರ್ಪಿಸಿದಳು.

ಅವನ ಆಸರದ ಕೈಹಿಡಿದು ಅನಂತಾಕಾಶದಲ್ಲಿ ಒಂದು ನುಗ್ಗು ನುಗ್ಗಿದಳು.

ಭಯವೆಂಬುದು ದೂರಾಯಿತು. ದುಃಖವು ದೂರ ಸರಿಯಿತು. ವಿಚಾರವಿಲ್ಲದಂತಾಯಿತು. ಆತನು ಕಾಲನೊಂದಿಗೆ, ಸಮಸ್ತ ಪ್ರಪಂಚದೊಂದಿಗೆ, ಯಾವಾಗಲೂ ಹತ್ತಿರವೇ ಇರುವವನು. ಅಂತಹನ ಕೈಹಿಡಿದು ನಿಂತಮೇಲೆ ಯಾವ ಭಯವೂ ಇಲ್ಲ. ವಿಶ್ವವೇ ತನ್ನನ್ನೆದುರುಗೊಳ್ಳಲು ಸಿದ್ಧವಾಗಿ ನಿಲ್ಲುವದು. ಎಲ್ಲಿ ಹೋದರೂ ಆದರದ ಸ್ವಾಗತವೇ; ನಗು ಮುಖದ ಪ್ರೇಮಪೂರಿತ ಮಾತುಗಳೇ. ತನ್ನ ಬರುವಿಕೆಗೆ ಬಹಳ ಬೆಲೆ. ಆ ನಭೋಮಂಡಲದಲ್ಲಿ ತೇಲುತ್ತ ಭಕ್ತಿಯಿಂದ ಆತನ ಮುಖವನ್ನು ದಿಟ್ಟಿಸಿ ನೋಡಿ ಚಿಮ್ಮಿಬರುವ ಸಂತೋಷವನ್ನು ತಡೆಯಲಾರದ ಉದ್ರೇಕದಿಂದ ನಕ್ಕು ಬಿಟ್ಟಳು.

# ಮೂವರು ಮುದುಕರು

"ರಾಯರಿನ್ನೂ ಬರಲಿಲ್ಲವೆ?" ಎಂದು ನುಡಿಯುತ್ತ ಸಾಹೇಬನು ಬಂದು, ನಾಯುಡು ಕುಳಿತಿದ್ದ ಸಿಮೆಂಟ್ ಬೆಂಚಿನ ತುದಿಯಲ್ಲಿ—ದೂರದಲ್ಲಿ—ಕುಳಿತನು. ಬರಲಿಲ್ಲವೆಂದು ಮೌನದಲ್ಲಿಯೇ ನಾಯುಡು ತಲೆಯನ್ನು ಅಲುಗಾಡಿಸಿದನು.

"ಇವತ್ತು ನಾನೇ ತಡಮಾಡಿ ಬಂದೆನೆಂದು ಭಾವಿಸಿದೆ. ಎಲ್ಲರಿಗಿಂತಲೂ ಮೊದಲಿಗೆ ಬರುವ ರಾಯರು, ಇಂದೇಕೋ ಇಷ್ಟು ವೇಳೆಯಾಗಿದ್ದರೂ ಬಾರದಿರುವುದು ಆಶ್ಚರ್ಯವೆನಿಸುತ್ತದೆ. ಇದರಲ್ಲೇನೋ ವಿಶೇಷವಿರಲೇ ಬೇಕು!" ಎಂದು ತನ್ನ ಗಡ್ಡವನ್ನು ತೀಡಿಕೊಳ್ಳುತ್ತ ಸಾಹೇಬ ಗೊಣಗಿದ.

"ನೀವೂ ಬರಲಿಲ್ಲ; ರಾಯರಂತೂ ಬಂದೇ ಇಲ್ಲ. ನಾನೊಬ್ಬನೇ ಏಕೆ ಬಂದೆನೆಂದು ನೊಂದುಕೊಂಡು, ಇನ್ನೇನು ಹೋಗಬೇಕೆಂದು ನಿಶ್ಚಯಿಸಿದೆ. ಅಷ್ಟರಲ್ಲಿ ನೀವು ಬಂದೇಬಿಟ್ಟಿರಿ. ಈಗ ಮಾಡೋದೇನು? ಏನೂ ತೋಚದಂತಾಗಿದೆ!" ಎಂದು ಬಿಳಿಯ ಮೀಸೆಗಳ ಮೇಲೆ ಕೈ ಸವರುತ್ತ ನಾಯುಡು ಹೇಳಿದ.

"ಏನೋ, ಅಗತ್ಯದ ಕೆಲಸದ ಮೂಲಕ ಮನೆಯಲ್ಲಿ ನಿಂತಿರಬೇಕು. ಇಲ್ಲದಿದ್ದರೆ ಮನೆಯಲ್ಲಿ ಸುಮ್ಮನೆ ಕೂಡ್ರುವವರಲ್ಲ ರಾಯರು!" ಎಂದೆನ್ನುತ್ತ, ರಾಯರು ದಿನವೂ ಬರುವ ಹಾದಿಯ ಕಡೆಗೆ ನೋಟ ಬೀರಿದ ಸಾಹೇಬ. ನಾಯುಡು ಕೂಡ ಅದೇ ಕಡೆಗೆ ನೋಡುತ್ತ ಸುಮ್ಮನಿದ್ದ.

ಸಂಜೆಯ ಆರರ ಸಮಯ. ಸಮುದ್ರದ ಕಡೆಯಿಂದ ತಂಪಾದ ಗಾಳಿ ಬೀಸುತ್ತಿದೆ. ಬೀಚಿನಲ್ಲಿ, ಮರಳಿನ ಹಾಸಿಗೆಯಲ್ಲಿ ಅನೇಕ ಜನ ವಿಶ್ರಮಿಸಿರುವರು. ಜನರಿನ್ನೂ ಗುಂಪು-ಗುಂಪಾಗಿ ಬರುತ್ತಿರುವರು. ತಾರು ರೋಡ್ಡಿನ ಪಕ್ಕದಲ್ಲಿ ಹಾಕಲ್ಪಟ್ಟ ಸಿಮೆಂಟಿನ ಕಾಲುದಾರಿಯಲ್ಲಿ ಜನರು

ಪ್ರವಾಹದಂತೆ ನಡೆಯುತ್ತಿರುವರು. ಮದರಾಸಿನಲ್ಲಿದ್ದ ಜನಸಮೂಹ ವೆಲ್ಲವೂ ಇಲ್ಲಿ ನೆರೆದಿದೆ ಏನೋ ಎಂಬಂತೆ ಕಾಣುತ್ತಿತ್ತು.

ವಿಶ್ವವಿದ್ಯಾನಿಲಯದ ಭವ್ಯಮಂದಿರಗಳು ಮದರಾಸಿನಲ್ಲಿ ಬೀಚಿನ ಹತ್ತಿರವೇ ಢಾಳವಾಗಿ ಕಾಣುತ್ತಿವೆ. ಇವುಗಳೆದುರು ಸಿಮೆಂಟಿನ ಕಾಲು ದಾರಿಗೆ ನಡುವೆ ವಿಶ್ರಾಂತಿಗೆಂದು ನಿರ್ಮಿತವಾದ ಆಸನಗಳೊಂದರಲ್ಲಿ, ನಾಯಡು—ಸಾಹೇಬರು ಕುಳಿತಿರುವ ಆಸನದ ನಡುವೆ ಸ್ಥಳ ಒರಿದು ರಾಯರಿಂದು ಬಾರದಿದ್ದುದರಿಂದ ಅದು ತೆರವಾಗಿ ಉಳಿದಿದೆ.

ಪ್ರತಿ ದಿನವೂ ಈ ಮೂರು ಮಂದಿಯೂ ತಪ್ಪದೇ ಇಲ್ಲಿ ಕುಳಿತು ಹರಟೆ ಕೊಚ್ಚುವುದು ರೂಢಿ. ನಾಯಡು—ರಾಯರು—ಸಾಹೇಬ್ ಈ ವರಸೆಯಲ್ಲಿ ತಪ್ಪದೆ ಕುಳಿತುಕೊಳ್ಳುವುದು, ಅಲ್ಲಿ ತಿರುಗಾಡುವ ಜನರಿಗೆ ದಿನವೂ ತಪ್ಪದೆ ಕಣ್ಣಿಗೆ ಬೀಳುವ ನೋಟವಾಗಿದ್ದಿತು. ಈ ರೂಢಿ ಆರು ವರುಷಗಳಿಂದ ಎಡೆಬಿಡದೆ ನಡೆದು ಬಂದದ್ದು. ಮೊದಲಿಗೆ ಅವರು ವಿಶ್ರಮಿ ಸುತ್ತಲಿದ್ದ ಸ್ಥಳದಲ್ಲಿ ಸೀಮೆಂಟು ಆಸನವಿದ್ದಿಲ್ಲ. ಒಂದು ನಾಗಮಲ್ಲಿಗೆಯ ಬಳ್ಳಿ ಇತ್ತು. ಕೆಲವು ಕಾಲ ಕಳೆದ ನಂತರ ಅಲ್ಲಿ ಈಗ ಕಾಣುವ ಆಸವೇ ರ್ಪಟ್ಟಿತ್ತು.

ನಾಯಡು ವೆಂಕಟಗಿರಿಯವನು. ಎಕ್ಸೈಸು ಖಾತೆಯಲ್ಲಿ ಇನ್ಸ್ಪೆಕ್ಟ ರನಾಗಿ ದುಡಿದು, ಈಗ ಪೆನಷನ್ ಪಡೆದಿದ್ದಾನೆ. ಪೆನಷನ್ ಆಗುವುದಕ್ಕೆ ನಾಲ್ಕು ವರುಷಗಳ ಮುಂಚೆ ಮದರಾಸಿಗೆ ವರ್ಗವಾಗಲು, ಇಲ್ಲಿಯೇ ದೊಡ್ಡ ಕಂಪೆನಿಯಲ್ಲಿ ಕೆಲಸಕ್ಕೆ ನಿಂತ ಮಗನಿಗೆ ಆಸರವಾಗುವುದಕ್ಕೋ ಸ್ಕರ ಇಲ್ಲಿಯೇ ಇದ್ದುಬಿಟ್ಟ. ತನ್ನಲ್ಲಿದ್ದ ಹಣದಿಂದ ಚೊಕ್ಕವಾದ ಮನೆ ಯನ್ನು ನಿರ್ಮಿಸಿಕೊಂಡಿದ್ದನು. ಉದ್ಯೋಗದಲ್ಲಿದ್ದಾಗ ದೇವರನ್ನು ಹೆಚ್ಚು ಸಲ ನೆನೆಯದಿದ್ದರೂ, ಈಗ ಮಾತ್ರ ದೇವರಲ್ಲಿ ಅಮಿತಭಕ್ತಿಯುಳ್ಳವನಾ ಗಿದ್ದ. ಸನ್‌ಲೈಟ್ ಸೋಪು ಕಂಪನಿಯವರ ಜಾಹಿರಾತಿನ ಲಕ್ಷ್ಮೀ ಸರಸ್ವತಿ, ಶ್ರೀಕೃಷ್ಣನ ಪಟಗಳಿಗೆ ಕಟ್ಟು ಹಾಕಿಸಿ, ಅರ್ಧಗಂಟೆಯ ವರೆಗೆ ಪ್ರಾರ್ಥನೆ ಸಲ್ಲಿಸುವುದು ಇವನ ಮುಂಜಾನೆಯ ಮೊದಲನೆಯ ಮುಖ್ಯ ಕಾರ್ಯಕ್ರಮವಾಗಿತ್ತು. ಸಂಜೆ ಸಮಯ ತಿಳಿಗಾಳಿಯ ಸೇವನೆಗೆಂದು ಬೀಚಿಗೆ ಬರುವುದು ನಿತ್ಯದ ನಿಶ್ಚಿತ ಕಾರ್ಯಕ್ರಮವಾಗಿತ್ತು. ಒಂದು

ಮೂಲೆಯಿಂದ ಇನ್ನೊಂದು ಮೂಲೆಗೆ ಬರುವಾಗ ಒಂದು ದಿನ, ದಣಿದು ಆ ನಾಗಮಲ್ಲಿಗೆಯ ಹತ್ತಿರ ಕುಳಿತುಕೊಂಡಾಗ ಇವರಿಗೆ ರಾಯರ ಮೊದಲ ಪರಿಚಯವಾಯಿತು.

ರಾಯರ ಹುಟ್ಟೂರು ರಾಜಮಹೇಂದ್ರನಗರ. ಕಲೆಕ್ಟರ ಕಛೇರಿ ಗುಮಾಸ್ತೆ ಕೆಲಸದಲ್ಲಿ ಹತ್ತು ವರುಷ ದುಡಿದು, ಬುದ್ಧಿವಂತಿಕೆಯಿಂದಲೂ ಮೇಲಧಿಕಾರಿಗಳ ಅನುಗ್ರಹದಿಂದಲೂ ತಹಶೀಲ್ದಾರರಾದರು. ಅಲ್ಲಿಗೆ ಅವರು ಪೆನಷನ್ ಪಡೆಯುವ ಕಾಲವು ಸಮೀಪಿಸಿತು. ರಿಟೈರಾಗಿ ಕೆಲ ಕಾಲ ತಮ್ಮೂರಲ್ಲೇ ಇದ್ದರು. ಆವರೆ ಇದ್ದೊಬ್ಬ ಮಗಳ ಅನುಕೂಲ ಕ್ಕೆಂದು, ಮದರಾಸಿನಲ್ಲಿದ್ದ ಅಳಿಯನ ಮನೆ ಸೇರಿದರು. ಅಳಿಯ ಸಾಮಾನ್ಯ ವರಮಾನವುಳ್ಳ ವಕೀಲನು. ಅಲ್ಲದೆ ತಮ್ಮ ಪೆನಷನ್ ಸಹಿತ ಅವರ ಮನೆಯ ವೆಚ್ಚಕ್ಕೆ ಕೊಡಲು ಯಾವ ಅಭ್ಯಂತರವೂ ಇರಲಿಲ್ಲ. ಮಾವನು ಅಳಿಯನ ಮನೆ ಸೇರಿದನೆಂದು ಅಸೂಯೆಪಡುವವರೂ ಇರಲಿಲ್ಲ. ಸ್ವಲ್ಪ ಸಮಯದಲ್ಲಿಯೇ, ಅನುಕೂಲಸ್ಥನಾದ ಅಳಿಯನ ಮನೆಗೆ ರಾಯರೇ ಸರ್ವಾಧಿಕಾರಿಯಾದರು. ಸಂಜೆಯ ಸ್ವಚ್ಛ ಹವೆ ದೇಹಕ್ಕೆ ಅನುಕೂಲವೆಂದು ಬೀಚಿಗೆ ಬಂದಾಗ, ನಾಗಮಲ್ಲಿಗೆಯ ಗಿಡ ಇವರನ್ನು ಬರಮಾಡಿ ಕೊಂಡಿತು. ಆ ಗಿಡದ ಕೆಳಗೆ ಕುಳಿತುಕೊಳ್ಳುವುದೆಂದರೆ ಇವರಿಗೆ ತುಂಬಾ ಸಂತೋಷ. ಆ ಗಿಡವನ್ನು ಕಡಿದುಹಾಕಿ, ಅದರ ಸ್ಥಳದಲ್ಲಿ ಸಿಮೆಂಟಿನ ಆಸನವನ್ನೇರ್ಪಡಿಸಿದಾಗ ಇವರ ಮನಸ್ಸು ಬಹಳ ಕಳವಳಗೊಂಡಿತು.

ಸಾಹೇಬರ ಸ್ವಂತ ಊರು ಮದರಾಸೇ. ಇಲ್ಲಿಯೇ ಹುಟ್ಟಿ ಬೆಳೆದರು. ಪೋಲಿಸ್ ಖಾತೆಯಲ್ಲಿ ಸೇರಿ, ಪರಿಶ್ರಮದಿಂದ ಸರ್ಕಲ್ ಇನ್ಸ್ಪೆಕ್ಟರ ನಾಗಿ, ಕೊನೆಗೆ ಡೆಪ್ಯೂಟಿ ಸುಪರಿಂಟೆಂಡೆಂಟರಾದರು. ಬಹಳ ಕಾಲ ತೆಲಗು ಜಿಲ್ಲೆಗಳಲ್ಲಿ ಕೆಲಸ ಮಾಡಿದುದರಿಂದ ಅವರಿಗೆ ತೆಲುಗೆಂದರೆ ಅಭಿಮಾನ. ಇವರ ನಾಲ್ಕು ಮಂದಿ ಗಂಡು ಮಕ್ಕಳು ಸರಕಾರದ ದೊಡ್ಡ ಉದ್ಯೋಗದಲ್ಲಿದ್ದರು. ದೊಡ್ಡಮಗನು ಮದರಾಸಿನಲ್ಲಿಯೇ ಪೋಸ್ಟುಮಾಸ್ಟ ರಾಗಿದ್ದುದರಿಂದ, ಇಲ್ಲಿಯೇ ಮನೆ ಮಾಡಿಕೊಂಡು ನಿಂತುಬಿಟ್ಟರು. ಒಂದು ದಿನ ಮನೆಯವರೆಲ್ಲರನ್ನೂ ಬೀಚಿಗೆ ಕರೆದುಕೊಂಡು ಬಂದಾಗ, ಮಿಕ್ಕವರೆ ಲ್ಲರೂ ನೀರಿನ ಹತ್ತಿರ ಹೋಗಲು, ಇವರು ಮಾತ್ರ ನಾಗಮಲ್ಲಿಗೆಯ ಗಿಡದ

ಹತ್ತಿರ ಕುಳಿತಿದ್ದ ರಾಯರೊಂದಿಗೆ ಕುಳಿತುಬಿಟ್ಟರು. ಮುಂದೆ ಸ್ನೇಹ ಬೆಳೆಯಿತು. ದಿನವೂ ಅಲ್ಲಿಗೆ ಬಂದು ಹೋಗುವುದು ರೂಢಿಯಾಯಿತು.

ಮೂರೂ ಮಂದಿ ಕೆಲಸದಿಂದ ನಿವೃತ್ತರಾದವರೇ. ಒಂದೆರಡು ವರುಷಗಳಿಂದೀಚೆಗೆ, ಎಲ್ಲರೂ ಅರುವತ್ತು ವರುಷದ ಗಂಡವನ್ನು ದಾಟುವ ಧೈರ್ಯಶಾಲಿಗಳೇ. ಯಾವ ಕಾರಣದಿಂದಲೊ, ಈ ಮೂವರ ಹೃದಯಗಳು ಹತ್ತಿರ ಬಂದವು. ದಿನವೂ ತಪ್ಪದೆ ಬೀಚಿಗೆ ಬಂದು ಸೇರಿ ಹರಟೆ ಹೊಡೆಯುವರು. ತಮ್ಮ ತಮ್ಮ ಉದ್ಯೋಗಗಳಲ್ಲಿ ಆದ ಅನುಭವಗಳನ್ನು ಪರಸ್ಪರ ಹೇಳಿಕೊಂಡು, ಜೀವನದ ಕೊನೆಯ ದಿನಗಳನ್ನು ಸಂತೋಷದಲ್ಲಿ ಹಗುರಾಗಿ, "ನಿದ್ದೀsಯ ಭಗರಿ"ಯಂತೆ ಕಳೆಯಬೇಕೆಂದು ನಿಶ್ಚಯಿಸಿದ ಈ ಮೂವರ ಮನಸ್ಸುಗಳು ಒಂದಾಗಿದ್ದವು. ಹೃದಯಬಿಚ್ಚಿ ಮಾತನಾಡುವ ಸ್ವಭಾವ ಇವರದಾದುದರಿಂದ, ಪರಸ್ಪರ ಇವರಲ್ಲಿ ಯಾರೂ ಯಾವುದನ್ನೂ ಗೌಪ್ಯವೆಂದು ಮುಚ್ಚಿಡುತ್ತಿರಲಿಲ್ಲ. ಮನಬಿಚ್ಚಿ ಮಾತನಾಡುವ ಇವರ ಸ್ವಭಾವ ಆದರ್ಶಮಯವೇ. ಇವರಲ್ಲಿ ಒಂದು ಬಗೆಯ ನಿಷ್ಕಲ್ಮಷವಾದ ಆತ್ಮೀಯತೆ ಬೆಳೆದಿದ್ದಿತು.

ತಪ್ಪದಂತೆ ದಿನವೂ ಒಂದೇ ಸ್ಥಳದಲ್ಲಿ ಕೂತು ಮಾತನಾಡುತ್ತಿದ್ದ ಇವರ ಮಿಲನದ ನೋಟ, ಅಲ್ಲಿಗೆ ಬಂದು ಹೋಗುವ ಜನರಿಗೆ ಪರಿಚಯವಾದ ವಿಷಯವೆ. ಎಲ್ಲರ ಗಮನದಲ್ಲಿ ಉಳಿಯತಕ್ಕ ವಿಷಯವಾಗಿತ್ತು. ಮತ್ತಾರಿಗೂ ಅವರು ಕೂಡುತ್ತಿದ್ದ ಬೆಂಚಿನ ಮೇಲೆ ಅಧಿಕಾರವಿರದಿದ್ದುದಕ್ಕಾಗಿ, ಅನೇಕರು ಅಸೂಯೆ ಪಟ್ಟುದೂ ಉಂಟು. ಹೀಗೆ ಮೂವರೇ ಈ ಆಸನದಲ್ಲೇತಕ್ಕೆ ಕೂಡುವರೆಂದು ತರ್ಕಿಸಿದವರೂ ಉಂಟು.

ಆದರೆ ಈ ಮೂವರ ದೃಷ್ಟಿ ಅಲ್ಲಿ ಕುಳಿತಾಗ ಮತ್ತಾವ ಕಡೆಗೂ ಹೋಗುತ್ತಿರಲಿಲ್ಲ. ತಮ್ಮ ಗುಂಗಿನಲ್ಲೇ ಇದ್ದು, ಪರಸ್ಪರ ಮನದಣಿಯ ಹರಟೆ ಕೊಚ್ಚಿ, ಹಿಗ್ಗಿ, ತಮ್ಮ ದಣಿದ ಹೃದಯಗಳನ್ನು ಹಗುರಿಸಿ ಮನೆಗೆ ತಿರುಗುವುದೇ ಇವರ ಕೆಲಸವಾಗಿತ್ತು. ಪರಸ್ಪರ ಲಾಭಾದಿಗಳನ್ನು ಪಡೆಯಬೇಕೆಂಬ ಆಶೆ ಯಾರಿಗೂ ಇರಲಿಲ್ಲ. ಪ್ರತ್ಯೇಕ ರೀತಿಯಲ್ಲಿ ಏಕಾಂತಜೀವನಪ್ರಿಯರಾದ ಈ ಮೂರು ಮಂದಿ ಸೇರಿ, ಸಂಯುಕ್ತವಾದ ಏಕಾಂತ ಜೀವನದಲ್ಲಿ ಮುಳುಗಿ, ಹೊರಗಿನ ಪ್ರಪಂಚವನ್ನು ಮರೆತು, ವೈಯಕ್ತಿಕ

ಏಕಾಂತತೆಯನ್ನೂ ಮರೆತು, ಸುಖದಲ್ಲಿ ಕೆಲ ಸಮಯ ಕೂಡಿ ಇರುವುದೇ ಇವರಿಗೆ ಪ್ರಿಯವೆನಿಸಿತ್ತು. ಹೀಗೆ ಸೇರಿದಾಗ ಅವರು ತಮ್ಮದೇ ಆದ ಒಂದು ಹೊಸ ಜಗತ್ತನ್ನು ನಿರ್ಮಿಸಿಕೊಂಡು ಆನಂದಿಸುತ್ತಿದ್ದರು. ಅಂದು ರಾಯರು ಬಾರದಿದ್ದುದರಿಂದ ಇವರಿಬ್ಬರಿಗೂ ಆದ ದುಃಖ, ಸಂಕಟ ಹೇಳತೀರದು. ಏನೂ ತೋಚದಂತೆ ಸುಮ್ಮನೇ ಒಬ್ಬರನ್ನೊಬ್ಬರು ಬಿಕಿಬಿಕಿ ನೋಡುತ್ತ ಕೂತರು.

ರಾಯರು ಕೂಡುವ ಸ್ಥಳ ಬರಿದಾಗಿದ್ದುದು, ಅಲ್ಲಿ ಓಡಾಡುವ ಅನೇಕರಿಗೆ ಆಶ್ಚರ್ಯವನ್ನುಂಟುಮಾಡಿತು.

ಸಂಜೆ ಕಳೆದು ಕತ್ತಲಾಗಹತ್ತಿತು. ರಾಯರ ಸುಳಿವೇ ಕಂಡು ಬರಲಿಲ್ಲ.

"ಹೀಗೇಕಾಯಿತು ?" ಎಂದು ಸಾಹೇಬನು ಕೇಳಿದಾಗ ನಾಯುಡು ಏನನ್ನೂ ಬದಲು ಹೇಳಲಿಲ್ಲ.

"ಮೈ ಸ್ವಸ್ಥವಿರಲಿಕ್ಕಿಲ್ಲ" ಎಂದು ಯೋಚಿಸೋಣವೇ—ಎಂದು ಅಂತರಂಗದಲ್ಲಿ ನೆನೆದರೂ, ಇಂಥಹ ಕೆಟ್ಟ ಮಾತು ಆಡುವುದು ಒಳಿತಲ್ಲ ವೆಂದು ನಿಶ್ಚಯಿಸಿ, ಬಹಿರಂಗವಾಗಿ "ಬಹಳ ಆಶ್ಚರ್ಯವಾಗಿದೆ!" ಎಂದು ನಾಯುಡು ಸ್ವಲ್ಪ ತಡೆದು ಹೇಳಿದ.

ಅಷ್ಟರಲ್ಲಿ ನಾಲ್ಕು ಹುಡುಗರು ಇವರ ಹತ್ತಿರ ಹಾಯ್ದು ಹೋದರು. ತುಂಟರು ಎಂದೆನ್ನಬಹುದು. ಎದುರಿಗಿದ್ದವರ ಮನಸ್ಸು ಯಾವ ಸ್ಥಿತಿಯ ಲ್ಲಿವೆ ಎಂಬುದನ್ನು ಯೋಚಿಸದೆ, ತಮಗೆ ತೋಚಿದುದನ್ನು ಹೇಳಿಬಿಡುವ ಸ್ವಭಾವ ಇವರದು. ದಿನವೂ ಒಂದೇ ಸ್ಥಳದಲ್ಲಿ ವರಸೆ ಕೂಡ ತಪ್ಪದಂತೆ ಕೂಡುವ ಪದ್ಧತಿಯುಳ್ಳ ಇವರನ್ನು ಹಾಸ್ಯಮಾಡಲು ಈ ಹುಡುಗರಿಗೆ ಇಲ್ಲಿಯವರೆಗೆ ಅವಕಾಶ ದೊರೆತಿರಲಿಲ್ಲ. ಆದರೆ ಇವತ್ತು ಮೂವರಲ್ಲಿ ಒಬ್ಬನು ಬಾರದೇ ಇದ್ದುದರಿಂದ, ಏನಾದರೂ ಹಾಸ್ಯ ಮಾಡಬೇಕೆಂದು ಇವರು ಧೈರ್ಯ ಮಾಡಿದರು. ಕೊಂಕು ಮಾತನಾಡಬೇಕೆಂದು ಬಯಸಿ ದರು.

"ನಡುವೆ ಯಾಕೋ ಸ್ಥಳ ಖಾಲಿಯಾಗಿದೆ. ಆತ ಯಾಕೆ ಬಂದಿಲ್ಲ?" ಎಂದೊಬ್ಬ ಹುಡುಗ ತಮ್ಮ ಜತೆಗಾರರನ್ನುದ್ದೇಶಿಸಿ ಕೇಳಿದ.

"ಅವನಿಗೆ ವಯಸ್ಸು ತುಂಬಿಬಂದಿದೆ. ಇನ್ನೆಷ್ಟು ದಿನಗಳು ಜೀವಂತ ಇರಬೇಕೋ? ಯಮಲೋಕಯಾತ್ರೆ, ಮತ್ತೇನು!" ಎಂದು ಮತ್ತೊಬ್ಬ ಹೇಳಿದ.

ಕಾಲೇಜಿನಲ್ಲಿ ಓದುವ ಈ ವಿದ್ಯಾರ್ಥಿಗಳು ತಮ್ಮ ಹಾಸ್ಯವನ್ನು ಈ ಬಗೆಯಾಗಿ ವಿನಿಯೋಗಿಸಿದುದಕ್ಕೆ ಹೆಮ್ಮೆ ಪಟ್ಟು ಮಿಕ್ಕ ಇನ್ನಿಬ್ಬರು ನಕ್ಕುಬಿಟ್ಟರು. ಹೀಗೆ ಮಾಡಿ ತಮ್ಮ ಹಾದಿ ಹಿಡಿದು ಹೊರಟರು ಆ ಕಾಲೇಜಿನ ಹುಡುಗರು.

ಹತ್ತಿರವೇ ಕುಳಿತಿದ್ದ ನಾಯಡು, ಸಾಹೇಬರ ಕಿವಿಗೆ ಈ ಮಾತುಗಳು ಶೂಲದಂತೆ ನಾಟಿದವು. ಅವರ ಹೃದಯಗಳು ಬೆದರಿದವು; ಮನಸ್ಸುಗಳು ಚೆದರಿ ಚೆಲ್ಲಾಪಿಲ್ಲಿಯಾದವು.

ಅವರ ವಯಸ್ಸು, ಸಾವಿಗೆ ಹತ್ತಿರವೇ ಇರುವ ಅವರ ಕೊನೆಗಾಲ, ಈಗಿನವರ ಮತ್ತು ತಮ್ಮ ಜೀವನಗಳ ನಡುವೆ ಇರುವ ಅಂತರ, ಮುಖ್ಯವಾಗಿ ಅಂದು ಅವರ ಹೃದಯದಲ್ಲಿ ಮನೆಮಾಡಿಕೊಂಡಿದ್ದ ಏಕಾಂತತೆ—ಅವರ ಮನೋವಿಚಾರವನ್ನು ಕಲಕಿದುವು; ಅಧೈರ್ಯ ಅವರನ್ನಾವರಿಸಿತು; ಮನಸ್ಸಿನಲ್ಲಿ ಸಾವಿನ ಭಯ ಮನೆಮಾಡಿಕೊಂಡಿತು.

ಅವರಿಬ್ಬರ ಮುಖಗಳು ಬಹಳ ಕಳೆಗುಂದಿದ್ದವು. ಕಾರಣವಿಲ್ಲದ ಭಯ ಅವರನ್ನಾವರಿಸಿದ್ದಿತು. ದೀನವಾದ ಮುಖಗಳಿಂದ ಒಬ್ಬರನ್ನೊಬ್ಬರು ನೋಡಿಕೊಂಡರು. ಹತ್ತಿರ ಸರಿದರು. ಆದರೆ ರಾಯರ ನೆನಪು ಮತ್ತೆ ಅವರ ಗಮನಕ್ಕೆ ಬಂದಿತು; ದೂರ ಸರಿದು, ತೆರವಾದ ಸ್ಥಳವನ್ನು ಸುಮ್ಮನೆ ನೋಡುತ್ತ ಕುಳಿತುಬಿಟ್ಟರು.

ಪೂರ್ತಿ ಕತ್ತಲಾಯಿತು. ರಾಯರಿನ್ನೂ ಬರಲಿಲ್ಲ. ಅವರಿಲ್ಲದ ಸಿಮೆಂಟ್ ಬೆಂಚಿನ ಮೇಲೆ ಕುಳಿತುಕೊಳ್ಳಲು ಇವರಿಗೆ ಧೈರ್ಯ ಸಾಲದಂತಾಯಿತು. ಭಾರವಾದ ಇಬ್ಬರ ಹೃದಯಗಳು ಬೆದರಿದವು, ಅದುರಿದವು.

"ನಮಸ್ಕಾರ" ಎಂದು ಹೇಳಿ ಇಬ್ಬರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಅಂದು ರಾತ್ರಿ, ಸಾಹೇಬ ನಾಯುಡು ಇವರಿಗೆ ನಿದ್ದೆ ಹತ್ತಲೇ ಇಲ್ಲ. ಉದ್ವೇಗದಿಂದ ಅವರ ಮನಸ್ಸು ಕಳವಳಗೊಂಡಿತ್ತು. ಅವರ ಇಳಿವಯಸ್ಸಿನ ಭಾರವೆಲ್ಲವೂ ಒಂದೇ ಸಲ ಮೈಮೇಲೆ ಬಂದು ಕುಳಿತಂತೆನಿಸಿತು. ಇಲ್ಲಿಯವರೆಗೂ ಗಮನಕ್ಕೆ ಬಾರದ ಸಾವಿನ ಯೋಚನೆ, ಅದರ ಭಯಾನಕ ದೃಶ್ಯ ಮುಂತಾದ ಕೆಟ್ಟ ಯೋಚನೆಗಳು ಅವರ ಕಣ್ಣ ಮುಂದೆ ನಾಟ್ಯ ಮಾಡತೊಡಗಿದವು. ಅರುವತ್ತು ವರುಷಗಳು ತುಂಬುವವರೆಗೆ ಬಹಳ ಜನರು ಜೀವಿಸಲಾರರೆಂಬ ಯೋಚನೆ ಅವರ ಹೃದಯುವನ್ನು ವೇಧಿಸುತ್ತಿತ್ತು. ಸಾವು ತಮ್ಮನ್ನು ಕರೆಯುತ್ತಿದೆ ಯೆಂದು ನೆನೆದರು. ರಾಯರು ಅಂದು ಸಂಜೆ ಬಾರದಿದ್ದುದಕ್ಕೆ ಮುಪ್ಪಿನಲ್ಲಿ ಬಂದ ಬೇನೆಯೇ ಕಾರಣವಾಗಿರಬೇಕೆಂದು ಯೊಚಿಸಿದರು. ವಯಸ್ಸಾದ ಮೇಲೆ ಒಂದೇ ದಿನದ ಬೇನೆಗೆ ಅವರು ಸಾವನ್ನಪ್ಪಿರಬೇಕೆಂದು ನಿಶ್ಚಯಿಸಿದರು. ವಯಸ್ಸಾದವರು ಸಾಯಲು ಸದಾಸಿದ್ಧರಿರಬೇಕೆಂಬುದು ಅವರಿಗೆ ವಿದಿತವಾಯಿತು. ಈ ಮಹತ್ವದ ಯೋಚನೆಯಲ್ಲಿಯೇ ರಾತ್ರಿಯೆಲ್ಲವನ್ನೂ ಆ ಮುದುಕರು ಕಳೆದರು.

ಮಾರನೆಯ ದಿನ ಮುಂಜಾನೆ ನಾಯುಡು ಆಗಲಿ, ಸಾಹೇಬನಾಗಲಿ, ಮಲಗಿದ ಹಾಸಿಗೆಯಿಂದೇಳಲಿಲ್ಲ. ಅವರ ಮಕ್ಕಳು ಡಾಕ್ಟರುಗಳನ್ನು ಕರೆತಂದರು. ಜ್ವರವೇನೋ ಇತ್ತು; ಆದರೆ ಇವರ ಮನೋರೋಗವನ್ನಳಿಯಲು ಅವರ ಹತ್ತಿರ ಯಾವ ಸಾಧನವೂ ಇರಲಿಲ್ಲ. ಔಷದೋಪಚಾರ ನಡೆಯಿತು. ಸಂಜೆ ಇವರಾರಿಗೂ ಬೀಚಿಗೆ ಹೋಗಲಾಗಲಿಲ್ಲ; ಇದರಿಂದ ಇವರ ಮನೋರೋಗ ಹೆಚ್ಚಿತು; ಜ್ವರ ಕಡಿಮೆಯಾಗಲಿಲ್ಲ.

ಹಿಂದಿನ ದಿನ ಬಾರದಿದ್ದ ರಾಯರು, ಅಂದು ಬೀಚಿಗೆ ಎಂದಿನಂತೆ ಬಂದರು. ಅಳಿಯ, ಮಗಳು ಸಿನೇಮಾಕ್ಕೆ ಬಲವಂತದಿಂದ ಕರೆದುಕೊಂಡು ಹೋದುದೇ ತಾವು ನಿನ್ನೆ ಬಾರದಿದ್ದುದಕ್ಕೆ ಕಾರಣವೆಂದು ಹೇಳಿ ಕ್ಷಮೆ ಕೇಳಬೇಕೆಂದು,ರಾಯರು ಅಂದು ಉತ್ಸಾಹದಿಂದ ಬಂದಿದ್ದರು. ಆದರೆ ಅವರಾರೂ ಬಾರದಿದ್ದುದು ಯೋಚನೆಯ ವಿಷಯವಾಗಿಬಿಟ್ಟಿತು. ಬಹಳ ವೇಳೆ ಕಾದುದಾಯಿತು. ತನ್ನ ಮಿತ್ರರಿಬ್ಬರೂ ಬಾರದೆ ಉಳಿದುದು ಅವರ ಹೃದಯವನ್ನು ಕಲಕಿತು.

ಆ ನಾಲ್ಕು ಜನ ಕಾಲೇಜಿನ ತುಂಟ ಹುಡುಗರು, ಇಂದು ಇವರೊಬ್ಬರೇ ಬೆಂಚಿನ ಮೇಲೆ ಕುಳಿತಿರುವುದನ್ನು ಕಂಡರು.

“ ನಿನ್ನೆ ಈತ ಸತ್ತಿರುವನೆಂದು ನಾವು ನೆನೆದರೆ, ಈಪೊತ್ತು ಅವರಿಬ್ಬರೂ ಸತ್ತಂತೆ ತೋರುತ್ತದೆ. ಪಾಪ! ಪಾಪ!! ” ಎಂದು ಕುಚೇಷ್ಟೆ ಮಾಡುತ್ತ ಹೊರಟು ಹೋದರು. ರಾಯರ ಮನಸ್ಸು ಗಾಬರಿಗೊಂಡಿತು. ಮಿತ್ರರಾದ ತಾವು ಮೂರೂ ಮಂದಿ ಸಾಯುವವರ ಪಟ್ಟಿಯಲ್ಲಿ ಸೇರಿದವರೆಂದು ನೆನೆದರು. ಈ ಎಣಿಕೆ ಭಯಾನಕವಲ್ಲವೇ? ವಯಸ್ಸಾದ ಇವರಿಗೆ ಸಾವು ಸಹಜವೇ; ಆದರೆ ಸಾಯದೆ ಉಳಿದಿರುವುದು ನಿಸರ್ಗದ ನಿಯಮಕ್ಕೆ ವಿರುದ್ಧವೆಂಬ ಭಾವನೆ ಅವರನ್ನು ಮತ್ತಿಷ್ಟು ವ್ಯಥೆಗೊಳಿಸಿತು. ಸಾವನ್ನಪ್ಪಲಿರುವ ಅವರ ಏಕಾಂತ ಜೀವನ ಇನ್ನಿಷ್ಟು ಭಯಾನಕವೆನಿಸಿತು. ಮನೆಗೆ ಹಿಂದಿರುಗುವ ಶಕ್ತಿ ಆಗ ರಾಯರಲ್ಲಿರಲಿಲ್ಲ. ರಿಕ್ಷಾ ಮಾಡಿಕೊಂಡು ಮನೆ ಸೇರಿದರು.

* * *

ಮಾರನೆಯ ದಿನ ವಿಶ್ವವಿದ್ಯಾನಿಲಯದೆದುರು ಇದ್ದ ಸಿಮೆಂಟು ಬೆಂಚು ಖಾಲಿಯಾಗಿದ್ದಿತು. ಅಲ್ಲಿ ಯಾರೂ ಅಂದು ಕುಳಿತಿರಲಿಲ್ಲ. ಖಾಲಿಯಾದ ಆ ಬೆಂಚನ್ನು ಮತ್ತೆ ಆ ಕಾಲೇಜು ಹುಡುಗರು ಇಂದು ಕಂಡು “ ಪಾಪ ಈಹೊತ್ತು ಆ ಮೂರೂ ಮಂದಿ ಮುದುಕರು ಸಕಲಾತಿಬೀಜಾತರಲಿಕ್ಕೆ ಹೋಗಾರೇಂತ ಕಾಣುತ್ತೆ !” ಎಂದು ಹಾಸ್ಯ ಮಾಡಿ ಆ ಬೆಂಚಿನ ಮೇಲೆ ಕುಳಿತುಕೊಳ್ಳುವ ಧೈರ್ಯ ಸಾಲದೆ ಮುಂದೆ ಸಾಗಿದರು.

ಮತ್ತೆ, ಮಾರನೆಯ ದಿನ ಆ ಬೆಂಚು ಖಾಲಿ. ಆ ಮೂವರು ಮುದುಕರು ಕುಳಿತುಕೊಳ್ಳುವ ಬೆಂಚಿನ ಮೇಲೆ ಇಂದು ಹುಡುಗರು ಕುಳಿತಿದ್ದರು. ಮೂವರು ಮುದುಕರು ಕೂಡ್ರುವ ಆ ಸ್ಥಳದಲ್ಲಿ ಇಂದು ನಾಲ್ಕು ಜನ ಹುಡುಗರು ಕುಳಿತಿದ್ದರು. ವಯಸ್ಸಾದವರ ಸ್ಥಾನವನ್ನು ಹುಡುಗರಲ್ಲದೆ ಇನ್ನಾರು ಆಕ್ರಮಿಸಬಲ್ಲರು?

ಹುಡುಗರಿಗೆ ಮುದುಕರ ಯೋಚನೆ ಅನವಸರ. ಆದುದರಿಂದ ದಿನವೂ ಆ ಆಸನದ ಮೇಲೆ ಕೂಡುತ್ತಿದ್ದ ಆ ಮುದುಕರ ನೆನಪು ಇವರಿಗೆ ಬರಲೇ ಇಲ್ಲ. ಅಂದು ಸಂಜೆ ಟ್ರಿಪ್ಲಿಕೇನ್ ಮುಸಲ್ಮಾನರ ಸ್ಮಶಾನದಲ್ಲಿ ಮತ್ತೊಂದು ಗೋರಿ ಏರ್ಪಟ್ಟಿತು.

ಅದೇ ಭಾಗದ ಹಿಂದುಗಳ ಸ್ಮಶಾನಕ್ಕೆ ಎರಡು ಶವಗಳು ಬಂದಿವೆ. ಒಂದು ನಾಯುಡುನದು; ಮತ್ತೊಂದು ರಾಯರದು.

ಈ ಇಬ್ಬರು ಸ್ನೇಹಿತರು ಸತ್ತಮೇಲೂ ಒಂದೇ ಸ್ಥಳದಲ್ಲಿರಲಾಗಲಿಲ್ಲ. ಕುಲಧರ್ಮ ಅಡ್ಡ ಬಂದಿತು. ಬ್ರಾಹ್ಮಣರ ದಹನ ಸ್ಥಳವೇ ಬೇರೆ; ಬ್ರಾಹ್ಮಣೇತರರ ಸ್ಮಶಾನವೇ ಬೇರೆ.

ಆದರೆ ಈ ಎರಡೂ ಶವಗಳ ದಹನದ ನಂತರ, ಸ್ಮಶಾನದಲ್ಲಿ ಚಿತೆಗಳ ಮೇಲಿಂದ ಹಾರಿಹೋಗುವ ಹೊಗೆ ಗಾಳಿಯಲ್ಲಿ ಮಿಲನವಾಗದೆ ಉಳಿಯಲಿಲ್ಲ. ಅದೇ ಗಾಳಿ ಸಾಹೇಬನ ಗೋರಿಯ ಮೇಲೆ ಹಾದು ಹೋಗಿ ಅವರ ಹೊಗೆಯೊಂದಿಗೆ ಮಿಶ್ರವಾಗದೇಯೂ ಉಳಿಯಲಿಲ್ಲ.

"ವಿಧಿಯಿತ್ತ ಕುಲಡೊಂಕು, ನಮ್ಮ ಪ್ರೀತಿಯು ಡೊಂಕೇ" ಎನ್ನುತ್ತ ಈ ಮೂವರೂ ಸತ್ತು ಸ್ವರ್ಗದಲ್ಲಿ ಕಲೆತರೆಂದರೆ ಅತಿಶಯೋಕ್ತಿಯಾಗಲಾರದು.

# ಆಣೆಕಲ್ಲಿನ ಮಳೆ

ಆ ವರುಷ ಆಣೆಕಲ್ಲಿನ ಮಳೆ ಬಂದು ಬೆಳೆ ಹಾಳಾಗಿ ಹೋಯಿತು. ತನಗಿದ್ದ ಐದು ಎಕರೆ ಭೂಮಿಯ ಉತ್ಪನ್ನದಿಂದ ಪತಂಜಲಿಯು, ಬೆಳೆದು ನಿಂತ ತಂಗಿ, ಇನ್ನೂ ಓದು ಮುಗಿಸದ ತಮ್ಮ, ಇವರಿಂದ ಕೂಡಿದ ತನ್ನ ಮನೆತನವನ್ನು ಸುರಕ್ಷಿತವಾಗಿ ಸಾಗಿಸಬೇಕೆಂದು ಬಯಸಿದ್ದ. ರಾಜಕೀಯ ಆಂದೋಲನದ ಮೂಲಕ ಒಂದೂವರೆ ವರುಷ ಕಾರಾಗೃಹವಾಸದ ಅನುಭವವೂ ಇವನಿಗೆ ಆಗಿತ್ತು. ಬಿಡುಗಡೆಯ ನಂತರ ರೈತರ ನೆರವಿನಿಂದ ಸ್ವಂತ ಸಾಗುವಳಿ ನಡೆಸಿದ್ದ. ಬೆಳೆ ಚನ್ನಾಗಿ ಎದ್ದು ನಿಂತು ಇನ್ನೇನು ಮನೆಗೆ ಬಂದು ಬೀಳುವದೇನೋ ಎಂಬ ಹೊತ್ತಿಗೆ ಈ ಹಾಳು ಆಣೆಕಲ್ಲಿನ ಮಳೆ ಬಂದು ಅವನ ಎಲ್ಲ ಆಶೆಗಳಿಗೆ ಕಲ್ಲು ಹಾಕಿತು. ಜೀವನದಲ್ಲಿ ಬಂದ ಎಂತಹ ಕಷ್ಟಗಳನ್ನಾದರೂ ನಗು ಮುಖದಿಂದ ಎದುರಿಸುವ ಉತ್ಸಾಹಿ ಅವನಾಗಿದ್ದ. ರಜಾಕಾರರು ಇವನನ್ನು ಎಷ್ಟು ಬಗೆಯಾಗಿ ಹಿಂಸಿಸಿದರೂ ಈವನು ಎದೆಗುಂದಲಿಲ್ಲ. ಇವನಿಗೆ ರೈತವರ್ಗದಲ್ಲಾಗಲಿ, ಆ ಪ್ರಾಂತದಲ್ಲೇ ಆಗಲಿ ವಿರೋಧಿಗಳೆಂಬುವವರೇ ಇರಲಿಲ್ಲ. ರಜಾಕಾರರ ಹಾವಳಿಯ ಕಾಲದಲ್ಲಿ ವರಂಗಲ್ಲು ಕಾಲೇಜದಲ್ಲಿ ಓದುತ್ತಲಿದ್ದ ಇವನು ಆಕಸ್ಮಿಕವಾಗಿ ತಂದೆ ತೀರಿಕೊಳ್ಳಲು ಹುಟ್ಟೂರಿಗೆ ಬರಬೇಕಾಯಿತು.

ಊರಿಗೆ ಬಂದಕೂಡಲೇ, ಆಂಧ್ರರು ನಡೆಸುತ್ತಿದ್ದ ಹೈದರಾಬಾದ ಆಂದೋಲನದಲ್ಲಿ ಹೋರಾಡಲು ನಿರ್ಮಿತವಾದ ಆಂಧ್ರ ಮಹಾಸಭೆಯ ಸದಸ್ಯನಾದ. ತನ್ನ ಮಿತ್ರರಾದ ಅನೇಕ ಯುವಕರೊಂದಿಗೆ ಗಾಂಧಿ ಭಕ್ತನಾದ. ತನ್ನ ಮನೆಯ ಪರಿಸ್ಥಿತಿಯನ್ನಾಗಲಿ, ವೈಯಕ್ತಿಕ ಸಾಮರ್ಥ್ಯವನ್ನಾಗಲಿ ಪರಿಕಿಸದೆ, ಸ್ವಾತಂತ್ರ್ಯ ಪ್ರೇಮದಿಂದ ಹೋರಾಟದಲ್ಲಿಳಿದ. ನೈಜಾಂ ಪೋಲೀಸರ ದೌರ್ಜನ್ಯಕ್ಕೆ ಬಲಿಯಾಗಿ ಗುಲ್ಬರ್ಗಾ ಕಾರಾಗೃಹಕ್ಕೆ ಪ್ರಯಾಣ ಬೆಳೆಯಿಸಬೇಕಾಯಿತು.

೨

ಆಣೇಕಲ್ಲಿನ ಮಳೆ ದೇಶವನ್ನು ಹಾಳುಮಾಡಿತು. ರೈತರ ಹೃದಯ ಗಳಲ್ಲಿ ಉರಿಯನ್ನು ಹಾಕಿತು. ಎಲ್ಲೆಲ್ಲಿಯೂ ಕೋಲಾಹಲ. ರಜಾಕಾರರ ಹಾವಳಿ ನಿಂತರೂ ಹೈದರಾಬಾದದ ಕಾಂಗ್ರೆಸ ಪಕ್ಷದಲ್ಲಿ ವೈಷಮ್ಯ ಕಡಿಮೆ ಯಾಗಲಿಲ್ಲ. ರಮಾನಂದ ತೀರ್ಥರ ಗುಂಪಿನೊಡನೆ ದೇಸಾಯರ ಪಂಗಡ ದ್ವೇಷ ಬೆಳೆಯಿಸಿತು. ದೇಸಾಯಿ ಪಕ್ಷವನ್ನವಲಂಬಿಸಿದ ಪತಂಜಲಿ ಶಾಸ್ತ್ರಿ, ದೇಶದಲ್ಲಿ ನಡೆಮದೆಲ್ಲವನ್ನೂ ನೋಡುತ್ತಿದ್ದ. ವಲ್ಲಭಭಾಯಿ ಪಟೇಲರ ಮಾತಿನಂತೆ ಎರಡು ಪಕ್ಷದವರೂ ಒಡಂಬಡಿಕೆ ಮಾಡಿಕೊಂಡರು. ಆದರೆ ತೆಲಂಗಾಣ ದೇಶದಲ್ಲಿ ಈ ಮಳೆಯು ಹಾವಳಿಯಿಂದ ತಿನ್ನಲು ಜೋಳದ ಗಂಜಿಯೇ ಇಲ್ಲದ ಪರಿಸ್ಥಿತಿಯು ಮಾತ್ರ ತಪ್ಪಲಿಲ್ಲ.

ಮನೆಯಲ್ಲಿ ಈ ದಾರುಣ ಅವಸ್ಥೆ ಇದ್ದರೂ ಪತಂಜಲೀ ಶಾಸ್ತ್ರಿ, ಒಂದುದಿನ ತನ್ನ ತಮ್ಮನನ್ನು ಹತ್ತಿರ ಕರೆದು "ಮಗೂ ನೀನು ಓದು ವುದನ್ನು ನಿಲ್ಲಿಸಬೇಡ. ನಿನಗೆ ಹಿರಿಯನಾದ ನನ್ನ ಬೆಂಬಲವಿರಲು ಭಯ ವೇಕೆ?" ಎಂದು ಹೇಳಿದನು.

ತಾಯಿ:— ಪತಂಜಲೀ, ಈ ಸಂಸಾರವು ಹೇಗೆ ಮುಂದರಿಯಬೇ ಕಪ್ಪಾ? ಮನೆಯಲ್ಲಿ ಏನೂ ಇಲ್ಲವಲ್ಲ?

ಮಹಾಲಕ್ಷ್ಮಿ (ತಂಗಿ) :— ನನಗೆ ಓದು ಬೇಡ ಅಣ್ಣಾ. ನನ್ನ ಓದಿ ನಿಂದ ನಿಮಗೇಕೆ ಇಲ್ಲದ ವೆಚ್ಚ?

ಲಕ್ಷ್ಮೀ ನರಸಿಂಹ (ತಮ್ಮ):— ನಾನುಮುಂದೆ ಓದುವದಿಲ್ಲ. ಡಾಕ್ಟ ರನ ಹತ್ತಿರ ಕಂಪೌಂಡರನಾಗಿ ಸೇರಿದರೆ ಸ್ವಲ್ಪ ಅನುಕೂಲವಲ್ಲವೇ?

"ನಿಮಗೇಕೆ ಈ ಅಧೈರ್ಯ? ಹುಟ್ಟಿಸಿದ ದೇವನು ಹುಲ್ಲು ಮೇಯಿಸು ವನೇ. ಈ ಊರ ರೆಡ್ಡಿ, ನನಗೆ ಸ್ವಲ್ಪ ಹಣದ ಸಹಾಯ ಮಾಡುವೆ ನೆಂದು ಹೇಳಿದ್ದಾನೆ. ಒಂದ್ನೈನೂರು ರೂಪಾಯಿಯ ಸಹಾಯದಿಂದ, ಹೈದರಾಬಾದ ಸುಲ್ತಾನ ಬಜಾರದಲ್ಲಿ ಮಿತ್ರನು ತನ್ನಂಗಡಿಯ ಕಟ್ಟೆಯ ಮೇಲೆ ಸಿಗರೇಟು ಅಂಗಡಿಯನ್ನಿಡಲು ಬಾಡಿಗೆಯಿಲ್ಲದೆ ನನಗೆ ನೆರವಾಗುವ ನಂತೆ. ಎಲ್ಲರೂ ಅಲ್ಲಿಗೆ ಹೋಗಿ ಮುಂದಿನ ವಿಚಾರ ನಿರ್ಧರಿಸೋಣ.

೩

ಸುಲ್ತಾನ ಬಜಾರದಲ್ಲಿಯ ಶಾಸ್ತ್ರಿಯ ಅಂಗಡಿ ಸ್ವಲ್ಪೇ ದಿನಗಳಲ್ಲಿ ಬಹು ಹೆಸರು ಗಳಿಸಿತು. ಅವನ ಪ್ರಾಮಾಣಿಕತನಕ್ಕೆ ತಕ್ಕ ಪ್ರೋತ್ಸಾಹ ದೊರೆಯಿತು. ತಂಗಿ, ತಮ್ಮಂದಿರ ಓದಿನ ವ್ಯವಸ್ಥೆಯೂ ಸುಲಭವಾಗಿಯೇ ಸಾಗಿತು.

"ಪ್ರತಿ ಮಾನವನ ಜೀವಿತದಲ್ಲಿ ಏರಿಳಿತಗಳು ಇರುವುದು ಸಹಜವೇ ಕಷ್ಟ ಬಂದಾಗ ಎದೆಗುಂದದೆ ಧೈರ್ಯದಿಂದ ಕರ್ತವ್ಯತತ್ಪರರಾಗಿ ಗೌರವಕ್ಕೆ ಹಾನಿ ಬಾರದಂತೆ ಜೀವಿಸುವುದು ಸನ್ಮಾರ್ಗವೇ ಹೌದು. ಉನ್ನತ ಧ್ಯೇಯಕ್ಕಾಗಿ ವರ್ಷಾನುವರ್ಷ ಕಾದು ಗಳಿಸಿದ ಸ್ವರಾಜ್ಯವನ್ನು ನೆಲೆಸಬೇಕಾದರೆ ಎಷ್ಟು ತೊಂದರೆಗಳೆಂಬುದನ್ನು ನಾವು ಕಂಡೆವು! ಹಿಂದೆ ಆಂಗ್ಲರು ಆಳುತ್ತಿರುವಾಗ ಮೂಗು ಮುರಿದು ಟೀಕಿಸಿದ ಬಹುಶಃ ಕಾಂಗ್ರೆಸಿಗರೇ ಇಂದು ಕಾಯಿದೆಯಂತೆ ನಡೆಯದೆ, ತಮ್ಮ ಆತ್ಮ ನಿರೀಕ್ಷಣೆ ಮಾಡಿಕೊಳ್ಳದೆ, ಸ್ವಲಾಭೇಚ್ಛೆಯಿಂದ ಕಾಂಗ್ರೆಸಿನ ಹೆಸರು ಕೆಡಿಸುತ್ತಿರುವ ನಿದರ್ಶನಗಳು ಶೋಚನೀಯವಾಗಿವೆ" ಎಂದು ಶಾಸ್ತ್ರಿಯು ಮನಸ್ಸಿನೊಳಗೇ ಕುದಿಯುತ್ತಿದ್ದ.

ಹೈದರಾಬಾದದಲ್ಲಿ ಉತ್ತರ ಹಿಂದುಸ್ಥಾನದಿಂದ ಬಂದ ನಿರಾಶ್ರಿತರ ಪ್ರಶ್ನೆ ಉದ್ಭವಿಸಿತು. ಅಲ್ಲಿ ಶಾಂತಿ ನೆಲೆಗೊಂಡ ನಂತರ ಸಿಂಧ, ಮತ್ತು ಪಂಜಾಬದಿಂದ ಜನರು ಬಂದು ನೆಲೆಸಿದರು. ಸಿಂಧಿಗಳು ಶ್ರೀಮಂತರು. ಅವರಿಗೆ ಕಷ್ಟದ ಬೇಗೆ ಅಷ್ಟು ಬಡಿಯಲಿಲ್ಲ. ಆದರೆ, ಪಂಜಾಬದವರು ಬಡತನದಲ್ಲಿ ಬಂದರು.

೪

ಪಂಜಾಬದಿಂದ, ಬಂದ ನಿರಾಶ್ರಿತರಿಗೆ ಭಾರತ ಸರಕಾರವು ಎಲ್ಲ ಬಗೆಯ ಸಹಾಯವನ್ನೂ ಕೊಟ್ಟಿತು. ಶಾಸ್ತ್ರಿಯು ತನ್ನ ಹಳ್ಳಿಯಿಂದ ಹೈದರಾಬಾದಕ್ಕೆ ಬಂದು ಊರ ಕೊನೆಯಲ್ಲಿರುವ ಒಂದು ಭಾಗದಲ್ಲಿ, ಗುಡಿಸಲಿನಲ್ಲಿ ಇರುತ್ತಿದ್ದನು. ಇವನಿದ್ದ ಗುಡಿಸಲ ಹತ್ತಿರವೇ ಒಂದು ಬ್ರಾಹ್ಮಣ ನಿರಾಶ್ರಿತರ ಕುಟುಂಬ ಬಂದಿಳಿಯಿತು. ಪಂಡಿತ ಕೃಷ್ಣಕುಮಾರ ಗಾಯತ್ರಿ ಇವರು ಪಂಜಾಬದ ಅಯೋಧ್ಯಾ ಬ್ರಾಹ್ಮಣ ಮನೆತನದವರು. ಪೂರ್ವದಲ್ಲಿ

ಪಂಜಾಬದಲ್ಲಿ ನೆಲೆಸಿದ ಇವರು ಆ ಪ್ರಾಂತದವರೇ. ಅಲ್ಲಿಗೆ ಹೋಗಿ ಸುಮಾರು ಐವತ್ತು ವರುಷಗಳಾಗಿರಬಹುದು. ಅಲ್ಲಿಯ ಅನೇಕ ಹಿಂದೂ ಮನೆತನಗಳ ಪೌರೋಹಿತ್ಯ ಕೆಲಸವನ್ನು ಮಾಡುವುದೇ ಇವರ ಜೀವನ ವ್ಯವಸಾಯವಾಗಿತ್ತು.

ಆಗಸ್ಟ ೧೯೪೭ ರಲ್ಲಿ ಆದ ಜಾತೀಯ ದುರಂತದಲ್ಲಿ ಇವರು ತಮ್ಮ ಎಲ್ಲ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು, ಹೆಂಡತಿಯು ಬಲಿಯಾದುದನ್ನೂ ನೋಡಿ, ಉಳಿದ ಮಗ, ಮಗಳೊಂದಿಗೆ ಇಲ್ಲಿಗೆ ಬಂದಿದ್ದರು.

ಹೈದರಾಬಾದದಲ್ಲಿ ಎಲ್ಲಿ ನೋಡಿದರೂ ಈ ನಿರಾಶ್ರಿತರ ಗುಂಪೇ. ಪತಂಜಲಿ ಶಾಸ್ತ್ರಿಗೆ ಈ ಕುಟುಂಬದ ಪರಿಚಯವಾಯಿತು. ದಿನವೂ ಶಾಸ್ತ್ರಿಯು ಸೈಕಲ್ಲಿನ ಮೇಲೆ ತನ್ನಂಗಡಿಗೆ ಹೋಗಿ ಸಂಜೆಗೆ ಬರುವುದು ರೂಢಿ. ಅವನಿಗೆ ಉರ್ದು ಚನ್ನಾಗಿ ಬರುತ್ತಿತ್ತು. ಒಂದು ದಿನ ಅಂಗಡಿಗೆ ಹೋಗುತ್ತಿರುವಾಗ ಪಕ್ಕದಲ್ಲಿಯೇ ಮನೆಮಾಡಿಕೊಂಡಿದ್ದ ಇನ್ನೊಂದು ಮನೆಯವರಾದ ವೆಂಕಟಾಚಾರಿಯ ಪರಿಚಯವೂ ಅವನಿಗಾಯಿತು.

ವೆಂಕಟಾಚಾರಿ ರಸಿಕನು. ಸರಕಾರೀ ಕೆಲಸದಲ್ಲಿದ್ದ. ಭಾರತೀಯ ಸಂಸ್ಕೃತಿ, ಅದರಲ್ಲಿಯೂ ಆಂಧ್ರ ಸಂಸ್ಕೃತಿಯೆಂದರೆ ಅವನಿಗೆ ಹೆಚ್ಚಿನ ಪ್ರೀತಿ; ಕಲೆಗಳಲ್ಲಿ ಅಭಿರುಚಿ ಹೆಚ್ಚು. ವೆಂಕಟಾಚಾರಿಯ ಪರಿಚಯವು ಒಂದು ದಿನ ಪತಂಜಲೀ ಶಾಸ್ತ್ರಿಗೆ ಹೋಟೆಲಿನಲ್ಲಿ ಆಯಿತು. ಆತನ ಸಲಹೆಯಂತೆ ನಗರದಿಂದ ದೂರ ಇದ್ದ ಬೊಗ್ಗುಲಕುಂಟೆ ಎಂಬ ಹಳ್ಳಿಯಲ್ಲಿ ಸ್ವಲ್ಪ ಭೂಮಿ ಬೆಲೆಗೆ ತೆಗೆದುಕೊಂಡು ಅಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದ.

ಪತಂಜಲಿಶಾಸ್ತ್ರಿಯು ತನ್ನ ಗುಡಿಸಲಿನ ಹಿಂದಿನ ಬಯಲಿನಲ್ಲಿ ಅನೇಕ ಬಗೆಯ ಕಾಯಿಪಲ್ಲೆಗಳನ್ನೂ, ಹೂಗಳನ್ನೂ, ಬೆಳೆಸಿ ಅವುಗಳ ಮಾರಾಟದಿಂದ ಸ್ವಲ್ಪ ಹಣ ಸಂಪಾದಿಸಲು ಪ್ರಾರಂಭಿಸಿದ.

೫

ಒಂದು ದಿನ ಶಾಸ್ತ್ರಿಯು ಅಂಗಡಿಯಲ್ಲಿರುವಾಗ ಈ ಪಂಜಾಬದ ಗಾಯತ್ರೀ ಪಂಡಿತನು ಬೀಡಿಗೆಂದು ಬರಲು ಅವನ ಪರಿಚಯವು ಶಾಸ್ತ್ರಿಗಾಯಿತು. ಪಂಡಿತರ ಕರುಣಾಜನಕ ಕತೆಯನ್ನು ಕೇಳಿ ಅವರನ್ನು ತಮ್ಮ ಕುಟೀರಕ್ಕೆ ಬರಬೇಕೆಂದು ಒತ್ತಾಯಪಡಿಸಿದ. ಅವರ ಕತೆಯನ್ನು ಮತ್ತು

ಅವರ ಸ್ವಭಾವವನ್ನು ತಿಳಿದುಕೊಂಡು ತನ್ನ ವ್ಯಾಪಾರದಲ್ಲಿ ಪಾಲುಗಾರ ನಂತೆ ಕೆಲಸ ಮಾಡಲು ಬರಬೇಕೆಂದು ಸೂಚಿಸಿದ. ಹೆಚ್ಚು ವಿಸ್ತಾರವಾಗು ತ್ತಲಿದ್ದ ಇವನ ವ್ಯಾಪಾರವನ್ನು ನೋಡಿಕೊಳ್ಳಲು ಓರ್ವ ಪ್ರಾಮಾಣಿಕ ಹಿರಿಯರ ನೆರವು ಬೇಕಾಗಿತ್ತು. ಬೊಗ್ಗುಲಕುಂಟೆಯಲ್ಲಿಯ ತನ್ನ ಹೊಲದ ಲ್ಲಿಯ ಅರ್ಧಭಾಗ ಮಾರಿದ. ಅದರ ನೆರವಿನಿಂದ ತನ್ನ ವ್ಯಾಪಾರವನ್ನು ವಿಸ್ತರಿಸಿದ. ಶಾಸ್ತ್ರಿಗೆ ಸೊಗಸಾಗಿ ಉರ್ದು ಬರುತ್ತಿದ್ದುದರಿಂದ ಇವರಿಬ್ಬ ರಲ್ಲಿ ಸ್ನೇಹ ಬೆಳೆಯಲು ಕಾರಣವಾಯಿತು. ದೊಡ್ಡದೊಂದು ಅಂಗಡಿ ಯನ್ನು ಬಾಡಿಗೆಗೆ ಹಿಡಿದು ತಮ್ಮ ವ್ಯಾಪಾರವನ್ನು ಸಾಗಿಸಿದರು.

ಗಾಯತ್ರೀ ಪಂಡಿತರ ಮನೆಗೂ ಶಾಸ್ತ್ರಿಯ ಮನೆಗೂ ಬಹಳ ದೂರವಿರಲಿಲ್ಲ. ಇವರ ಕುಟೀರಗಳು ಬೇರೆ ಇದ್ದರೂ ಯಾವಾಗಲೂ ಇವರ ಮನೆಯ ಹುಡುಗರು ಒಂದೆಡೆಗೇ ಇರುತ್ತಿದ್ದರು. ಈ ಎರಡು ಮನೆತನದ ವರೂ ತೀರ ಹತ್ತಿರ ಬರಹತ್ತಿದರು.

ಗಾಯತ್ರೀ ಪಂಡಿತನ ಮಗಳಾದ ಜಯನಂದಿನಿ ಬಹುಯೋಗ್ಯ ಹುಡಿಗಿ; ಚೆಲುವಿನ ಕಣಿ. ಅವಳ ಮನಮೋಹಕ ಲಾವಣ್ಯ ಪಂಜಾಬ ದಲ್ಲಿ ಅನೇಕ ಯುವಕರನ್ನು ಮುಗ್ಧಗೊಳಿಸಿತ್ತು. ಹದಿನೇಳು ವಯಸ್ಸಿನ ಹೆಣ್ಣಿಗಿರಬೇಕಾದ ಶರೀರ, ಅಂದಚೆಂದಗಳೆಲ್ಲವೂ ಒಂದು ವಿಶಿಷ್ಟ ರೀತಿಯಲ್ಲಿ ಇವಳಲ್ಲಿ ನಿರ್ಮಿತವಾಗಿದ್ದವು. ಪತಂಜಲಿ, ಶಾಸ್ತ್ರಿಗಳ ಹೃದಯವನ್ನೂ ಇವಳು ಆಕರ್ಷಿಸಿದ್ದಳೆಂದರೆ ಅದೇನು ಆಶ್ಚರ್ಯದ ಮಾತಲ್ಲ.

ಜಯನಂದಿನಿಗೂ ಮಹಾಲಕ್ಷ್ಮಿಗೂ ಹೆಚ್ಚು ಗೆಳೆತನ. ಮಹಾಲಕ್ಷ್ಮಿಯ ನೆರವಿನಿಂದ ಇವಳು ತೆಲುಗು ಕಲಿತಳು. ಅವಳ ತಮ್ಮ ರಾಧಾಕುಮಾರನೂ ಬೇಗ ತೆಲುಗನ್ನು ಕಲಿತನು.

ಜಯನಂದಿನಿ ಪಂಜಾಬದ ದುರಂತಗಳನ್ನು ಕಣ್ಣಾರೆ ಕಂಡು ತನ್ನ ಹೃದಯವನ್ನು ಕಲ್ಲು ಮಾಡಿಕೊಂಡಿದ್ದಳು. ಮೊದಲು ಅವಳು ಎಷ್ಟೋ ಮಂದಿ ಯುವಕರನ್ನು ಕಂಡಿದ್ದಳು. ಆದರೆ ಪತಂಜಲಿಯಲ್ಲಿ ಅವಳಿಗೆ ಹೇಳತೀರದ ಆಶೆ, ಉಕ್ಕಿ ಬರುವ ಪ್ರೇಮ, ಸ್ನೇಹದ ವಾತ್ಸಲ್ಯ. ಅವನ ನ್ನೊಂದು ಸಲ ದೂರದಿಂದ ನೋಡಿದಳೆಂದರೆ ಅವಳಿಗೆ ಮನಶ್ಶಾಂತಿ ದೊರೆ ಯುತ್ತಿತ್ತು. ತಮಗೆ ಆಶ್ರಯವನ್ನಿತ್ತ ಇವನ ಮನೆಯವರಲ್ಲಿರುವ ಶುಚಿ,

ನೀತಿ, ಆಚಾರ, ನಡತೆ ಅವಳ ಮನಸ್ಸಿಗೆ ಬಂದವು. ಆದುದರಿಂದಲೇ ಶಾಸ್ತ್ರಿಯೆಂದರೆ ಎಲ್ಲಿಯೂ ಇಲ್ಲದ ಉತ್ಸಾಹ ಅವಳಲ್ಲಿ ಕಂಡುಬರುತ್ತಿತು.

೬

ಗಾಯತ್ರೀ ಪಂಡಿತನು ತನ್ನ ಎಪ್ಪತ್ತೊಂದನೆಯ ವಯಸ್ಸಿನಲ್ಲಿ ಎಲ್ಲ ಕಷ್ಟವನ್ನು ಮರೆತು ಸುಖವಾಗಿ ಪತಂಜಲಿಯ ವ್ಯಾಪಾರದಲ್ಲಿ ನೆರವಾಗಿ ಅದರ ಅಭಿವೃದ್ಧಿಗೆ ಸಹಾಯಕನಾದನು. ಇಲ್ಲಿಯ ಜನರ ಆಹಾರಾದಿಗಳು ಅವನಿಗೆ ರುಚಿಸಹತ್ತಿದವು. ಕಾಲಕ್ರಮೇಣ ಅವನಿಗೆ ಪಂಜಾಬ ಮತ್ತು ಇಲ್ಲಿಯ ಜನರ ಜೀವನ ಕ್ರಮದಲ್ಲಿ ಯಾವ ವ್ಯತ್ಯಾಸವಿಲ್ಲೆಂಬಂತೆ ನಿಸಿತು.

ಅನೇಕ ಸಮಯಗಳಲ್ಲಿ ರಾತ್ರಿ ಕೆಲಸ ಮುಗಿದ ನಂತರ ಸತ್ಕಾಲಕ್ಷೇಪದಲ್ಲಾಗಲಿ, ರಾಜಕೀಯ ಚರ್ಚೆಯಲ್ಲಾಗಲಿ, ತತ್ವವಿಚಾರದ ಮಾತಿನಲ್ಲಾಗಲಿ, ಪತಂಜಲಿಯು ತೋರುತ್ತಲಿದ್ದ ಉತ್ಸುಕತೆ ಹಿಂದಿನಿಂದ ನಿಂತು ನೋಡುತ್ತಿದ್ದ ಜಯನಂದಿನಿಗೆ, ಸಂತೋಷವನ್ನುಂಟು ಮಾಡುತ್ತಿತ್ತು. ತನ್ನ ಜೀವನದ ಗೆಳೆಯನನ್ನಾಗಿ ಇವನನ್ನು ಆರಿಸಿದರೆ ತಾನು ಯಾವ ತಪ್ಪು ಮಾಡುವದಿಲ್ಲವೆಂಬ ನಿರ್ಧಾರಕ್ಕೆ ಅವಳು ಬಂದಿದ್ದಳು. ತನ್ನೆಲ್ಲ ಚರ್ಯೆಗಳನ್ನೂ ಕದ್ದು ನೋಡುತ್ತಿರುವಳೆಂಬ ವಿಷಯ ಮಾತ್ರ ಶಾಸ್ತ್ರಿಗೆ ಗೊತ್ತಾಗಿತ್ತು. ಪರಸ್ಪರ ದೂರದಿಂದಲೇ ತಮ್ಮ ಪ್ರೇಮ ಸೌಧವನ್ನು ನಿರ್ಮಿಸುತ್ತಿದ್ದರು. ಈ ಎರಡು ಹೃದಯಗಳು ಕಲೆಯುವ ಸಮಯಕ್ಕಾಗಿ ನಿಸರ್ಗವೇ ಕಾಯುತ್ತಿತ್ತೆನ್ನಬಹುದೇನೋ ಎಂಬಂತೆ ಅವರ ಮನೆಯ ಸುತ್ತಲಿನ ಪ್ರಕೃತಿಯು ಚೆಲುವು ದಿನೇ ದಿನೇ ಬೆಳೆಯುತ್ತಿತ್ತು.

೧೯೪೫ ರ ಮೇ ತಿಂಗಳು; ತೀಕ್ಷ್ಣವಾದ ಬಿಸಿಲು; ಆಣೆಕಲ್ಲಿನ ಮಳೆ ಬೀಳುವ ಸಮಯ. ಒಂದು ದಿನ ಮಧ್ಯಾಹ್ನ ಹನ್ನೊಂದರ ಸುಮಾರಕ್ಕೆ ಊಟಕ್ಕೆಂದು ಪತಂಜಲಿ ಶಾಸ್ತ್ರಿಯು ಮನೆಗೆ ಬಂದಾಗ ಇದ್ದಕ್ಕಿದ್ದಂತೆ ಕಪ್ಪು ಮೋಡಗಳಿಂದ ಕತ್ತಲುಕವಿದು ಮಳೆ ಸುರಿಯಲಾರಂಭಿಸಿತು. ಸ್ನಾನಕ್ಕೆಂದು ಮನೆ ಹಿಂದಿನ ಬಯಲಿಗೆ ಬಂದಾಗ ಮೇಲ್ಮುಸುಗಿನಲ್ಲಿ ಜಯನಂದಿನಿಯು ಹೀರೇಕಾಯನ್ನು ಚವಳೇಕಾಯನ್ನು ಬಳ್ಳಿಗಳಿಂದ ಶೇಖರಿಸುತ್ತಿರುವ ಸುಂದರ ದೃಶ್ಯವು ಅವನಿಗೆ ಕಂಡಿತು.

ಹಾಗೆಯೇ ಬಳ್ಳಿಗಳ ಮರೆಯಲ್ಲಿ ನಿಂತು ಪ್ರಕೃತಿಯು ಸೂಸುತ್ತಿದ್ದ ತಂಪು ಹವೆಯಲ್ಲಿ ಮೈಮರೆತು "ಮೈಗಿರಿಧರಕೇ ಘರ ಜಾವೂ" ಎಂದು ಅವಳು ಹಾಡುತ್ತಿದ್ದಳು. ಪತಂಜಲಿಯು ಅವಳನ್ನು ನೋಡುತ್ತ ಹಾಗೆಯೇ ನಿಂತುಬಿಟ್ಟ. ಇದನ್ನು ಆ ಹುಡಿಗೆ ನೋಡಿರಲಿಲ್ಲ.

ಮರುಕ್ಷಣ ಮುತ್ತಿನಂತೆ ಆಣೆಕಲ್ಲುಗಳನ್ನು ನೆಲದ ಮೇಲೆ ಚೆಲ್ಲುತ್ತ ಆಣೆಕಲ್ಲಿನ ಮಳೆ ಪ್ರಾರಂಭಿಸಿತು. ಪಾರಿಜಾತ ಪುಷ್ಪದಂತೆ ಆಣೆಕಲ್ಲು ಮೆರೆಯುತ್ತಿದ್ದವು. ದೇವತೆಗಳು ಸುರಿಸಿದ ಹೂವಿನ ಮಳೆ ಎಂದು ಭಾಸವಾಗುತ್ತಿತ್ತು.

ಅದೇ ಕ್ಷಣದಲ್ಲಿ ಹಿಂದೆ ನಡೆದು ಹೋದ ದುಷ್ಕಾಲದ ನೆನಪು ಶಾಸ್ತ್ರಿಗೆ ಬಂದಿತು. ಇದೇ ಆಣೆಕಲ್ಲಿನ ಮಳೆಯು ತನ್ನ ಹುಟ್ಟೂರನ್ನು ತೊರೆಯುವಂತೆ ಮಾಡಿತು, ತನ್ನ ಮನೆತನದ ಸುಖ ಜೀವನದಲ್ಲಿ ತೊಂದರೆಯನ್ನು ತಂದೊಡ್ಡಿತು, ಎಂದು ಅವನು ನೆನೆದುಕೊಂಡನು. ಅವನ ಮನವು ಮತ್ತು ನಡುಗಿತು. ಎಚ್ಚರ ತಪ್ಪಿ "ಅಮ್ಮಾ" ಎಂದು ನೆಲಕ್ಕೆ ಬಿದ್ದುಬಿಟ್ಟ. ಇದೇನನ್ನೂ ಅರಿಯದ ಜಯನಂದಿನಿಯು ಓಡಿಬಂದು ನೆಲದ ಮೇಲೆ ಬಿದ್ದಿದ್ದ ಪತಂಜಲಿ ಶಾಸ್ತ್ರಿಯ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು "ಏನು ಬಹಳ ನೋವಾಯಿತೇ ಮಾವಾ" ಎಂದು ನಡುಗುವ ಸ್ವರದಲ್ಲಿ ಕೇಳಿದಳು.

ಸ್ವಲ್ಪ ಹೊತ್ತಿಗೆ ಅವನಿಗೆ ಎಚ್ಚರವಾಯಿತು. ತಾನು ಜಯನಂದಿನಿಯ ತೊಡೆಯ ಮೇಲೆ! ಅಪೂರ್ವ ಸನ್ನಿವೇಶ! ಅವಳ ಸ್ಪರ್ಶಸುಖ ಅಮೃತಪ್ರಾಯ. ಈ ಆನಂದದಲ್ಲಿ ಮೈಮರೆತು ಮತ್ತೆ ಸುಮ್ಮನಿದ್ದ. ಹೆಚ್ಚಿದ ಪ್ರೇಮದಿಂದ ಅವಳು ತನ್ನೆರಡು ಮೃದು ಕೈಗಳಿಂದ ಕದಡಿದ ಅವನ ಕೇಶಗಳನ್ನು ಸವರುತ್ತ, ಗಲ್ಲದ ಮೇಲೆ ಕೈ ಆಡಿಸಿದಳು. ಅದೇ ಕಾಲಕ್ಕೆ ಮತ್ತೆ ಆಣೆಕಲ್ಲಿನ ಮಳೆ; ದೇವತೆಗಳು ಇವರ ಮಿಲನವನ್ನು ಹರಸುತ್ತಿರುವಂತಿತ್ತು.

ಮನೆಯ ಹುಡುಗರು ಓಡಿ ಬಂದರು ಇವನು ಎಚ್ಚರ ತಪ್ಪಿ ಬಿದ್ದದ್ದು ತಿಳಿದು ಉಪಚಾರ ಮಾಡಿ ಒಳಗೆ ಕರೆದುಕೊಂಡು ಹೋದರು. ಮನೆಯಲ್ಲಿ ಹೋಗುವಾಗ ತಾಯಿಯಾದ ಸುಂದರಮ್ಮನ ಮುಂದೆ "ಅಮ್ಮಾ ಜಯ ಬಂದು ನನ್ನನ್ನು ಹಿಡಿಯದಿದ್ದರೆ, ಹೆಚ್ಚಿನ ಪೆಟ್ಟು ತಾಗುತ್ತಿತ್ತು.

ಅವಳು ನನಗೆ ಪ್ರಾಣದಾನ ಮಾಡಿದಳು ” ಎಂದು ಕೃತಜ್ಞತಾಸೂಚಕ ಸ್ವರದಲ್ಲಿ ಶಾಸ್ತ್ರಿ ಹೇಳಿದ. ಇದರರ್ಥ ಜಾಣೆಯಾದ ಜಯನಂದಿನಿಗೂ ಆಗಿ ರಲಿಕ್ಕೇ ಸಾಕು “ ಮಾವಗೆ ಕಾಲುಜಾರಿರಬೇಕು. ಪಾಪ! ನಾನು ಅವರ ನೆರವಿಗೆ ಬಂದೆ ” ಎಂದು ನುಡಿದು ನಾಚಿಕೆಯಿಂದ ತಲೆಬಾಗಿಸಿದಳು.

ಮತ್ತೆ ಹೊರಗಡೆ ಆಣೆಕಲ್ಲಿನ ಮಳೆ,

ಅಂದುರಾತ್ರಿ ವೆಂಕಟಾಚಾರ್ಯರು ಇವರೀರ್ವರ ವಿವಾಹದ ವಿಷಯ ವಾಗಿ ಬಂದ ರಾಯಬಾರಕ್ಕೆ ತಮ್ಮ ಪೂರ್ಣಸಮ್ಮತಿಯನ್ನಿತ್ತರು.

ಏನು ಈ ವಿಚಿತ್ರ ವ್ಯವಹಾರ! ಜಯ ಪಂಜಾಬದ ಹೆಣ್ಣು, ಪತಂಜಲಿ ಹೈದರಾಬಾದದ ಆಂಧ್ರ. ಆಣೆಕಲ್ಲಿನ ಮಳೆ ಈ ಉತ್ತರ ದಕ್ಷಿಣ ಕುಟುಂಬ ಗಳನ್ನು ಒಂದಾಗಿಸಿತು. ಅಂದು ಮನೆತನವನ್ನು ಹಾಳು ಮಾಡಿದ ಈ ಮಳೆಯೇ ಇಂದು ಇವರೀರ್ವರ ಜೀವನವನ್ನು ಹೊಂದುಗೂಡಿಸಿತು. ಇದಕ್ಕೆ ಹೊಣೆಯಾರು?

# ತಪ್ಪು ತಿಳುವಳಿಕೆ

ನಾನು ಮರ್ಯಾದಸ್ಥರ ಮನೆಯಲ್ಲಿ ಹುಟ್ಟಿದವ. ನನ್ನಲ್ಲಿ ಕೆಲವು ಗುಣಗಳು ಹೇಗೆ ಮನೆ ಮಾಡಿಕೊಂಡವೋ ಹೇಳಲಾರೆ. ಹನ್ನೆರಡನೆಯ ವಯಸ್ಸಿನಿಂದಲೇ ಊರಲ್ಲೆಲ್ಲ ಅಲೆದಾಡುವ ಅಭ್ಯಾಸ ನನಗುಂಟಾಯಿತು. ಅನೇಕ ಮಿತ್ರರ ಪರಿಚಯವೂ ಆಯಿತು. ಅವರೆಲ್ಲರೂ ನನಗಿಂತಲೂ ಧೈರ್ಯಶಾಲಿಗಳೇ. ಅವರು ಮಾಡುತ್ತಿದ್ದ ಸಾಹಸದ ಕಾರ್ಯಗಳು ನನ್ನನ್ನು ಬೆರಗುಗೊಳಿಸುತ್ತಿದ್ದವು. ನಾನು ದೊಡ್ಡ ಮನೆತನದವನೆಂತಲೂ ನನ್ನಲ್ಲಿ ಒಳ್ಳೆಯ ಗುಣಗಳು ಇರುವುವೆಂತಲೂ ನನ್ನ ಮೂರ್ಖ ಮಿತ್ರರಿಂದ ನನ್ನ ಮುಂದಿನ ಬಾಳು ಹಾಳಾಗುವುದೆಂತಲೂ, ದಿನವೂ ನನ್ನನ್ನು ಹೆತ್ತವರು ಜಗಳ ಮಾಡುತ್ತಿದ್ದರು. ನನ್ನ ಹಿರಿಯರು ಬಯಸಿದ ಬಯಕೆಗಳಲ್ಲಿ ನನಗೆ ಎಳ್ಳಷ್ಟೂ ವಿಶ್ವಾಸವಿರಲಿಲ್ಲ. ಓದುವುದೆಂದರೆ ನನಗೆ ಬೇಸರ; ಶಾಲೆಯ ಮಾಸ್ತರನ್ನು ಕಂಡರೆ ಅಸಹ್ಯ. ಜಾಣರಾದ ವಿದ್ಯಾರ್ಥಿಗಳಿಂದ ದೂರಿರುವುದೆಂದರೆ ನನಗೆ ಬಹು ಸಂತೋಷ. ಸ್ನೇಹಿತರೊಂದಿಗೆ ಯಾವಾಗಲೂ ಗುರಿಇಲ್ಲದೆ ಅಲೆದಾಡುವುದು, ತೆಂಗು, ಮಾವಿನ ಗಿಡಗಳನ್ನು ಹತ್ತುವುದು, ಟಿಕೀಟಿಲ್ಲದೆ ರೈಲು ಪ್ರಯಾಣ ಮಾಡುವುದು, ಹಣ ಕೊಡದೆ ನಾಟಕಗಳನ್ನು ನೋಡುವದು, ನನ್ನ ವೈರಿಗಳನ್ನು ಹಿಂಸಿಸುವದು ಮುತ್ತು ಇಂತಹ ಅನೇಕ ದುಷ್ಟ ಕಾರ್ಯಗಳಲ್ಲಿ ನನಗೆ ಅಸಕ್ತಿ ಹೆಚ್ಚು. ಲೋಕದ ದೃಷ್ಟಿಯಲ್ಲಿ ಇದೆಲ್ಲವೂ ತಪ್ಪೆಂದು ನನಗನಿಸಿದರೂ, ನನ್ನ ಮನಸ್ಸಿಗೆ ಮಾತ್ರ ಅದು ಪಾಪ ಕಾರ್ಯವೆಂದು ಮನವರಿಕೆ ಆಗುತ್ತಿರಲಿಲ್ಲ. ಇದರ ಕಾರಣ ನನಗೆ ತಿಳಿಯದಂತಿತ್ತು. ನನ್ನ ಮನಸ್ಸಿನ ಮೇಲೆ ಚನ್ನಾಗಿ ಪರಿಣಾಮವಾಗುವಂತೆ ತಿಳಿಸಿ ಹೇಳುವ ಹಿರಿಯ ಮಿತ್ರರಾರೂ ಇರಲಿಲ್ಲ.

ನನ್ನ ಹದಿನೈದನೆಯ ವಯಸ್ಸಿನಲ್ಲಿ ನಾನೊಬ್ಬ ಲಫಂಗನೆಂದು ಮನೆಯವರೆಲ್ಲರೂ ಭಾವಿಸಿದರು. ನನ್ನಿಂದ ಅವರು ಬಹುದೂರ ಇರಹತ್ತಿ

ದುದು ನನ್ನ ಮನಸ್ಸಿಗೂ ಸಂತೋಷವನ್ನುಂಟುಮಾಡಿತು. ಊಟಕ್ಕೆ ಮಾತ್ರ ಮನೆಗೆ ಹೋಗುತ್ತಿದ್ದೆ. ಬೀಡೀ ಸೇದುವ ಚಟವು ಇದ್ದುದರಿಂದ ಕೆಲ ಸಮಯ ತಂದೆಯವರ ಕಿಸೆಯಿಂದ ಹಣ ಕಳ್ಳತನ ಮಾಡಬೇಕಾಗುತ್ತಿತ್ತು. ಇದನ್ನವರು ಕಂಡು ಹಿಡಿದು ನನ್ನನ್ನು ಚೆನ್ನಾಗಿ ಥಳಿಸಿದರು. ಅಣ್ಣನಿಗೆ ಅವನು ಓದಲೆಂದು ವೆಚ್ಚಮಾಡುತ್ತಿದ್ದ ಹಣದಲ್ಲಿ ಒಂದ ಹತ್ತಾಂಶ ನನಗೆ ಕೊಟ್ಟಿದ್ದರೆ ನಾನು ಸುಮ್ಮನಿರುತ್ತಿದ್ದೆ. ಎಲ್ಲರ ಕಣ್ಣಲ್ಲಿ ಮೂರ್ಖನೆಂದು ಪರಿಗಣಿಸಲ್ಪಟ್ಟ ನನ್ನನ್ನು ಮಾತನಾಡಿಸುವವರೇ ಇರಲಿಲ್ಲ. ನನ್ನನ್ನು ಹತ್ತಿರ ಕರೆದು ಆದರಿಸುವವರೇ ಇರಲಿಲ್ಲ.

ಒಂದು ದಿನ ನಾನು ಮನೆಗೆ ಬಂದ ಕೂಡಲೇ "ಊಟದ ಹೊತ್ತಿಗೆ ಮನೆ ನೆನಪು ಬರುತ್ತೇನೋ ಮಹಾರಾಜರಿಗೆ" ಎಂಬ ನನ್ನಣ್ಣನ ಕೊಂಕು ನುಡಿ ನನ್ನಲ್ಲಿಯ ಕೋಪವನ್ನು ಕೆರಳಿಸಿತು. ಸಿಟ್ಟಿನಿಂದ ಅವನನ್ನು ಚೆನ್ನಾಗಿ ಬೈದೆ. ಅಂದಿನಿಂದ ನಾನು ಮನೆಗೆ ಬರಬಾರದೆಂದು ತಂದೆಯವರ ಅಪ್ಪಣೆ ಕೊಡಿಸಿದರು. ನನಗೂ ಸಿಟ್ಟುಬಂದು, ಊಟ ಮಾಡದೆ "ಈ ಮನೆಯಲ್ಲಿ ನಾನಿನ್ನು ಕಾಲಿಡುವುದಿಲ್ಲ" ಎಂದು ಹೇಳಿ ಮನೆಯಿಂದ ಹೊರಬಿದ್ದು ಆ ರಾತ್ರಿ ಧರ್ಮಶಾಲೆಯಲ್ಲಿ ಮಲಗಿದೆ. ಹಸಿವು ನೀರಡಿಕೆಗಳಿಂದ ನಿದ್ದೆ ಬರಲಿಲ್ಲ. ಆ ಸಂಕಟದಲ್ಲಿ ತಾಯಿ ನೆನಪಿಗೆ ಬಂದಳು. ಹುಡುಗನಿದ್ದಾಗ ಆಕೆಯ ಮಡಿಲಲ್ಲಿ ಆಡಿದ ಚಿನ್ನಾಟಗಳ ನೆನಪು ಬಂದಿತು. ದುಃಖದಿಂದ ನಾನು ಅತ್ತುಬಿಟ್ಟೆ. ಯಾರನ್ನಾದರೂ ಮರೆಯಬಹುದು; ಯಾರ ಋಣವನ್ನಾದರೂ ತೀರಿಸಬಹುದು. ಆದರೆ ತಾಯಿಯ ಋಣ ತೀರಿಸುವದು ಅಸಾಧ್ಯ. ಆ ಪವಿತ್ರ ಜೀವಿಯ ಅಂತಃಕರಣ ಮತ್ತು ತ್ಯಾಗಕ್ಕೆ ನಾವೇನು ಮಾಡಿದರೂ, ಎಷ್ಟು ಶ್ರಮಿಸಿದರೂ ಕಡಿಮೆ.

ಮಾರನೆಯ ದಿನ ಹಸಿವಿನಿಂದ ನರಳುತ್ತ ಧರ್ಮಶಾಲೆಯಲ್ಲಿಯ ಓರ್ವ ಮುದುಕಿಯನ್ನು ಸಮೀಪಿಸಿ "ತಾಯಿ, ಬಹಳ ಹಸಿವೆಯಾಗಿದೆ. ಸ್ವಲ್ಪ ಆರಿದನ್ನವನ್ನಾದರೂ ಕೊಟ್ಟು ಪುಣ್ಯಕಟ್ಟಿಕೊಳ್ಳಲಾರೆಯಾ" ಎಂದು ಬೇಡಿಕೊಂಡೆ.

"ನೀನಾರ ಮನೆಯವನು?" ಎಂದು ಕೇಳಿದಳು.

ನನಗೆ ಕೋಪ ಬಂತು. ಹೊರಟು ಹೋಗಲು ಎದ್ದು ನಿಂತೆ. ಮಮತೆ

ಯಿಂದ ಮುದುಕಿ "ಮಗೂ ಇಲ್ಲಿ ಬಾ; ಅನ್ನವನ್ನು ನೀಡುವೆ" ಎಂದು ಬರಮಾಡಿಕೊಂಡು ಹೊಟ್ಟೆ ತುಂಬುವಷ್ಟು ಅನ್ನವನ್ನು ನೀಡಿದಳು. ಸಮಾಧಾನ ಮನಸ್ಸಿನಿಂದ ಬೀದಿಯ ಹಾದಿ ಹಿಡಿದೆ. ಕರೀಂಸಾಹೇಬನ ಅಂಗಡಿಯಲ್ಲಿ ಬೀಡೀ ಕಡವಾಗಿ ತೆಗೆದುಕೊಂಡು ಸೇದುತ್ತ ಸ್ನೇಹಿತರು ಯಾರಾದರೂ ಎದುರಾಗುವರೇ ಎಂದು ಮುಂದೆ ಸಾಗಿದೆ.

ದೇವಾಲಯದ ಹತ್ತಿರವೇ ಇದ್ದ ನೂತನಕಲಾ ನಾಟಕಮಂಡಳಿಯವರ ಬಿಡಾರದ ಮನೆಯನ್ನು ಪ್ರವೇಶಿಸಿದೆ. ಅಲ್ಲಿ ಪೇಟಿ ಬಾರಿಸುವ ಮಾಸ್ತರರು ಮಾತ್ರ ಇದ್ದರು.

"ಸ್ವಾಮಿ, ಏನಾದರೂ ಒಂದು ಹಾಡು ಬಾರಿಸುವಿರಾ?"

ಅವನು ಸುಮ್ಮನಿದ್ದ.

"ನಾನು ಹಾಡಿದರೆ ಬಾರಿಸುವಿರಾ?"

"ಹೂ ಹಾಡು" ಎಂದು ನಾನು ಹಾಡಿದಂತೆ ಪೇಟಿ ನುಡಿಸಿದರು.

"ಕಿರ್ತನೆಗಳೇನಾದರೂ ಬರುವವೇ?" ಎಂದು ಅವರು ಕೇಳಿದರು.

ಹೀರಾಬಾಯಿ ಎಂಬ ಗಾಯಕಿ ಹಾಡಿದ ಒಂದು ಗಜಲಿಗೆ ಕನ್ನಡದ ಹಾಡನ್ನು ಜೋಡಿಸಿ ಹಾಡಿದೆ. ಇದರಿಂದ ಅವರು ಸಂತುಷ್ಟರಾಗಿ "ಸುಂದರರಾಮಯ್ಯ ಬಂದ ನಂತರ ನೀನು ಬಾ. ಅವರ ಮುಂದೆ ಹಾಡಿದೆಯೆಂದರೆ ಒಳಿತು" ಎಂದು ಹೇಳಿ ನನ್ನನ್ನು ಪ್ರೋತ್ಸಾಹಿಸಿ ಕಳುಹಿಸಿ ಕೊಟ್ಟರು. ಅಂದು ಮಧ್ಯಾಹ್ನ ಅವರೆದುರಿನಲ್ಲಿ ನಾನು ಹಾಡಿದೆ. ನನ್ನ ಗಾಯನಕ್ಕೆ ಸಂತೋಷವನ್ನು ವ್ಯಕ್ತಗೊಳಿಸಿದರು. ಆದರೆ ನಾಟಕ ಕಂಪೆನಿಯಲ್ಲಿ ನನ್ನನ್ನು ಸೇರಿಸಿಕೊಳ್ಳುವ ಮಾತು ಅವರು ತೆಗೆಯಲಿಲ್ಲ. ನಿರಾಶೆಯಿಂದ ನಾನು ಮುಂದೆ ಸಾಗಿದೆ.

ಪೇಟೆಯಲ್ಲಿ ಅಲೆದಾಡುವಾಗ ಸಿನೇಮಾ ಪತ್ರಿಕೆಗಳನ್ನು ಹಂಚುವ ಗಾಡಿಯಲ್ಲಿ ನನ್ನೋರ್ವ ಮಿತ್ರನನ್ನು ಕಂಡೆ. ಆ ವಾಹನದಲ್ಲಿ ನಾನೂ ಕುಳಿತುನಡೆದವಿಷಯವೆಲ್ಲವನ್ನೂ ವಿವರಿಸಿದೆ. ನಾನು ನಾಟಕದಮನೆಯಿಂದ ಸುಮ್ಮನೆ ಹೊರಗೆ ಬಂದುದಕ್ಕೆ ಅವನು ಮರುಗಿ ಮತ್ತೆ ಸುಂದರರಾಮಯ್ಯ ನನ್ನು ಕಾಣಬೇಕೆಂದು ಸೂಚಿಸಿದ. ಮಾರನೆಯದಿನದ ಬದಲು ಅಂದು ಸಂಜೆ ಮತ್ತೆ ಕಂಪೆನಿ ಮನೆಗೆ ಹೋದೆ. ಒಳಗೊಳಗೆ ನನಗೆ ಭಯ

ವಾಗುತ್ತಿತ್ತು. ಆದರೆ ನನ್ನನ್ನು ಅವರು ಕಂಡು ಹರುಷದಿಂದ ಬರಮಾಡಿಕೊಂಡರು. ಪೇಟಿ ಮಾಸ್ತರರ ಇಚ್ಛೆಯ ಮೇರೆಗೆ ಮತ್ತೊಂದು ಹಾಡು ಹೇಳಿದೆ. ಮೇನೇಜರನಾದ ಸುಂದರರಾಮಯ್ಯನನ್ನು ಅವನ ಮನೆಯವರೆಗೆ ಹಿಂಬಾಲಿಸಿ ಬಹಳ ಗಾಬರಿಯಿಂದ ಕೆಲಸದಲ್ಲಿ ಸೇರಿಸಿಕೊಳ್ಳುವ ವಿಷಯದ ಬಗ್ಗೆ ವಿಚಾರಿಸಿದೆ. ಮನೆಯ ಮೆಟ್ಟಲುಗಳನ್ನು ಹತ್ತುತ್ತ ಆತನು "ನಾಳೆ ಬಾ ವಿಚಾರ ಮಾಡೋಣ" ಎಂದು ನುಡಿದ ಮಾತುಗಳು ನನಗೆ ಕೊಂಚ ಧೈರ್ಯವನ್ನು ತಂದೊಡ್ಡಿದವು.

ಮೂರನೇಯ ದಿನ ನಾನೂ ಕಂಪನಿಯ ಜನರಲ್ಲೊಬ್ಬನೆಂದು ಪರಿಗಣಿಸಲ್ಪಟ್ಟೆ. ನಾನು ನಾಟಕದಲ್ಲಿ ನಟಿಸಿ ಹೆಸರುಗಳಿಸಿದಂತೆಲ್ಲ ನನ್ನ ಹೊಸ ಸ್ನೇಹಿತರ ಬಳಗವೂ ಹೆಚ್ಚಿತು. ಇವರು ಹಳೆಯ ಮಿತ್ರರಷ್ಟು ಒಳ್ಳೇಯುವರೆಂದು ನನಗೆನಿಸಲಿಲ್ಲ. ಹಳೆಯ ಗೆಳೆಯರಲ್ಲಿ ಕಂಡು ಬಂದ ಸಹೃದಯತೆ, ಪ್ರೀತಿ, ವಿಶ್ವಾಸ ಇವರಲ್ಲಿರಲಿಲ್ಲ. ನನ್ನಲ್ಲಿದ್ದ ಹಣವನ್ನು ಯಾವ ನೆವದಿಂದಲಾದರೂ ವೆಚ್ಚ ಮಾಡುವದಕ್ಕೆಂದು ಮುತ್ತಿಕೊಂಡ ಇರುವೆಯ ತಂಡದಂತಿದ್ದರು. ಹಳೆಯ ಮಿತ್ರರನ್ನು ನಾನು ಹಳಿಯಲಿಲ್ಲ. ಬರಬೇಡಿರೆಂದು ನಾನು ಸೂಚಿಸಲಿಲ್ಲ. ಅವರಾಗಿಯೇ ದೂರ ಸರಿದರು. ಈ ಹೊಸಬರಲ್ಲಿಯ ಕೆಟ್ಟ ಚಾಳಿಗಳು ನನಗೆ ಸರಿಬೀಳಲಿಲ್ಲ. ಅವರ ಮೋಸದ ವರ್ತನೆ ನನಗೆ ಅಸಹ್ಯವನ್ನುಂಟುಮಾಡಿತು.

ಇವರ ಸಹವಾಸದಿಂದ ನನಗೆ ಕುಡಿಯುವ ಚಟ ಗಂಟುಬಿತ್ತು. ವೇಶ್ಯೆಯರ ಸಹವಾಸವೂ ಒದಗಿಬಂತು. ಕುಡಿಯುವ ಚಟವನ್ನು ನಾನಾಗಿಯೇ ಬರಮಾಡಿಕೊಂಡೆ. ಆದರೆ ವೇಶ್ಯೆಯರ ಸಹವಾಸ ಬಲವಂತದಿಂದ ನನ್ನ ಮೇಲೆ ಹೇರಲ್ಪಟ್ಟಿತು. ಅವರ ಸಹವಾಸದಿಂದ ಹಣವು ನೀರಿನಂತೆ ವೆಚ್ಚವಾಗುತ್ತಿದ್ದುದರಿಂದ ಅವರಿಂದ ದೂರಿರಲು ಪ್ರಯತ್ನಿಸಿದೆ. ವೇಶ್ಯಾ ಸ್ತ್ರೀಯರ ರೀತಿನೀತಿಗಳು ನನಗೆ ಸರಿಬೀಳಲಿಲ್ಲ. ಅವರ ಮೋಸದ ಪ್ರವೃತ್ತಿ, ಸುಳ್ಳು ಮತ್ತು ಸೋಗಿನ ಬಾಳು ಹೀನರೀತಿಯದಾಗಿತ್ತು.

ಆದರೆ ಇಂದುಮತಿಯ ಮೇಲೆ ನನಗೆ ಅಧಿಕ ಪ್ರೇಮ. ನೀಚ ಜಾತಿಯವಳಾದರೂ ಕೆಸರೊಳಗಿನ ಕಮಲದಂತೆ ಅವಳು ನನ್ನ ಪರಿಚಯವಾದ

ಮೇಲೆ ನನ್ನನೇ ನಂಬಿಕೊಂಡು ಪ್ರಾಮಾಣಿಕತನದಿಂದ ನಡೆದುಕೊಳ್ಳುತ್ತಿರುವಳೆಂದು ನನಗೆ ಮನವರಿಕೆ ಆಯಿತು. ಮುಗ್ಧರೂಪದ, ಕೋಮಲ ಮನಸ್ಸಿನ, ಸಾಧು ಸ್ವಭಾವದ ಇವಳು, ಈ ಕುಲವಿಲ್ಲದ ಜಾತಿಯಲ್ಲಿ ಜನಿಸಿದುದು ಪ್ರಮಾದವೆಂದೆನಿಸಿತು. ನನ್ನಲ್ಲಿ ಅವಳು ತೋರುತ್ತಲಿದ್ದ ಪ್ರೇಮ ನಿಜವೆಂದು ಅವಳ ಅಮಾಯಕ ನೋಟವೇ ಹೇಳುತ್ತಿತ್ತು. ಸ್ವಲ್ಪ ಸಂಬಳದವನಾದ ನನ್ನ ಸಹವಾಸದಿಂದ ಅವಳಿಗೆ ನಾನಾವ ಸುಖ ಸಂಪತ್ತನ್ನು ಕೊಡದಿದ್ದರೂ, ಈ ಬಗೆಯ ಪ್ರಾಮಾಣಿಕ ಜೀವನ ಅವಳ ತಾಯಿಗೆ ಬೇಡವಾಗಿದ್ದರೂ, ಇಂದುಮತಿಯು ನನ್ನಿಂದ ದೂರಿರಲು ಬಯಸಲಿಲ್ಲ. ನಮ್ಮಿಬ್ಬರನ್ನು ಯಾವುದೋ ಹಿಂದಿನ ಪ್ರೇಮ ಒಂದಾಗಿಸುತ್ತಿರುವಂತಿತ್ತು. ನಮ್ಮ ಜೀವನ ಸುಖಮಯವಾಗುತ್ತಿದ್ದುದು ಅವಳ ನೆರವಿನಿಂದಲೇ. ನೊಂದ, ಆಪ್ತರಿಂದ ದೂರಿದ್ದು ಬೇಸರಪಟ್ಟ, ನನ್ನ ಮನಸ್ಸಿಗೆ ಸುಖಶಾಂತಿಗಳಿತ್ತ ಪುಣ್ಯ ಅವಳದು. ಅವಳ ಈ ಹಿರಿಯ ನೆರವನ್ನು ನಾನು ಮರೆಯುವಂತಿರಲಿಲ್ಲ. ನನ್ನ ಸಹವಾಸದಲ್ಲಿ ಅವಳು ಕಾಣುತ್ತಿದ್ದ ದಾಂಪತ್ಯ ಸುಖದ ಸವಿಕನಸಿನ ಭವಿಷ್ಯ ಜೀವನಕ್ಕೆ ಕುಂದು ಬರದಂತೆ ನಡೆದುಕೊಳ್ಳುವುದು ನನ್ನ ಕರ್ತವ್ಯವೆಂದು ನಾನು ನಿರ್ಧರಿಸಿದೆ.

ನನ್ನ ರಂಗಭೂಮಿಯ ಜೀವನ ಭವ್ಯವಾಗಿದ್ದಿತು. ಪತ್ರಿಕೆಗಳಲ್ಲಿ ನನ್ನ ನಟನ ಕಲೆಯ ಬಗ್ಗೆ ಪ್ರಶಂಸಪರ ಲೇಖನಗಳು ಬರತೊಡಗಿದವು. ಪ್ರತಿಯೊಂದು ನಾಟಕಕ್ಕೆ ನನಗೆ ಹೇರಳವಾದ ದ್ರವ್ಯ ಬರುತ್ತಿತ್ತು. ಮೇಲೆ ಅನೇಕ ಬೆಲೆಯುಳ್ಳ ಮೆಚ್ಚುಗೆಗಳು. ನಾಟಕ ಕಂಪೆನಿಯ ವಿಷಕೂಪದಿಂದ ನಾನು ನಾಗರಿಕ ಪ್ರಪಂಚದಲ್ಲಿ ಕಾಲಿಡತೊಡಗಿದೆ ವಿಕಾಸ ಹೊಂದಿದ ಸಮಾಜದಲ್ಲಿ ನನಗೆ ಸ್ಥಾನ ದೊರೆಯಿತು. ದೊಡ್ಡ ದೊಡ್ಡವರು— ಉದ್ಯೋಗಸ್ಥರೂ, ಶ್ರೀಮಂತರೂ, ಕವಿಗಳೂ, ಪಂಡಿತರೂ, ಪ್ಲೀಡರುಗಳೂ,– ಎಲ್ಲ ನಾಗರಿಕರೂ ನನ್ನನ್ನು ಹೊಗಳಿ ಮರ್ಯಾದೆಯಿಂದ ಕಾಣತೊಡಗಿದರು. ನಾನು ಹೋದಲ್ಲೆಲ್ಲ ನನಗೆ ದೊರೆಯುತ್ತಿದ ಮರ್ಯಾದೆ, ಸಂಭಾವನೆ, ಪ್ರೋತ್ಸಾಹ ಹೇಳತಿರದು. ಒಂದೊಂದು ಸಲ ನನ್ನ ಹಿಂದಿನ ಜೀವನ ನೆನಪಿಗೆ ತಂದುಕೊಂಡು ನಕ್ಕು ಸುಮ್ಮನಾಗುತ್ತಿದ್ದೆ.

ಈ ಸತ್ಕಾರ ಸಮಾರಂಭಗಳೆಲ್ಲ ತಾತ್ಕಾಲಿಕವೆಂದೂ, ನನ್ನನ್ನು

ಜನರು ಬೇಗ ಮರೆಯುವರೆಂದು ಮನಸ್ಸು ಆಗಾಗ್ಗೆ ಎಚ್ಚರಿಸುತ್ತಿತ್ತು. ನನಗೆ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ನಿರಂತರವಾಗಿ ದೊರೆಯಲಾರದೆಂದು ಮನಸ್ಸು ಹೇಳುತ್ತಿತ್ತು. ನನ್ನನ್ನು ಯಾವಾಗಲೂ ಶಂತೈಸಿ, ಆರೈಸುವ ಜೀವಿ ಇಂದುಮತಿಯೇ ಎಂದು ನನಗೆನಿಸುತ್ತಿತ್ತು. ಲೋಕವು ಕಡೆಗೆಣಿಸಿದ ಈ ವ್ಯಕ್ತಿಯ ಹೃದಯದಲ್ಲಿ ನನಗೆ ನಿರಂತರವಾದ ಸ್ಥಾನವಿದೆ ಎಂದು ನನ್ನ ಸ್ಥಿರನಂಬಿಕೆಯಾಗಿತ್ತು. ಮದುವೆಯಾದ ಹೆಣ್ಣಿನೊಂದಿಗೆ ಧೈರ್ಯದಿಂದ ಸಮಾಜದಲ್ಲಿ ಸ್ಥಾನವನ್ನು ಪಡೆದಿರುವ ಸಂಸಾರಿಯ ಸ್ಥಾನ ನನಗೆ ಬರುವುದೆಂತು? ನನಗೆ ಸೂಳೆಯಾಗಿ ಸುಖವನ್ನೀಯುವ ಇಂದುಮತಿಗೆ ಸಮಾಜದಲ್ಲಿ ಗೃಹಿಣಿಯ ಸ್ಥಾನ ದೊರೆಯುವುದೇ? ಇಂತಹ ಸ್ತ್ರೀಯರ ಜೀವನ ನಿರ್ಮಲವಾಗಿದ್ದರೂ ಸಮಾಜವು ಅವರಿಗೆ ಸಮಾನ ಸ್ಥಾನವನ್ನು ಕೊಡಲು ಒಪ್ಪುವುದೆ?

ನನ್ನ ಈಗಿನ ಸ್ಥಾನವನ್ನು ನೆನೆದಂತೆಲ್ಲ ನಾನು ಹಿಂದೆ ನಾಗರಿಕ ಜೀವನವನ್ನು ಜರಿದು ಅವರಿಂದ ದೂರಿರಲು ಬಯಸಿದುದು ತಪ್ಪೆಂದು ನನಗೆ ಈಗ ಮನಗತವಾಯಿತು ನನ್ನ ಈ ಘಟಿಂಗ ವರ್ತನೆಯನ್ನು ಹಿಯ್ಯಾಳಿಸಿದ ನನ್ನ ತಂದೆ – ತಾಯಿ, ಬಂಧು – ಬಳಗ ಇವರಿಂದ ದೂರಿದ್ದುದು ತಪ್ಪೆಂದು ನನಗೆನಿಸಿತು. ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದುದು ಪ್ರಮಾದವಾಯಿತೆಂದೆನಿಸಿತು.

ಇಷ್ಟಾದರೂ ನಾನು ನಾಗರಿಕ ಜೀವನದಲ್ಲಿ ಕಾಲಿಡುವಷ್ಟು ಜಾಣನಾದೆನೆಂದು ನನ್ನ ಬಂಧುಗಳು ಹಿಗ್ಗಿದರು. ಈಗಾದರೂ ಅವರಲ್ಲಿ ಬೆರೆತು ನನ್ನ ಜೀವನವನ್ನು ಸುಧಾರಿಸಿಕೊಳ್ಳುವೆನೆಂದು ಅವರು ಬಯಸಿದರು. ನನ್ನ ಅಣ್ಣನಿಂದ ಬಂದ ಆ ಪತ್ರವು ನನಗೆ ಎಲ್ಲಿಯೂ ಇಲ್ಲದ ಉತ್ಸಾಹವನ್ನುಂಟುಮಾಡಿತು.

"............ನೀನು ಈಗ ಲೋಕಜ್ಞಾನವನ್ನು ಪಡೆದಿರುವಿ! ನಿನಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ನಿನ್ನ ಧರ್ಮದಂತೆ ನಡೆದುಕೊಳ್ಳುವುದು ನಿನ್ನ ಕರ್ತವ್ಯ; ಅಂದರೆ ಮದುವೆಯಾಗಿ ಮನೆತನವನ್ನುಳಿಸುವ ಭಾರ ನಿನ್ನದು. ನೀನು ರಂಗಭೂಮಿಯಲ್ಲಿ ನಿಂತು ಹೆಸರುಗಳಿಸಿ ಸಮಾಜದಲ್ಲಿ ಅಂತಸ್ತನ್ನು ಪಡೆಯುತ್ತಿರುವಿ. ನೀನೊರ್ವ ಕುಲೀನ ಸ್ತ್ರೀಯನ್ನು

ಮದುವೆಯಾಗಿ ಸುಖವಾಗಿರುವುದೇ ಉತ್ತಮ ಮಾರ್ಗ. ಮದುವೆಯಾಗಿ ನೀನು ಎಂತಹ ನೀಚ ಜೀವನವನ್ನು ಕಳೆದರೂ ಸಮಾಜವು ಅದನ್ನು ಮನ್ನಿಸುವುದು. ಮದುವೆಯಿಂದಲೇ ನಿನಗೆ ಸಮಾಜದಲ್ಲಿ ಸ್ಥಾನ, ಮಾನ, ಮರ್ಯಾದೆ. ನಮ್ಮವರಲ್ಲೊಂದು ಬೆಳೆದ ಕನ್ಯ ಇದೆ. ಬೇಗ ಬಂದು ನಿಶ್ಚಯ ಮಾಡಿಕೊಂಡು ಹೋಗು........" ಎಂದು ಬರೆದ ನನ್ನ ಅಣ್ಣನ ಕಾಗದದ ಕೊನೆಯ ಪಂಕ್ತಿಯನ್ನೋದಿ ಯೋಚನೆಗೊಳಗಾದೆ.

ವಿದ್ಯಾವಂತನಾದ ಇವನ ಬರವಣಿಗೆಯನ್ನು ನಾನು ಮೆಚ್ಚಿದೆ. ಮದುವೆಯಾದರೆ ಇಂದುಮತಿಯನ್ನು ತೊರೆಯುವುದು ಅವಶ್ಯಕವಿಲ್ಲ. ಈ ಬಗೆಯ ವರ್ತನೆಯಿಂದ ನನಗೆ ಬಂಧುಗಳಲ್ಲಿ, ಮಿತ್ರರಲ್ಲಿ ಮೇಲೆ ಸಮಾಜದಲ್ಲಿ ಸ್ಥಾನ ದೊರೆಯುವುದು. ಇಂದುಮತಿಯೊಂದಿಗೆ ಇರಲು ಅನುಕೂಲವಾಗುವುದು. ಈ ಸಲಹೆ ಸೂಕ್ತವೆಂದು ಕಂಡು ಬಂತು. ನನ್ನ ಮನೆತನದವರಿಗೆ ಮರ್ಯಾದೆ ತರುವ ಕೆಲಸ ಮಾಡುವುದು ನನ್ನ ಕರ್ತವ್ಯವೆಂದು ನೆನೆದೆ. ಅತ್ತ ಇಂದುಮತಿ - ಅವಳ ಜಾತಿಯ ಜನರ ಸಂಪರ್ಕ,–ಇತ್ತ ಸಮಾಜದ ನನ್ನ ಬಂಧು–ಬಳಗದವರ ಆಶಾಪೂರಿತ ಕರೆ, ಇವೆರಡರ ನಡುವೆ ನನ್ನ ಮನಸ್ಸು ಹೊಯ್ದಾಡ ತೊಡಗಿತು. ನಾಗರಿಕ ಜೀವನದ ಕಡೆ ಮನ ನುಗ್ಗಿತು; ಅಣ್ಣನ, ತಂದೆ ತಾಯಿಗಳ ಮಮತೆಯ ಕರೆಗೆ ಹೃದಯ ಮರುಗಿತು; ಪ್ರತಿಷ್ಠೆಯಕಡೆ ಗುರಿ ಸರಿಯಿತು: ಇವುಗಳ ಹಿಡಿತದಲ್ಲಿ ಸಿರ್ಮಲವಾದ ಇಂದುಮತಿಯ ಪ್ರೇಮದ ಹಿಡಿತ ಸಡಿಲವಾಯಿತು. ಅಂತೂ ಮನೆಗೆ ಹೋಗುವುದೆಂದೇ ನಿಶ್ಚಯಿಸಿದೆ.

ಒಂದು ದಿನ ಸಮಯ ಸಿಕ್ಕಾಗ ನನ್ನಣ್ಣನಿದ್ದ ಊರಿಗೆ ಹೊರಟೆ. ಅಲ್ಲಿಯೇ ತಂದೆ ತಾಯಿಯರ ದರ್ಶನವಾಗುವುದೆಂದು ಬಯಸಿದೆ. ಕಳೆದುಕೊಂಡ ತಾಯಿಯ ಪ್ರೇಮಾಶೀರ್ವಾದಗಳು ದೊರೆಯುವವೆಂದು ಹಿಗ್ಗಿದೆ. ಮನೆ ಸೇರಿದ ಕೂಡಲೇ ತಾಯಿಯ ಮಡಿಲನ್ನು ಸೇರಿ ಸಣ್ಣ ಮಗುವಿನಂತೆ ನಾನೇ ಅತ್ತು ಬಿಟ್ಟೆ; ಎಂದ ಮೇಲೆ ತಾಯಿಯ ಗೋಳು ಹೇಳಬೇಕೇ? ಆದರೆ ತಂದೆಯವರು ಮಾತ್ರ ಅಂಹಕಾರದ ಮಾತು ಆಡದಿರಲಿಲ್ಲ. "ಇನ್ನೂ ಬದುಕಿರುವೆಯಾ? ಆ ನೀಚ ಸಹವಾಸದಲ್ಲಿ ನೀನಾಗಲೇ ಹುಳದಂತೆ ಪುಡಿಪುಡಿಯಾಗಿ ಹಾಳಾದಿಯೆಂದು ನಾನು ತಿಳಿದಿದ್ದೆ. ಇನ್ನೂ

ಜೀವಂತ ಬಿಟ್ಟಿರುವರೇ ಆ ನೀಚರು!" ಎಂದರು. ನಾದಿನಿಯು ನನ್ನನ್ನು ಅಸಹ್ಯ ನೋಟದಿಂದ ನೋಡಿದಳು. ಅದು ಅವಳ ತಪ್ಪಲ್ಲ.

ಆದರೆ ನಾನು ಮನೆಗೆ ಹಿಂತಿರುಗಿ ಬಂದುದು ಅಣ್ಣನಿಗೆ ಬಹಳ ಸಂತೋಷವನ್ನುಂಟುಮಾಡಿತು. ನಾನವರ ಕರೆಗೆ ಸಮ್ಮತಿಸಿ ಮನೆಗೆ ಬಂದುದು ಅವರೆಲ್ಲರಿಗೆ ಹೊಸ ಚೈತನ್ಯವನ್ನುಂಟುಮಾಡಿತು. ದೊಡ್ಡವನೆಂಬ ಧೋರಣೆಯಲ್ಲಿ ಅವನು ಕೊಂಚ ಒರಟು ಮಾತುಗಳನ್ನಾಡಿದ. ಸಹನೆಯಿಂದ ಅವನೆದುರಾಡದೆ ಸುಮ್ಮನಿದ್ದು ಬಿಟ್ಟೆ.

"ನೋಡಪ್ಪಾ ಕನ್ಯ ಬಹಳ ಚನ್ನಾಗಿದೆ. ಭಾಗ್ಯವಂತರಲ್ಲದಿದ್ದರೂ ಮರ್ಯಾದೆಯಿಂದ ಬಾಳಿದ ಮನೆತನ ಅವರದು. ಅವರು ನಿನಗೆ ಕನ್ಯೆಯನ್ನು ಕೊಡಲು ಸಮ್ಮತಿಸಿದುದು ನಿನ್ನ ಭಾಗ್ಯವೆಂದೇ ಹೇಳಬೇಕು. ಸಂಜೆ ಅವರ ಮನೆಗೆ ಹೋಗಿ ಹುಡಿಗೀನ ನೋಡಿಬರೋಣವೆ?" ಎಂದು ವರದಿಯನ್ನೊಪ್ಪಿಸುವವರಂತೆ ಅವಸರದಿಂದ ಮಾತನಾಡಿ ಸುಮ್ಮನಾದ.

ನಮ್ಮ ಮನೆಯವರಲ್ಲುಂಟಾದ ಈ ಬದಲಾವಣೆಗೆ ನಾನು ಬೆರಗಾದೆ. ಇದು ನಟನೆಯೋ, ಸ್ವಾಭಾವಿಕವೋ ಎಂಬುದು ತಿಳಿಯದಂತಾಯಿತು. ಈ ಬಗೆಯ ವರ್ತನೆ ನನ್ನನ್ನು ಗೊಂದಲದಲ್ಲಿ ಕೆಡವಿತು. ಮನದಲ್ಲೇ ಯೋಚಿಸಿ ಇವರು ಹೇಳಿದಂತೆ ನಡೆದುಕೊಳ್ಳುವುದೇ ಉಚಿತವೆಂದು ನಿರ್ಧರಿಸಿದೆ.

ಸಂಜೆ ಮೂರು ಗಂಟೆಗೆ ಹುಡಿಗಿಯನ್ನು ನೋಡಲು ಅವರ ಮನೆಗೆ ನಾನೂ, ಅಣ್ಣ ಹೋದೆವು. ಅವರ ಮನೆಯನ್ನು ಹೊರಗಿನಿಂದ ನೋಡಿದ ಕೂಡಲೇ ಅವರು ಬಹಳ ಬಡವರೆಂಬುದು ತಿಳಿಯಿತು. ಮನೆಯೊಳಗೆ ಹೋದ ನಂತರ ನನ್ನ ಉತ್ಸಾಹವೆಲ್ಲವೂ ಮಾಯವಾಯಿತು. "ಇದೇ ಶ್ರೀನಿವಾಸರಾಯರ ಮನೆಯಲ್ಲಿ ವೈದೀಕದ ಊಟ ಮುಗಿಸಿ ಬಂದೆ. ನೀವು ಈ ಬಿಸಿಲಿನಲ್ಲಿ ದೂರ ಬಂದಿರಿ. ಶ್ರಮವಾಯಿತು. ಹ! ಹ! ಬಡವರ ಮನೆ ಪಾವನವಾಯಿತು. ಏ ಶಾರಿ, ಪಾರಿ, ಗೀರಿ, ಆ ಚಾಪೆ ಹಾಕ್ರಿ ಬೇಗ" ಎಂದು ಆಡಿದ ಅವರ ಮಾತು ಮುಗಿಯುವದರೊಳಗೆ ನನಗೆ ಕೊಡಬೇಕೆಂದು ನಿಶ್ಚಯವಾದ 'ಶಾರದೆ' ಬಂದು ಚಾಪೆ ಹಾಸಿ ಅಡುಗೆಮನೆ ಬಾಗಿಲ ಹತ್ತಿರ ತಲೆಬಾಗಿಸಿ ನಿಂತಳು.

"ಶಾರದ ಕೊಂಚ ನಿಲ್ಲಮ್ಮ ಅಲ್ಲೇ. ನಿನ್ನ ನೋಡೋಕೆ ಬಂದಾರೆ ಇವರು"

ಶಾರದೆಯ ವಯಸ್ಸು ಹತ್ತು. ಹೇಳಿ ಮಾಡಿದ ವಿಕೃತಾಕಾರ; ಮೇಲೆ ಕಪ್ಪು ವರ್ಣ, ಕುಬ್ಜ ರೂಪ; ಮುಂದಿನ ಎರಡು ಹಲ್ಲು ಸೂಸಿ ನಿಂತಿವೆ.

ಅವಳನ್ನು ನೋಡಿ ನನ್ನೆದೆ ಧಸ್ಸೆಂದಿತು. ಅಣ್ಣ ಮತ್ತು ಆ ಅವಧಾನಿ ಏನೇನೋ ಮಾತನಾಡುತ್ತ ಕುಳಿತರು. ನನಗವರ ಮಾತಿನಲ್ಲಿ ಉತ್ಸು ಕತೆ ಇರಲಿಲ್ಲ. ಏನೋ ಕನಿಕರವನ್ನು ತೋರುವಂತೆ ನಟಿಸುತ್ತಿರುವ ನನ್ನಣ್ಣನನ್ನು ಒಂದು ಸಲ ದಿಟ್ಟಿಸಿ ನೋಡಿದೆ. ನನ್ನ ಮುಖದಲ್ಲುಂಟಾದ ನಿರಾಶೆಯ ಚಿನ್ಹೆಗಳನ್ನು ಅರ್ಥ ಮಾಡಿಕೊಳ್ಳುವ ಜಾಣತನ ಅವನದಾ ಗಿರಲಿಲ್ಲ. ತನ್ನ ನಾಗರಿಕತೆಯ ಸೋಗಿನಲ್ಲಿ ನನ್ನ ಕಲ್ಯಾಣವನ್ನು ಮರೆತು ನನ್ನನ್ನು ಬೀದಿಯಲ್ಲಿ ಅಲೆಯುವ ಎಮ್ಮೆಯೆಂದು ಭಾವಿಸಿ ನನ್ನ ಜೀವನವ ನ್ನೆಲ್ಲ ಹಾಳು ಮಾಡಲು ಸಿದ್ಧನಾದ ವಂಚಕನಂತೆ ನನಗೆ ಕಂಡುಬಂದ. ಯಾರೂ ವರಿಸದ ಈ ಕುರೂಪಿಯು ನನಗೆ ಸರಿಯಾದವಳಂತೆ? ಭಿಕಾರಿ ಗಳಾದ ಇವರೇ ನನಗೆ ಸರಿಯಾದ ಬೀಗರಂತೆ? ಸಮಾಜದಲ್ಲಿ ಇವರಂತಹ ಜನರಿರುವುದರಿಂದಲೇ ನಮ್ಮ ಬಾಳು ಕೀಳಾಗಿರುವುದೆಂದು ನಾನು ಮನದ ಲ್ಲಿಯೇ ನೊಂದುಕೊಂಡೆ. ಇದೆಲ್ಲವನ್ನೂ ಅರ್ಥ ಮಾಡಿಕೊಳ್ಳದಂತಹ ಮೂರ್ಖನಾಗಿರಲಿಲ್ಲ. ನಾನೆದ್ದು ನಿಂತು "ಅಣ್ಣಾ, ನಾನು ಮನೆಗೆ ಹೋಗುವೆ. ನೀನು ಹಿಂದಿನಿಂದ ಬಾ" ಎಂದು ಹೇಳಿ ಅವರ ಮನೆಯಿಂದ ಹೊರಬಿದ್ದವನೇ ನಿಲ್ದಾಣಕ್ಕೆ ಬಂದು ರೈಲು ಹತ್ತಿ ನಮ್ಮೂರಿಗೆ ಪ್ರಯಾಣ ಬೆಳೆಸಿದೆ.

ನಾನು ಕೂತಿದ್ದ ಡಬ್ಬಿಯು ಬಹು ದೊಡ್ಡದಿತ್ತು. ಒಂದು ಮೂಲೆ ಯಲ್ಲಿ ಓರ್ವ ಹಿರಿಯರು ಎತ್ತಿದ ಸ್ವರದಲ್ಲಿ "ಈ ಕಾಲದಲ್ಲಿ ಹಣದಿಂದ ಎಂತಹವನ್ನಾದರೂ ಬೆಲೆಗೆ ತೆಗೆದುಕೊಳ್ಳಬಹುದು. ಹಣವಿದ್ದ ಕಡೆ ನಾಗ ರಿಕತೆ ಓಡಿಬರುವವು. ಭಾಗ್ಯಲಕ್ಷ್ಮಿ ಬಂಧುಬಳಗ ಎಲ್ಲಾ ಬಗೆಯ ಅಂದ ಚಂದವು ತಾವಾಗಿಯೇ ಬರುವವು. ಹೇರಳವಾದ ವ್ಯಾಪಾರವೂ ನಡೆಯುತ್ತಿರುವಲ್ಲಿ ಉತ್ತಮ ನಗರಗಳು ನಿರ್ಮಿತವಾಗುವುದಲ್ಲವೇ? ಎಂತಹ ನೀತಿವಂತರಾದರೂ ದರಿದ್ರರಾಗಿದ್ದಲ್ಲಿ ಅವರಿಗೆ ಸಂಘ ಸಮಾಜದಲ್ಲಿ

ಮರ್ಯಾದೆ ಇದೆಯೇ? ಅನೀತಿವಂತರಾದವರು ಹಣವಂತರಾದರೆ ಅವರನ್ನು ಸಮಾಜವು ಆದರಿಸುವುದಿಲ್ಲವೆ? ದರಿದ್ರರಿಗೊಂದು ನೀತಿ, ಧನವಂತರಿಗೊಂದು ನೀತಿಯೆ? ಸಮಾಜವು ಹೀಗೆ ಕುರುಡಾಗಿರುವುದು ದೇಶಕ್ಕೆ ಹಿತವೆ?" ಎಂದು ಆವೇಶದಿಂದ ಅಲ್ಲಿ ಕೂತ ಜನರಮುಂದೆ ಮಾತನಾಡುವುದನ್ನು ನಾನು ಸುಮ್ಮನೆ ಕೇಳಿದೆ.

"ಅಹುದು! ನನ್ನ ಬಳಗದವರು ನನ್ನಲ್ಲಿಯ ಹಣವನ್ನು ಕಂಡು ಹತ್ತಿರ ಬರಮಾಡಿಕೊಂಡರು. ನನ್ನ ನೀಚ ಜೀವನದಿಂದ ನಾನು ಪಾಠ ಕಲಿತು ಸುಧಾರಿಸಿದವನೆಂದು ಅವರು ನನ್ನನ್ನು ಬಾಯೆನ್ನುವುದಿಲ್ಲ. ಅವರಿಗೆ ನನ್ನಲ್ಲಿಯ ಹಣ ಬೇಕಾಗಿದೆ. ಅವರಿಗೆ ನಾನು ಬೇಕಿಲ್ಲ. ಇರಲಿ ಇವರಿಗೆ ಬುದ್ಧಿ ಕಲಿಸುವ ಶಕ್ತಿ ನನ್ನಲ್ಲಿದೆ ನನ್ನನ್ನು ಅತಿಯಾಗಿ ಪ್ರೀತಿಸುವ ಇಂದುಮತಿ ಇವರೆಲ್ಲರಿಗಿಂತಲೂ ಹೆಚ್ಚಿನವಳಲ್ಲವೆ? ಮೊದಲಿನಿಂದಲೂ ನನ್ನಲ್ಲಿರುವ ಕಲೆಗೆ ಮನಸೋತು, ನಾನು ಮೊದಲಿಗೆ ನಿತ್ಯ ದರಿದ್ರನಾಗಿರುವಾಗಿನಿಂದಲೂ ನನ್ನೊಂದಿಗೆ ಇದ್ದು, ಸುಖ ದುಃಖಗಳಲ್ಲಿ ಸಮಭಾಗಿನಿಯಾದ ಅವಳ ಪ್ರೇಮ ಹೆಚ್ಚಿನದೆಂದು ಲೋಕಕ್ಕೆ ತೋರಿಸುವೆ. ನಿಜವಾದ ಬಂಧುತ್ವ, ಪ್ರೇಮ ಪ್ರೀತಿ ವಿಶ್ವಾಸಗಳ ತಳಹದಿಯಲ್ಲಿ ನಿರ್ಮಿತವಾಗಬೇಕಲ್ಲದೆ, ಹಣದಾಶೆಯಿಂದ ಎಂದಿಗೂ ಪ್ರೇರಿತವಾಗಬಾರದೆಂದು ಜನರಿಗೆ ತಿಳಿಯಪಡಿಸುವೆ. ನನಗಾಗಿ ತಮ್ಮವರೆಲ್ಲರನ್ನೂ ತೊರೆದು, ನನ್ನೊಂದಿಗೆ ಇರುತ್ತಿರುವ ಇಂದುಮತಿಯ ಸ್ನೇಹ, ಬಂಧುಬಳಗನವರಿಗಿಂತಲೂ ಹೆಚ್ಚಿನದೆಂದು ಕುರುಡು ಸಮಾಜಕ್ಕೆ ತೋರಿಸಿಕೊಡುವೆ.

"ಜಾತಿಯಲ್ಲಿ ಸೂಳೆಯಾದರೂ ಇಂದುಮತಿಗೆ ಆತ್ಮವಿಲ್ಲವೆ? ಅವಳಿಗೆ ಹೃದಯವಿಲ್ಲವೆ? ಮದುವೆಯಾಗಿ, ಮಕ್ಕಳನ್ನು ಹೆತ್ತು ಮನೆತನ ಮುಂದುವರಿಸಿ ತಾನೂ ಮನೆತನದ ಹೆಣ್ಣುಗಳಂತೆ ಜೀವಿಸಬೇಕೆಂಬ ಆಶೆ ಅವಳಿಗಿರುವುದು ತಪ್ಪೆ? ಕೆಸರೊಳಗಿನ ಕಮಲ ಪೂಜೆಗೆ ಅರ್ಹವಾಗುವುದಿಲ್ಲವೆ? ಅದರಂತೆ ನನ್ನ ಇಂದುಮತಿಯೂ ಕೆಸರೊಳಗಿನ ಕಮಲವೇಕಾಗಬಾರದು? ನನ್ನ ಹಣದಿಂದ ಇಂದುಮತಿಯನ್ನು ನಾಗರಿಕ ಹೆಣ್ಣನ್ನಾಗಿ ಮಾಡಲು ಪ್ರಯತ್ನಿಸುವೆನು. ಜಾಣೆಯಾದ ಅವಳು ನನ್ನೊಂದಿಗೆ ಸಹಕರಿಸಿ ಹೊಸ ಜನಾಂಗವನ್ನೇ ನಿರ್ಮಿಸಲು ಸಹಾಯಕ

ಳಾಗಬಹುದು. ಅವಳೊಬ್ಬ ಆದರ್ಶ ಮನೆತನದ ಹೆಣ್ಣಾಗುವಂತೆ ಮಾಡುವ ಕಾರ್ಯವು ನನ್ನದಾಗಿದೆ. ಅವಳ ತ್ಯಾಗಕ್ಕೆ ನಾನು ನೀಡುವ ಈ ಸಹಕಾರ ಉತ್ತಮ, ಮತ್ತು ಸಮಯೋಚಿತವೆಂದು ನಾನು ನಿರ್ಧರಿಸಿದ್ದೇನೆ. ಇದೇ ನನ್ನ ಪ್ರತಿಜ್ಞೆ.

"ಸಮಾಜದಲ್ಲಿ ಇಂತಹ ಕುಂದುಕೊರತೆಗಳೆಷ್ಟೋ ಇರುವವು. ದೇವದಾಸೀ ಪದ್ಧತಿಯ ನಿರ್ಮೂಲನದಿಂದ ದೇಶದ ಉನ್ನತಿ ಹೆಚ್ಚುವುದೆಂದು ನನ್ನ ಧೃಢ ಸಂಕಲ್ಪ. ಈ ಕಾರ್ಯವನ್ನು ಮುಂದೆ ಯುವಕರು ಕೈಕೊಂಡು ಯಶಸ್ವಿಗಳಾಗಲೆಂದು ನಾನು ಬಯಸುತ್ತೇನೆ."

"ನನ್ನ ಈ ಮೇಲಿನ ಪ್ರತಿಜ್ಞೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಿರುವುದೆಂಬುದು ಲೋಕವೇ ತಿಳಿದುಕೊಳ್ಳುವುದು."

# ಸಭ್ಯತೆ

"ಯಪ್ಪಾ ಕಾಲಿಲ್ಲ ಸ್ವಾಮಿ! ಬಡವಾ ಸ್ವಾಮಿ!"

ನಾನೊಂದು ಹೆಜ್ಜೆ ಮುಂದೆ ಹಾಕಿದೆ. ಆದರೆ ಅವನು ನನ್ನನ್ನು ಹಿಂಬಾಲಿಸಿದ. ಕೊಂಕುಳಲ್ಲಿ ಸಹಾಯಕ್ಕೆಂದು ಸಿಕ್ಕಿಸಿಕೊಂಡ ಕೈಕೋಲು ಗಳಿಂದ ಜಿಂಕೆಯಂತೆ ಹಾರಿಬಂದು ನನ್ನ ಹತ್ತಿರ ನಿಂತ. ಮತ್ತಿಷ್ಟು ದೈನ್ಯತೆಯನ್ನು ತೋರಿಸುತ್ತ "ಕುಂಟ ಸ್ವಾಮಿ. ಒಂದು ಬಿಡಿ ಕಾಸು ಕೊಡೀಪ್ಪ! ನಿಮಗೆ ಪುಣ್ಯ ಬರುತ್ತೆ" ಎಂದು ದೈನ್ಯದಿಂದ ಬೇಡಿದ.

ಹಾಳು ಬಸ್ಸು ಇನ್ನೂ ಬರಲಿಲ್ಲ ಎಂದು ಗೊಣಗಿಕೊಳ್ಳುತ್ತ ನಾನು ಅಲ್ಲೇ ನಿಂತೆ. ಆದರೆ ಈ ತಿರುಕರ ಪಿಡುಗು ತಪ್ಪಲಿಲ್ಲ. ಎಲ್ಲ ಭಾಗಗಳಿಗೂ ಹೋಗುವ 'ಬಸ್ಸು'ಗಳು ಬಂದರೂ ನಾನು ಹೋಗಬೇಕಾದ ಮಾಂಬಲಂ ಬಸ್ಸು ಬಾರದಿದ್ದುದು ನನಗೆ ಹೆಚ್ಚಿನ ಬೇಸರವನ್ನುಂಟುಮಾಡಿತು.

"ಅಪ್ಪಾ, ಕುರುಡ, ದರಿದ್ರ........" ಈ ಕೂಗಿನಲ್ಲಿ ಆರ್ತನಾದವಿತ್ತು. ಮೀಟಿದ ಕರುಳಿನ ತಂತಿಯಿಂದ ಬರುವಂತಿದ್ದ ಈ ಬೇಡಿಕೆ ನನ್ನ ಹೃದಯವನ್ನು ವೇದಿಸಿತು.

"ಕೂಸಿಗೆ ಹಾಲಿಲ್ಲ ಸ್ವಾಮಿ! ಒಂದು ಕಾಸು ........ ! "

ಬೇಸರದಿಂದ ಮೋಟಾರು ನಿಲ್ದಾಣದ ಒಂದು ಮೂಲೆಗೆ ಒರಗಿ ನಿಂತೆ. ಕೂಡಲೇ ಓರ್ವ ಕುಷ್ಠ ರೋಗದಿಂದ ನರಳುವ ಭಿಕ್ಷುಕನು ಬಂದು ನನ್ನ ಪಕ್ಕದಲ್ಲಿ ನಿಂತಿದ್ದ ನರ್ಸುಗಳನ್ನುದ್ದೇಶಿಸಿ 'ಲೆಪರ್ ಮ್ಯಾಡಂ' ಎಂದು ಭಿಕ್ಷೆ ಬೇಡಿದ. ಅವನ ಮೊಂಡ ಕೈಗಳು ನೋಡುವುದಕ್ಕೆ ಬಹು ಅಸಹ್ಯವಾಗಿದ್ದವು. ಮೊಟಕಾದ ಕೈಗಳಿಂದ ಹೊರಬರುವ ಕೀವಿನ ದೃಶ್ಯವನ್ನು ಕಂಡು ನನ್ನ ಮೈ ಝುಮ್ಮೆಂದಿತು. ಆ ನೋಟ ನೋಡಲಾರದೇ ಸುಮ್ಮನೆ ಕಣ್ಣುಮುಚ್ಚಿಕೊಂಡು ನಿಂತೆ. ಕುಷ್ಠ ರೋಗಿಗಳೆಂದರೆ ಕ್ರೈಸ್ತರಿಗೆ ಬಹಳ ಕನಿಕರವಂತೆ. ಅವರ ದೇವನು ಇಂತಹ ರೋಗಿಗಳನ್ನು ಆದರಿಸುವುದೇ ಮಾನವನ ಮುಖ್ಯ

ಕರ್ತವ್ಯವೆಂದು ಹೇಳಿರುವನು. ಈ ಯೋಚನೆ ನನ್ನಮನಸ್ಸಿನಲ್ಲಿ ಬರುವುದಕ್ಕೆ ಮುನ್ನವೇ "ಎನ್ನಾಂಗೋ ಒರುದಮ್ಮಿಡಿ ಕುಡುಂಗೋ" (ಸ್ವಾಮೀ ಒಂದು ದಮ್ಮಿಡಿ ಕೊಡಿ) ಎಂದು ಕೇಳುತ್ತ ನನ್ನ ಮುಂದೆ ಬಂದು ನಿಂತನು. ಇಷ್ಟರಲ್ಲೇ ಮಾಂಬಳದ ಬಸ್ಸು ಬರುವುದನ್ನು ಕಂಡು ಅದು ಬರುವ ಕಡೆ ಓಡಿದೆ. ಆದರೆ ಹಿಂದಿನ ನಿಲ್ದಾಣದಿಂದಲೇ ಜನರಿಂದ ತುಂಬಿ ಬಂದ ಆ ಬಸ್ಸು ನಿಲ್ಲದೇ ಮುಂದರಿಯಿತು. ಬಹು ಬೇಸರದಿಂದ ಜನರಲ್ ಆಸ್ಪತ್ರಿಯ ಗೇಟಿನ ಹತ್ತಿರವೇ ನಿಂತುಬಿಟ್ಟೆ. ಇಲ್ಲಿಯು ಗಡಿಬಿಡಿಯನ್ನು ಕಂಡು ನನಗೆ ತಲೆಬೇನೆ ಆರಂಭವಾಯಿತು. ತನುಗೆ ಬೇಕಾದ ಬಸ್ಸುಗಳನ್ನು ಹತ್ತಿ ಹೋಗಲು ಹವಣಿಸುತ್ತಿರುವ ಜನರ ಪ್ರಯತ್ನಗಳೆಲ್ಲವೂ ನಿಷ್ಫಲವಾಗುವುದನ್ನು ಕಂಡು ನಾನು ಮರುಗಿದೆ. ಅನೇಕ ಮಕ್ಕಳ ತಾಯಿಗಳೂ, ಮುದುಕರು, ಚಿಕ್ಕ ಹುಡುಗರು ಪಡುವ ತೊಂದರೆಗಳನ್ನು ಕಂಡು ಇವರ ನಿವಾರಣೋಪಾಯವೆಲ್ಲಿದೆಯೆಂಬ ಯೋಚನೆಯಲ್ಲಿ ನಿಂತುಬಿಟ್ಟೆ.

"ಸ್ವಾಮಿ ನೀವು ದಿನವೂ ಬೀಡಾಕ್ಕೆಂದು ವೆಚ್ಚಮಾಡುವ ಒಂದು ರಾಗಿದುಡ್ಡು ದಯಮಾಡಿಸಿದರೆ ........" ಎಂದು ಮತ್ತೆ ಆ ಹೆಳವನು ನನ್ನನ್ನು ಸಮೀಪಿಸಿ ನನಗೆ ತಿಳಿದ ಭಾಷೆಯಲ್ಲೇ ಕೇಳಿದ.

"ಇರಲಿ ನಡಿಯೋ ದೂರಾ".

"ಅಲ್ಲಾ ಸ್ವಾಮೀ ನಮ್ಮ ಭಾಷೆ ಮಾತನಾಡುವ, ನಮ್ಮವರಾದ ನೀವೇ ಹೀಗೆ ನಿಮ್ಮವರಿಗೆ ಸಹಾಯ ಮಾಡದೇ ಹೋದರೆ ಮತ್ಯಾರು ನನಗೆ ನೆರವಾಗುವವರು"? ಎಂದು ಅವನ ಸೂಚನೆಯಲ್ಲಿ ಅಡಗಿದ್ದ ಆ ನಿಶ್ಚಯದ ನುಡಿ ನನ್ನನ್ನು ಎಚ್ಚರಿಸಿತು. ಅವನ ಮಾತಿನ ಸರಣಿ, ಆ ಸ್ವರ ಎಲ್ಲಿಯೋ ಕೇಳಿದಂತೆನಿಸಿತು. ಅವನನ್ನೇ ದಿಟ್ಟಿಸಿ ನೋಡುತ್ತ ನೆನಪು ಮಾಡಿಕೊಂಡೆ; ಯೋಚಿಸಿದೆ; ಅವನ ಹತ್ತಿರದ ಪರಿಚಯ ನನಗಿರಲಾರದೆಂದು ಸುಮ್ಮನಾದೆ. ನನ್ನ ಹತ್ತಿರವೇ ಇನ್ನೂ ನಿಂತಿದ್ದ ಅವನ ಮುಖವನ್ನು ಮತ್ತೆ ನೋಡಿದೆ; ಸ್ವಲ್ಪ ಸ್ವಲ್ಪ ನೆನಪು ಬರತೊಡಗಿತು. ಇವನು ಗೋಪಾಲಸ್ವಾಮಿಯವರ ಮನೆಯ ಆಳಲ್ಲವೆ ಎಂಬ ಯೋಚನೆ ಹೊಳೆಯಿತು.

"ಅಲ್ಲೋ, ನಿನ್ನ ಹೆಸರು ರಾಮು ಅಲ್ಲವೇನೋ? ಎಂದು ಅವನನ್ನು ಕೇಳಿದೆ. "ಅಹುದು" ಎಂದು ಅವನು ಒಪ್ಪಿಕೊಂಡ.

ಮದರಾಸು ನಗರದಲ್ಲಿ 'ರಾಮಾ' ಎಂಬ ಹೆಸರಿನ ಆಳು ಮನುಷ್ಯರಿರುವುದು ಸರ್ವಸಾಮಾನ್ಯವೆಂಬ ವಿಷಯ ನನಗೆ ತಿಳಿದಿತ್ತು. "ನೀನು ಗೋಪಾಲ ಸ್ವಾಮಿಯವರ ಮನೆಯಲ್ಲಿ ಕೆಲಸಕ್ಕಿರಲಿಲ್ಲವೆ?" ಎಂದು ಕೇಳಿದೆ.

"ನಿಜಾ ಸ್ವಾಮಿ, ನಿಜ" ಎಂದು ಹೇಳುವಾಗ ನನ್ನ ಗುರುತು ಅವನಿಗೂ ಪೂರ್ಣ ಆಯಿತೆನ್ನಬಹುದು.

ಗೋಪಾಲಸ್ವಾಮಿಯೂ, ನಾನು ಮೂರು ವರುಷಗಳವರೆಗೂ ಒಂದು ದೊಡ್ಡ ಮನೆಯಲ್ಲಿ ಬಾಡಿಗೆಗಿದ್ದೆವು. ಆ ಮೇಲೆ ನಮ್ಮ ಮನೆಯ ಜನರು ಹೆಚ್ಚಿದುದರಿಂದ ನಾನು ಬೇರೆ ಸ್ಥಳಕ್ಕೆ ಹೋಗಬೇಕಾಯಿತು. ದೂರ ಸರಿದಮೇಲೆ ಮತ್ತೆ ನಾವು ಹೆಚ್ಚು ಸಲ ಸಂದರ್ಶಿಸಲೇ ಇಲ್ಲ. ಅವರ ವಿಷಯ ಪೂರ್ಣ ಮರೆತು ಬಿಟ್ಟೆವೆಂದರೂ ಸರಿಯೆ ದೊಡ್ಡ ನಗರಗಳಲ್ಲಿ ಹೀಗಾಗುವುದು ಸಹಜ. ಮೂರು ವರುಷಗಳ ನಮ್ಮ ಸಹಜೀವನ ಬಹು ನಿಕಟವಾಗಿತ್ತೆನ್ನಬಹುದು, ಆದರೆ ನಮ್ಮ ಮನೆಗಳು ದೂರವಾದೊಡನೆಯೇ ನಮ್ಮ ಹೃದಯಗಳೂ ದೂರಾದವು. ಆ ಮಾತು ಹಾಗಿರಲಿ; ಈ ಭಿಕ್ಷುಕನನ್ನು ನೋಡಿ "ನಿನಗೇಕೆ ಬಂತೋ ಈ ಕಷ್ಟ" ಎಂದು ನಾನು ಕೇಳಿದೆ.

"ಕಷ್ಟಾ ಅಲ್ಲ ಸ್ವಾಮೀ..........."

"ದುರದೃಷ್ಟವೇ?"

"ಅದು ಅಲ್ಲ! ಅದೃಷ್ಟಾಂತ ಹೇಳಿ ಮಹಾಸ್ವಾಮಿ!" ಎಂದು ಅವನು ಸಮಾಧಾನದಿಂದ ನುಡಿದುದು ಕಂಡು ಬೆರಗಾದೆ.

"ಅಲ್ಲೋ ಹೆಳವನಾಗುವುದು ಅದೃಷ್ಟವೇ?"

"ಅಹುದು ಸ್ವಾಮೀ, ಅಹುದು. ದೊಡ್ಡ ಅದೃಷ್ಟ. ಅನೇಕ ಕಷ್ಟ ಪರಂಪರೆಗಳನ್ನನುಭವಿಸಿದ ಮೇಲೆ ನಾನು ಕುಂಟನಾದುದು ಅದೃಷ್ಟವೆಂದೇ ತಿಳಿಯಬೇಕಾಗಿದೆ" ಎಂದು ನಸುನಗುವಿನಿಂದ ಹೇಳುವ ಇವನ ಮಾತಿನಲ್ಲಿ ಸಮಾಧಾನವಿತ್ತೆಂದು ಕಂಡುಬಂದುದಲ್ಲದೆ, ದೇವರ ದಯೆಯೂ

ಇತ್ತೆಂಬ ಸೂಚನೆ ಅವನ ಮುಖದಲ್ಲಿ ಕಂಡುಬರುತ್ತಿತ್ತು. ಇವನ ಈ ವರ್ತನೆಗೆ ನಾನು ಬೆರಗಾದೆ. ಕಾಲು ಮುರಿದು ಹೆಳವನಾಗುವದು ಅಸ್ಪಷ್ಟ ವೆಂದು ತಿಳಿದ ಇವನ ಚರಿತ್ರೆ ಪೂರ್ಣ ತಿಳಿಯಲು ನನಗೆ ಕುತೂಹಲ ವೆನಿಸಿತು.

ಅವನು ತನ್ನ ಕತೆಯನ್ನು ಹೇಳಲಾರಂಭಿಸಿದ.

"ನೀವು ಟ್ರಿಪ್ಲಿಕೇನ ಬಿಟ್ಟು ಮಾಂಬಳಕ್ಕೆ ಬೇರೆ ಮನೆ ಹುಡುಕಿ ಕೊಂಡು ಹೋದ ನಂತರ ಒಂದೆರಡು ತಿಂಗಳುಗಳಾದಮೇಲೆ ಒಂದು ಸಂಜೆ ನಮ್ಮ ಯಜಮಾನರ ಸಣ್ಣ ಮಗು ಕೃಷ್ಣಮೂರ್ತಿಯನ್ನು ಬೀಚಿಗೆ ಕರೆದುಕೊಂಡು ಹೋಗಿದ್ದೆ. ಅಂದು ಆದಿತ್ಯವಾರ; ಜನಸಂದಣಿ ಬಹಳ ಹೆಚ್ಚು. ಹುಡುಗನು ಅಂದೇಕೋ ಬೀಚಿನಲ್ಲಿ ಆಡುವುದನ್ನು ಬಿಟ್ಟು ಮನೆಗೆ ಬರಲೊಪ್ಪಲಿಲ್ಲ. ಅಂದಿನ ಹವೆ ಬಹು ಆನಂದವನ್ನುಂಟುಮಾಡುತ್ತಿದ್ದುದ ದರಿಂದ ಅವನು ನೀರಿನ ದಡವನ್ನು ಬಿಟ್ಟು ಬರಬೇಕಾದರೆ ರಾತ್ರಿ ಎಂಟು ಹೊಡೆಯಿತು. ಅಂದು ಅವನು ಉಸುಕಿನಲ್ಲಿ ನನ್ನೊಂದಿಗೆ ಆಡಿದ ವಿವಿಧ ಆಟಗಳ ನೆನಪು ನನಗೆ ಎಲ್ಲಿಯೂ ಇಲ್ಲದ ಉಲ್ಲಾಸವನ್ನು ಈಗಲೂ ತಂದು ಕೊಡುತ್ತಿದೆ."

ಹೀಗವನು ತನ್ನ ಕತೆಯನ್ನು ಹೇಳುವಾಗ ಅವನ ಮುಖ ಹರುಷ ದಿಂದ ಅರಳಿಹೋಗಿತ್ತು. ಅಂದು ಕೃಷ್ಣಮೂರ್ತಿಯ ಸಂಗಡ ಅವನು ಬೀಚಿನಲ್ಲಿ ಆಡುತ್ತಿದ್ದಾಗ ರಾಮನ ವಯಸ್ಸು ಕೇವಲ ಹದಿನೆಂಟು ಹತ್ತೊಂಭತ್ತಿರಬಹುದು.

ಆ ಹೊತ್ತಿಗೆ ನಾವಿದ್ದ ಸ್ಥಳಕ್ಕೆ ಎಷ್ಟೋ ಬಸ್ಸುಗಳು ಬಂದವು. ಜನರ ಗಲಭೆ ಹೆಚ್ಚಿತು. ಮೋಟಾರು ಹತ್ತುವ ಗಡಿಬಿಡಿಯಲ್ಲಿ ಜನರು ಸಣ್ಣಪುಟ್ಟ ಸಾಮಾನುಗಳನ್ನು ಕಳೆದುಕೊಂಡು ಒದರುವುದನ್ನೂ ನೋಡಿದೆ.

ಮಾರನೆಯ ದಿನ ನಾನು ಮನೆಯಲ್ಲಿ ಕೆಲಸದಲ್ಲಿರುವಾಗ "ಏ ರಾಮಾ" ಎಂಬ ರಾಮನ ಮಾತುಗಳು ನನ್ನನ್ನು ಎಚ್ಚರಿಸಿದವು.

"ಹೂಂ ಸಾಗಲಿ ನಿನ್ನ ಕತೆ".

"ಬಂದೆ ಸ್ವಾಮಿ" ಯೆಂದು ನನ್ನ ಯಜಮಾನರು ಕರೆದ ಕೂಡಲೇ

ಅವರ ಮುಂದೆ ಹೋಗಿ ನಿಂತೆ. 'ಹುಡುಗನ ಉಂಗರವೆಲ್ಲಿ?' ಎಂದು ಅವರು ಕೇಳಿದರು. ನನಗೆ ತಿಳಿಯದೆಂದು ನಿಜ ಹೇಳಿದೆ. ನೆನ್ನೆ ಉಸುಗಿನಲ್ಲಿ ಆಡುತ್ತಲಿರುವಾಗ ಬಿದ್ದು ಹೋಗಿರಬೇಕು. ನನಗೆ ಅದರ ವಿಷಯ ತಿಳಿಯದು ಮಹಾಸ್ವಾಮಿಯೆಂದು ಹೇಳಿದೆ. ಅವರು ನನ್ನ ಮಾತು ನಂಬಲಿಲ್ಲ. ಗೋಪಾಲಸ್ವಾಮಿ ಅವರ ಮನೆಯವರಾದ ಪಾರ್ವತಮ್ಮನವರನ್ನು ನನ್ನ ಹಂಪೆ ತಾಯಿಯೆಂದು ಭಾವಿಸಿದ್ದೆ. ನನ್ನ ಎಳೆ ವಯಸ್ಸಿನಿಂದ ಬೆಳೆಸಿದ ಇವರಿಗೆ ದ್ರೋಹ ಬಯಸುವುದು ನನಗೆ ಆಗದಮಾತು. ಅವರ ಈ ಅನಿವಾರ್ಯ ಅನುಮಾನಕ್ಕೆ ನನಗೆ ದುಃಖವೆನಿಸಿತು; ಅತ್ತುಬಿಟ್ಟೆ. "ಅಲ್ಲಾ ಸ್ವಾಮಿ, ನನ್ನ ಕೈಯಲ್ಲಿ ಬೆಳೆಸಿದ ಮಗುವಿನ ಒಡವೆಯನ್ನು ಕದಿಯುವ ಚಂಡಾಲ ಸ್ವಭಾವ ನನ್ನದಲ್ಲ. ಕಳ್ಳತನ, ಸುಳ್ಳತನ ನಮ್ಮ ಮನೆತನಕ್ಕೆ ಹೊಸತೆಂದು ಎಷ್ಟು ಹೇಳಿಕೊಂಡರೂ ಅವರು ನನ್ನಲ್ಲಿ ವಿಶ್ವಾಸವಿಡಲಿಲ್ಲ" ಎಂದು ಹೇಳುವಾಗ ಅವನ ಕಣ್ಣಲ್ಲಿ ನೀರು ಬಂತು. ನಿಜವಾಗಿಯೂ ರಾಮು ಪ್ರಾಮಾಣಿಕನಾದ ಮನುಷ್ಯನೆಂದು ನನಗೆ ಕಂಡುಬಂತು. ಅವನ ನಿರ್ಮಲ ಮನಸ್ಸೆಂತಹದೆಂಬುದು ನನಗೆ ವಿದಿತವಾಯಿತು. ಇವನ ಅವಸ್ಥೆ ಈಗಲೇ ಹೀಗಿರುವಾಗ ಇದೆಲ್ಲವೂ ನಡೆದು ಹೋದ ಅಂದು ಯಾವ ರೀತಿಯಲ್ಲಿ ಮರುಗಿರಬಹುದೆಂದು ಯೋಚಿಸತೊಡಗಿದೆ.

ಅವನು ಮತ್ತೆ ಕಣ್ಣನ್ನೊರಿಸಿಕೊಳ್ಳುತ್ತ "ಮುಂದೆ ಅವರು ನನ್ನನ್ನು ನಾನಾ ಬಗೆಯ ಭಯದ ಮಾತುಗಳಿಂದ ಬೆದರಿಸಿ, ಪೋಲೀಸರ ಕೈಗೆ ಕೊಡುವೆವೆಂದು ಸೂಚಿಸಿದಾಗ ಹುಡುಗನಾದ ಕೃಷ್ಣಮೂರ್ತಿಯು ನನ್ನ ಹತ್ತಿರ ಓಡಿಬಂದು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದ." ಈ ಮಾತುಗಳನ್ನು ಹೇಳುವಾಗ ರಾಮೂನ ಮುಖದ ಮೇಲೆ ಅಂದು ಮೂಡಿದ ಭಾವಗಳನ್ನು ನಾನು ಮರೆಯುವಂತಿರಲಿಲ್ಲ. ಅವನ ಮುಖದ ಮೇಲೆ ತಾಂಡವವಾಡಿದ ವಿಶ್ವಾಸ, ಕೃತಜ್ಞತೆಗಳ ಜತೆಗೆ ಆ ದಂಪತಿಗಳ ಕೃತಘ್ನತೆ ಎಲ್ಲವೂ ನೆನಪಾದವು. ಈ ಪರಸ್ಪರ ವಿರುದ್ಧ ಭಾವಗಳ ಪರಿಣಾಮವಾಗಿ ನನ್ನೆದುರು ನಿಂತ ರಾಮನ ಮುಖದಲ್ಲಾದ ತೀವ್ರ ಸಂಘರ್ಷಣೆ ಎಂತಹದೆಂಬುದನ್ನು ವರ್ಣಿಸಲು ನನಗೆ ಅಸಾಧ್ಯವೇ ಸರಿ.

"ಕೊನೆಗೆ ನನ್ನನ್ನು ಮನೆಯಿಂದ ಹೊರದೂಡಬೇಕೆಂದು ಅವರು

ನಿಶ್ಚಯಿಸಿದರು. ನಾನು ಹೊರಬೀಳುವಾಗ ನನ್ನ ಕೈಯಲ್ಲಿ ಬೆಳೆದ ಮೂರ್ತಿ ಅಳತೊಡಗಿದ. ಪಾರ್ವತಮ್ಮ ಅವನನ್ನು ತಡೆದು ಬಲವಂತದಿಂದ ಒಳಗೆ ಸೆಳೆದುಕೊಂಡು ಹೋದ ದೃಶ್ಯ ನನ್ನನ್ನು ಅತಿಯಾಗಿ ನೋಯಿಸಿತು. ಆ ಒಂದು ದಿನ ಹೇಗೋ ಸಮಯ ಕಳೆದು ಮಾರನೆಯ ದಿನ ಮುಂಜಾನೆ ಅವರ ಮನೆಯ ಮುಂದೆ ಸುಳಿದೆ. ನನ್ನನ್ನು ಕಂಡು ಮೂರ್ತಿ 'ರಾಮೂ' ಎಂದು ಓಡಿ ಬಂದು ಅಪ್ಪಿದ. "ಇನ್ನೂ ಇರುವೆಯಾ? ಇನ್ನೇನಾದರೂ ಕಳವು ಮಾಡಬೇಕೆಂದು ಹೊಂಚುಹಾಕುತ್ತಿರುವಿಯಾ? ಬಾರೋ ಮೂರ್ತಿ ನಿನಗೆ ನಾಚಿಕೆ ಇಲ್ಲವೆ?" ಎಂದು ನನ್ನ ತೆಕ್ಕೆಯಲ್ಲಿದ್ದ ಮೂರ್ತಿಯನ್ನು ಸೆಳೆದುಕೊಂಡಾಗ ಗೋಪಾಲಸ್ವಾಮಿಯು ಬಂದು "ಇನ್ನೊಂದು ಸಲ ನಮ್ಮ ಮನೆ ಹತ್ತಿರ ಬಂದೆಯೆಂದರೆ ನಿನ್ನ ಗತಿ ಒಳಿತಾಗಲಿಕ್ಕಿಲ್ಲ" ಎಂದು ನನ್ನನ್ನು ಬೆದರಿಸಿದನು. ಐದು ವರ್ಷ ಎತ್ತಿನಂತೆ ದುಡಿದ ಇವರ ಮನೆಯ ಸೇವೆಗೆ ಇದೇ ಪ್ರತಿಫಲವೆಂದು ನೆನೆದು ಇಲ್ಲದ ಮನಸ್ಸಿನಿಂದ ಅಲ್ಲಿಂದ ದೂರ ಸರಿದೆ.

ಈ ದುಃಖಮಯ ಕತೆಯನ್ನು ಹೇಳುವಾಗ ಹೃದಯ ಭಾರದಿಂದ ಅವನಿಗೆ ದಣುವಾದುದರಿಂದ ಕೊಂಚ ಹೊತ್ತು ಸುಮ್ಮನಾದ.

"ಮೂರು ದಿನಗಳ ವರೆಗೆ ಅವರ ಮನೆ ಸುತ್ತಲೂ ಅಲೆದಾಡಿ ನಾಲ್ಕನೆಯ ದಿನ ಬೇರೆ ಕೆಲಸದಲ್ಲಿ ಸೇರಿಕೊಂಡೆ. ಟ್ರಿಪ್ಲಿಕೇನದಲ್ಲಿ ಸತ್ಯನಾಥನ್ ಎಂಬವರಿಗೆ ಆಳುಮನುಷ್ಯ ಬೇಕೆಂದು ತಿಳಿದಿದ್ದುದರಿಂದ ಅವರಲ್ಲಿ ಕೆಲಸಕ್ಕೆ ನಿಂತೆ. ದಿನವೆಲ್ಲವೂ ಅವರಲ್ಲಿ ದುಡಿದು ರಿಕ್ಷಾ ಎಳೆಯುವುದು ನನ್ನ ಕೆಲಸವಾಗಿತ್ತು. ಈ ಕೆಲಸಕ್ಕೆ ಎರಡೂ ಹೊತ್ತು ಆಹಾರ, ಮೇಲೆ ತಿಂಗಳಿಗೆ ಐದು ರೂಪಾಯಿಯ ಸಂಬಳ; ಈ ಕರಾರುಗಳಿಗೆ ಒಪ್ಪಿಕೊಂಡೆ. ಅವರಲ್ಲಿ ನಾನು ಕೆಲಸಕ್ಕೆ ನಿಂತುದು ಒಂದು ವರುಷ ಮಾತ್ರ. ಎರಡೂ ಹೊತ್ತು ಸತ್ಯನಾಥನ್ ಇವರನ್ನು ಹೈಕೋರ್ಟಿನ ವರೆಗೆ ರಿಕ್ಷಾದಲ್ಲಿ ಕೂಡ್ರಿಸಿ ಎಳೆದುಕೊಂಡು ಹೋಗುವುದು, ಹುಡುಗರನ್ನು ಶಾಲೆಗೆ ಬಿಟ್ಟು ಮತ್ತೆ ಕರೆದುಕೊಂಡು ಬರುವುದರಲ್ಲಿ ಮುಂಜಾನೆ ಒಂಭತ್ತರಿಂದ ಸಂಜೆ ಆರರ ವರೆಗೆ ಸರಿಹೋಗುತ್ತಿತ್ತು. ವಿರಾಮವೇ ಇರಲಿಲ್ಲ. ಒಂದೊಂದು ದಿನ ಸಿನೇಮಾಕ್ಕೆ ದಂಪತಿಗಳಿಬ್ಬರೂ ಹೋದರೆಂದರೆ ರಾತ್ರಿ ಹನ್ನೆರಡರ ವರೆಗೆ

ಈ ರಿಕ್ಷಾ ಸೇವೆ ತಪ್ಪುತ್ತಿರಲಿಲ್ಲ. ಗೋಪಾಲಸ್ವಾಮಿಯವರ ಹತ್ತಿರ ಮಾಡಿದ ಐದುವರುಷದ ಚಾಕರಿ ಬಹು ಲೇಸೆನಿಸಿತು. ಹನ್ನೆರಡು ತಿಂಗಳು ಗಳಲ್ಲಿಯೇ ನಾನು ಬಡವಾಗಿ ನನ್ನ ಶರೀರವು ಕಟ್ಟಿಗೆಯಂತೆ ಒಣಗಿ ಹೋಯಿತು. ನನ್ನವಸ್ಥೆ ಟಾಂಗಾ ಕುದುರೆಗಿಂತ ನಿಕೃಷ್ಟವೆನಿಸಿತು. ಎಷ್ಟು ದುಡಿದರೂ ಅಯ್ಯರಿನಿಂದ 'ಸೋಂಬೇರಿ' ಎಂಬ ಬಿರುದುಗಳುತ ಪ್ಪುತ್ತಿರಲಿಲ್ಲ. 'ಕೋತಿಮುಂಡೇದು' ಎಂದು ಅಯ್ಯರು ಹೆಂಡತಿ ನನಗೆ ನಾಮಾಂಕಿತ ಮಾಡಿದ್ದರು."

ವಿಶಾಲವಾದ ಹಣೆ, ತಿದ್ದಿದ ಮೂಗು, ಸಣ್ಣ ಬಾಯಿ, ಅರಳಿದ ಕಣ್ಣು, ಹವಳದಂತೆ ನಿರ್ಮಿತವಾದ ಹಲ್ಲುಗಳು ಮತ್ತು ಚಂದವಾದ ಮುಖ ಉಳ್ಳ ಇವನಿಗೆ 'ಕೋತಿಮುಂಡೇದು' ಎಂದು ಕರೆಯಲು ಆ ದಂಪತಿಗಳಿಗೆ ಹೇಗೆ ಮನಸ್ಸು ಬಂತೋ?

"ಅವರ ಮನೆಯಲ್ಲಿ ಎಂಟು ತಿಂಗಳು ದುಡಿಯುವುಷ್ಟರಲ್ಲಿ ನನಗೆ ಎದೆ ಬೇನೆ ತಲೆದೋರಿತು. ಒಂದು ದಿನ ಮುಂಜಾನೆ ಒಂಭತ್ತಕ್ಕೆ ಹುಡುಗ ರನ್ನು ಹೇಗೋ ತಳ್ಳಿಕೊಂಡು ಹೋಗಿ ಸಾಲೆಗೆ ಬಿಟ್ಟು ಬಂದು ಮೈ ದಣು ವಾಗಿರಲು ಚಾವಡಿಯಲ್ಲಿ ಮಲಗಿದೆ. ಜ್ವರವೂ ಹೆಚ್ಚಾಗಿ ಬಂದಿತ್ತು. ಹತ್ತಕ್ಕೆ ಸರಿಯಾಗಿ ಅಯ್ಯರ್ ರಿಕ್ಷಾದಲ್ಲಿ ಕುಳಿತುಕೊಂಡು 'ರಾಮಾ' ಎಂದು ಕೂಗಿದರು. ಅವರಲ್ಲಿ ಹೋಗಿ ನನಗೆ ಮೈ ಸ್ವಸ್ಥವಿಲ್ಲೆಂದು ಹೇಳಿ ಕೊಂಡೆ. 'ಸೋಂಬೇರಿ' ಎಂದು ರೇಗಿ ಸಿಟ್ಟಿಗೆದ್ದು ನನ್ನನ್ನು ಬೈದರು. ಎಲ್ಲವೂ ಸೋಗೆಂದು ಜರಿದರು. ನಿರ್ವಾಹವಿಲ್ಲದೆ ಅಂತಹ ಸ್ಥಿತಿಯಲ್ಲೇ ರಿಕ್ಷಾ ಎಳೆದುಕೊಂಡು ಹೊರಟೆ. ದಾರಿ ಹೇಗೆ ಸಾಗಿತ್ತೋ ನನಗೆ ತಿಳಿ ಯದು. ಪೂರ್ಣ ಎಚ್ಚರವಿರಲಿಲ್ಲ. ಹಲ್ಲು ಬಿಗಿಹಿಡಿದು ಮುಂದೆ ಸಾಗು ತ್ತಿದ್ದೆ. ಕೊಂಚ ದೂರ ಬೀಚಿನ ಸಿಮೆಂಟು ರಸ್ತೆಯಲ್ಲಿ ಹೋಗುತ್ತಿರುವಾಗ ಮುಂದಿನಿಂದೊಂದು ಬಸ್ಸು ಹಿಂದಿನಿಂದೊಂದು ಕಾರು ಏಕಕಾಲಕ್ಕೆ ಬಂದವು. ನನ್ನ ಕಣ್ಣು ದೃಷ್ಟಿ ಮಂದವಾಯಿತು; ಕೈಕಾಲುಗಳು ಅದುರಿ ದವು. ಎದೆ ಧಸ್ಸೆಂದಿತು. ಮುಂದೆ ಹಾದು ಬರುವ ಬಸ್ಸನ್ನು ತಪ್ಪಿಸುವ ಯೋಚನೆಯಲ್ಲಿ ಕೊಂಚ ಹಿಂದೆ ಸರಿಯುವಾಗ ಕಾರಿನ ಚಕ್ರದಡಿಯಲ್ಲಿ ಬಿದ್ದುಬಿಟ್ಟೆ............ ಕಣ್ಣು ತೆರೆದು ನೋಡುವ ಹೊತ್ತಿಗೆ ನಾನು ಆಸ್ಪತ್ರಿ

ಯಲ್ಲಿ ಮಂಚದ ಮೇಲೆ ಮಲಗಿದ್ದೆ" ಎಂದು ಪಕ್ಕದಲ್ಲಿದ್ದ ಜನರಲ್ ಆಸ್ಪತ್ರೆಯ ಕಡೆ ಬೆರಳು ಮಾಡಿ ತೋರಿಸಿದ ಗದ್ಗದಿತಕಂಠದಿಂದ ತನ್ನ ಕತೆಯನ್ನು ಮುಂದುವರಿಸಿದ.

"ಆಪರೇಷನ್ ಇಲ್ಲದೆ ನಾನು ಜೀವಿಸಲಾರೆನೆಂದು ಡಾಕ್ಟರರು ನನ್ನೊಂದು ಕಾಲನ್ನು ಕಡಿದುಬಿಟ್ಟರು. ಅಂದು ಸಂಜೆಯವರೆಗೂ ಮರೆಯಾಗಿದ್ದು ಐಯ್ಯರ್ ಆಸ್ಪತ್ರೆಗೆ ಬಂದು ತಿಂಗಳ ಸಂಬಳ ಐದುರೂಪಾಯಿ ನನ್ನ ಮುಖದ ಮೇಲೆ ಎಸೆದು ಹೋಗಿಬಿಟ್ಟರು. ಒಂದು ಒಳ್ಳೇ ಮಾತು ಸಹಾ ಅವರ ಮುಖದಿಂದ ಹೊರಬೀಳಲಿಲ್ಲ. ಮೈ ಬೆವರಿನಿಂದ ರಕ್ತ ಮಾಂಸಾದಿಗಳು ಸವೆಯುವಂತೆ ಕತ್ತೆ ಚಾಕರಿ ಮಾಡಿಸಿಕೊಂಡ ಇವರಿಗೆ ದಯೆಯಿಂದ ಒಂದು ಸವಿನುಡಿ ಹೇಳುವ ಹೃದಯವಿರಲಿಲ್ಲ."

ಈ ಮಾತುಗಳನ್ನು ಹೇಳುವಾಗ ಬಾಡಿ ಕಂದಿ ಹೋದ ಅವನ ಮುಖದಲ್ಲಿ ಹುದುಗಿಕೊಂಡಿದ್ದ ಸ್ವಚ್ಛವಾದ ಕಣ್ಣುಗಳೆರಡೂ ಪಿಳಿ ಪಿಳಿಯಾಗಿ ಮಿನುಗಿದವು. ವೇದನೆಯಿಂದ ಅವನ ಹೃದಯದಲ್ಲಿ ದುಃಖದ ಜ್ಯೋತಿ ಬೆಳಗುತ್ತಿರುವಂತೆನಿಸಿತು.

"ಎರಡು ತಿಂಗಳ ವರೆಗೆ ನಾನು ಆಸ್ಪತ್ರೆಯಲ್ಲಿಯೇ ಇರಬೇಕಾಯಿತು. ಒಂದು ಕಾಲಿಲ್ಲದೆ ಆಸ್ಪತ್ರೆಯಿಂದ ಹೊರಬಿದ್ದ ಕೂಡಲೇ ನಾನು ಮುಂದೆ ಹೇಗೆ ಜೀವಿಸಬೇಕೆಂಬುದರ ಬಗ್ಗೆ ಮರುಗಿ ಮರುಗಿ ಮನದಲ್ಲಿ ಯೋಚಿಸುತ್ತ ನಿದ್ರೆಯಿಲ್ಲದೆ ಕಾಲಕಳೆದೆ. ಕೈಕಾಲು ಗಟ್ಟಿಯಾಗಿದ್ದಾಗಲೇ ನನ್ನ ಅವಸ್ಥೆ ಹೀಗಿದ್ದಾಗ ಇನ್ನು ಮುಂದೆ ಜೀವಿಸುವುದಾದರೂ ಹೇಗೆಂದು ಚಿಂತಿಸತೊಡಗಿದೆ. ರಾತ್ರಿ ಹಗಲೂ ಚಿಂತಿಸಿ ಕೃಶನಾದೆ. ಆದರೆ ಕಾಲಿಲ್ಲದಲ್ಲೇ ಹೀಗೆ ಬೀದಿಯಲ್ಲಿ ಭಿಕ್ಷೆಬೇಡುವುದರಿಂದ ನನಗೆ ಸುಖಶಾಂತಿ ದೊರೆಯುವುದೆಂದು ನನಗೆ ಮೊದಲೇ ತಿಳಿದಿದ್ದರೆ ಆಸ್ಪತ್ರೆಯಲ್ಲಿ ವ್ಯಥೆಪಡುತ್ತಿರಲಿಲ್ಲ.

"ಏನು! ನಿನಗೆ ಈ ಭಿಕ್ಷೆಬೇಡುವ ಕೆಲಸ ಸುಖಶಾಂತಿಯನ್ನು ..............."

"ಮತ್ತೇನು ಸ್ವಾಮಿ! ಸುಖವಲ್ಲದೇ ಮತ್ತೇನು? ಚನ್ನಾಗಿರುವಾಗ ನಾನೆಷ್ಟು ದುಡಿದರೂ ನನ್ನ ಕೆಲಸವನ್ನು ಮೆಚ್ಚಿ ಸಂತೋಷಪಡ

ಲಿಲ್ಲ. ಮೈಮುರಿದು ದುಡಿದರೂ, ಪ್ರಾಮಾಣಿಕತನದಿಂದ ಕೆಲಸ ಮಾಡಿದರೂ ಅದು ಯಾರಿಗೂ ಸರಿಬೀಳಲಿಲ್ಲ. ತಂಗಳನ್ನ ಉಂಡು, ಎಂಜಲನ್ನು ಪಂಚಾಮೃತವೆಂದು ಭಾವಿಸಬೇಕಾಯಿತು. ನಿಯತ್ತಿನಿಂದ ಐದು ವರುಷ ಸೇವೆ ಮಾಡಿದ ಮನೆಯಿಂದ ಕಳ್ಳ ನೆನೆಸಿಕೊಂಡು ಹೊರಬೀಳಬೇಕಾಯಿತು. ಮುಂಜಾನೆ ಹೆಚ್ಚು ಮಲಗಿದರೆ ಬೈಗಳು. ಪೇಟೆಯಿಂದ ಕೊಂಚ ತಡವಾಗಿ ಬಂದರೆ 'ಛಿ' ಮಾತು. ಕಳ್ಳತನ ಸುಳ್ಳತನದವನಾಗದಿದ್ದರೂ ಅಪವಾದ. ಆದರೆ ಈಗ ನನ್ನನ್ನು ದಂಡಿಸುವವರೇ ಇಲ್ಲ. ದಿನವೆಲ್ಲಾ ಅಲೆದರೆ ಹೊಟ್ಟೆ ತುಂಬ ಅನ್ನ ಮೇಲೆ ಒಂದು ರೂಪಾಯಿಯಷ್ಟು ಹಣ. ನಾನು ಕುಂಟನಾಗದಿದ್ದರೆ ನನಗೆ ದಿನವೂ ಒಂದು ರೂಪಾಯಿ ಬಹುಮಾನ ಯಾರು ಕೊಡುತ್ತಿದ್ದರು? ನನ್ನ ಮೇಲೆ ಸಿಟ್ಟು ಮಾಡುವವರೇ ಕಡಮೆ. ಇದಕ್ಕೆ ಏನನ್ನಬೇಕು ನೀವೇ ಹೇಳಿ ಸ್ವಾಮೀ?''

ಅಹುದು ರಾಮನ ಮಾತಿನಲ್ಲಿ ನಿಜಾಂಶವಿತ್ತು. ಮನಸಾ ರಾಮನು ಆಡಿದ ಮಾತುಗಳಿಗೆ ಒಪ್ಪಿಕೊಂಡೆ. ಆದರೆ! ಇಷ್ಟು! ಮಾನಾಭಿಮಾನವನ್ನು ಕಳೆದುಕೊಂಡು, ಸಭ್ಯತೆಯನ್ನು ಮರೆತು, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಭಿಕ್ಷೆ ಬೇಡುವುದು...........

ಈ ಹೊತ್ತಿಗೆ ಮೈಲಾಪೂರ್ ಬಸ್ಸು ಬಂತು. ಅದನ್ನು ಹತ್ತುವುದಕ್ಕೆಂದು ಕೈಲೊಂದು ಕೂಸನ್ನೂ, ಕೊರಳಲ್ಲೊಂದು ಕೂಸನ್ನು, ಹಿಂದೊಂದು ಮುದಕಿಯೊಂದಿಗೆ ಬಸ್ಸನ್ನೇರಲು ಹವಣಿಸುತ್ತಿರುವಾಗ, ಧಾಂಡಿಗನಾದ ಮೊದಲಿಯಾರನು ಅವರನ್ನು ದಬ್ಬಿ ಹತ್ತಿಬಿಟ್ಟನು. ಆ ಹೆಣ್ಣುಮಗಳಿಗೆ ಈ ಗಡಿಬಿಡಿಯಲ್ಲಿ ಗಾಯವಾಗಿ ಕೈಬೆರಳಿನಿಂದ ರಕ್ತ ಸುರಿಯ ತೊಡಗಿತು.

"ಅಹುದು ಮಾನಾಭಿಮಾನವನ್ನು ತೊರೆದು, ಸಭ್ಯತೆಯನ್ನು ಮರೆತು, ಹೊಟ್ಟೆ ಹರಿದುಕೊಳ್ಳಲು ಭಿಕ್ಷೆಬೇಡುವುದೇ......'' ಎಂಬ ನನ್ನ ಯೋಚನೆ ಪೂರ್ತಿಯಾಗಲೇ ಇಲ್ಲ. ಆ ಯೋಚನೆ ಪೂರ್ತಿಯಾಗಬೇಕಾದ ಅವಶ್ಯಕತೆಯು ಸಮಯವು ಮತ್ತೆ ಉಂಟಾಗಲೂ ಇಲ್ಲವೆನ್ನಬಹುದು!

# ನಿನ್ನ ಋಣ ತೀರಿಸಿಕೊಂಡೆ

"ಕೃಷ್ಣಮೂರ್ತಿ ಎಲ್ಲಿ?"

ಹಿತ್ತಲ ಮನೆಯ ಬಾಗಿಲಿಂದ ಇಣಿಕಿ ನೋಡುತ್ತ ನಿಂತಿದ್ದ ಮೂರ್ತಿಯ ಮುಖ ಸೂರ್ಯನಾರಾಯಣರಾಯನಿಗೆ ಕಾಣಿಸಿತು. ಹಗುರವಾದ ಮನಸ್ಸಿನಿಂದ 'ಬಾ ಮಗು ಊಟಮಾಡುವಿಯಂತೆ ಬಾ" ಎಂದು ಕರೆದ. ಆದರೆ ಮೂರ್ತಿ ಬರಲೋ ಬೇಡವೋಯೆಂದು ಯೋಚಿಸುತ್ತಿದ್ದ.

ಮೀನಾಕ್ಷಿ ತುಪ್ಪದ ಬಟ್ಟಲದೊಂದಿಗೆ ಪಕ್ಕದಲ್ಲೇ ನಿಂತಿದ್ದಳು. ಅವಳ ಯಜಮಾನನಾದ ಸೂರ್ಯನಾನಾರಾಯಣನು ಊಟದ ಎಲೆಯ ಮುಂದೆ ಕುಳಿತು ಮೂರ್ತಿಯ ನೆನಪು ಬಂದು ಅವನೆಲ್ಲಿಯೆಂದು ಕೇಳಿದ. ದೊಡ್ಡೀಬಾಗಿಲ ಹಿಂದೆ ನಿಂತ ಅವನನ್ನುದ್ದೇಶಿಸಿ "ಬಾ ನನ್ನ ಗಿಳಿ" ಎಂದ.

ಮೂರ್ತಿ ಬಾಗಿಲಲ್ಲೇ ನಿಂತು ಸುಮ್ಮನಿದ್ದ. ಚೌಕಟ್ಟಿನ ಮರೆಯಲ್ಲಿ ತಲೆಯನ್ನಿಟ್ಟು ಓರೆಗಣ್ಣಿನಿಂದ ನೋಡುತ್ತ ಮುಂದೆ ಹೆಜ್ಜೆಯನ್ನಿಡದೆ ನಿಂತುಬಿಟ್ಟುದನ್ನು ಕಂಡು ಸೂರಿಯು "ಬಾ ಅಣ್ಣಾ, ಅವನನ್ನು ಕರಕೊಂಡು ಬಾರೆ" ಎಂಬ ಮಾತುಗಳನ್ನು ಕೇಳಿ ಮೀನಾಕ್ಷಿಯು ಅವನನ್ನು ಎತ್ತಿಕೊಂಡು ಬಂದು ಸೂರಿಯ ಹತ್ತಿರ ಕೂಡಿಸಿ ಬೆಳ್ಳಿಯ ಬಟ್ಟಲಿನಲ್ಲಿ ಅವನಿಗೆ ಬೇರೇ ಅನ್ನವನ್ನು ಕಲೆಸಿದಾಗ "ಮೂರ್ತಿ ನಾನು ಉಣಿಸಲೆ?" ಎಂದು ಪ್ರೀತಿಯಿಂದ ಕೇಳಿದ.

"ನಾತಿತ್ತೆ"

"ನೀನೇ ತಕ್ಕೊಂಡು ತಿನ್ನು" ಎಂದು ಮೀನಾಕ್ಷಿ ಅವನ ಪಕ್ಕದಲ್ಲಿ ಕುಳಿತು ಮೃದುವಾದ ಗಲ್ಲಗಳನ್ನು ಮುದ್ದಿಟ್ಟುಕೊಂಡಳು. ಊಟ ಮುಗಿಯುವವರೆಗೆ ಮೀನಾಕ್ಷಿ ಬಹು ಪ್ರೀತಿಯಿಂದ ಅವನು ಬೇಡಿದುದೆಲ್ಲವನ್ನು ಪೂರೈಸಿದಳು.

ಊಟವಾದ ನಂತರ ಸೂರಿಯು ಅವನನ್ನು ಚಾಪೆಯಮೇಲೆ

ಮುಂದೆ ಕುಳ್ಳಿರಿಸಿಕೊಂಡು “ ಎಲೆ ಅಡಿಕೆ ತಿತ್ತೀಯಾ ನೀನೂ ” ಎಂದು ಕೇಳಿದ.

“ ಹೂಂ ನಾ ತಿತ್ತೀನಿ ”

ಎಲೆ ಅಡಿಕೆಯನ್ನು ಸರಿಮಾಡಿ ಅದನ್ನು ಅವನ ಬಾಯಿಯಲ್ಲಿರಿಸುತ್ತ “ ನಿನ್ನ ಹೆಸರೇನು ? ” ಎಂದು ಕೇಳಿದ.

“ ಕಿತ್ತಮೂತಿ ''

“ ನಿಮ್ಮಪ್ಪನ ಹೆಸರು ''

“ ವೆಂಟೇಶರಾವು ”

“ ನಿಮ್ಮಮ್ಮ ? ”

“ ಅನ್ನೂಯ ''

ಅವನಿಗೆ ತನ್ನ ಬಳಗದವರ ಹೆಸರುಗಳನ್ನು ಹೇಳಬೇಕೆಂದರೆ ಎಲ್ಲಿಯೂ ಇಲ್ಲದ ಹುರುಪು; ಸಂತೋಷ. (ಸೂರಿ) ಸೂರ್ಯನಾರಾಯಣ ರಾಯರಿಗೆ ಮುದ್ದು ಬಾಲಕನೊಂದಿಗೆ ಹೆಸರುಗಳನ್ನು ಹೇಳಿಸುವುದೆಂದರೆ ಬಲು ಅಕ್ಕರೆ. ದಿನವೂ ಆ ಪುಟ್ಟ ಹುಡುಗನು ಹೇಳುವ ಹಳೆಯ ಹೆಸರುಗಳಲ್ಲಿ ನೂತನತೆ, ಉತ್ಸಾಹ ಕಂಡುಬರುತ್ತಿತ್ತು. ಈ ಹೊತ್ತಿಗೆ ತನ್ನ ಮನೆಯಲ್ಲಿ ಊಟವನ್ನು ಮುಗಿಸಿಕೊಂಡು ವೆಂಕಟೇಶ್ವರರಾಯನು ಇವರಿದ್ದೆಡೆಗೆ ಬಂದು “ ನಿನ್ನ ಊಟ ಎಲ್ಲಾತೋ ? “ ಎಂದು ಮೂರ್ತಿಯನ್ನು ಕೇಳಿದ.

“ ಇಮ್ಮನ್ಯಾಗೆ ಉಂತೆ ”

“ ಅವರ ಮನ್ಯಾಗೆ ?''

ಕಣ್ಣು ಹುಬ್ಬುಗಳನ್ನು ಮೇಲಕೆತ್ತಿ, ಪ್ರಶ್ನಾರ್ಥಕ ಸೂಚನೆಯಿಂದ “ ಉಂದ್ರೇನಾತು ? ” ಎಂದು ಕೇಳಿದ.

“ ಅಮ್ಮ ಹೊತ್ತಾಳೆ ನಿಂದ್ರು ”

“ ಏತಕ್ಕೆ ಹೊತ್ತಾಳೆ ? ” ಎಂದು ಸೂರಿ ಕೇಳಿದ.

“ ಹೂ ಅಮ್ಮಾ ಹೊತ್ರೇನಾತು ? ನಾನೂ ಹೊತ್ತೀನಿ ?'' ಎಂದು ಮೂರ್ತಿ ಮುದ್ದು ಮಾತಿನಲ್ಲಿ ಸಿಟ್ಟಿನಿಂದ ಹೇಳಿ ಸುಮ್ಮನಾದ.

ಮೂರೂ ಮಂದಿ ನಕ್ಕುಬಿಟ್ಟರು.

ವೆಂಕಟೇಶ್ವರರಾಯನು, ಸೂರ್ಯನಾರಾಯಣರಾಯನು ಒಂದು ದೊಡ್ಡ ಮನೆಯಲ್ಲಿ ಬಾಡಿಗೆಗೆ ಪ್ರತ್ಯೇಕ ವಿಭಾಗಗಳಲ್ಲಿದ್ದರು. ಸೂರಿ ಹೈಸ್ಕೂಲಿನಲ್ಲಿ ಟೀಚರ್; ರಾಯನು ಕಲೆಕ್ಟರ ಆಫೀಸಿನಲ್ಲಿ ಗುಮಾಸ್ತನು. ಸೂರಿಗೆ ಮಕ್ಕಳಿರಲಿಲ್ಲ. ಮೂರ್ತಿ ರಾಯನ ಒಬ್ಬನೇ ಮಗ. ಈ ಇಬ್ಬರೂ ಸಮವಯಸ್ಸಿನವರೇ ಎನ್ನಬಹುದು. ಅವರ ವಯಸ್ಸು ಮೂವತ್ತಕ್ಕೆ ಮೀರಿರಲಿಲ್ಲ.

ಸೂರಿಯ ಹೆಂಡತಿ ಮೀನಾಕ್ಷಿ ಮನೆಗೆ ಬಂದು ಎಂಟು ವರುಷಗಳಾದರೂ ಮಕ್ಕಳ ತಾಯಿಯಾಗುವ ಪುಣ್ಯ ಅವಳದಾಗಿರಲಿಲ್ಲ. ಆದುದರಿಂದ ವೆಂಕಟೇಶ್ವರರಾಯನ ಮಗ ಮೂರ್ತಿಯೆಂದರೆ ಅವರಿಬ್ಬರಿಗೆ ಅಮಿತ ಪ್ರೀತಿ. ಆ ಹುಡುಗನ ಆರೈಕೆಯನ್ನು ತಾವೇ ವಹಿಸುತ್ತಲಿದ್ದರು. ಮೂರ್ತಿ ಎಷ್ಟು ಅಳುತ್ತಿದ್ದರೂ ಸೂರಿ ಬಂದು ಎತ್ತಿಕೊಂಡನೆಂದರೆ ಸುಮ್ಮನಾಗುತ್ತಲಿದ್ದ. ಮೂರ್ತಿ ದಿನವೆಲ್ಲವೂ ಇವರ ಮನೆಯಲ್ಲೇ ಇದ್ದು ಕಾಲಕಳೆಯುತ್ತಲಿದ್ದ.

ಸೂರಿ ಹುಟ್ಟಾ ಶ್ರೀಮಂತ. ಮನೆಯಿಂದ ಹೇರಳವಾದ ಆಸ್ತಿಯ ನೆರವು; ಮೇಲೆ ಸುಖವಾದ ಟೀಚರ ಕೆಲಸ. ಹೊಟ್ಟೇಲಿ ಹುಟ್ಟಿದ ಮಗುವೇ ಹಿರಿಯ ಆಸ್ತಿಯೆಂದು ಹಿಗ್ಗಿನಲ್ಲಿ ಕಾಲಕಳೆಯುತ್ತಲಿದ್ದ ಮೂರ್ತಿಯ ತಂದೆಗೆ ತನ್ನ ಕೆಲಸವೇ ಜೀವನಾಧಾರವಾಗಿತ್ತು. ಆದರೂ ಮರ್ಯಾದೆಯಿಂದ ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುವ ಜಾಣತನ ಅನಸೂಯಳದಾಗಿದ್ದುದರಿಂದ ವೇಂಕಟೇಶ್ವರನು ತನ್ನ ಸಂಸಾರದಲ್ಲಿ ಸುಖಸಂತೋಷವನ್ನು ತಂದಿರಿಸಿದ ಮೂರ್ತಿಯನ್ನು ಕಂಡು ಇಬ್ಬರೂ ಹರುಷದಿಂದಿದ್ದರು.

ಮಕ್ಕಳಿಲ್ಲದ ಸೂರಿಯ ಮನೆಯಲ್ಲಿ ಯಾವಾಗಲೂ ಮೂರ್ತಿ ತನ್ನ ಆಟಪಾಟಗಳಿಂದ ಹರುಷದ ಬೆಳಕನ್ನುಂಟುಮಾಡುತ್ತಲಿದ್ದ. ಈ ದಂಪತಿಗಳು ಇವನನ್ನು ತಮ್ಮ ಮಗುವೆಂದೇ ಭಾವಿಸಿ, ಆರೈಸಿ, ಸಂತೈಸಿ, ನಾನಾಬಗೆಯಲ್ಲಿ ಉಪಚರಿಸಿ, ದೇವರುಂಟುಮಾಡಿದ ತೆರವನ್ನು ಭರ್ತಿ ಮಾಡಿಕೊಂಡು ಹಿಗ್ಗುತ್ತಿದ್ದರು. ಅನಸೂಯಳು ಮಗುವನ್ನು ಹುಡಿಕಿಕೊಂಡು ಬರುವವರೆಗೂ ಮಗುವು ಇವರ ಮನೆಯಲ್ಲಿಯೇ ಇರುತ್ತಿತ್ತು.

ಉಗಾದಿ ಹಬ್ಬಕ್ಕೆಂದು ಮೂರ್ತಿಗೆ ಸೂರಿಯು ಮೂರು ಸವರನ್ನಿನ ಬಂಗಾರದ ಸರವನ್ನು ಮಾಡಿಸಿದನು. ಮೀನಾಕ್ಷಿ ಒಂದು ಸುಂದರವಾದ ಹೂವಿನ ಅಂಗಿಯನ್ನು ಹೆಣೆದಳು. ಹಬ್ಬದ ದಿನ ಅವನನ್ನು ಅಲಂಕರಿಸಿ ಪೇಟೆಯಲ್ಲಿ ಕರೆದುಕೊಂಡು ಹೋದ ಸಮಯದಲ್ಲಿ ಸೂರಿಯು ಕೈಯಲಿದ್ದ ಈ ಸುಂದರ ಮೂರ್ತಿಯನ್ನು ಕಂಡು ಎಲ್ಲರೂ ಇವನ ಚೆಲುವನ್ನು ಹೊಗಳಿದರು. ಮನೆಗೆ ಬಂದಕೂಡಲೇ ದೃಷ್ಟಿ ಪರಿಹಾರಕ್ಕೆಂದು ಉಪ್ಪು ಮೆಣಸಿನಕಾಯಿ ದೃಷ್ಟಿ ತೆಗೆದು ಒಲೆಯಲ್ಲಿ ಹಾಕಿದಳು. ಮೀನಾಕ್ಷಿ. ಆರತಿ ಅಕ್ಷತೆ ಮುಗಿದ ನಂತರ ಮುಂದಿನ ಎರಡು ದಿನಗಳ ವರೆಗೆ ಮಗುವು ಜ್ವರದಿಂದ ಮಲಗಿದುದು ಏಳಲೇ ಇಲ್ಲ.

ಇದಕ್ಕೆ ಸೂರಿ–ಮೀನಾಕ್ಷಿಯರು ನೊಂದುಕೊಂಡರು. ಆಶೆಯಿಂದ ಅವರು ಮಾಡಿದ ಆರೈಕೆಗೆ ಮಗುವಿಗೆ ನೋವಾಯಿತೆಂದು ಮರುಗಿದರು. ಇದೆಲ್ಲವೂ ಸಾಮಾನ್ಯವೆಂದು ವೆಂಕಟೇಶ್ವರರಾಯನು ಸುಮ್ಮನಿದ್ದುಬಿಟ್ಟ. ಯುಗಾದಿಯು ಹಬ್ಬಕ್ಕೆಂದು ತನ್ನ ಮಗನಿಗೆ ಸೂರಿ ಎರಡುನೂರು ರೂಪಾಯಿಯಷ್ಟು ಖರ್ಚು ಮಾಡುವುದನ್ನು ನೋಡಿ ಅನಸೂಯ–ವೆಂಕಟೇಶ್ವರರೂ ಏನೂ ಮಾತನಾಡದೇ ಸುಮ್ಮನಿದ್ದರು. ತಾವು ನಿತ್ಯ ದರಿದ್ರರಾದರೂ ತಮ್ಮ ಹೊಟ್ಟೆಯಲ್ಲಿ ಜನಿಸಿದ ಹುಡುಗನು ಸುಖವನ್ನು ಕಾಣುವ ನಲ್ಲಾ ಎಂದು ಹಿಗ್ಗಿದರು.

ಬಿಸಿಲಿನ ತಾಪ ಹೆಚ್ಚಿದರೂ ಸಮುದ್ರತೀರವಾದುದರಿಂದ ಸಂಜೆ ಬಹು ಸುಖವಾಗಿರುತ್ತಿತ್ತು. ಸಮುದ್ರದ ಮೇಲೆ ಹಾದುಬರುವ ರಾತ್ರಿಯ ತಂಗಾಳಿ ಮನೋಹರವಾಗಿರುತ್ತಿತ್ತು. ಬೇಸಿಗೆಯೆಂದು ಮೂರ್ತಿಗೆ ಮೈ ತುಂಬ ಗಂಧದ ಲೇಪನ, ಸುಮಧುರ ಹಣ್ಣುಹಂಪಲುಗಳು, ಹೂವಿನ ಹಾರಗಳು, ಮಲ್ಲಿಗೆ ಹೂ ಚೆಲ್ಲಿದ ಹಾಸಿಗೆಯಲ್ಲಿ ಶಯನ, ಇವುಗಳಿಂದ ಬಾಲಕನು ರಾಜಭೋಗವನ್ನು ಅನುಭವಿಸತೊಡಗಿದ.

ಮೀನಾಕ್ಷಿ ಸ್ವಲ್ಪ ಮರೆತು ಅಡುಗೆ ಮನೆಗೆ ಹೋದಳೆಂದರೆ ತುಂಟ ಮೂರ್ತಿ ಬೀದಿಯ ಬೀಸಿಲಿಗೆ ಓಡಿಹೋಗಿ ನಿಲ್ಲುತ್ತಿದ್ದ. ನೊಂದ ಮನಸ್ಸಿನಿಂದ ಅವನನ್ನು ಒಳಗೆ ಕರೆತಂದು ಉಪಚರಿಸಿ ಬೀಸಣಿಕೆಯಿಂದ ತಂಪಾದ ಗಾಳಿ ಬೀಸದೇ ಇದ್ದರೆ ಅವಳಿಗೆ ಸಮಾಧಾನವಾಗುತ್ತಿರಲಿಲ್ಲ.

ಒಂದು ದಿನ ಸಂಜೆ ಅನಸೂಯ ಮೀನಾಕ್ಷಿಯರು ಮನೆಯ ಹಿಂದಿನ ಹಿತ್ತಲಿನಲ್ಲಿ ಮಾತನಾಡುತ್ತ ಕುಳಿತಿದ್ದರು. ಆಕಳೊಂದು ಓಡಿ ಬರಲು ಮಗುವೆಲ್ಲಿ ಅದರ ಕಾಲಕೆಳಗೆ ಬೀಳುವುದೆಂಬ ಗಾಬರಿಯಿಂದ ಹೆತ್ತತಾಯಿಯು ಸುಮ್ಮನೇ ಕುಳಿತಿರಲು ಮೀನಾಕ್ಷಿ ಹೆಚ್ಚಿನ ಆತುರದಿಂದ ಮೂರ್ತಿಯನ್ನೆತ್ತಿಕೊಂಡು "ಹುಡುಗ ಬದುಕಿದ, ಅಬ್ಬ!" ಎಂಬ ಉದ್ಗಾರ ತೆಗೆದರೆ, ಅನಸೂಯ "ಅಷ್ಟೇಕೆ ಭಯ ಆಕ್ಕಯ್ಯಾ? ನೀನು ಬಹಳ ಗಾಬರಿ ಸ್ವಭಾವದವಳು" ಎಂದು ಕೇಳಿಬಿಡುತ್ತಿದ್ದಳು.

"ನನಗೇನೋಮ್ಮ ಇಂತಹ ಪ್ರಸಂಗಗಳು ಬಂದವೆಂದರೆ......."

"ಬಂದವೆಂದರೆ ಭಯ ಅಲ್ಲವೆ? ಎನಮ್ಮ ನಿನ್ನ ಪ್ರೀತಿ ಮೂರ್ತಿಯ ಮೇಲೆ? ಅದಿರಲಿ ನಿನ್ನ ಹೊಟ್ಟೇಲಿ ಒಂದು ಮಗು ಹುಟ್ಟಿತೂಂದ್ರೆ ನಮ್ಮ ಮೂರ್ತಿನ ಆಗಲೂ ಈ ಬಗೆಯಾಗಿ ಪ್ರೀತಿಸ್ತೀಯಾ, ಅಕ್ಕಾ?"

"ನನ್ನ ಹೊಟ್ಟೇಲಿ ಇನ್ನೇತಕ್ಕೆ ಮಕ್ಕಳು? ಕೃಷ್ಣಮೂರ್ತಿನ ನನಗೆ ನೀನು ಕೊಟ್ಟುಬಿಡು. ಮೂರ್ತೀ ನೀನು ನನ್ನ ಹತ್ತಿರ ಇರ್ತಿಯಾ? ಅಮ್ಮನ ಹತ್ತರ ಇರ್ತಿಯಾ?"

"ನಿನತ್ತೆ ಇತ್ತೀನಿ."

ಸೂರ್ಯನಾರಾಯಣರಾಯನಿಗೆ (ಸೂರಿ) ಬೇಸಗೆಯ ರಜೆ ಬಂದವು. ಅವರ ಹುಟ್ಟೂರು ಗುಡಿವಾಡ ಸೀಮೆಯಲ್ಲಿ ಒಂದು ಮೂಲೆಯಲ್ಲಿತ್ತು. ಅಲ್ಲಿ ಅವನಿಗೊಂದು ತೆಂಗಿನತೋಪು, ಮತ್ತು ಭತ್ತದ ಗದ್ದೆಗಳು, ವಿಶಾಲವಾದ ಮಾವಿನ ತೊಟಗಳಿದ್ದವು. ಅಲ್ಲಿ ಬೇಸಿಗೆಯನ್ನು ಕಳೆಯಲು ಬಹಳ ತಂಪಾಗಿರುವುದರಿಂದ ಪ್ರತಿವರ್ಷವೂ ಅಲ್ಲಿಗೆ ಹೋಗುವುದು ರೂಢಿ. ರಜೆಯ ದಿನಗಳಲ್ಲಿ ಮೂರ್ತಿಯನ್ನು ಬಿಟ್ಟು ಹೋಗಲು ಈ ದಂಪತಿಗಳಿಗೆ ಮನಸ್ಸು ಬರಲಿಲ್ಲ. ತಮ್ಮೊಂದಿಗೆ ಅನಸೂಯ ಮತ್ತು ಅವಳ ಗಂಡನನ್ನು ಕರೆದುಕೊಂಡು ಹೋಗಬೇಕೆಂದರೆ ಆತನಿಗೆ ಬೇಗ ಆಫೀಸಿನಲ್ಲಿ ರಜೆ ದೊರೆಯುವುದು ಕಷ್ಟ. ಮೂರ್ತಿಯನ್ನು ಬಿಟ್ಟು ಹಳ್ಳಿಗೆ ಹೋಗುವುದಂತೂ ಆಗದ ಕೆಲಸ. ಮಗುವನ್ನು ತಮ್ಮ ಹಿಂದೆ ಕಳುಹೆಂದು ಕೇಳಿದರೆ ಹೇಗಾದೀತೆಂದು ತಮ್ಮೊಳಗೆ ಚರ್ಚಿಸಿಕೊಂಡರು.

ಸಂಕೋಚವಿಲ್ಲದೆ ಕೇಳಿಬಿಡುವುದೆಂದು ನಿರ್ಧರಿಸಿದರು. ಅಂದು ರಾತ್ರಿ ಊಟವಾದ ನಂತರ " ವೆಂಕಟೇಶ, ಮೂರ್ತಿನ ನಮ್ಮ ಹಿಂದೆಎರಡು ದಿನಮಾತ್ರ ಕಳಿಸಿಕೊಡುವಿರಾ ? " ಎಂದು ಸೂರಿ ಕೇಳಿದ.

" ಅನುಸೂಯ ಏನಂತಾಳೆ ? "

" ನಮ್ಮವಳು ಅವರನ್ನು ಕೇಳಿದ್ದಾರಂತೆ. ಬೇಗ ಹಿಂತಿರುಗುವುದಾದರೆ ಅವರ ಸಮ್ಮತಿಯೂ ದೊರೆಯ ಬಹುದು. "

" ಪುಣ್ಯಾತ್ಮರು ನೀವು ಮಹಾರಾಯರೆ. ರಜೆ, ಬಿಡುವು, ಎಲ್ಲಾ ಬಗೆಯ ಸುಖಗಳಿವೆ ನಿಮಗೆ. ಅಗತ್ಯ ಕರೆದುಕೊಂಡು ಹೋಗಿ "

ಇವರು ಚಾಪೆಯ ಮೇಲೆ ಕುಳಿತು ಮಾತನಾಡುತ್ತಿರುವುದನ್ನು ಮೂರ್ತಿ ಆಲಿಸುತ್ತಿದ್ದ. " ಮೂರ್ತಿ ನೀನು ನಮ್ಮೊಂದೆ ಊರಿಗೆ ಬತ್ತೀಯಾ ? ಇಲ್ಲೇ ಇತ್ತೀಯಾ ? " ಎಂದು ಕೇಳಿದ.

" ನಾ ನಿಮ್ಮೊಂದೆ ಬತ್ತೇನಿ " ಎಂದು ಮೂರ್ತಿ ತನ್ನ ನಿರ್ಧಾರ ಹೇಳಿಬಿಟ್ಟ.

ಮಾರನೆಯ ದಿನ ಪ್ರಯಾಣ ನಿಶ್ಚಯವಾಯಿತು. ರೈಲು ನಿಲ್ದಾಣಕ್ಕೆ ಮಗುವಿನ ತಂದೆ ತಾಯಿಗಳು ಹೋಗಿದ್ದರೂ ಮೂರ್ತಿ ಮೀನಾಕ್ಷಿಯನ್ನು ಬಿಟ್ಟು ಬರಲೇ ಇಲ್ಲ.

ಹಳ್ಳಿಯಲ್ಲಿ ಮುದ್ದನ್ನು ಸುರಿಸುವ ಈ ಸುಂದರ ಬಾಲಕನು ಎಲ್ಲರ ದೃಷ್ಟಿಯನ್ನು ಆಕರ್ಷಿಸಿದ. ನಗರದಲ್ಲಿ ದೊಡ್ಡ ಕೆಲಸಕ್ಕಿದ್ದ ಸೂರಿಗೆ ಬಹು ಮರ್ಯಾದೆ. ಜನರು ಕಿಕ್ಕಿರಿದು ಹುಡಗನನ್ನು ಅವನ ಚುರುಕುತನವನ್ನು ಕಂಡು ಮೆಚ್ಚಿದರು.

ಹುಡುಗನಿಗೆ ದೃಷ್ಟಿದೋಷವಾಯಿತು; ಜ್ವರಬಂದು ಮೂರು ದಿನಗಳ ಪರ್ಯಂತ ಎಚ್ಚರವೇ ಇರಲಿಲ್ಲ. ನಾಲ್ಕನೆಯ ದಿನ ಎಚ್ಚರವಾದಾಗ ಅವರಮ್ಮನನ್ನು ನೆನೆದು ಮತ್ತೆ ಮರೆತುಬಿಟ್ಟ. ಎರಡು ದಿನಗಳ ನಂತರ ಮತ್ತೆ ಜ್ವರ ಬಂತು ಹಳ್ಳಿಯಲ್ಲಿ ಸಿಗುತ್ತಿದ್ದ ಔಷದೋಪಚಾರ ನಡೆಯಿತು. ಬಿಸಿಲಿನ ತಾಪದಿಂದಲೂ, ಮಾವಿನಹಣ್ಣಿನ ಸೇವನೆಯಿಂದಲೂ ಹುಡುಗನಿಗೆ ತಲೆದೋರಿದ ಜ್ವರ ಕಡಿಮೆಯಾಗಲಿಲ್ಲ. ಮೀನಾಕ್ಷಿಗೆ ದಿಗಿಲಾಗಿ ಊರಿಗೆ ಹೋಗಲು ಅವಸರಪಡಿಸಿದಳು. ಅವತ್ತು ಭೂಕಂದಾ

ಯದ ವಸೂಲಿನ ಕೆಲಸವಿದ್ದುದರಿಂದ ಪ್ರಯಾಣ ಮುಂದರಿಸಬೇಕಾಯಿತು. ಮೂರನೆಯ ದಿನ ಹುಡುಗನಿಗೆ ಜ್ವರದ ತಾಪ ಹೆಚ್ಚಿತು. ಎಚ್ಚರವಿಲ್ಲದೆ ಅವನಾಡುತ್ತಿದ್ದ ಮಾತುಗಳು ಮೀನಾಕ್ಷಿಯನ್ನು ಎದೆಗುಂದಿಸಿದವು. ಅಂದು ರಾತ್ರಿ ಪೂರ್ತಿ ಅವನು ನಿದ್ದೆ ಮಾಡಲೇ ಇಲ್ಲ. ಸೂರಿ–ಮೀನಾಕ್ಷಿಯರೂ ಮಗುವಿನ ಪಕ್ಕದಲ್ಲೇ ಕೂತು ಸಂತೈಸಿದರು.

ಮಗುವಿಗೆ ಜ್ವರ ಬಹಳ ಹೆಚ್ಚು ಇದ್ದುದರಿಂದ ಜ್ವರ ಸ್ವಲ್ಪ ಕಡಮೆಯಾದ ನಂತರ ಹೊರಡುವುದುಚಿತವೆಂದು ಪ್ರಯಾಣ ಮುಂದೂಡಬೇಕಾಯಿತು. ವೆಂಕಟೇಶ್ವರರಾಯನಿಗೆ ಹುಡುಗನ ಬೇನೆಯ ಬಗ್ಗೆ ಟೆಲಿಗ್ರಾಂ ಕೊಟ್ಟಾಯಿತು. ಮೀನಾಕ್ಷಿಯ ದುಃಖ ಹೇಳ ತೀರದು. ನಿಂತಲ್ಲಿ ನಿಲ್ಲಲಾರಳು. ಮಗುವನ್ನು ಕೈ ಮುಟ್ಟಿ ಹತ್ತೈದು ನಿಮಿಷಗಳಿಗೊಂದೊಂದು ಸಲ ನೋಡುವಳು. ಅವನ ತಂದೆ ತಾಯಿಗಳು ಬಂದರೇಯೆಂದು ದೂರದ ರಸ್ತೆಯ ಕಡೆ ನೋಡುವಳು. ಇಲ್ಲದ ಯೋಚನೆಯನ್ನು ತಂದುಕೊಂಡು ಅತ್ತುಬಿಡುವಳು. ತೆರೆದ ಕಣ್ಣಿಂದ ಆಗಾಗ್ಗೆ ಮಗುವು ಇದನ್ನು ನೋಡುತ್ತಿದ್ದರೂ ತಾಪದಿಂದ ನರಳುತ್ತಿದ್ದುದರಿಂದ ಇದಾವುದೂ ಅರ್ಥವಾಗುತ್ತಿರಲಿಲ್ಲ. ಮಗುವು ಮಾತನಾಡದೇ ಸುಮ್ಮನೆ ಮಲಗಿದುದು ಇವಳ ದುಃಖವನ್ನು ಹೆಚ್ಚಿಸಿದ್ದಿತು. ಅಂದು ರಾತ್ರಿ ವೈದ್ಯನನ್ನೂ ಮನೆಗೆ ಹೋಗಗೊಡಲಿಲ್ಲ. ಮೂವರು ಮಗುವಿನ ಹತ್ತಿರ ಇದ್ದು ಔಷಧ ಉಪಚಾರ ನಡೆಸಿದರು. ವಿಧಿಯು ಮತ್ತೊಂದು ಬಗೆಯಾಗಿ ನಿರ್ಣಯಿಸಿತ್ತು. ಈ ದಂಪತಿಗಳ ಏರುತ್ತಿರುವ ಸುಖಜೀವನದಲ್ಲಿ ದುಃಖವನ್ನು ತಂದಿರಿಸಬೇಕೆಂದು ನಿರ್ಧರಿಸಿತ್ತೇನೋ ಎಂಬಂತೆ ಬೆಳಗಾಗುವುದರೊಳಗೆ ಮೂರ್ತಿ ಇಹಲೋಕದ ಯಾತ್ರೆ ಮುಗಿಸಿದ್ದ. ವೈದ್ಯನ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಯಿತು. ಮಗುವು ಮೀನಾಕ್ಷಿಯ ತೊಡೆಯ ಮೇಲೆ ಪ್ರಾಣಬಿಟ್ಟಿತು.

ಹಗಲು ಹತ್ತುಗಂಟೆಯಾದರೂ ವೆಂಕಟೇಶ್ವರರಾಯನ ಸುಳಿವೇ ಇರಲಿಲ್ಲ. ಮೀನಾಕ್ಷಿಗೆ ಎಚ್ಚರವೇ ಇರಲಿಲ್ಲ. ಅಕಸ್ಮಾತ್ತಾಗಿ ಬಂದೊದಗಿದ ಈ ಮಹಾವಿಪತ್ತಿಗೆ ಹೌಹಾರಿಹೋಗಿದ್ದಳು. ಅವಳು ನಿಸ್ಸತ್ವದಿಂದ ತೊಡೆಯ ಮೇಲಿದ್ದ ಮಗುವಿನ ಶವವನ್ನು ತೆಗೆಯುವುದಕ್ಕೆ ಸಹ ಸಮ್ಮತಿ

ಸಲಿಲ್ಲ. ತಂದೆಯು ಬರುವವರೆಗೂ ಅದು ತನ್ನ ತೊಡೆಯ ಮೇಲೇ ಇರಬೇಕೆಂದು ಹಟಹಿಡಿದಳು. ಸೂರಿ ಹೊರಗೆ ಮನೆಯ ಜಗುಲಿಯ ಮೇಲೆ ಕುಳಿತು ಮನಸಾರ ಅತ್ತುಬಿಟ್ಟನು. ಅವನ ದೃಷ್ಟಿಯೆಲ್ಲವೂ ವೆಂಕಟೇಶ್ವರರಾಯನು ಬರುವ ದಾರಿಯ ಕಡೆ ಸಾಗಿತ್ತು. ಸಂಜೆಯಾದರೂ ಅವನು ಬರುವ ಸುಳಿವೇ ಕಾಣಲಿಲ್ಲ. ಸೂರಿಯ ಬಂಧುಗಳು ಬಂದು ಮುಂಜಾನೆಯಿಂದ ಶವವನ್ನು ಹೆಚ್ಚು ಹೊತ್ತು ಮನೆಯಲ್ಲಿಟ್ಟುಕೊಳ್ಳುವುದು ನ್ಯಾಯವಲ್ಲವೆಂದು ಅವನನ್ನು ಸಮಾಧಾನಪಡಿಸಿ ದಹನಸಂಸ್ಕಾರವನ್ನು ಮುಗಿಸಿದರು. ಮೂರ್ತಿಯ ಹಿಂದೆ ಗೋಳಿಡುತ್ತ ಮೀನಾಕ್ಷಿ ಬಹು ದೂರ ಹೋದಳು. ಆದರೆ ಸೂರಿಯು ತಡೆದು ಅವಳನ್ನು ಬಲವಂತದಿಂದ ಮನೆಗೆ ಕರೆತಂದನು.

ಅಂದು ರಾತ್ರಿ ಯಾರೂ ಊಟಮಾಡಲಿಲ್ಲ. ಮಾರನೆಯ ದಿನ ಮುಂಜಾನೆ ಸೂರಿ ಮನೆಯ ಮುಂದಿನ ಕಟ್ಟೆಯ ಮೇಲೆ ರಸ್ತೆಯ ಕಡೆ ನೋಡುತ್ತ ಕುಳಿತವನು ಏಳಲೇ ಇಲ್ಲ. ಅಂದು ಊಟ ಸಹ ಅವನಿಗೆ ಬೇಕಾಗಿರಲಿಲ್ಲ. ಅನಸೂಯ-ವೆಂಕಟೇಶರಾಯನು ಬಂದರೆ ಏನು ಹೇಳಬೇಕೆಂದೂ ಅವರನ್ನು ಹೇಗೆ ಸಂತೈಸಬೇಕೆಂಬುದೇ ಅವನ ಯೋಚನೆಯಾಗಿತ್ತು. ಸಂಜೆ ಹೊತ್ತಿಗೆ ಆ ದುರ್ದೈವಿ ದಂಪತಿಗಳು ಬಂದರು. ಅವರನ್ನು ಕಂಡಕೂಡಲೇ ಮಗುವಿನಂತೆ ಅತ್ತುಬಿಟ್ಟ. ನಿಂತಪೆಟ್ಟಿನಲ್ಲೇ ಮನೆಯ ಮುಂದೆ ಕುಸಿದುಬಿದ್ದ. ಅನಸೂಯ ಮನೆಯೊಳಗೆ ಕಾಲಿಡುವ ಮುನ್ನವೇ ಮೀನಾಕ್ಷಿ ಬಂದು ಅವಳನ್ನು ತಬ್ಬಿಕೊಂಡು ಅಳುತ್ತ ನಿಂತುಬಿಟ್ಟಳು. ಇವರ ಈ ವರ್ತನೆಯನ್ನು ಕಂಡು ಹೌಹಾರಿದ ಈ ದಂಪತಿಗಳಿಗೆ ಯಾವುದೂ ಅರ್ಥವಾಗಲಿಲ್ಲ. ಈ ದುಃಖಮಯ ಸನ್ನಿವೇಶವು ಬಹು ಕರುಣಾಜನಕವಾಗಿತ್ತು. ಅತಿಯಾಗಿ ಪ್ರೀತಿಸಿ, ತಮ್ಮ ಜೀವಕ್ಕಿಂತಲೂ ಹೆಚ್ಚು ಎಚ್ಚರದಿಂದ ಪೋಷಿಸಿ ಬೆಳೆಸಿದ ಮುದ್ದು ಕಂದನನ್ನು ಕಳೆದುಕೊಂಡ ಅವರ ನಿರ್ಭಾಗ್ಯ ಜೀವನ ಎಲ್ಲರೂ ಮರುಗುವಂತಹದಾಗಿತ್ತು. ಇವರಿಗೆ ಸಮಾಧಾನವನ್ನು ಹೇಳುವ ಸಾಮರ್ಥ್ಯ ಯಾರಿಗೂ ಇರಲಿಲ್ಲ. ದು:ಖದಿಂದಲೂ, ಆವೇಗದಿಂದಲೂ ಕಳೆಗುಂದಿದ ಇವರ ಮುಖವನ್ನು ನೋಡಲು ಭಯವೆನಿಸುತ್ತಿತ್ತೆನ್ನಬಹುದು.

ಏರಿಬರುವ ದುಃಖವನ್ನು ತಡೆಯಲಾರದೇ ವೆಂಕಟೇಶ್ವರರಾಯನು "ನನ್ನ ಮಗುವನ್ನು ನಾನು ನೋಡುವುದಕ್ಕೆ ಮುಂಚೆಯೇ ಸ್ಮಶಾನಕ್ಷೇತಕ್ಕೆ ಸಾಗಿಸಿದೆ? ಅವನಿಗೆ ದಹನಸಂಸ್ಕಾರ ಮಾಡುವ ಅಧಿಕಾರ ನಿನಗೆಲ್ಲಿಯದು? ನನ್ನ ಮಗನನ್ನು ನಾನೇ ತೆಗೆದುಕೊಂಡು ಹೋಗುತ್ತಿದ್ದೆನಲ್ಲ? ತಂದೆಯೆಂಬ ಹೆಸರು ಮಾತ್ರ ನನ್ನದಾಯಿತು! ಅಯ್ಯೋ ದೈವವೇ?'' ಎಂದು ರೋದಿಸಿದನು. ಇವನ ಈ ವಿಲಾಪದಲ್ಲಿ ದುಃಖವೂ ಕೋಪವೂ ಮಿಶ್ರಿತವಾಗಿತ್ತು.

ಅವನು ಅದೇ ಕೋಪದ ಭರದಲ್ಲಿ ಗದ್ಗದಿತ ಕಂಠದಿಂದ "ದುರ್ಮಾರ್ಗಾ! ನೀನು ನಮ್ಮ ಪಾಲಿಗೆ ಯಮನಂತೆ ಧಾವಿಸಿ ಬಂದೆ. ನಗುತ್ತ ನಲಿಯುತ್ತಲಿದ್ದ ಮಗುವನ್ನು ನಮ್ಮೂರಿಂದ ಕರೆದುಕೊಂಡು ಬಂದು ಕೊಂದುಬಿಟ್ಟೆ. ಅವನ ಶವವನ್ನೇ ನನಗೆ ತಂದುಕೊಡು. ನನ್ನ ಮಗನ ದೇಹದ ಮೇಲೆ ನನಗೆ ಅಧಿಕಾರವಿಲ್ಲವೇ? ಎಲ್ಲಿರುವನು ಮೂರ್ತಿ! ಮೂರ್ತಿ!! ಮೂರ್ತಿ!!!'' ಎಂದು ಅಳಹತ್ತಿದನು. ಹುಚ್ಚು ಹಿಡಿದವನಂತೆ ಕುಣಿದಾಡುತ್ತಿರುವ ಇವನನ್ನು ಸೂರ್ಯನಾರಾಯಣನು ಅವನೆರಡು ಕೈಗಳಿಂದ ಹಿಡಿದುಕೊಂಡು ಅವನನ್ನು ಅಪ್ಪಿಕೊಳ್ಳುತ್ತ "ನನ್ನನ್ನು ಕ್ಷಮಿಸು! ನನ್ನದು ಮಹದಪರಾಧವಾಯಿತು. ನಿನ್ನ ಋಣವನ್ನು ತೀರಿಸುವೆನು! ನಿನ್ನ ಋಣ ತೀರಿಸಲು ಪ್ರಯತ್ನಿಸುವೆನು. ನನ್ನನ್ನು ಕ್ಷಮಿಸಲಾರೆಯಾ?" ಎಂದು ಬೇಡಿಕೊಂಡನು.

ವೆಂಕಟೇಶ್ವರರಾಯನು ಮತ್ತೇನನ್ನೋ ಹೇಳುವುದರಲ್ಲಿದ್ದನು. ಅವನು ಹೆಚ್ಚೆಚ್ಚು ಅವಾಚ್ಯ ಮಾತುಗಳನಾಡುವುದನ್ನು ತಡೆಯುವ ಉದ್ದೇಶದಿಂದ ಅನುಸೂಯ ಬಂದು ಅವನ ಕೈಹಿಡಿದು "ಸುಮ್ಮನಾಗಿರಿ ವಿಧಿಯವಿಲಾಸವನ್ನು ತಪ್ಪಿಸುವುದು ಸಾಧ್ಯವೆ? ಮೂರ್ತಿಯ ಆಯುಷ್ಯ ತುಂಬಿಬಂದಿತ್ತು. ಈ ಕೆಟ್ಟ ಲೋಕದಲ್ಲಿ ಅವನ ಕೆಲಸ ಮುಗಿದಿರಬೇಕು. ಪರಮಾತ್ಮನ ಲೀಲೆಯ ಮುಂದೆ ನಾವು ಗೊಂಬೆಗಳಲ್ಲವೇ? ಇವರನ್ನು ದೂಷಿಸಿದರೇನು ಪ್ರಯೋಜನ? ಕೊಂಚ ಶಾಂತರಾಗಿರಿ" ಎಂದು ಬೇಡಿಕೊಂಡಳು.

ಆದರೆ ಶೋಕ ತಾಪಗಳಿಂದ ಹಣ್ಣಾದ ವೆಂಕಟೇಶ್ವರರಾಯನ

ಮನಸ್ಸು ಇವಳ ಮಾತಿನಿಂದ ಸಮಾಧಾನವಾಗಲಿಲ್ಲ. ಅವನು ಹೆಚ್ಚಿನ ದುಃಖದಿಂದ ಸೂರ್ಯನಾರಾಯಣನನ್ನು ನೋಡಿ, "ಇಲ್ಲಿ ನೋಡು ಸೂರ್ಯನಾರಾಯಣ, ನೀನು ವಿದ್ಯಾವಂತ, ಧನವಂತ. ನನ್ನ ಮಗ ನನ್ನು ಎಲ್ಲಿ ಮರೆಯಾಗಿಸಿರುವಿ ? ನನಗೆ ಅವನನ್ನು ಕೊಟ್ಟುಬಿಡು. ಅವ ನೊಂದು ರತ್ನದಂತಹ ಹುಡುಗನಯ್ಯಾ. ಅಂತಹ ಮಗುವು ಇನ್ನು ಜನಿಸು ವುದು ಅಶಕ್ಯ. ಮೂರ್ತೀ! ನೀನು ಸಾವನ್ನಪ್ಪಿರುವೆಯೆಂದರೆ ನಾನು ನಂಬಲಾರೆ! ನೀನು ಸತ್ತಿಲ್ಲ. ಇವರು ಸುಳ್ಳುಹೇಳುತ್ತಿರುವರು. ಎಲ್ಲಿ ನನ್ನ ಮೂರ್ತಿಯನ್ನು ತಂದುಕೊಡು. ಸತ್ತವನನ್ನಾದರೂ ತೋರಿಸೊ! ಒಂದು ಸಲ ಹೆತ್ತ ಈ ಪಾಪಿ ಕಣ್ಣುಗಳಿಂದ ನೋಡಿ ಮನಸಾರ ಅತ್ತುಬಿಡು ವೆನು. ಹೆತ್ತವರಿಗೆ ಸತ್ತ ಮಗುವಿನ ಮುಂದೆ ಅಳುವ ಅಧಿಕಾರವನ್ನು ಕಿತ್ತುಕೊಳ್ಳುವ ಅಧಿಕಾರ ನಿನಗಾರು ಕೊಟ್ಟರು? ನೀಚ. ನನ್ನ ಮಗನನ್ನು ನಾನು ಹೂಳಿಡುವೆ, ಬೆಂಕಿಯಲ್ಲಿಡುವೆ. ಅಯ್ಯೋ ಎಂತಹ ನೀಚರು ನಮ್ಮ ಆಫೀಸಿನ ಅಧಿಕಾರಿಗಳು? ನೆನ್ನೆ ನನಗೆ ರಜೆ ಕೊಡಲಿಲ್ಲ! ನೆನ್ನೆಯೇ ನಾನು ಬಂದಿದ್ದರೆ–ಬಂದಿದ್ದರೆ ನನ್ನ ಮಗ ಬದುಕುತ್ತಿದ್ದನಲ್ಲವೆ? ನನ್ನ ಮುದ್ದು ಕಂದಮ್ಮನನ್ನು ನೋಡುವ ಯೋಗವಾದರೂ ಇರುತ್ತಿತ್ತು. ಎಲ್ಲಿ ರುವನು ಮೂರ್ತಿ? ಮೂರ್ತಿಯ ಶವವೆಲ್ಲಿದೆ? ನನ್ನದದು. ಕೊಟ್ಟುಬಿಡು ಒಳ್ಳೆಯ ಮಾತಿನಿಂದ. ಏಕೆ ಸುಮ್ಮನಿರುವೆ? ನೀನೂ ಮನುಷ್ಯನಲ್ಲವೆ? ಹೆತ್ತಕರುಳಿನ ಬೇಗೆ ನಿನಗೆ ತಿಳಿಯುವುದಿಲ್ಲವೆ? ಕೊಡು ನನ್ನ ಮಗನ ಶವವನ್ನು. ಮುದ್ದಿಟ್ಟುಕೊಳ್ಳುವೆ! ಬಚ್ಚಿಟ್ಟುಕೊಳ್ಳುವೆ. ಎಲ್ಲಿ ಮೂರ್ತಿ! ಎಲ್ಲಿ ಮೂರ್ತೀ!! ಮೂರ್ತೀ!!!" ಎಂಬ ಈ ಪ್ರಲಾಪವನ್ನು ಪಕ್ಕದ ಮನೆಯ ಮುದುಕಿಯು ಕಂಡು ಬಹಳ ಕನಿಕರದ ಸ್ವರದಲ್ಲಿ "ಅಪ್ಪಾ ಸತ್ತ ಮಗನನ್ನು ತೆಗೆದುಕೊಂಡು ನೀನೇನು ಮಾಡುವೆ? ಎಂದು ಕೇಳಿದಳು.

"ಏನು ಮಾಡುವೆ? ನನ್ನ ಸ್ವಂತ ಕೈಯಿಂದ ಅವನನ್ನು ಅಪ್ಪಿ ಕೊಂಡು ಆ ನುಣುಪಾದ ಗಲ್ಲಗಳನ್ನು ಮುದ್ದಿಟ್ಟುಕೊಂಡು ನನ್ನ ಮಗ ನನ್ನು ನಾನೇನಾದರೂ ಮಾಡಿಕೊಳ್ಳುತ್ತಿದ್ದೆ. ನನ್ನ ಮಗನ ವಿಚಾರ ನನಗೆ ಸೇರಿದ್ದಾಗಲಿ ಈತನಾರು ನಡುವೆ?"

ಸೂರ್ಯನಾರಾಯಣನು ತನ್ನೆರಡು ಕೈಗಳಿಂದ ಮುಖ ಮುಚ್ಚಿ ಬಿಕ್ಕಿ

ಬಿಕ್ಕಿ ಅಳುತ್ತಿದ್ದನು. ಮೀನಾಕ್ಷಿಗೆ ಇದಾವ ಪ್ರಸಂಗದ ಪರಿವೇ ಇರಲಿಲ್ಲ.

ಯಾರು ಎಷ್ಟು ಬೇಡಿದರೂ ಆ ನಿರ್ಭಾಗ್ಯ ದಂಪತಿಗಳು ಆ ಊರಲ್ಲಿರಲಿಲ್ಲ. ಊಟ ತಿಂಡಿ ಸಹ ಮಾಡದೇ ತಮ್ಮೂರಿಗೆ ಬರಿಗೈಯಿಂದ ನಡದೇ ಬಿಟ್ಟರು. ಹೋಗುವಾಗ ಹಾದಿಯಲ್ಲಿ ಕತ್ತಲಾಗಿದ್ದರೂ ಸ್ಮಶಾನದ ಹತ್ತಿರ ಕೊಂಚ ನಿಂತು ಅತ್ತು ಹೃದಯದಲ್ಲಿಯ ದುಃಖದ ಭಾರವನ್ನು ಕಡಿಮೆ ಮಾಡಿಕೊಂಡರು. ರಾತ್ರಿ ವೇಳೆಯಾದುದರಿಂದ ಆ ಹಳ್ಳಿಯ ಶಾನುಭೋಗನು ರೈಲು ನಿಲ್ದಾಣದ ವರೆಗೆ ಬಂದು ಅವರನ್ನು ಗಾಡಿ ಹತ್ತಿಸಿ ಹಿಂತಿರುಗಿದ.

ಸೂರ್ಯನಾರಾಯಣನು ತನ್ನ ಜೀವನದಲ್ಲಿ ಮಾಡಬಾರದಂತಹ ಮಹಾ ತಪ್ಪು ಮಾಡಿದೆನೆಂದು ಪೇಚಾಡಿಕೊಂಡ. ಮೀನಾಕ್ಷಿ ಸುಮ್ಮನೆ ಮರುಗಿದಳು. ಅವರಿಬ್ಬರೂ ನಿದ್ರಾಹಾರಾದಿಗಳಿಲ್ಲದೆ ದಿನ ಕ್ರಮೇಣ ಕೃಶವಾಗಹತ್ತಿದರು. ಒಂದು ತಿಂಗಳವರೆಗೂ ಅವರು ಮನೆಬಿಟ್ಟು ಹೊರಗೆ ಹೋಗಲೇ ಇಲ್ಲ. ರಜೆ ದಿನಗಳು ಮುಗಿದುದರಿಂದ ಆ ಊರು ಬಿಡಲೇಬೇಕಾಗಿತ್ತು. ಸುಟ್ಟ ಹಪ್ಪಳದಂತೆ ಅವರು ಬಡಕಲಾಗಿದ್ದರು. ತಮ್ಮ ಜೀವನ ಸರ್ವಸ್ವವೇ ಆಗಿದ್ದ ಮೂರ್ತಿಯೋ ತಮ್ಮಿಂದ ದೂರವಾದನಂತರ ನಗರದಲ್ಲಿಯ ಕೆಲಸ ಅನವಶ್ಯಕವೆಂದು ರಾಜೀನಾಮೆಯನ್ನು ಕಳುಹಿದ. ಮಗುವಿನ ಆಭರಣಗಳನ್ನು ಇನ್ಸೂರು ಮಾಡಿ ವೆಂಕಟೇಶ್ವರರಾಯನಿಗೆ ಕಳುಹಿದ. ಅವುಗಳನ್ನು ಅವನು ಸ್ವೀಕರಿಸದೆ ವಾಪಸು ಕಳುಹಿಸಿದ. ಅದೇ ಪೆಟ್ಟಿಗೆಯಲ್ಲಿ ಮುಡುಪಿಟ್ಟಂತೆ ಭದ್ರವಾಗಿದ್ದವು.

ಇವರಿಬ್ಬರಲ್ಲಿ ವಿರೋಧವುಂಟಾದಂತೆ ಭಾಸವಾಯಿತು. ವೆಂಕಟೇಶ್ವರರಾಯನ ಹೆಸರು ನೆನೆಪು ಬಂದಿತೆಂದರೆ ಇವನು ಗಡಗಡ ನಡುಗುತ್ತಿದ್ದ. ಸೂರ್ಯನಾರಾಯಣನ ಜೀವನಕ್ರಮದಲ್ಲಿ ಹೇಳಲಾರದ ಬದಲಾವಣೆಯುಂಟಾಯಿತು. ನಗರದಲ್ಲಿಯ ಬಿಳಿ ಅರಿವೆ ಅಂಚಡಿಗಳ ಷೋಕು ಹೋಯಿತು. ಮನೆಯಲ್ಲಿ ದೇವತಾರ್ಚನೆ ಪುರಾಣ ಪುಣ್ಯ ಪ್ರವಚನಗಳು, ಶ್ರೀಸೂಕ್ತ, ಪುರುಷಸೂಕ್ತದ ಪಾರಾಯಣ, ಮುಂತಾದ ಮಂಗಳ ಕಾರ್ಯಗಳು ನಡೆದವು; ದಿನವೂ ಒಬ್ಬಿಬ್ಬರ ಬ್ರಾಹ್ಮಣ ಸಂತರ್ಪಣೆ. ರತಿಮನ್ಮಥರಂತಿದ್ದ ಮೀನಾಕ್ಷಿ-ಸೂರ್ಯನಾರಾಯಣರು ಬಡವಾಗಿ ಕೃಶರಾದರು. ಅವರ

ಮುಖದಲ್ಲಿಯ ತೇಜಸ್ಸು, ಅಂದಚಂದವೆಲ್ಲವೂ ಮಾಯವಾದವು. ಉತ್ಸಾಹ ವೆಲ್ಲವೂ ಕಡಮೆಯಾಗಿತ್ತು; ಆರೋಗ್ಯವೂ ಅಷ್ಟಕಷ್ಟೇ.

ಎರಡು ವರುಷಗಳು ಕಳೆದವು. ವೆಂಕಟೇಶ್ವರರಾಯನಿಗೆ ಮತ್ತೊಂದು ಹೆಣ್ಣು ಮಗುವು ಜನಿಸಿತು. ಅದರ ಆರೈಕೆ, ಸುಖದ ಆಟಪಾಟಗಳಲ್ಲಿ ಆ ದಂಪತಿಗಳು ತಮ್ಮ ಹಿಂದಿನ ದುಃಖವನ್ನು ಮರೆತುಬಿಟ್ಟರು.

೨

ಮತ್ತೆ ಮೂರು ವರುಷಗಳುರುಳಿದವು. ದೊಡ್ಡ ಬಿರುಗಾಳಿಯು ಮಳೆ ಬಂದು, ಸೂರ್ಯನಾರಾಯಣನ ತೆಂಗಿನ ತೋಟ, ಮಾವಿನತೋಟಗಳು ಹಾಳಾದವು. ಅವರ ಭೂಆದಾಯವು ಕಡಿಮೆಯಾಯಿತು. ಹಳ್ಳಿಯಲ್ಲಿ ರೈತರ ಪ್ರಾಬಲ್ಯವು ಹೆಚ್ಚಿ ಭೂಮಿಯುಳ್ಳವರ ಮೇಲೆ ಸಿಟ್ಟಿನಿಂದ ಅವ ರನ್ನು ನಾನಾಬಗೆಯಾಗಿ ಗೋಳಾಡಿಸಿ ಭೂಮಿಯನ್ನು ಮಾರುವಂತೆ ಮಾಡುತ್ತಿದ್ದರು. ಹಳ್ಳಿಯಲ್ಲಿ ಭೂ ಸಾಗುವಳಿಯಿಂದ ಆದಾಯವು ಕಡಿ ಮೆಯಾದುದರಿಂದ ಸೂರ್ಯನಾರಾಯಣನು ಆ ಹಳ್ಳಿಯನ್ನು ಬಿಟ್ಟು ಮತ್ತೆ ಕೆಲಸ ಹುಡಿಕಿಕೊಂಡು ಮಚಲೀಪಟ್ಟಣಕ್ಕೆ ಬಂದನು. ಕಾಲೇಜಿನಲ್ಲಿ ಕೆಲಸ ದೊರೆಯಿತು. ಒಂದು ದಿನ ಸಂಜೆ ಪೇಟೆಯಲ್ಲಿ ವೆಂಕಟೇಶ್ವರನು ಕಾಣಿಸಿಕೊಂಡನು. ಅವನನ್ನು ಕಂಡಕೂಡಲೇ ಸೂರ್ಯನಾರಾಯಣನು ತಲೆಬಾಗಿಸಿದರೂ ಬಿಡದೇ "ಮನೆಗೊಂದು ದಿನ ಬನ್ನಿ, ನನ್ನ ಮಗಳನ್ನು ನೋಡಿಹೋಗುವಿರಂತೆ. ನಾಳೆಯೇ ರವಿವಾರ ಬಂದು ಬಿಡಿ; ವೈನಿಯವ ರನ್ನೂ ಕರೆದುಕೊಂಡು ಬನ್ನಿ" ಎಂದು ಸೂಚಿಸಿದ. ಆ ಮಾತನ್ನು ರಾತ್ರಿ ಮೀನಾಕ್ಷಿಯ ಮುಂದೆ ಹೇಳಿದ. ಇವರ ಬರುವಿಕೆಯ ಸಮಾಚಾರ ಅನುಸೂಯಳಿಗೆ ಗಂಡನ ಮುಖಾಂತರ ತಿಳಿಯಿತು.

ರವಿವಾರ ಇವರು ಹೋಗಲಿಲ್ಲ. ಆದರೆ ಅನುಸೂಯಳಿಗೆ ಮನಸ್ಸು ನಿಲ್ಲಲಿಲ್ಲ. ಅವರಿದ್ದ ಮನೆಯ ವಿವರವನ್ನು ತಿಳಿದುಕೊಂಡು ನಾಲ್ಕಾರು ದಿನಗಳಾದ ನಂತರ ಮೀನಾಕ್ಷಿಯನ್ನು ಕಂಡಳು. ಮೊದಲಿಗೆ ಇಬ್ಬರೂ ಮೂರ್ತಿಯನ್ನು ನೆನೆದು ಕಣ್ಣೀರಿಟ್ಟುಕೊಂಡರೂ ಅವರಿಬ್ಬರಲ್ಲಿ ಮುಂದೆ ಮಾತುಕತೆ ಧಾರಾಳವಾಗಿ ನಡೆಯಿತು. ಮೀನಾಕ್ಷಿಯು ಆಗ ಐದು ತಿಂಗಳ ಗರ್ಭಿಣಿಯೆಂದು ತಿಳಿದು ಬಂತು. "ಅಕ್ಕಾ, ನೀವು ಬಾಡಿಗೆಗಿದ್ದ ಭಾಗದ

ಲ್ಲಿದ್ದವರು ಸರಿಯಾದವರಲ್ಲ. ನೆರೆಹೊರೆಯು ನೆರವಿಲ್ಲ. ಮಾತುಕತೆಯೂ ಕಡಿಮೆ. ಅವರಿಗೆ ವರ್ಗವಾಗಿದೆಯಂತೆ; ಇನ್ನೆರಡು ದಿನಗಳಲ್ಲಿ ಅವರು ಮನೆ ತೆರವು ಮಾಡುವರು; ನೀವು ಬಂದರೆ ಒಳಿತಲ್ಲವೆ?" ಎಂದು ಸೂಚಿಸಿದಳು.

ಮೀನಾಕ್ಷಿಯು ಹಡೆಯಲು ಅವರ ತವರೂರಿಗೆ ಹೋದಳು. ಮುಂದೆ ಏಳೆಂಟು ತಿಂಗಳು ಸೂರ್ಯನಾರಾಯಣನು ಹೋಟಲಿನಲ್ಲಿದ್ದುಬಿಟ್ಟನು. ತನ್ನ ಮಗಳ ಹುಟ್ಟಿದ ಹಬ್ಬದ ದಿನ ಊಟಕ್ಕೆ ಬಲವಂತಮಾಡಿ ಇವನನ್ನು ವೆಂಕಟೇಶ್ವರರಾಯನು ಕರೆದುಕೊಂಡು ಹೋದನು. ಊಟವಾದ ನಂತರ ಏನೋ ತಪ್ಪುಮಾಡಿದವನಂತೆ ತಲೆತಗ್ಗಿಸಿಕೊಂಡು ಕುಳಿತಿದ್ದನು.

ಮತ್ತೆ ಅವರಿಬ್ಬರಿಗೂ ಸ್ನೇಹಬೇಳೆಯಿತು. ಮಣ್ಣುಮುಕ್ಕಿಹೋದ ಮೂರ್ತಿಯ ಮೂಲಕ ಇಬ್ಬರಲ್ಲಿಯೂ ವೈರತ್ವವೇಕೆಯೆಂದು ಹಿಂದಿನಂತೆ ಇವರು ಬೆರೆಯತೊಡಗಿದರು. ಸೂರ್ಯನಾರಾಯಣನಿಗೆ ಒಂದು ದಿನ ಜ್ವರ ಬರಲು ಹೋಟಲಿನಲ್ಲಿ ಬೇಡವೆಂದು ಬಲವಂತದಿಂದ ತಮ್ಮ ಮನೆಗೆ ಕರೆತಂದ. ಮೀನಾಕ್ಷಿ ಗಂಡು ಮಗುವನ್ನು ಹೆತ್ತಳೆಂಬ ಸುದ್ದಿ ಎಲ್ಲರಲ್ಲಿಯೂ ಹರುಷವನ್ನುಂಟು ಮಾಡಿತು. ಅವಳನ್ನು ಕರೆತರುವ ದಿನಗಳೂ ಬಂದವು. ದೂರ ಮನೆ ಬೇಡವೆಂದು ಅನಸೂಯಳ ಬಲಾತ್ಕಾರದ ಮೇಲೆ ಅವರ ಮನೆಯ ಇನ್ನೊಂದು ಭಾಗದಲ್ಲಿರಬೇಕೆಂದು ನಿರ್ಧಾರವಾಯಿತು.

ಮೀನಾಕ್ಷಿಗೆ ಹುಟ್ಟಿದ ಮಗು ತದ್ರೂಪ ಮೂರ್ತಿಯಂತೇ ಇರುವುದನ್ನು ಕಂಡು ಅನಸೂಯ ಹಿಗ್ಗಿದಳು. "ಭವದ ಹಂಗನ್ನು ಹಿಂಗಿಸಲು ಬಂದ ರಂಗನಾಥ"ನನ್ನು ಬಹು ಅಕ್ಕರೆಯಿಂದ ಆರೈಸಿದರು. ಕೂಸು ಎರಡು ವರುಷದಲ್ಲಿ ಬೆಳೆದು ನಿಂತಿತು. ಕೃಷ್ಣಮೂರ್ತಿಯೆಂಬ ತಾತನ ಹೆಸರೇ ಅವನಿಗೂ ನಾಮಕರಣ ಮಾಡಲಾಗಿತ್ತು.

ಕಣ್ಮರೆಯಾದ ಮೂರ್ತಿಯೇ ಮೂರ್ತೀಭವಿಸಿ ಬಂದಂತೆ ಬೀದಿಯ ಜನರೆಲ್ಲರೂ ಭಾವಿಸಿದರು. ರಾಮಕೃಷ್ಣರಂತೆ ಇವರಿಬ್ಬರ ಮನೆತನಗಳು ಬೆಳೆಯಲೆಂದು ಹರಸಿದರು.

ಮೀನಾಕ್ಷಿಗೆ ಈಗ ಮಕ್ಕಳೆಂದರೆ ಅಷ್ಟು ಅಕ್ಕರೆ ಇಲ್ಲ; ಉತ್ಸಾಹವಿಲ್ಲ. ಅವರ ಆರೈಕೆಯಲ್ಲಿ ಶ್ರದ್ಧೆ ಇರಲಿಲ್ಲ. ಈ ಅನಾದರಣೆ ಒಳ್ಳೆಯದಲ್ಲವೆಂದು

ಅನಸೂಯಳು ಅನೇಕ ಸಲ ಎಚ್ಚರಿಸಿದ್ದಳು. ಎಲ್ಲಕ್ಕೂ ವೇದಾಂತದ ಮಾತುಗಳನ್ನಾಡಿಬಿಡುತ್ತಿದ್ದಳು. "ದೇವರು ಅವರನ್ನು ಕಾಪಾಡಬೇಕು ನಾವು ಆತನ ಕೈಗೊಂಬೆಗಳು'' ಎಂದು ಹೇಳುತ್ತಿದ್ದಳು. ಈ ಬಗೆಯ ಉದಾಸೀನತೆ ಇವಳಲ್ಲಿ ಮನೆಮಾಡಿಕೊಂಡಿದುದಕ್ಕೆ ಅನಸೂಯಳು ಬಹಳ ಚಿಂತಿಸಿದಳು.

ಹುಡುಗನಿಗೆ ಮೂರು ತುಂಬಿ ನಾಲ್ಕರಲ್ಲಿ ಬೀಳುವ ದಿನ ಅಂದು ಹುಟ್ಟಿದ ದಿನ ಮಾಡಬೇಕೆಂದರೆ ಮೀನಾಕ್ಷಿ ಒಪ್ಪಲಿಲ್ಲ. ಅಂದವನಿಗೆ ಅನಸೂಯಳು ಎರೆದು ತಮ್ಮ ಮನೆಯಲ್ಲಿ ಹಬ್ಬಮಾಡಿ ಸಂಜೆ ಆರತಿ ಅಕ್ಷತೆ ಮಾಡಿದಳು.

ಮಳೆಗಾಲವಾರಂಭವಾಯಿತು. ಮಚಲೀಪಟ್ಟಣವು ಸಮುದ್ರ ತೀರ ಪ್ರದೇಶವಾದುದರಿಂದ ಮಳೆ ಆರಂಭವಾಯಿತೆಂದರೆ ತೆರಪಿಲ್ಲದೆ ಸುರಿಯುವುದು. ಹುಡುಗನಿಗೆ ನೆಗಡಿಯಿಂದ ಆರಂಭವಾದ ಬೇನೆ ವಿಪರೀತಕ್ಕಿಟ್ಟುಕೊಂಡಿತು. ಆದರೂ ಮೀನಾಕ್ಷಿಯು ಯಾವ ಔಷಧ ಉಪಚಾರ ಮಾಡದೆ ಸುಮ್ಮನಿರುವುದನ್ನು ಕಂಡು ಅನಸೂಯಳು ಮರುಗಿದಳು. ನೆಗಡಿ ಜ್ವರಕ್ಕೆ ಡಾಕ್ಟರೇಕೆಂದು ಮೀನಾಕ್ಷಿ ಸುಮ್ಮನಿದ್ದಳೆಂಬ ವಿಷಯ ಕೇಳಿ ವೆಂಕಟೇಶ್ವರರಾಯನು ತನ್ನ ಮಿತ್ರನಾದೊಬ್ಬ ಡಾಕ್ಟರರನ್ನು ಕರೆದುಕೊಂಡು ಬಂದು ಔಷಧ ಕೊಡಿಸಿದ. ಮೂರನೆಯ ದಿನ ಮೀನಾಕ್ಷಿ-ಸೂರ್ಯನಾರಾಯಣರಿಗೂ ಜ್ವರ ಬಂದುದರಿಂದ ಹುಡುಗನ ಆರೈಕೆ ಅನಸೂಯಳೇ ಮಾಡಬೇಕಾಯಿತು. ಬೇನೆ ಬಲವಾಗಿ ಸಂಜೆ ಕಫಹೆಚ್ಚಿ ಹುಡುಗ ರಾತ್ರಿ ಕಳೆಯುವದರೊಳಗಾಗಿ ತೀರಿಕೊಂಡ.

ಮತ್ತೇನು? ಹುಡುಗನ ತಂದೆತಾಯಿಗಳು ಹಾಸಿಗೆಯ ಮೇಲೆ ಮಲಗಿರುವರು. ಅವರ ಬೇನೆಯು ಬಲವಾದುದರಿಂದ ಬಾಲಕನ ಶವ ಸಂಸ್ಕಾರವನ್ನು ವೆಂಕಟೇಶ್ವರರಾಯನೇ ಮಾಡಬೇಕಾಗಿ ಬಂತು; ಅವನನ್ನು ಆಸಕ್ತಿವಹಿಸಿ ಬೆಳೆಸಿದ ಅನಸೂಯಳಿಗೆ ಬಹಳ ನೋವಾದುದರಿಂದ ಅವಳ ದುಃಖ ಹೇಳತೀರದು.

ಸೂರ್ಯನಾರಾಯಣನು ಮಲಗಿದ ಹಾಸಿಗೆಯಿಂದಲೇ ಅಳುತ್ತ ಹಿಂದಿನದೆಲ್ಲವೂ ನೆನಪಿಗೆ ಬರಲು, ದೆವ್ವಬಡಿದವನಂತೆ ಸಿಡಿದೆದ್ದು ಕೂತು

ಆವೇಶದಿಂದ “ ವೆಂಕಟೇಶ್ವರರಾವು ಈ ಹುಡುಗನನ್ನು ಸ್ಮಶಾನಕ್ಕೆ ತಗೆದು ಕೊಂಡು ಹೋಗು. ನೀನೇ ಎಲ್ಲವನ್ನೂ ನೋಡಿಕೋ; ಹುಡುಗನನ್ನು ಎದೆಗೆ ಪ್ರೀತಿಯಿಂದ ಅಪ್ಪಿಕೊಂಡು ಹೋಗು. ಕೆಳಗೆ ಬಿದ್ದರೆ ಒಳಿತಲ್ಲ. ಆ ನಿನ್ನ ಮಗನನ್ನು ಅಂದು ನಾನು........ ಅವನೇ ಇವನು. ನಿನ್ನ ಮಗನನ್ನು ಇಂದು ನಿನಗೆ ಅರ್ಪಿಸಿದ್ದೇನೆ. ನಿನ್ನ ಋಣವನ್ನು ತೀರಿಸಿಕೊಂಡೆ. ಇನ್ನು ಮೇಲೆ ನಿನಗಿಷ್ಟಬಂದಂತೆ ವರ್ತಿಸು. ನನ್ನ ಅಭ್ಯಂತರವಿಲ್ಲ” ಎಂದು ಹುಚ್ಚನಂತೆ ಪೇಚಾಡಿದ. ಅವನ ಪ್ರಲಾಪಕ್ಕೆ ಬೆಲೆಕೊಟ್ಟು ಮರುಮಾತಾಡುವುದು ಒಳಿತಲ್ಲವೆಂದು ಭಾವಿಸಿ ಸದ್ದಿಲ್ಲದೆ ತನ್ನ ಮಿತ್ರರ ನೆರವಿನಿಂದ ಹುಡುಗನನ್ನು ಸ್ಮಶಾನಕ್ಕೆ ಸಾಗಿಸಿದ ವೆಂಕಟೇಶರಾವು.

* * * *

ಮತ್ತೊಂದು ವರುಷ ಮುಂದರಿಯಿತು. ಈಗ ಮೀನಾಕ್ಷಿಯು ಆರೋಗ್ಯವಾಗಿದ್ದಾಳೆ. ಹಿಂದೆ ಅವಳಲ್ಲಿದ್ದ ಕಳೆ ಬಂದಿದೆ. ಹದಿನಾರು ವಯಸ್ಸಿನ ಯುವತಿಯಂತೆ ಕಾಣುತ್ತಿದ್ದಾಳೆ. ಉತ್ಸಾಹ, ಹುಮ್ಮಸ್ಸು ಆನಂದ ತಾಂಡವವಾಡುತ್ತಿವೆ, ಅವರಿಬ್ಬರ ಸುಂದರ ಮುಖಗಳ ಮೇಲೆಯೂ.

ಸೂರ್ಯನಾರಾಯಣ ತನ್ನ ನಲವತ್ತರ ವಯಸ್ಸಿನಲ್ಲಿ ಪರಲೋಕವನ್ನು ಸೇರಿದ. ಮತ್ತೆ ಆ ಮನೆತನದಲ್ಲಿ ಮಕ್ಕಳೇ ಜನಿಸಲಿಲ್ಲ.

# ಸಂಕ್ರಾಂತಿ ಹಬ್ಬ

" ಏನೇ, ಕಾಯಿಪಲ್ಯಾಕ್ಕೇಂತ ನಾ ಬಜಾರಕ್ಕೆ ಹೋಗ್ತಾ ಇದ್ದೀನಿ " ಎಂದು ಒದರಿ ಹೇಳಿ ಹೊರಬೀಳುವುದರಲ್ಲಿದ್ದೆ.

ಕಾಂತಂ ಆ ಹೊತ್ತಿಗೆ ಎಣ್ಣೇಸ್ನಾನ ಮಾಡಿ, ಹೊಸ ಸೀರೆಯು ನ್ನುಟ್ಟು ಹೂ ಮುಡಿದು ತುಳಸೀ ಪೂಜೆಯಲ್ಲಿ ತೊಡಗಿದ್ದಳು.

" ಒಂದು ಮಿನಿಟು ನಿಲ್ಲ್ರಿ. ಬಂದುಬಿಟ್ಟೆ " ಎಂದು ಹಿತ್ತಲಿನಿಂದಲೇ ಹೇಳಿ ಬೇಗ ಬಂದು ನಿಂತಳು.

ನಲವತ್ತು ವರುಷದ ಹಿರಿಯ ಮುತ್ತೈದೆ. ಥಾಳವಾದ ಕುಂಕುಮ ಹಣೆಯಲ್ಲಿ ಅರಳಿದ ದೊಡ್ಡ ಕಣ್ಣುಗಳು; ನಿರಿಗೆ ಬಿದ್ದ ಗಲ್ಲಗಳು; ಆರು ಮಕ್ಕಳ ಮಹಾತಾಯಿ!

ಈ ಮಹಾತಾಯಿಯನ್ನು ಯಾರು ನೋಡಿದರೂ—ನನ್ನೊಬ್ಬನನ್ನು ಬಿಟ್ಟು—ಕೈಎತ್ತಿ ನಮಸ್ಕರಿಸುವರು. ಅವಳು ಬೇಗ ಬಂದು " ನೊಡ್ರೀ ಪೇಟೆಯಲ್ಲಿ ಕಾಯಿಪಲ್ಯ ತಗದುಕೊಂಡವರೇ ಮನೆಗೆ ಬರಬೇಕು ಮತ್ತೆ. ಹಾದೀಲಿ ಹರಟೆಗೆಂದು ನಿಂತುಬಿಟ್ಟರೆ ಕೆಲಸಽಽ........ತಿಳೀತೇ '' ಎಂದು ಅಪ್ಪಣೆ ಕೊಡಿಸಿದಳು.

" ತಿಳೀತು ಮಹಾರಾಯಳೇ, ತಿಳೀತು "

" ಒಂದು ಪಂಚೇರು ಬದನೇಕಾಯಿ, ಮೂರು ಸೇರು ಬೆಂಡೇಕಾಯಿ ಮತ್ತೆ ಕೊಂಚ ಟೊಮ್ಯಾಟೊ........" ಎಂದು ಏನೇನನ್ನೋ ಹೇಳುವುದರಲ್ಲಿದ್ದಳು.

'' ಇರಲಿ ಅಷ್ಟೆಲ್ಲಾ ತರಬೇಕಂದ್ರೆ ರೊಕ್ಕಾ ಎಷ್ಟುಬೇಕಂಬೋದು ಯೋಚನೆ ಮಾಡಿದ್ದೀಯಾ ಅಂದೆ "

" ಆಲೋಚನೆ ಮಾಡದೇ ಸುಮ್ಮನೆ ಹೆಳ್ತೀನೇಮತ್ತೆ. ಎಷ್ಟಾದ್ರೇನು ? ತಂದೇತೀರಬೇಕಲ್ಲವೆ ?''

ರಾಣೀಸಾಹೇಬರ ಆಜ್ಞೆ; ಆಯಿತು ಸಾಕಷ್ಟು ಹಣ ತಗೆದುಕೊಂಡು ಹೊಸಿಲು ದಾಟುತ್ತಿರುವಾಗ ಅವಳು "ನೋಡ್ರಿಲ್ಲಿ, ನೀವು ಹೋಗೋ ಹಾದ್ಯಾಗೇ ಹಾಲಿನವನ ಮನೆ ಇದೆ. ಒಂದು ಸೇರು ಹಾಲು ಹೆಚ್ಚು ಕಳಿಸ ಬೇಕೆಂದು ಹೇಳ್ರಿ. ಮರ್ತೀರಾ ಮತ್ತೆ." ಎಂದು ಎಚ್ಚರದ ಮಾತು ಹೇಳಿದಳು.

ಆಗಲೆಂದು ತಲೆಯನ್ನಲ್ಲಾಡಿಸಿ ಹೊರಡುವುದರಲ್ಲಿದ್ದ ನನ್ನನ್ನು ಮತ್ತೆ ತಡೆದು "ಬದನೆಕಾಯಿ ಅಳಿಯದೇವರಿಗೆ ಆಗದಂತೆ. ಕ್ಯಾಬೇಜು ತರಬೇಕು" ಎಂದು ಸವರಣೆ ಹೇಳಿದಳು.

ಈ ದುರ್ಭಿಕ್ಷೆಯ ಕಾಲದಲ್ಲಿ ಪದಾರ್ಥಗಳ ಬೆಲೆ ಎಷ್ಟರಮಟ್ಟಿಗೆ ಏರಿ ವೆಯೆಂಬುವುದು ಮನೆಯವರಿಗೇನು ಗೊತ್ತು.? ಒಂದು ವೇಳೆ ತಿಳಿದಿದ್ದರೂ ಆಡಂಬರಕ್ಕೆ ಎಲ್ಲವೂ ಆಗಲೇಬೇಕಲ್ಲ. ಪಾಪ, ಅವಳನ್ನು ಅಂದು ಏನು ಪ್ರಯೋಜನ? ಅಳಿಯದೇವರಿಗೆ ಸರಿಬೀಳುವ ಅಡಿಗೆ ಅವಳಿಗಲ್ಲದೆ ನನ ಗೆಲ್ಲಿಯ ಪರಿಚಯ.?

ಪೇಟೆಯನ್ನು ಸೇರಲು ಅವಸರದಿಂದ ಹೋಗುತ್ತಿದ್ದೆ. ಕಿಸೆಯಲ್ಲಿದ್ದ ಐದು ರೂಪಾಯಿಯ ನೋಟಿನ ಮೇಲೆ ನನ್ನ ಕೈಯಿತ್ತು. ಅದನ್ನು ದೀನವ ದನದಿಂದ ನೋಡಿದೆ. ಸಂಜೆಯೊಳಗಾಗಿ ಮಾಯುವಾಗುವುದೆಂದು ನನಗೆ ಅಯ್ಯೋಯೆನಿಸಿತು.

ಅಳಿಯದೇವರ ಆಗಮನ ಮತ್ತೇನು? ಎಲ್ಲವೂ ಗಡಿಬಿಡಿಯೇ.

ಅರ್ಧದಾರಿಯಲ್ಲಿ ನಾನಿರುವಾಗ ನಮ್ಮ ರಾಧಾಕೃಷ್ಣ ಓಡಿಬಂದು "ಅಪ್ಪಾ ಸಂಜೆಗೆಂದು ಬೇರೇ ಸವತೇಕಾಯೋ ಮತ್ತೇನನ್ನೊ ತರಬೇ ಕಂತೆ. ಮೇಲೆ ಮಧ್ಯಾಹ್ನದ ಫಲಹಾರಕ್ಕೆಂದು ಕಡ್ಲಿಹಿಟ್ಟಾಗಲಿ, ಮೈದಾ ಹಿಟ್ಟಾಗಲಿ ಬೇಕಂತಪ್ಪ. ಅಮ್ಮ ಹೇಳ್ಯಾಳೆ. ನೋಡು ಸಕ್ಕರಿ ಬೇರೆ ಮರೆಯಬಾರದಂತೆ" ಎಂದು ಎಚ್ಚರಿಸಿದ. ಆಯಿತು ಅಳಿಯದೇವರ ಗಡಿಬಿಡಿಯಲ್ಲಿ ನಾನೊಬ್ಬ ಅವಸರದಿಂದ ವರ್ತಿಸದಿದ್ದರೆ ಹೇಗೆ ಎಂದು ಬೇಗ ಹೆಜ್ಜೆಹಾಕತೊಡಗಿದೆ.

೨

ಅರ್ಧಗಂಟೆಯೊಳಗಾಗಿ ಪೇಟೆಯಿಂದ ಮನೆಗೆ ಬಂದು ಸೇರಿದೆ. ಮನೆ

ಯಲ್ಲಿ ಎಲ್ಲರಮೇಲೂ ಅವಳ ದರ್ಪ ನಡೆದಿದೆ. ಆಕೆಯ ಸರ್ವಾಧಿಕಾರಿತನ ವನ್ನು ನೋಡಿ ನನಗೆ ನಗುಬಂತು. ಅವಳ ಮಾತು ಕೇಳುತ್ತ ಅಲ್ಲೇ ನಿಂತುಬಿಟ್ಟೆ.

" ಏನಮ್ಮಾ ಅದು ನಿನ್ನ ಹಟ! ಅಲ್ಲಾ ರುಕ್ಮಣಿ ಗಂಡ ಹಬ್ಬಕ್ಕೆ ಬರ್ತಾನೇಂದ್ರೆ ನೀನು ಎರಕೊಳ್ಳದೇ ಹಾಗೇ ಸುಮ್ಮನಿರೋದೆ? ಅಲ್ಲಾ ಆತ ಬರ್ತಾನೆಂತ ನಿನಗೆ ಸ್ವಲ್ಪಾದರೂ........ಇಲ್ಲವೇನೆ? ಏನೊಮ್ಮ ಈಗಿನ ಕಾಲದ ಹುಡುಗರು........ರಾಧಾಕಷ್ಟ, ಬೇಗ ಪೇಟೆಗೆ ಹೋಗಿ, ಇನ್ನೇನು ನಿಮ್ಮ ಭಾವ ಬರೋ ಹೊತ್ತಾತು, ಸೇರೂವರಿ ಅಡಿಕೆ, ಎರಡು ನೂರು ವಿಳ್ಳೇದೆಲಿ, ಲವಂಗ, ಯಾಲಕ್ಕಿ, ತೊಗೊಂಡು ಬಾ ಅಂತ ಹೇಳಿ ಎಷ್ಟು ಹೊತ್ತಾತು. ಇನ್ನೂ ಇಲ್ಲೇ ಇದ್ದಿಯಾ?...........ಥೂ ಪೇಟೆಗೆ ಹೋದ ಮಹಾನುಭಾವರು ಅಲ್ಲೇ ಕುಳಿತುಬಿಟ್ಟರೋ ಏನೋ? ಇಷ್ಟು ಹೊತ್ತಾದರೂ ಪಲ್ಯಕಾಯಿ ಬರದೇ ಇದ್ದರೆ ಅಡಿಗೆ ತಯಾರಾಗೋದು ಹೇಗೆ? ಇವತ್ತಾದರೂ ಕೊಂಚ ಅವಸರದಿಂದ ಕೆಲಸ ಮಾಡಬೇಕೆಂದು ದೇವರು ಅವರಿಗೆ ಬುದ್ಧಿಕೊಡಬಾರದಾಗಿತ್ತೆ? ಎಷ್ಟು ಹೇಳಿಕೊಂಡೇನು ಪ್ರಯೋಜನ? ಅವರ ಸ್ವಭಾವ ಗೊತ್ತೇ ಇದೆ........ ಏ ಶಾಸ್ತ್ರಿ, ನೋಡು ಆ ಬಸಪ್ಪ ಹಾಲು ತರಲೇ ಇಲ್ಲ. ನೀನೇ ಹೋಗಿಬಾರೋಂತ ಹೇಳಿದೆ. ನಿನಗೆ ಮನಸ್ಸು ಬರಬೇಕಲ್ಲ? ಎಳಪ್ಪ ಏಳು ಹೋಗಿಬಾ. ಅವನಿಗೆ ಹೇಳು, ನಮ್ಮ ಭಾವ ಇವತ್ತು ಬರ್ತಾನೆ, ಬೇಗ ಹಾಲು ತರಬೇಕಂತೇಂತ ನಮ್ಮಮ್ಮ ಹೇಳಿದಳೂಂತ ಹೇಳಿ ತೆಗೆದುಕೊಂಡುಬಾ. ನಡೀಪ್ಪಾ ಅಂದ್ರೆ........ಏಳಮ್ಮಾ ಏಳು. ತಲೆ ಒಣಗಿರಬಹುದು. ಜಡೆ ಹಾಕ್ಕೊಂಡು ಸಿಲ್ಕು ಸೀರೆ ಉಟ್ಟು ಅವರಿಗೆ ಹೂ ತರಬೇಕೆಂಬೋ ಮಾತು ಹೇಳೋದೇ ಮರೆತುಬಿಟ್ಟೆ. ಈ ಅವಸರದಲ್ಲಿ ನನ್ನ ತಲೆ ಕೆಟ್ಟುಹೋಗಿದೆ. ಅವರಿನ್ನೂ ಪೇಟೆಯಲ್ಲಿಯೇ ಇರಬಹುದು. ಹೇಳಿಬಾರಮ್ಮ; ನಮ್ಮಮ್ಮಲ್ಲ ನೀನು. ಹೋಗಮ್ಮ ಅಂದ್ರೆ........ಪಾಪಾ ಏನೇ ಇದು? ಭಾವ ಬರ್ತಾನೇಂದ್ರೆ ನೀನಿನ್ನೂ ಹಾಗೇ ಇದ್ದಿಯಾ? ಸ್ನಾನಾ ಮಾಡಿ ಹೊಸ ಪರಿಕ್ಕಾರ ಉಟ್ಟುಕೊಳ್ಳಮ್ಮ "

" ನನಗೂ ಈಗಲೇ ಬಂದದೆ ಹಾಳು ರೋಗ. ಟೊಂಕ ಒಂದೇಸವಸೆ

ಸೂಲಿ; ಟೆಂವ್, ಟೆಂವ್ ಅಂತ ಮೀಟ್ತಾಯಿದೆ. ಪಲ್ಯಕಾಯಿ ಬರಲಿಲ್ಲ ಇನ್ನೂ ಅಡಿಗೆ ಯಾವಾಗ ಆಗಬೇಕು, ಏನುಕಥೆ? ಆಗಲೇ ಒಂಭತ್ತು ಹೊಡಿತೂಂತ ಕಾಣುತ್ತೆ. ಪಾಪಾ, ಹಾಗೇ ಬೀದೀ ಕಡೆ ನೋಡಮ್ಮ, ನಿಮ್ಮಪ್ಪ ಬರ್ತಾರೇನೋಂತ."

ನನ್ನವಳ ಈ ಪ್ರಲಾಪ ನೋಡಿ ನನಗೆ ಅಯ್ಯೋಯೆನಿಸಿತು. ಮನೇಗೆ ಅಳಿಯದೇವರು ಬರೋವಾಗ ಇಷ್ಟಾದರೂ ಗಡಿಬಿಡಿ ಮಾಡದಿದ್ದರೆ ಅಳಿಯ ಬರ್ತಾನೇಂತ ನೆರೆಹೊರೆಯವರಿಗೆ ತಿಳಿಯೋದು ಹೇಗೆ?

೩

"ಪಲ್ಯಕಾಯಿ ತಂದೀನಿ ಮಹಾರಾಯಳೇ" ಎಂದು ಹೇಳುತ್ತ ಅವಳ ಎದುರಿಗೆ ಬಂದು ನಿಂತೆ.

ಅವಳು ನಗುನಗುತ್ತ "ಅಲ್ಲಾ ನಿಮ್ಮ ಮನಿ ಬಂಗಾರಾಗಲೀ ಅಂತೀನಿ. ಯಾಕೆ ಇಷ್ಟು ತಡವಾಯಿತು?

"ನೋಡು ಅಲ್ಲೇ ನಿಲ್ಲು. ಯಾಕೆ ಎದ್ದು ಬಂದು ನನ್ನಮುಂದೆ ನಿಲ್ಲುತ್ತೀ?" ಎಂದು ಅವಳನ್ನು ತಡೆದೆ.

ತಂದ ಪಲ್ಯಕಾಯಿ ನೆಲದ ಮೇಲೆ ಸುರುವುವ ಹೊತ್ತಿಗೆ ಬಸಪ್ಪ ಹಾಲು ತಂದ. ರಾಧಾಕೃಷ್ಣ ವಿಳ್ಳೇದೆಲೆ ಮುಂತಾದವುಗಳಿಂದ ಬಂದೊದಗಿದ ದೊಡ್ಡ ಮಗಳು ಸೀರೆ ಉಟ್ಟು ತಯಾರಾದಳು. ಪಾಪಾ ಹೊಸ ಪರಿಕ್ಯಾರ ಉಟ್ಟು ಸಿದ್ಧವಾದಳು. ನನ್ನಾಕೆಯ ಮುಖವರಳಿತು. ಕಣ್ಣಲ್ಲಿ ಆನಂದದ ರಭಸ ಕುಣಿಯಹತ್ತಿತು. ಹರುಷದಿಂದ ಎಲ್ಲರನ್ನೂ ಒಂದು ಸಲ ಅರಳಿದ ಕಣ್ಣುಗಳಿಂದ ನೋಡಿದಳು.

"ನಮ್ಮಪ್ಪ ಬಹು ಒಳ್ಳೇ ಹುಡುಗ ನೋಡ್ರೀ. ಎಂದಿಗಾದ್ರೂ ಇವನೇ ನನಗೆ ಎರಡು ತುತ್ತು ಅನ್ನ ಹಾಕೋದೂ ಅಂತ ತಿಳಿದೀನ್ರಿ, ಎಂದು ಹೇಳಿ ದೊಡ್ಡ ಮಗವನ್ನು ಕರೆದು ರೈಲು ಬರುವ ವೇಳೆ ಆಯಿತೇನೊ ಗಂಟೆ ನೋಡೆಂದು ಸೂಚಿಸಿದಳು. ಪಾಪಳನ್ನೂ ಹತ್ತಿರ ಕರೆದುಕೊಂಡು "ನೀನು ನನ್ನ ಅರಗಿಳಿ ಅಲ್ಲವೇನಮ್ಮ! ನೀನು ಚಲೋ ಹುಡುಗಿ ಇಲ್ನೋಡು ಭಾವ ಬಂದು ಕರೆದಾಂದ್ರೆ ಮಂಕಳಂತೆ ದೂರ ದೂರ ನಿಲ್ಲಬಾರದಮ್ಮಾ; ಅವರ ಹತ್ತಿರಾನೇ ಇದ್ದು ಏನೇನುಬೇಕೋ ತಿಳಿಕೊಂಡು

ನನಗೆ ಹೇಳಬೇಕು” ಎಂದು ಮುದ್ದಿಸಿದಳು.

“ಇಲ್ನೋಡು ಶಾಸ್ತ್ರೀ, ಭಾವನವರ ಗಾಡಿ ಬಾಗಿಲಲ್ಲಿ ಬಂತೂಂದ್ರೆ, ಅವರ ಸಾಮಾನುಗಳನ್ನೆಲ್ಲ ಮನೆಯಲ್ಲಿ ತಂದಿಡಬೇಕು.” ಎಂದು ಆವ ನನ್ನು ಎಚ್ಚರಿಸಿ “ರಾಧಾಕೃಷ್ಣ, ಅವರು ಬಂದ್ರೂಂದ್ರೆ ಕಾಲು ತೊಳೆಯೋಕೆ ನೀರು ನಾನೇ ಕೊಡ್ತೇನಿ, ನೀನು ಟವಲಿನಿಂದ ಸಿದ್ಧವಾಗಿರಬೇಕು. ತಿಳೀತೆ” ಎಂಬುದಾಗಿ ಮನೆಯವರೆಲ್ಲರಿಗೂ ಅವರವರ ಕೆಲಸಗಳ ವಿವರಗಳನ್ನು ಸೂಚಿಸಿದಳು.

“ನ್ನನ ಕೆಲಸ ಏನೇಂಬೋದು ಅಪ್ಪಣೆ ಕೊಡಿಸಲೇ ಇಲ್ಲವಲ್ಲ ಪುಣ್ಯಾತಿಗಿತ್ತಿ.” ಎಂದು ನಾನು ಕೇಳಿಕೊಂಡೆ.

“ಪುಣ್ಯಾತ್ಮರು ನೀವು ಸುಮ್ಮನೇ ಒಂದೇ ಸ್ಥಳದಲ್ಲಿ ಕೂತು, ಯಾರಮೇಲೂ ಹರಿಹಾಯುದಿದ್ದರೆ ಸರಿ ನಾವೆಲ್ಲಾ ನೋಡಿಕೊತೇವೆ” ಎಂದು ಹೇಳಿದಳು. ಈ ಮಾತುಗಳ ಮೇನೇಜರಿಕೆ ಮಾಡಿ ಅವಸರದಿಂದ ಅಡುಗೆಮನೆಗೆ ಧಾವಿಸಿದಳು ಕಾಂತಂ.

೪

ಅಳಿಯದೇವರು ನಾನು ರೈಲು ನಿಲ್ದಾಣದಿಂದ ಗಾಡಿಯನ್ನು ಮಾಡಿಕೊಂಡು ಮನೆಯ ಹತ್ತಿರ ಬರುವ ಹೊತ್ತಿಗೆ ನನ್ನವಳಿಗೆ ಆಗಲೇ ತಿಳಿದಿದ್ದಿತು ಸುದ್ದಿ. ಅಳಿಯ ಮನೆಯ ಹೊಸಲಿನಲ್ಲಿ ಕಾಲಿಡುವುದೇ ತಡ ಆಕೆ ಬಿಸಿನೀರನ್ನು ಕೊಟ್ಟು ಆತ ಕಾಲು ತೊಳೆದುಕೊಂಡನಂತರ ಕ್ಷೇಮಸಮಾಚಾರವನ್ನು ವಿಚಾರಿಸಿದಳು. ಆಕೆಯ ಸೂಚನೆಯಂತೆ ಯಾರಾರ ಕೆಲಸ ಅವರವರು ಮಾಡಿ ಮುಗಿಸಿದರು.

ನಾವಿಬ್ಬರು ಕುರ್ಚಿಗಳಲ್ಲಿ ಕೂತು ಮನೆಯ ಆ ಮಾತು ಈ ಮಾತು ಆಡುತ್ತಿದ್ದೆವು. ಪಾಪ, ರಾಧಾಕೃಷ್ಣರು ಹತ್ತಿರ ಬಂದರೆ ಅವರೊಂದಿಗೂ ಅಳಿಯದೇವರು ಕೊಂಚ ಮಾತನಾಡಿದರು. ಬೇರೆ ಯಾವುದೋ ಕೆಲಸಕ್ಕೆಂದು ನಾನು ಮನೆಯಲ್ಲಿಯ ನನ್ನ ಕೋಣೆಗೆ ಹೋದೆ.

ಬಂದ ಅತಿಥಿ, ಹುಡುಗರಿಂದ ಮನೆಯ ವಿಷಯವನ್ನು ಕೇಳಿ ಎಲ್ಲವನ್ನೂ ತಿಳಿದುಕೊಂಡನು. ತಮ್ಮಕ್ಕ ಏನು ಮಾಡ್ತಾ ಇದಾಳೇಯೆಂಬ ಪ್ರಶ್ನೆಗೆ ಆ ಹುಡುಗರು ನಕ್ಕುಬಿಟ್ಟು “ಅಮ್ಮಾ ಅಕ್ಕ ಏನು ಮಾಡ್ತಾ

ಇದ್ದಾಳೆ ಭಾವ ಕೇಳ್ತಾರೆ" ಎಂದು ಕೂಗಿಕೊಂಡರು.

"ಯಾಕಪ್ಪಾ ?"

"ಅಲ್ಲಮ್ಮಾ, ಭಾವ ಕೇಳ್ತಾ ಇದಾರೆ"

"ಕೂಗಿಕೋಬ್ಯಾಡ್ರೋ, ಅಟ್ಟದಮೇಲಿನ ಕೋಣೆಯಲ್ಲಿದ್ದಾಳೆ" ಎಂದು ಹೇಳಿ ಸುಮ್ಮನಾದಳು.

ಊಟದ ಸಮಯದಲ್ಲಿ ಅಳಿಯನಿಗೆ ಬಡಿಸುವಾಗ ಆತ ಎಷ್ಟು ನಿಸ್ಸಂಕೋಚದಿಂದ ಊಟಮಾಡಿದರೂ ಆಕೆಗೆ ತೃಪ್ತಿಯೇ ಇರಲಿಲ್ಲ. "ಇದೇನ್ರೀ ಊಟಾನೇ ಮಾಡವಲ್ರಲ್ಲಾ ? ಯಾಕೆ ಹೀಗೆ ?" ಎಂದು ಪೇಚಾಡಿದಳು. ಪಾಪ ಹೆತ್ತ ಕರುಳು ಅವಳದು. ದುಡಿದುತರುವ ನಮ್ಮಂಥವರಿಗೆ ಇದೆಲ್ಲವನ್ನು ಒದಗಿಸುವ ಕಷ್ಟ. ಇರಲಿ ನಾನು ಪೇಚಾಡಿದರೇನು ಪ್ರಯೋಜನ ?

ಊಟ ಮುಗಿದ ನಂತರ ಎಲೆಅಡಿಕೆಯ ವ್ಯವಸ್ಥೆ ನಮಗೆಲ್ಲಾ ಆಯಿತು. ಆದರೆ ಅಳಿಯದೇವರಿಗೆ ಅದರ ವ್ಯವಸ್ಥೆ ಸ್ಪೆಷಲ್ "ಅಟ್ಟದ ಮೇಲಿನ ಪಟ್ಟೇ ಮಂಚದ ಮೇಲೆ ಪದುಮಳು ಹಾಕಿದ ಹೊದಿಕೆಯ ಮೇಲೆ" ಎಂದು ನಿಶ್ಚಯವಾದುದರಿಂದ "ದಣಿದು ಬಂದೀರಿ ಮೇಲೆ ಹಾಸಿಗೆ ಹಾಕಿದೆ ಬೇಗ ಹೋಗಿ ಮಲಗ್ರಿ ಸ್ವಲ್ಪ" ಎಂದು ಸೂಚಿಸಿದಳು.

ಅಳಿಯ ನಗುತ್ತ ಮೇಲೆ ನಡದ. ಆತನಿನ್ನೂ ಹುಡುಗ. ನಕ್ಕುನಲಿಯುವ ವಯಸ್ಸು. ಮಗಳು ಆತನಿಗೆ ತಾಂಬೂಲಾಚರಣೆ ಮಾಡಿದ ನಂತರ ಕೆಳಗೆ ಬಂದಳು. ತಾಯಿಮಕ್ಕಳಿಬ್ಬರೂ ಸೇರಿ ಕಿಲಿಕಿಲಿ ನಗುತ್ತ ಊಟ ಮಾಡತೊಡಗಿದರು.

ವಿಶಾಲವಾದ ನಡುಮನೆಯಲ್ಲಿಯೇ ಕೂತು ನಾನು ಅವಸರದ ಪತ್ರ ಬರೆಯುತ್ತಲಿದ್ದೆ. ಅದನ್ನು ಮುಗಿಸಿ ಪೋಸ್ಟಿಗೆ ಕಳಿಸಿ ಮಲಗಬೇಕೆಂದು ಯೋಚನೆಯಲ್ಲಿರುವಾಗ

"ಅಲ್ರೀ ಒಂದು ಮಾತು"

"ಏನದು ಕಾಂತಂ ?"

"ಸ್ವಲ್ಪ ಒಂದು ಸಲ ಇಲ್ಲಿ ಬಂದುಹೋಗ್ರಿ"

"ಏನದು ಅಂತಹ ರಹಸ್ಯ ?" ಅಳಿಯ ಮನೆಗೆ ಬಂದರೆ

ಇಷ್ಟೋದು ಗಡಿಬಿಡಿಯೇ? ಹೆಣ್ಣಿನ ಹೃದಯ ಅದರಲ್ಲಿ ಅಳಿಯನನ್ನು ಕಂಡು ಮನೆತನ ಬೆಳೆಯಬೇಕೆಂದು ಹಿಗ್ಗುವ ಹೃದಯದ ಆರಾಟ. ಆಯಿತು ಸರ್ವಾಧಿಕಾರಿಯ ಮಾತಿಗೆ ಎದುರಾಡುವುದೆ?

"ಅಡುಗೆ ಮನೆ ಹೊಸಿಲಿನಲ್ಲೇ ನನ್ನನ್ನು ನಿಲ್ಲಿಸಿ, ಕಿವಿಯ ಹತ್ತಿರ ರಹಸ್ಯವಾಗಿ " ಅಲ್ರೀ, ಅಳಿಯ ಹಬ್ಬದವರೆಗೆ ಇಲ್ಲಿ ಇರೋದಿಲ್ಲ ವಂತಲ್ಲ ಇದೇನು?" ಎಂದು ಮೆಲ್ಲಗೆ ಕೇಳಿದಳು.

ಆ ಮಾತು ಕೇಳಿ ನಾನೂ ಗೊಂದಲದಲ್ಲಿ ಬಿದ್ದೆ. ಮತ್ತೆ ತನ್ನ ಮಾತನ್ನು ಮುಂದುವರಿಸಿ "ಬೆಳಗಿನ ಗಾಡಿಗೇ ಹೊರಡುತ್ತಾನಂತಲ್ರಿ" ಎಂದು ಉದ್ಗಾರ ತೆಗೆದಳು.

ನಾಳೆ ಸೋಮವಾರ. ಆಫೀಸಿನಲ್ಲಿ ರಜೆ ಸಿಕ್ಕಿರಲಿಕ್ಕಿಲ್ಲ. ಆದುದರಿಂದ ಹೋಗಲೇಬೇಕಾಗಿರಬಹುದೆಂದು ನಾನು ನೆನೆದೆ ಆದುದರಿಂದ ಇವರ ಳ್ಳೇನೂ ವಿಶೇಷವಿರಲಿಕ್ಕಿಲ್ಲವೆಂದು, ಸುಮ್ಮನಾದೆ.

ಆದರೆ ಅವಳಿಗೆ ಈ ಅಳಿಯದೇವರ ವರ್ತನೆ ಬಹು ವಿಪರೀತವೆನಿಸಿ ಸುದಲ್ಲದೆ "ಅಲ್ರೀ! ಇಂಥ ಹುಡುಗ ಎಲ್ಲಾದರೂ ಉಂಟೇನ್ರಿ? ಹಬ್ಬ ಹತ್ತಿರವೇ ಇರೋವಾಗ ನಾಳೇ ಹೋಗೋದಂದ್ರೇ ವಿಚಿತ್ರವಲ್ಲೇನ್ರೀ" ಎಂದು ಮತ್ತೆ ಪಿಸುಗುಟ್ಟಿದಳು.

೫

ಅವಳಿಗಾದಷ್ಟು ಆಶ್ಚರ್ಯ, ಸಂಕಟ ನನಗಾಗದೇ ಇದ್ದುದು ನೋಡಿ ಅವಳಿಗೆ ಸಮಾಧಾನವೆನಿಸಲಿಲ್ಲ. ಒಳಗೇ ಸಂಕಟಪಟ್ಟು ಮಾತಿನಲ್ಲಿ ತೋರಗೊಡದೇ ನನ್ನನ್ನು ದುರದುರ ನೋಡಿದಳು. ಕಣ್ಣು ಕೆಂಪಾದವು; ತುಟಿಗಳು ಅದರತೊಡಗಿದವು; ಮುಖ ಸಿಟ್ಟಿನಿಂದ ಮುದುರಿಕೊಂಡಿತು.

ಅವಳ ಈ ವಿಪರೀತಾವಸ್ಥೆಯನ್ನು ಕಂಡು "ಇಷ್ಟೇಕೆ ಯೋಚನೆ ಏನು ಪ್ರಪಂಚವೇ ಮುಳುಗಿಹೋದಂತೆ ಮಾಡ್ತೀಯಲ್ಲ? ಆತ ಹೋದರೆ ಮಗಳಿರ್ತಾಳಲ್ಲ ಹಬ್ಬಕ್ಕೆ?" ಎಂದು ಕೇಳಿದೆ.

"ಇರತಾಳೆ. ಅದಕ್ಕಲ್ಲ ಅಂಬೋದು. ಅಳಿಯನೂ ಈ ನಾಲ್ಕು ದಿನಗಳು ಇದ್ದಿದ್ದರೆ, ಎಲ್ಲಾರೂ ಹೊಸ ಅರಿವೆ ಧರಿಸಿ ಆನಂದದಿಂದ ನಲಿದಾಡು

ತ್ತಿದ್ದರೆ ಹೆತ್ತ ಹೊಟ್ಟೆಗೆ ಸಂತೋಷವಾಗುತ್ತಿತ್ತು." ಎಂದು ಹೇಳಿ ತನ್ನೆದೆಯ ಮೇಲೆ ಕೈಯಿಟ್ಟುಕೊಂಡು ನನ್ನ ಕಡೆ ಹಸುಗೂಸಿನಂತೆ ನೋಡಿದಳು.

ಅವಳ ಆಗಿನ ಅವಸ್ಥೆಯನ್ನು ನೋಡಿ ನನಗೂ ಅಯ್ಯೋಯೆನಿಸಿತು. ಆದರೆ ಹೊಸ ಅರಿವೆಗಳ ಮಾತು ಮಾತ್ರ ನನಗೆ ರುಚಿಸಲಿಲ್ಲ. ಈ ಕಷ್ಟಕಾಲದಲ್ಲಿ ಹೊಸ ಅರಿವೆಯೆಂದರೆ ಆಯಿತು ನನ್ನ ಅವಸ್ಥೆ ಎಂದು ಮನದಲ್ಲಿಯೇ ಮರುಗಿದೆ.

ಆದರೆ ಬಂದ ಅಳಿಯದೇವರು ಹಳಬನಲ್ಲ, ಇನ್ನೂ ಹೊಸತನ ನಮಗೆ ಅವನಿನ್ನೂ ಹುಡುಗ; ಬಂದಾತನನ್ನು ಬರಿಗೈಲೆ ಕಳಿಸುವುದು ಭೂಷಣವಲ್ಲ. "ಆಗಲಿ ಅಳಿಯನಿಗೆ ಹೊಸ ಅರಿವೆಗಳನ್ನು ಕೊಡುವ. ಇರೂಂತ ಹೇಳು" ಎಂದು ಹೇಳಿದ ನನ್ನ ಮಾತಿಗೆ "ಆಗಲೇ ಹೇಳೀನಿ ಹಬ್ಬದ ಸಮಯಕ್ಕೆ ಖಂಡಿತ ಬರಬೇಕೂಂತ" ಎಂದು ಹೇಳಿ ಸುಮ್ಮನಾದಳು.

"ಹಾಗಾದರೆ ಇದೆಲ್ಲಾ ರಾದ್ಧಾಂತ ಯಾಕೆ ಮತ್ತೆ?"

"ಕೇಳ್ರಿಲ್ಲೆ, ನನ್ನ ಮಾತೊಮ್ಮೆ. ಹಬ್ಬದ ದಿನ ಮಾತ್ರವೇ ರಜೆ. ಬರೊಕೆ ಆಗೋಲ್ಲಾಂತ ಹೇಳಿದ. ಮಗಳಿಗೂ ಹೇಳೂಂತ ಮತ್ತೆ ಹೇಳಿದೆ. ಆತಂದು ಒಂದೇ ಹಟ. ಬರೋದಕ್ಕೆ ಆಗೋದಿಲ್ಲಾಂಬೊದನ್ನ ಬಿಟ್ರೆ ಬೇರೇಮಾತೇ ಇಲ್ಲ."

"ನೀನೊಬ್ಬಳು. ರಜೆ ಸಿಗೊಲ್ಲಾ ಅಂದಮೇಲೆ ಆತ ಬರೋದಾದ್ರೂ ಹೇಗೆ? ಇರಲಿ ಇನ್ನೊಂದು ಹಬ್ಬಕ್ಕೆ ಬರ್ತಾನೆ ಆತು"

"ಅದಲ್ರೀ. ಮೊದಲನೆಯ ಹಬ್ಬ ಹೇಗೂ ಬಂದಾನೆ ಇಬ್ಬರೂ ಹೊಸಬಟ್ಟೆ ತೊಟ್ಕೊಂಡು ರತಿಮನ್ಮಥರ ಹಾಗೆ ಇರೋದನ್ನ ನೋಡಿ ಹಿಗ್ಗಬೇಕೂಂತ ಅನಿಸ್ತದೆ ನನ್ನ ಮನಸ್ಸು"

"ಹಾಗಾದ್ರೆ ಹಬ್ಬಕ್ಕೆ ಖಂಡಿತ ಬಂದೇತೀರಬೇಕೆಂದು ಹೇಳಿಬಿಡು"

"ಹೇಳ್ತೀನಿ, ನೀವೂ ಒಂದು ಮಾತು ಹಾಗನ್ರಿ. ಇಬ್ಬರೂ ಸೇರಿ ಬಲವಂತ ಮಾಡಿದ್ರೆ ಆತ ಬಂದರೂ ಬರಬಹುದು. ಆದ್ರೆ, ಹಾಳು ರಜೆ ಸಿಗಬೇಕಲ್ಲಾಂತ, ಆತ ಮಾತಾಡಿದ್ರೆ ಏನು ಸಮಾಧಾನ?"

ರಜೆ ಸಿಗದೇ ಹೋದ್ರೆ ಮುಂದಿನ ಯೋಚನೆಯ ಬಗ್ಗೆ ಸಮಾಧಾನ

ಏನು ಎಂಬ ಮಾತಿಗೆ ನನಗೇನೂ ತೋಚಲೇ ಇಲ್ಲ. ನನ್ನ ತಲೆಯಲ್ಲಿರುತ್ತಿದ್ದುದು ಅಳಿಯ ಬಾರದೇಹೋದ್ರೆ ಹೊಸ ಅರಿವೆ ಕೊಳ್ಳುವ ಪ್ರಸಂಗ ತಪ್ಪುತ್ತದೆಯೆಂಬ ಸಮಾಧಾನ ಮಾತ್ರ. ಆದರೆ ಇದನ್ನು ಅವಳ ಮುಂದೆ ಹೇಳುವ ಧೈರ್ಯ ನನಗೆ ಇರಲಿಲ್ಲ'' ಏನು ಮಾಡೋದು? ಇರಬೇಕೂಂತ ಇಬ್ಬರೂ ಹೇಳೋಣ. ಮತ್ತೆ ಮತ್ತೆ ಕೇಳಿಕೊಳ್ಳೋಣ. ಬಂದೇ ತೀರಬೇಕೆಂದು ಬಲವಂತ ಮಾಡೋಣ. ಇದಕ್ಕಿಂತ ಹೆಚ್ಚಿಗೆ ನಾನೇನು ಮಾಡ್ಲಿ ಹೇಳು ನೀನೆ?" ಎಂದು ಹೇಳಿದೆ.

"ಇರಲ್ಲಿರೀ ನಿಮ್ಮ ಕುಚೇಷ್ಟೆ, ಹೇಗಿದ್ರೂ ಹಬ್ಬಕ್ಕೆ ಆತ ಇದ್ರೆ ಹೊಸ ಅರಿವೆಗಳು ತರಬೇಕಾಗಿತ್ತು. ಹೌದೋ ಅಲ್ವೋ ನೀವೇ ಹೇಳಿ? ಅವುಗಳನ್ನು ಈಗಲೇ............''

"ಇದಾ ನಿನ್ನ ಯೋಚನೆ? ಅಳಿಯ ದೇವರು ಹಬ್ಬಗಳಿಗೆ ಬರಲೀ ಬಿಡ್ಲೀ ಪೋಸ್ಟಿನಿಂದ ಹಬ್ಬದ ಉಡುಗೋರೆ ಕಳಿಸಬೇಕೂಂತ ನಿನ್ನ ಯೋಚನೇಂತ ಅಂದಹಾಗಾಯ್ತು.''

"ಏನ್ರಿ, ನಿಮ್ಮ ಮಾತು? ಎಲ್ಲಾ ಹಬ್ಬಗಳಗೂ ಕಳಿಸಬೇಕೂಂತ ನಾನು ಹೇಳಿಲ್ಲವಲ್ಲ? ಹಬ್ಬದ ಮುಂದೆ ಇವನೇ ಬಂದಿರೋವಾಗಾಂತ ಈ ಮಾತು ಹೇಳಿದೆ, ಅಷ್ಟೇ''

"ಹಾಗಾದ್ರೇ ಹಬ್ಬಕ್ಕೆ ಮತ್ತೆ ಬರ್ರೀ ಅಂಬೋ ಮಾತು ಮರ್ಯಾದೆಗೆಂದು ಮತ್ತೇಕೆ ಹೇಳಬೇಕು? ಆತ ಬರದಿದ್ದರೆ ನಾವೇನು ಮಾಡೋಕೆ ಆಗ್ತದೆ?''

"ಛೀ! ಛೀ!! ಹೀಗ್ಯಾಕಂತೀರಿ ನೀವು? ಸುಮ್ಮನೇ ಇದ್ದುಬಿಟ್ಟರೆ ಮರ್ಯಾದೆ ಕಡಿಮೆ ಆಗೋದಿಲ್ಲೇನ್ರೀ? ಹಬ್ಬದ ಮುಂಚೆ ಬಂದ ಅಳಿಯನಿಗೆ ಉಡುಗೊರೆ ಕೊಟ್ಟು ಕಳಿಸದಿದ್ದರೆ ಮರ್ಯಾದೆ ಬರ್ತದೇನ್ರಿ? ಚೆನ್ನಾಗಿರುತ್ತದೇನ್ರಿ?''

"ನನಗೇನೋ ಚೆನ್ನಾಗಿಯೇ ಕಾಣಸ್ತದೆ. ಅದೇಕೆ ನಾನೆಷ್ಟು ಸಲ ನಿಮ್ಮಮ್ಮಾವ್ರ ಮನೆಗೆ ಬಂದು ಬರೀಕೈಲೆ ಬಂದಿಲ್ಲ. ನನಗ್ಯಾರು ಉಡುಗೋರೆ ಕೊಡಲಿಲ್ಲವಲ್ಲ?''

"ಆದರೆ ಅದಕ್ಕೂ ಇದಕ್ಕೂ ಏನು ಸಂಬಂಧಾನ್ರಿ?''

“ಇಷ್ಟು ಬುದ್ಧಿ ಇದ್ದವಳು ನೀನು ಆಗ ನಿಮ್ಮಪ್ಪಗೆ ಹೇಳಿ ಒಂದು ಸಲವಾದರೂ ನನಗೆ ಉಡುಗೋರೆ ಕೊಡಿಸಬಾರದಿತ್ತೆ?”

ಎತ್ತಿದ ಸ್ವರದಲ್ಲಿ ಹೇಳಿದ ನನ್ನ ಈ ಕಡೆಯ ಮಾತಿಗೆ ಶಾಂತಂ ಸೋತುಹೋದ ಮುಖದಿಂದ “ಅದೆಲ್ಲಾ ಈಗ್ಯಾಕ್ರೀ? ಈಗಿನ ಮಾತು ಹೇಳ್ರೀಂದ್ರೆ” ಎಂದು ಕೇಳಿದಳು.

ಕುಚೇಷ್ಟೆಯ ಸ್ವರದಲ್ಲಿ “ಈಗ ಇದು ನಿನ್ನ ಮಗಳ ಮಾತೆಂದು ಇಷ್ಟು ಅಕ್ಕರೆ. ಆಗ ನಿನ್ನ ತಂದೆಗೆ ಏತಕ್ಕೆ ಹೆಚ್ಚು ವೆಚ್ಚವೆಂದು ಸುಮ್ಮನಿದ್ದುಬಿಟ್ಟೆ ತಾನೇ? ಚೆನ್ನಾಗಿದೆ ವ್ಯವಹಾರ” ಎಂದು ಅವಳನ್ನು ಮತ್ತೆ ಕಣಕಿದೆ.

ಅವಳು ಕೊಂಚ ಸಮಯ ಯೋಚಿಸಿ “ನೋಡ್ರಿ, ನನ್ನ ಮಗಳ ವಿಷಯದಲ್ಲಿ ಎಲ್ಲಾ ಮರ್ಯಾದೆಯ ವ್ಯವಸ್ಥೆ ಆಗಲೇಬೇಕು. ನಿಮ್ಮ ಮಗನ ವಿಷಯ ಬಂದಾಗ ಯಾವುದೂ ಚಾಚೂ ತಪ್ಪದಂತೆ ನಡಿಯೋ ಹಾಗೆ ನಾ ನೋಡ್ಕೋತೀನಿ, ಇನ್ನೇನು?” ಎಂಬ ಯುಕ್ತಿಯ ಮಾತು ಹೇಳಿದಳು.

ಅಂತೂ ನಾನು ಸೋಲಲೇಬೇಕಾಯಿತು. ಮಾತನಾಡದಂತೆ ಪೆಟ್ಟಿಗೆ ತೆಗೆದು ಅದರೊಳಗಿದ್ದ ಹಣವನ್ನು ಕೈಯಲ್ಲಿರಿಸಿಕೊಂಡು ಯೋಚಿಸತೊಡಗಿದೆ. ತಿಂಗಳೆಲ್ಲ ಖರ್ಚಿಗೆಂದು ಇಟ್ಟುಕೊಂಡ ಹಣವನ್ನು ಒಂದೇ ದಿನದಲ್ಲಿ ಅರಿವೆಗಳಿಗಿಡಬೇಕೆಂದು ಯೋಚಿಸಿದೆ. ಮುಂದೆ ತಿಂಗಳೆಲ್ಲ ಹೇಗೆ ಕಳೆಯಬೇಕೆಂಬ ಯೋಚನೆ ನನ್ನನ್ನು ಹಿಂಸಿಸತೊಡಗಿತು. ಆದರೆ ಅಳಿಯದೇವರು ಬಂದಮೇಲೆ ಹೊಟ್ಟೆಯದೇವರ ಮಾತು ಅನಂತರವೇ.

ಉಟ್ಟ ಧೋತರ ಕೊಂಚ ಮಾಸಿಹೋಗಿತ್ತು. ಬೇರೊಂದು ಪಂಚೆ ಕೊಡೆಂದು ಅವಳನ್ನು ಕೇಳಿದೆ. “ಕೊಂಚ ಹರಿದಿದೆ. ಇರೋದು ಇದೊಂದೇ” ಎಂದು ಒಂದು ಪಂಚೆ ಕೊಟ್ಟಳು. ಆತು ಯೋಚಿಸಿ ಪ್ರಯೋಜನವೇನು? ಪಂಚೆಯಲ್ಲಿದ್ದ ರೂಪಾಯಿಯಷ್ಟು ಅಗಲ ಹರಿದಿರುವುದನ್ನು ನೋಡಿದಾಗ “ಮಹಾಶಯಾ ನಿನ್ನ ದಾರಿದ್ರ್ಯವನ್ನು ನಾನು ಬಹಿರಂಗಪಡಿಸುವೆ” ಎಂದು ಬೆದರಿಕೆ ಹಾಕುವಂತಿತ್ತು ಪಂಚೆಯಲ್ಲಿಯ ಆ ತೂತು.

ಅವು ಭಯಪಡಿಸಿದರೆ ನಾನೆಲ್ಲಿ ಭಯಪಡುವೆ? ಆ ತೂತು ಕಾಣ ದಂತೆ ಕೊಂಚ ಹೊಲಿದುಕೊಡೆಂದು ಹೇಳಿ ನನ್ನ ವಿಜಯ ಯಾತ್ರೆಗೆ ಹೊರಟೆ. "ಊಟಮಾಡಿ ಸ್ವಲ್ಪ ವಿಶ್ರಾಂತಿ ಇಲ್ಲದೆ ಬಿಸಿಲಿನಲ್ಲಿ ಅಲೆಯ ಬೇಕಾಯಿತು. ಪಾಪ" ಎಂದು ಅವಳ ಮುಖದಿಂದ ಹೊರಟ ಕನಿಕರದ ಮಾತು ನನ್ನ ಕಿವಿಗೆ ಬಿತ್ತು. ಕೊಂಚ ಸಮಾಧಾನವಾಯಿತು. ಆದರೆ ಅಳಿಯದೇವರ ಆಗಮನ!

೬

ಅರಿವೆ ಅಂಗಡಿಯಲ್ಲಿಯೂ ಅಳಿಯನ ಪಕ್ಷ ಹಿಡಿದು ಮಾತನಾಡುವ ವರೇ. ಉಡುಗೊರೆಗೆ ಕೊಡುವ ಅದರಲ್ಲಿಯೂ ಅಳಿಯನಿಗೆಂದು ಕೊಡಬ ಯಸಿದವು. ಕೊಂಚ ಉತ್ತಮವಾಗಿರಬೇಕೆಂದು ಅವನು ಸೂಚಿಸಿದ. ಆದರೆ ನಾನು ಉಟ್ಟ ಪಂಚೆ ಹರಿದುಹೋಗಿತ್ತೆಂದು ಸಂತಾಪಪಟ್ಟು ನನ್ನ ಮೇಲೆ ಕನಿಕರ ಪಡುವವರು ಅಲ್ಲಿ ಯಾರೂ ಇರಲಿಲ್ಲ. ಅಳಿಯದೇವರಿಗೆ ಅರಿವೆಗಳನ್ನು ಕೊಂಡುಕೊಂಡೆ..

ಮಗಳಿಗೆ ಮತ್ತೇಕೆ ಪ್ರತ್ಯೇಕ ಬರಬೇಕೆಂದು ಅವಳಿಗೂ ಒಂದು ಜರತಾರಿ ಸೀರೆ ಕುಪ್ಪಸ ತೆಗೆದುಕೊಂಡೆ.

ಎಲ್ಲಕ್ಕೂ ಆದ ಬಿಲ್ಲನ್ನು ನೋಡಿ–ಅದರ ಬೆಲೆ ಎಷ್ಟಾಗಿರಬೇಕೆಂಬುದು ನೀವೇ ಊಹಿಸಿ–ನನ್ನ ಕೈಯಲಿದ್ದ ನಾಲ್ವತ್ತು ರೂಪಾಯಿ ಕೊಟ್ಟು ಮಿಕ್ಕದ್ದು ಸಾಲವೆಂದು ಹೇಳಿದೆ. ಆಗಬಹುದು. ಆದರೆ ಬಡ್ಡಿ ಕೊಡಬೇ ಕೆಂಬ ಅವನ ಮಾತಿಗೆ ಸಮ್ಮತಿಸಿ, ಸಾಲಾಸಿಕದ್ದು ಒಳ್ಳೆಯದಾಯಿತೆಂದು ನೆನೆದು ಅಂಗಡಿಯಿಂದ ಹೊರಬಿದ್ದೆ.

ಆಗಲೇ ಸಂಜೆ ಐದು ಹೊಡೆದಿತ್ತು. ಕತ್ತಲಾದ ಮೇಲೆ ರೇಷಿಮೆಯ ಅರಿವೆ ಹೊಸದು ಉಡಬಾರದೆಂಬುದು ನೆನಪಾಯಿತು. ಅವಸರದಿಂದ ಮನೆಗೆ ಬಂದೆ. ಆಗಲೇ ಕಾಫಿ ಫಲಹಾರ ಮುಗಿದಿತ್ತು. ಆದರೂ ಅಳಿಯ ದೇವರಿಗೆ ಹೊಸ ಅರಿವೆಗಳನ್ನು ಆಶೀರ್ವದಿಸಿ ಕೊಟ್ಟೆ. ಅಳಿಯ ಹೊಸ ಅರಿವೆಗಳನ್ನು ಧರಿಸಿದ. ಬಾಗಿಲ ಬಳಿ ನಿಂತು ಇಣಿಕಿ ನೋಡುತ್ತಿದ್ದ ರುಕ್ಮಿಣಿ ತನ್ನ ಗಂಡನನ್ನು ಈ ಹೊಸ ಅಲಂಕಾರದಲ್ಲಿ ಕಂಡು ಹಿಗ್ಗಿದಳು; ನಾನು, ನನ್ನವಳು, ಎಲ್ಲಾರೂ ಹಿಗ್ಗಿದೆವು.

ಬೆಳಗಿನಲ್ಲಿ ಪೂರುಗಂಟೆಗೇ ಎದ್ದು ಕಾಂತಂ ಬಿಸಿನೀರು ಕಾಸಿದ್ದಳು. ಅತಿಥಿ ದೇವರು ಎದ್ದು ಸ್ನಾನ ಮುಗಿಸಿದ. ಆ ಹೊತ್ತಿಗೆ ಮಗಳು ಕಾಫಿ ತಯಾರು ಮಾಡಿದ್ದಳು. "ಏಳ್ತೀರೇನು, ಅವರಿನ್ನು ಊರಿಗೆ ಹೋಗೋ ಹೊತ್ತಾಯ್ತು" ಎಂದು ನನ್ನಾಕೆ ಎಚ್ಚರಿಸಿದಳು. ನಾನು ಮುಖತೊಳೆದು, ಎಲ್ಲರೊಂದಿಗೆ ಕಾಫಿ ಕುಡಿಯುತ್ತಿರುವಾಗ, ನನ್ನ ಹಿರಿಯ ಮಗನು ಕುದುರೆ ಗಾಡಿಯನ್ನು ತರಲು, ಅಳಿಯನು ಅದರಲ್ಲಿ ಕುಳಿತುಕೊಳ್ಳುತ್ತಿರುವಾಗ "ಆದಷ್ಟು ಅನುವುಮಾಡಿಕೊಂಡು ಹಬ್ಬದ ಒಂದು ದಿನದಮಟ್ಟಿಗಾದರು ಬರದೇ ಇರಬೇಡಿ" ಎಂದು ಆತನನ್ನು ಎಚ್ಚರಿಸಿದಳು ಕಾಂತಂ. ಮಗಳು ನಾಚಿಕೆಯಿಂದ ಸುಮ್ಮನಿದ್ದರೂ ಅವಳ ತಾಯಿಯ ಮಾತನ್ನು ಸಮರ್ಥಿಸುವ 'ಬಾ' ಎಂಬ ಕರೆ ಅವಳ ಕಣ್ಣಿನ ಸರಣಿ ಹೇಳುತ್ತಿತ್ತು. ಪಾಪಳು "ಭಾವಾ, ಹಬ್ಬಕ್ಕೆ ತಪ್ಪದೇ ಬರಲೇಬೇಕು" ಎಂದು ಕೇಳಿಕೊಂಡಳು. ಹುಡುಗರಿಬ್ಬರೂ ಆತನನ್ನು ಸಮೀಪಿಸಿ ಬರಲೇಬೇಕೆಂದು ಕೈಮೇಲೆ ಕೈ ಹಾಕಿಸಿಕೊಂಡರು. ಇಷ್ಟೆಲ್ಲಾ ಉಪಚಾರದ ಮಾತುಗಳಾದಮೇಲೆ ನಾನೊಬ್ಬನು ಸುಮ್ಮನಿರುವದು ಒಳಿತಲ್ಲವೆಂದು ನೆನೆದು "ನಿಮ್ಮ ಮೇಲಧಿಕಾರಿಗೆ ನಾನು ಹೇಳಿದೆನೆಂದು ಹೇಳು, ರಜೆ ಕೊಡುವರು. ಬರಲೇಬೇಕು ಹಬ್ಬಕ್ಕೆ" ಎಂದು ಹೇಳಿದೆ.

ನಗುತ್ತ ನಾನು ಹೇಳಿದ ಮಾತುಗಳಿಗೆ, ಆತನೂ ನಕ್ಕುಬಿಟ್ಟ. ಪಾಪ, ಇನ್ನೂ ಸಣ್ಣ ವಯಸ್ಸು, ಗಾಡಿ ಮರೆಯಾಗುವ ವರೆಗೆ ಹೊರಗೆ ನಿಂತು ಮನೆಯೊಳಗೆ ಹೋದೆವು.

ಮಕ್ಕಳು ಮತ್ತೆ ಮಲಗಿದವು. ಮಗಳು ಅಟ್ಟದ ಮೇಲಿನ ಕೋಣೆಗೆ ಹೋದಳು.

ಅವಳನ್ನುದ್ದೇಶಿಸಿ "ಕಾಂತಂ ಕೈಯಲ್ಲಿಯ ಕಾಸೆಲ್ಲವೂ ಆಗಿ ಹೋಯಿತು. ಮುಂದೆ ತಿಂಗಳೆಲ್ಲಾ ಕಳೆಯುವುದು ಹೇಗೆ?" ಎಂಬ ಪ್ರಶ್ನೆಯನ್ನೆತ್ತಿದೆ.

"ಅದಕ್ಕೇನಂತೆ ಹೇಗೋ ಒಂದು ವಿಧದಲ್ಲಿ ಕಳೆದರಾಯಿತು. ಅಷ್ಟೇಕೆ ಯೋಚನೆ?"

ಯೋಚನೆ ಬೇಡಾಂದ್ರೆ ಹಣ ಮೇಲಿಂದ ಸುರಿದು ಬೀಳುತ್ತೇನು? ಈ ಹಾಳು ಶಾಲಾಮಾಸ್ತರ ಕೆಲಸದಲ್ಲಿ ಪ್ರಮೋಷನ ಇಲ್ಲ. ಗಿಮೊಷನ್ನೂ ಇಲ್ಲ. ಮೊದಲಿಗೆ ನಾನು ತಾಲೂಕಾ ಕಛೇರೀಲಿ ಕೆಲಸಕ್ಕೆ ಸೇರಿದ್ದೇಂದ್ರೆ ಈ ಹೊತ್ತಿಗೆ ಡಿಪ್ಯೂಟೀ ಕಲೆಕ್ಟರನಾಗುತ್ತಿದ್ದೆ."

"ಇರಲಿಬಿಡ್ರಿ ಇಲ್ಲದ್ದನ್ನ ನೆನೆದೇನು ಪ್ರಯೋಜನ? ದೇವರು ಕೊಟ್ಟದ್ರಲ್ಲೇ ಸಂತೋಷಪಡಬೇಕು." ಇವಳ ಮುಖದಿಂದ ಯಾವಾಗಲೂ ಇಂತಹ ಒಳ್ಳೆಯ ಮಾತೇ ಬರುತ್ತಿತ್ತು.

ಅವಳ ಮಾತು ಕೇಳಿ ನನಗೆ ಸಿಟ್ಟುಬಂತು. "ಹೀಗಂತಲೇ ನಿನಗೆ ಡಿಪ್ಯೂಟಿ ಕಲೆಕ್ಟರನ ಹೆಂಡತಿ ಆಗೋ ಸುಯೋಗ ಬಂದಿಲ್ಲ ತಿಳೀತೆ?"

ಅವಳು ಏನೂ ಮಾತನಾಡದೇ ಸುಮ್ಮನಿದ್ದುಬಿಟ್ಟಳು. ಅಳಿಯ ದೇವರು ಬಂದನೆಂಬ ಸಂತೋಷವೋ, ಮತ್ತೇನೋ, ನನ್ನ ಮಾತುಗಳು ಅವಳು ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ. ದೇವರಮಾಡದ ಮುಂದೆ ನಿಂತು ನಮಸ್ಕಾರ ಹಾಕುತ್ತಿರುವುದನ್ನು ನೋಡಿದೆ.

೭

ನಾಳೆ ಸಂಕ್ರಾಂತಿ ಹಬ್ಬ. ಎಲ್ಲಾರೂ ಹೊಸ ಬಟ್ಟೆಗಳನ್ನು ಧರಿಸಬೇಕು. ಪಾಪಳಿಗೆ ಹೊಸ ಪರಿಕ್ಕಾರ, ಅಂಗಿ ಹೊಸವಿವೆ. ಇತರರಿಗೆ ಹಿಂದೆ ಹೊಸದಾಗಿ ಹೊಲಿಸಿದವುಗಳಲ್ಲಿ ಈ ಹಬ್ಬಕ್ಕೆಂದು ತೆಗೆದಿಟ್ಟ ಅರಿವೆಗಳೂ ಇವೆ. ಹಿರಿಯ ಮಗಳಿಗಂತೂ ಈಗ ಕೊಂಡಾಗಿದೆ. ಉಳಿದವಳೆಂದರೆ ಕಾಂತಂ ಮಾತ್ರ.

ಪಾಪ ಕಾಂತಂಳು ಮಾತ್ರ ಏಕೆ ಹೊಸ ಬಟ್ಟೆಯನ್ನು ಧರಿಸಬಾರದೆಂದು ಯೋಚಿಸಿ, ಅದೇ ಅಂಗಡಿಯಲ್ಲಿ ಉದ್ದರಿಗೆಂದು ಮತ್ತೊಂದು ಸೀರೆ ತಂದುಬಿಟ್ಟೆ.

ಹಬ್ಬ ಬಂದೇಬಿಟ್ಟಿತು.

ಅಂದು ಅತಿ ಹುರುಪಿನಿಂದ ಕಾಂತಂ ರುಚಿಯಾದ ತಿಂಡಿಪದಾರ್ಥಗಳನ್ನು ಮಾಡುತ್ತಿದ್ದಾಳೆ. ನಾನು ಹಬ್ಬಕ್ಕೆಂದು ಮೇಲೆ ಎಷ್ಟು ವೆಚ್ಚವಾಗಿರಬಹುದೆಂದು ಲೆಕ್ಕಹಾಕುತ್ತಲಿದ್ದೆ.

ಸೀರೆಗಳಿಗೆ ತೊಂಭತ್ತು.

ಅಳಿಯನಿಗೆ ಮೂವತ್ತೈದು.

ಇತರ ಹೆಚ್ಚಿನ ಖರ್ಚುಗಳಿಗೆ ಹತ್ತು, ಹದಿನೈದು. ಒಟ್ಟು ಹಬ್ಬಕ್ಕೆ ಒಂದು ನೂರು ನಾಲ್ವತ್ತು ಆದಂತಾಯಿತು.

ಹತ್ತು ಹೊಡೆಯಿತು. ಇನ್ನೇನು ಎಲ್ಲರನ್ನೂ ಊಟಕ್ಕೇಳಬೇಕೆಂದು ಆಕೆಯಿಂದ ಉತ್ಸಾಹದ ಕರೆ ಬಂತು.

ಆ ಹೊತ್ತಿಗೆ ಸರಿಯಾಗಿ ಮನೆಯಮುಂದೆ ಕುದುರೆ ಗಾಡಿ ಬಂದು ನಿಂತಿತು. ಹುಡುಗರು ಕೇಕೆಹಾಕುತ್ತ ಭಾವ ಬಂದನೆಂದು ತಮ್ಮ ತಾಯಿಗೆ ಸಂತೋಷದ ಸುದ್ದಿ ಮುಟ್ಟಿಸಿದರು.

ಒಂದೇ ಹುರುಪಿನಿಂದ ನನ್ನವಳು ಪಡಸಾಲೆಗೆ ಬಂದು "ಹೇಗಾದರೂ ಮಾಡಿ ರಜೆ ಪಡೆದುಕೊಂಡು ಹಬ್ಬದ ದಿವಸಕ್ಕಾದರು ಒದಗಿದಿರಲ್ಲ. ಸಂತೋಷ" ಎಂದು ತನ್ನದಾದ ಮಾತೆಂದು ಹೇಳಿದಳು.

ಮಗಳು ನೀರು ತೋಡಿದಳು. ರಾಧಾಕೃಷ್ಣ ಟವಲು ಅಣಿಮಾಡಿದ.

"ಇನ್ನೇಕೆ ತಡ, ನೀವು ಬೇಗ ಸ್ನಾನಮಾಡಿದರೆ ಒಳಿತಲ್ಲವೆ?" ಆಯಿತು; ಸ್ನಾನ ಮುಗಿಸಿದೆ. ಅಳಿಯ ಬಂದನೆಂಬ ಹಬ್ಬದ ಹರುಷ ಎಲ್ಲರ ಮುಖದ ಮೇಲೂ ಕಂಡುಬರುತ್ತಿತ್ತು. ನಾವೆಲ್ಲಾರೂ ಸಂತೋಷದಿಂದ ಊಟ ಮುಗಿಸಿದೆವು. ಸ್ವಲ್ಪ ಮಲಗಬೇಕೆಂದು ಯೋಚಿಸಿದೆ. ಕೊಂಚ ತಲೆದಿಂಬಿಗೆ ಆತುಗೊಂಡು ಕಣ್ಣು ಮುಚ್ಚಿದೆ. ಆದರೆ ನಿದ್ದೆ ಬರಲಿಲ್ಲ. ನಾಲ್ಕುಗಂಟೆ ಸಮಯಕ್ಕೆ ಮನೆಯಲ್ಲಿ ಎಲ್ಲಾರೂ ಹೊಸ ಬಟ್ಟೆಯನ್ನು ಧರಿಸುವರು. ಅಳಿಯನ ವಿಷಯ ಹೇಗೆ ಎಂಬ ವಿಚಾರ ನನ್ನನ್ನು ವೇಧಿಸತೊಡಗಿತು.

ಮೊನ್ನೆ ತಾನೆ ಹೊಸ ಅರಿವೆ ಕೊಟ್ಟವೆಂದು ಸುಮ್ಮನಾಗುವುದೆ? ಹುಡುಗರೆಲ್ಲಾರೂ ಹೊಸ ಉಡುಗೆಗಳಲ್ಲಿರುವಾಗ ಅಳಿಯನ ಸಮಾಚಾರ ಹೇಗೆ? ಹಿಂದೆ ಕೊಟ್ಟವುಗಳನ್ನೇ ಧರಿಸೆಂದರೆ ಮರ್ಯಾದೆಯ ಮಾತೆ? ಒಂದು ಸಲ ಆಗಲೇ ಅರಿಷಿಣ ಕುಂಕುಮ ಹಚ್ಚಿ ಕೊಟ್ಟ ಅರಿವೆಗಳನ್ನು ಮತ್ತೆ ಹೊಸತೆಂದು ತಿಳಿಯಬೇಕೆಂದು ಅವನಿಗೆ ಹೇಗೆ ಹೇಳುವುದು? ಇಂಥಹ ಸಂದೇಹಗಳು ನನ್ನನ್ನು ವೇಧಿಸತೊಡಗಿದವು. ಸಮಸ್ಯೆ ಬಗೆಹರಿಯದಂತಿತ್ತು. ಸುಮ್ಮನಿದ್ದರೂ ಕಷ್ಟ, ಇರದಿದ್ದರೂ ಕಷ್ಟ

ವೆಂಬಂತಿತ್ತು ನನ್ನ ಆಗಿನ ಪರಿಸ್ಥಿತಿ. ಈ ವಿಷಯದಲ್ಲಿ ಹಿಂದಿನವರು ಯೋಚಿಸಿ ಧರ್ಮಶಾಸ್ತ್ರದಲ್ಲಿ ನನಗೆ ಹೆಚ್ಚು ಖರ್ಚಾಗದಂತೆ ಇದಕ್ಕೆ ಪರಿಹಾರವನ್ನು ಸೂಚಿಸಿದ್ದರೆ ನನ್ನ ಪಾಡು ಒಳಿತಾಗುತ್ತಿತ್ತು.

ಇದೇ ವೇಳೆಗೆ ಸರಿಯಾಗಿ ಕಾಂತಿ ಬಂದಳು.

"ಹಬ್ಬಕ್ಕೆ ಅಳಿಯ ಬಾರದೇ ಇದ್ದರೆ ಹೇಗೇಂತ ನನಗಂತೂ ಯೋಚನೆಯಾಗಿತ್ತು. ಈಗ ಬಂದರು. ಒಳಿತಾಯಿತಲ್ಲವೆ?" ಎಂದು ಹೇಳಿದಳು ನಗುತ್ತ. ನನಗಂತೂ ಆತ ಬಂದುದು ಬಹಳ ತಮಾಷೆಯಾಗಿಯೇ ಇತ್ತು. ಆದುದರಿಂದ ಅವಳ ಮಾತಿಗೆ ನಾನೂ ಒಪ್ಪಿಕೊಂಡೆ. ಮುಂದೆ ಅವಳು "ನೀವಿನ್ನು ಬೇಗ ಮಲಗಿಕೊಂಡು ಏಳಿ. ನಾಳ್ಕರ ಸಮಯಕ್ಕೆ ಮಕ್ಕಳೆಲ್ಲರೂ ಹೊಸ ಬಟ್ಟೆಗಳ ಸೊಗಸಿನಲ್ಲಿರುವುದನ್ನು ಕಂಡು ಆ ಮೇಲೆ ನೀವು ಹೊರಗೆ ಹೋಗಬಹುದು" ಎಂದು ನಯದಿಂದ ಪ್ರೀತಿ ವಿಶ್ವಾಸದಿಂದ ಹೇಳಿದಳು.

ಹಾಗೇ ಆಗಬಹುದೆಂದು ತಲೆಯನ್ನಾಡಿಸಿದೆ.

ಮತ್ತೇನೋ ಪ್ರಮಾದದ ಯೋಚನೆ ಹೊಳೆದಂತೆ ಅವಳು ಬೆಚ್ಚಿಬಿದ್ದವಳಂತೆ ಕಣ್ಮುಚ್ಚಿ ತೆರೆದು "ಆ, ಹೊಸ ಅರಿವೆಗಳು..........ಅಳಿಯನಿಗೆ?...... ಎಂದಳು.

"ಆ, ಆ, ಅದೇ! ಅದೇ! ಆಗಲೇ ಅರ್ಪಣವಾಗಿದೆಯಲ್ಲ?"

"ಆದರೆ........." ಎಂದು ಮತ್ತೇನನ್ನೋ ಹೇಳುವುದರಲ್ಲಿದ್ದಳು.

"ಆದರೆ ಇಲ್ಲ ಗೀದರೆ ಇಲ್ಲ."

"ಸ್ವಲ್ಪ ಸುಧಾರಿಸಿಕೊಳ್ರಲ್ಲ. ಸಿಟ್ಟಿಗೆದ್ರೆ ಹ್ಯಾಗೆ? ಪ್ರಸಂಗ ಕೊಂಚ ಪ್ರಮಾದಕ್ಕೆ ಬಂದಂತೆ ಕಾಣುತ್ತದೆ. ಅಲ್ಲ ನಾವೆಲ್ಲಾರೂ ಹೊಸ ಅರಿವೆ ಹಾಕಿಕೊಂಡಾಗ ಆತ ಮಾತ್ರ ಸುಮ್ಮನಿದ್ರೆ ಹ್ಯಾಗೇಂತ?"

"ನಾನೀಗ ಮತ್ತೆ ಅಂಗಡಿಯೊಳಗೆ ಉದ್ರಿ ತರೋಹಾಗಿಲ್ಲ. ನಾವೆಲ್ಲಾರೂ ಹೊಸ ಬಟ್ಟೆಗಳನ್ನು ಉಟ್ಕೊಳ್ಳೋದನ್ನ ಬಿಟ್ರೆ ಸರಿಯೆ"

"ಏನು ಮಾತು ನಿಮ್ಮದೂಂತಿನೀ? ಅಲ್ಲ ಮೊದಲಸಾರಿ ಮಗಳು ತವರು ಮನೆಗೆ ಬಂದಾಗ, ಚಂದವಾದ ಇಂತ ಸಂಕ್ರಾಂತಿ ಹಬ್ಬದ ದಿವಸ ಈ ಮಾತು ಆಡೋದೆ! ಹಾಲು ತುಪ್ಪ ಅನ್ರಿ, ಸಾಕು ನಿಮ್ಮ ಹಟಮಾ

ರಿತನ. ”

ಇದೇನಪ್ಪ ಮತ್ತೆ ಬಂತು ತಗಾದೀಂತ ಗಾಬರಿಗೊಂಡೆ. ಕೊಂಚ ನಿಧಾನಿಸಿ ಯೋಚನೆ ಮಾಡಿ “ಕಾಂತಂ, ನಾವು ಮೊನ್ನೆ ಬಟ್ಟೆಗಳನ್ನೇ ಧರಿಸೂಂತ ಹೇಳಿಬಿಡೋಣ” ಎಂದು ನಾನು ಸೂಚಿಸಿದೆ. ಅವಳು ಈ ಮಾತಿಗೆ ಸ್ವಲ್ಪದರಲ್ಲೇ ಒಪ್ಪಲಾರರೆಂದು ನಾನೆನಿಸಿದ್ದೆ. ಆದರೆ ಆಕೆ “ಆಗಬಹುದು” ಎಂದವಳೇ ಮತ್ತೆ ಯೋಚಿಸಿ “ಮಗಳೇನಂತಾಳೋ” ಎಂದು ಉದ್ಗಾರ ತೆಗೆದಳು.

“ಅವಳೇನಂತಾಳೇಳು. ನಮ್ಮ ಮನೆಯ ಪರಿಸ್ಥಿತಿ ಅವಳಿಗೆ ಮಾತ್ರ ಗೊತ್ತಿಲ್ಲೇನು ?”

“ಅಲ್ರೀ! ನೀವೇ ಅವಳಿಗೆ ಮೊದಲು ಕೊಂಚ ಹೇಳಿದ್ರೆ ಒಳಿತಲ್ಲವೆ?” ಎಂದು ಕಾಂತಂ ಹೋಗಿಬಿಟ್ಟಳು. ಈ ಪ್ರಸಂಗ ಇಷ್ಟು ಸುಲಭವಾಗಿ ಕೊನೆಗಂಡಿತೆಂದು ನನಗೆ ಹಿಡಿಯಲಾರದಷ್ಟು ಸಂತೋಷವೆನಿಸಿತು.

೮

ಹತ್ತು ನಿಮಿಷಗಳಾದ ನಂತರ ಕಾಂತಂ ಕೊಂಡ ಅಸಮಾಧಾನದ ಮುಖದಿಂದ ನನ್ನ ಹತ್ತಿರ ಬಂದು “ಏನು ಮಾಡೋದ್ರಿ? ಅವಳು ಆತನ ಪೆಟ್ಟಿಗೆ ಹುಡುಕಿದಳಂತೆ. ಹೊಸ ಅರಿವೆ ಆತ ಅಲ್ಲೇ ಬಿಟ್ಟು ಬಂದಾನಂತೆ ಈಗೇನು ಮಾಡೋದೂಂತೀನಿ?” ಎಂದು ದೀನವದನದಿಂದ ಕೇಳಿಕೊಂಡಳು.

“ಈಗೇನು ಮಾಡಬೇಕು ನೀನೇ ಹೇಳು. ಅಬ್ಬ!”

ನನಗೂ ಏನು ತೋಚದಂತಾಗಿದೆ. ಹಬ್ಬಕ್ಕೆ ಅಳಿಯನ ಮೈಮೇಲೆ ಹೊಸ ಅರಿವೆ ಏನೂ ಇಲ್ಲದೇ ಇದ್ರೆ ನೋಡೋರೇನೆಂದು ಕೊಂಡಾರು? ನೀವೇ ಹೇಳಿ. ನಮ್ಮನ್ನ ನೋಡಿ ಹಾಸ್ಯಮಾಡೀ ನಗೋದಿಲ್ವೆ?“

“ನಕ್ಕರೆ ಅವರ ಹಲ್ಲಗಳೇ ಕಾಣಿಸುತ್ತವೆ” ಎಂದು ಹೇಳಿ ಸುಮ್ಮನಾಗಿ ಬಿಡಲೇಯೆಂದು ನೆನೆದೆ.

ಒಂದು ನಿಮಿಷ ತಡೆದು ಅವಳು ನನ್ನ ಮುಖದೆದುರುನಿಂತು “ಯಾಕ್ರೀ ಅಷ್ಟು ಗಾಬರಿಯಾಗ್ತೀರಿ ?“ ಎಂದು ಕೇಳಿದಳು.

ನನಗೆ ಹಿಡಿಸಲಾರದಷ್ಟು ಕೋಪ ಬಂತು. “ನಾನೇನು ಮಾಡ್ಲಿ ಹೇಳು ಈಗ? ಮತ್ತೆ ಈಗ ಎಲ್ಲ ಕೊಂಡುತರಲಿಕ್ಕೆ ನನ್ನ ಕೈಲಿ ಹಣವೆಲ್ಲಿದೆ?

ನೀನೇ ಹೇಳು “ ಎಂದು ಚೀರಿಕೊಂಡೆ.

“ ನೀವೇನೂ ತರಬೇಡ್ರಿ. ತಕ್ಕೊಳ್ಳಿ ಇಪ್ಪತ್ತೈದು ರುಪಾಯಿ. ಪೇಟೇಗೆ ಹೋಗ್ತೀರೇನು ? ” ಎಂದು ನನ್ನಕೈಲಿ ಹಣಕೊಟ್ಟು ಮುಸಿ ಮುಸಿ ನಗುತ್ತ ನನ್ನ ಮುಂದೆ ನಿಂತು ಬಿಟ್ಟಳು.

ಜಾಣೆಯಾದ ಕಾಂತಂ ಈ ರೀತಿ ವರ್ತಿಸಿದುದು ಇದು ಮೊದಲನೆಯ ಸಲವಲ್ಲ. ದಕ್ಷತೆಯಿಂದ ಕೂಡಿಟ್ಟ ಹಣ ಅವಳಲ್ಲಿ ಕೊಂಚ ಆಪತ್ಕಾಲಕ್ಕೆ ಇರುತ್ತದೇಂತ ನನಗೆ ಮೊದಲೇ ತಿಳಿದಿತ್ತು. ಆದುದರಿಂದ ಅವಳ ನಗುವಿನಲ್ಲಿ ನನ್ನನಗುವನೂ ಬೆರೆಸಿ “ ಕಾಂತಂ ನೀನು ಬಹು ಜಾಣೆ. ಇನ್ನೂಹೆಚ್ಚು ಹಣವನ್ನೇನಾದರೂ ಕಾದಿಟ್ಟಿದ್ದರೆ ಕೊಟ್ಟರೆ ನಿನ್ನ ಪುಣ್ಯ” ಎಂದು ಕೇಳಿದೆ.

ಅವಳು ಕೊಂಚ ಯೋಚನೆಯಲ್ಲೇ ಮಗ್ನಳಾಗಿ “ನನ್ನಲ್ಲಿ ಎಲ್ಲಿದೆ ಹಣ ಇದು ಮಗಳು ಕೊಟ್ಟಳು.”

“ ಮಗೂಗೆಲ್ಲಿಂದ ಬಂತು ? ”

“ ತನ್ನ ಗಂಡನ ಪೆಟ್ಟಿಗೆಯಲ್ಲಿ ಹೊಸ ಬಟ್ಟೆಗಳು ಇಲ್ಲದಿದ್ದುದನ್ನು ಕಂಡು ಅವಳು ಮತ್ತೇನೂ ಯೋಚಿಸದೆ, ತಾನು ಕೂಡಿಟ್ಟುಕೊಂಡ ಈ ಹಣವನ್ನು ಕೊಟ್ಟು “ ಅಮ್ಮಾ ಈ ರೊಕ್ಕದಿಂದ ಅವರಿಗೆ ಹೊಸಬಟ್ಟೆ ತಾಯೆಂದು ಹೇಳು ಅಪ್ಪಗೆ. ಮತ್ತೇಕೆ ಆತಗೆ ತೊಂದರೆ” ಎಂದು ಮಗು ಕೊಟ್ಟಳು.

ಪಾಪ ಅವಳ ಸಹೃದಯಕ್ಕೆ ವಾತ್ಸಲ್ಯಕ್ಕೆ ನನ್ನ ಮನಸ್ಸು ಕರಗಿತು. ಕೂಸು ಅದು ಕೂಡಿಟ್ಟು ಕೊಂಡ ಹಣವನ್ನು ನಾನು ತೆಗೆದು ಕೊಳ್ಳೋದು ಮೂರ್ಖತನವೆಂದು ಯೋಚಿಸಿ ಅವಳನ್ನು ಕರೆದು “ಅಮ್ಮಾ ತೆಗೆದುಕೋ ಇದನ್ನು ಮತ್ತಾವ ಅವಸರದ ಕೆಲಸಕ್ಕಾದರೂ ಉಪಯೋಗಿಸು” ಎಂದು ಹೇಳಿದೆ.

” ಹಾಗಾದ್ರೆ, ಅಳಿಯ ದೇವರಿಗೆ ..............

“ ಸುಮ್ಮನಿರೆ ನೀನೊಂದು. ಉದ್ರಿಬರೀಂತ ಹೇಳಿ ಮತ್ತೆ ತರ್ತೀನಿ” ಎಂದು ಹೇಳಿಕೋಟು ಟೋಪಿ ಧರಿಸಿ ಪೇಟೆಗೆ ಓಡಿಹೋದೆ.

ಸಂಜೆ ನಾಲ್ಕು ಹೊಡೆಯಿತು. ಕಾಫಿ ಕುಡಿದೆವು. ಎಲ್ಲರೂ ಅರಿಷಿಣ ಕುಂಕುಮ ಹಚ್ಚಿ ಹೊಸ ಅರಿವೆಗಳನ್ನು ಧರಿಸಿದರು.

೬

ನಾನು ಕೋಣೆಯಲ್ಲಿ ಕುಳಿತಿದ್ದೆ.

ಮೊದಲು ಕಾಂತಂ ಬಂದು ನನ್ನ ಕಾಲುಮುಟ್ಟಿ ನಮಸ್ಕರಿಸಿದಳು. ಹೊಸ ಸೀರೆಯ ಸೊಬಗಿನಲ್ಲಿ ಮಿನುಗುವ ಏನವಳ ಸೌಂದರ್ಯ ? ಅವಳದೆಷ್ಟು ದೊಷ್ಟಸ್ತಿಕೆ ? ಅನಂತರ ಮಕ್ಕಳೆಲ್ಲರೂ ಬಂದು ನನ್ನ ಕಾಲುಮುಟ್ಟಿ ನಮಸ್ಕಾರಮಾಡಿದರು ಎಲ್ಲರ ತಲೆಗಳನ್ನು ಕೈಯಿಂದ ಮುಟ್ಟಿ ಅವರನ್ನು, ಮಮತೆಯಿಂದ ಮುದ್ದಿಸಿ ಆಶೀರ್ವದಿಸಿದೆ.

ಅಳಿಯ ಮಗಳೂ ನೂತನ ಕಳೆಯಿಂದ, ಹೊಸ ಅರಿವೆಗಳ ಅಂದ ಚಂದದ ಸೊಬಗಿನಲ್ಲಿ ಬಹು ಸುಂದರವಾಗಿ ಕಂಡು ಬಂದರು. ಇಬ್ಬರೂ ಬಂದು ಜೋಡಿಯಾಗ ನಮಸ್ಕರಿಸಿದರು.

ಆನಂದದ ಭರದಲ್ಲಿ ನಾನು ಮೈಮರೆತು ಕೂತು ಬಿಟ್ಟೆ. ನನ್ನ ಸೌಭಾಗ್ಯದಕಣಿ, ಮುದ್ದಿನಮೂಟೆ. ರುಕ್ಮಿಣಿಯ ಹೊಟ್ಟೆ ತಣ್ಣಗಿದ್ದರೆ ಸಾಕು. ಅವಳ ಸಂತೋಷವೇ ನನ್ನ ಭಾಗ್ಯ.

ನಾನು ಮೈಮರೆತು, ಆನಂದದ ಸಮಾಧಿಯಲ್ಲಿರುವುದನ್ನು ಬಾಗಿಲ ಒಂದೆ ಮರೆಯಾಗಿ ನಿಂತು ಕಾಂತಂ ನೋಡುತ್ತಿದ್ದಳು. ಅವಳ ಅರಳಿದ ಕಣ್ಣುಗಳಲ್ಲಿ ಎಂದೂ ಇಲ್ಲದ ಹರುಷ; ತೇಜಸ್ಸು; ಹೊಳಪು ! ಆನಂದದಿಂದ ಹರುಷ-ಭಾಷ್ಪಗಳುದುರಿದುದು ನಾನು ಕದ್ದು ನೋಡಿದೆ. ಗೆದ್ದ ಎತ್ತಿನಂತೆ ಅವಳು ಗಂಭೀರದಿಂದ ಎಲ್ಲರನ್ನೂ ಒಂದು ಸಲ ನೋಡಿದಳು. ಆ ನೋಟದಲ್ಲಿ ಒಂದು ಬಗೆಯ ಸಂತೃಪ್ತಿ ಇತ್ತು; ಆತ್ಮ ತೃಪ್ತಿ ಇತ್ತು. ಅದೇ ಗಂಭೀರದ ಠೀವಿಯಲ್ಲಿ ಅವಳು ನಸು ನಗುವನ್ನು ತೋರಿದಳು. ಇದರಲ್ಲಿ ಅವಳ ತಾಯ್ತನದ ಹಿರಿಮೆ ಇತ್ತು.

ಸಾಕು. ನನಗಿನ್ನೇನು ಬೇಕು; ನನ್ನ ಜೀವನದಲ್ಲಿ ಇಂತಹ ಮಧುರ ಸನ್ನಿವೇಶಗಳ ಸುರಿಮಳೆಮಾಡಿ ತ್ಯಾಗದಿಂದ ನನ್ನ ಜೀವನವನ್ನು ಸುಖಮಯವನ್ನಾಗಿಸಿ ಅಳುನುಂಗಿ ನಕ್ಕು ನಲಿಯುವ ನನ್ನಾಕೆಗೆ ನಾನೆಷ್ಟು ಬಗೆಯಾಗಿ ಋಣಿಯಾಗಿರಬೇಕೋ ತಿಳಿಯದಂತಿದೆ. ಇಂತಹ ಸಾಧ್ವಿಯ ಪತಿಯಾದ ನಾನೇ ಧನ್ಯನೆಂದು ಹಿಗ್ಗಿದೆ.

---

# ಪಿತೃ ಹೃದಯ.

ಆಮಾತು ಕೇಳಿದಮೇಲೆ ವೆಂಕಟರಾಮಯ್ಯನ ಮೈಬೆವರ ತೊಡಗಿತು. ನೆಲದ ಕೆಳಗಿನ ಭೂಮಿ ಕದಲಿದಂತೆನಿಸಿತು. ಅದೇನು ಭೂಕಂಪವೆ? ತನ್ನೆದುರು ಇರುವ ವಸ್ತುಗಳೆಲ್ಲವೂ ಗಿರ್ರೆಂದು ತಿರುಗುತ್ತಿರುವಂತೆ ಭಾಸವಾಯಿತು. ಮುಖದ ಮೇಲಿನ ಬೆವರಿನ ಹನಿಗಳನ್ನು ಕೈವಸ್ತ್ರದಿಂದ ಒರಸಿಕೊಂಡ.

ಶೇಷಮ್ಮ ಸೌಂದರ್ಯರಾಶಿ. ಅವಳ ಸುಂದರಾಕೃತಿ ಚಂದವಾದ ಆಭರಣಗಳಿಗೆ ನಿರ್ಮಿತವಾದಂತಿತ್ತು. ತಾಯಿ ಇಲ್ಲದ ತಬ್ಬಲಿ; ಮೂರು ತಿಂಗಳಮಗುವಾಗಿರುವಾಗಲೇ ತಾಯಿಯನ್ನು ಕಳೆದುಕೊಂಡ ಅವಳನ್ನು ಪೋಷಿಸಿ ತನ್ನ ಅಂತಸ್ತಿಗೆ ತಕ್ಕಂತೆ ಬಿ. ಕಾಮ್ ಪಾಸಾದವನಿಗೆ ಮದುವೆಮಾಡಿಕೊಟ್ಟು ಅವಳ ಜೀವನ ಸುಖಮಯವಾಗಲೆಂದು ಬಯಸಿದ ಶೇಷಮ್ಮನ ತಂದೆ. ತಾಯಿಯ ಆಭರಣಗಳನ್ನು ಇತರ ಅರಿವೆಗಳನ್ನು ಅವಳಿಗಿತ್ತು ಅವಳ ದಾಂಪತ್ಯ ಜೀವನ ಸುಗಮವಾಗಲೆಂದು ಎಣಿಸಿದ. ಅವಳ ಮದುವೆ ಆಗಿ ಇಂದಿಗೆ ಆರು ವರುಷಗಳಾಗಿದ್ದವು.

ಅತ್ತೆಯ ಮನೆ ಸೇರಿ ಆರುವರುಷಗಳಾದರೂ ಹುಟ್ಟಿದ ಮನೆಗೆ ಶೇಷಮ್ಮ ಬರಲೊಪ್ಪಲಿಲ್ಲ. ಮೂರುಮಕ್ಕಳ ತಾಯಿಯಾದರೂ ತಂದೆಯೇ ಅವಳ ಮನೆಗೆ ಹೋಗಿ ಅವಳನ್ನು ಕಂಡು ಬಂದಿದ್ದ. ಎಷ್ಟು ಒತ್ತಾಯ ಪಡಿಸಿದರೂ ಅವಳು ಗಂಡನ ಮನೆ ಬಿಟ್ಟು ಬರಲೊಪ್ಪಲಿಲ್ಲ. ಮುದ್ದು ಮಕ್ಕಳುಮತ್ತು ಪ್ರೀತಿಯ ಗಂಡನೊಂದಿಗೆ ತನ್ನ ಮನೆಗೆಬಂದು ಸುಖವಾಗಿರುವಳೆಂದು ಎಣಿಸಿದ ತಂದೆಯ ಆಶೆಗೆ ಮನ್ನಣೆ ದೊರೆಯಲಿಲ್ಲ. ಅವಳಿಂದ ಕಾಗದಪತ್ರಗಳು ಬಹಳ ದಿನಗಳ ವರೆಗೆ ಬಾರದೇ ಇದ್ದಾಗ ತನಗೆ ಹೋಗಲು ಅನುವಾಗದಿದ್ದರೆ, ಮತ್ತಾರನ್ನಾದರೂ ಕಳುಹಿ ಅವಳಿಗೆ ಉಡುಗೊರೆಗಳನ್ನು ಕಳುಹಿ ಸಮಾಧಾನ ಹೊಂದುತ್ತಿದ್ದ. ಈ ಸಲ ಅವಳಿಂದ ಪತ್ರಗಳು ಬರದೆ ಐದುತಿಂಗಳಾದವು. ತಾನೆಷ್ಟು ಹೇಳಿ ಕಳುಹಿದರೂ ಅವಳು ಮೌನವೇ. ಪರಿಸ್ಥಿತಿ ಹೀಗಿರುವಾಗ ಅಳಿಯ ಮಾಧವರಾಯನು [illegible]

ಮದುವೆಮಾಡಿಕೊಂಡನೆಂಬ ಸಮಾಚಾರ ಇವನನ್ನು ವಿಶೇಷ ಸಂಕಟದಲ್ಲಿ ಕೆಡವಿತು.

"ಕಾಂತರಾವ್, ನೀವು ಸರಿಯಾಗಿ ವಿಚಾರಿಸಿದಿರಾ? ಮಾಧವ ರಾಯನ ಪರಿಚಯ ನಿಮಗಿದೆ ತಾನೆ? ಇದರಲ್ಲಿ ನಿಮ್ಮ ನಿರ್ಧಾರ ತಪ್ಪಾಗಿರಲಾರದಲ್ಲವೆ?" ಎಂದು ಅಂದೇ ಪುಣೆಯಿಂದ ಬಂದ ಭಾವಮೈದುನ ಕಾಂತರಾಯನನ್ನು ಕಾತರದಿಂದ ಕೇಳಿದ.

"ಎನಯ್ಯಾ ನಿನ್ನ ಮಾತು.? ಮಾಧವರಾಯನ ಪರಿಚಯ ನನಗಿಲ್ಲವೆ? ಚೆನ್ನಾಗಿದೆ. ಅವನ ಸ್ನೇಹಿತರ ಮುಂದೆ ತನ್ನ ನೂತನ ವಧುವನ್ನು ಪರಿಚಯ ಮಾಡಿಕೊಡುವುದನ್ನು ಕಣ್ಣಾರೆ ನಾನೇ ನೋಡಿದೆ. ಅವನ ಪರಿಚಯ ನನಗಿತ್ತಾಗಲಿ, ನಾನಂರೆಂಬುವುದು ಅವನಿಗೆ ತಿಳಿಯದು. ನನ್ನ ಕಣ್ಣೆದುರಿನಲ್ಲಿ ನಡೆದ ದೃಶ್ಯವನ್ನು ನಾನು ಹೇಗೆ ಸುಳ್ಳೆನ್ನಲಿ? ನಿನ್ನ ಮಗಳಿಗಾದ ಕಷ್ಟ ನನ್ನ ಮಗಳಿಗಾದಂತಲ್ಲವೆ? ಎಲ್ಲಿಯೋ ಹೇಳಿಕೆಯ ಮಾತುಗಳಿಂದ ನಿನ್ನನ್ನು ನೋಯಿಸುವುದರಿಂದ ನನಗೇನು ಲಾಭ?

"ಅವನ ಸೊಕ್ಕು ಎಷ್ಟೆನ್ನಬೇಕು. ಯಾವ ಮುಖದಿಂದ ಎಲ್ಲರಿಗೂ ಪರಿಚಯ ಮಾಡಿಕೊಡುತ್ತಿದ್ದಾನೆ ಆ ಮೂರ್ಖ? ಮೊದಲನೆಯ ಹೆಂಡತಿ ಮುದ್ದಾದ ಮಕ್ಕಳು ಮೂವರಿರುವಾಗ ಈ ಸುಳ್ಳಿನ ಸೋಗೇಕೆ? ಈ ನಾಟಕವನ್ನಾಡಲು ಅವನಿಗೆಮನಸ್ಸು ಹೇಗೆ ಬಂತು? ನಾಚಿಕೆ ಇಲ್ಲದ ಈ ವರ್ತನೆಗೆ ಅವನ ಸಮಧಾನವೇನಂತೆ? ಮೊದಲ ಹೆಂಡತಿ ಇರುವಾಗ ಆ ನೀಚಳಿಗಾದರೂ ಇವನೊಂದಿಗೆ ಸಹವಾಸಮಾಡಿ ಮದುವೆಯಾದ ಹೆಣ್ಣೆನಂತೆ ಮೆರೆಯಲು ಮನಸ್ಸು ಹೇಗೆ ಬಂದಿತು? ನೀಚಳು, ಮೂರ್ಖಳು" ಎಂದು ಆವೇಶದಿಂದ ಮಾತನಾಡುವಾಗ ದುಃಖದಿಂದ ಕಣ್ಣಲ್ಲಿ ನೀರು ತುಂಬಿಬರಲು ಪಂಚೆಯಿಂದ ಒರಸಿಕೊಂಡ ವೆಂಕಟರಾಮಯ್ಯ

"ಅದಿರಲಿ ವೆಂಕಟರಾಮಯ್ಯ, ನಮ್ಮವಳಾದ ಶೇಷಮ್ಮ ಗೆಬುದ್ಧಿ ಇರಬೇಡವೆ?ಅವನ ಚರ್ಯೆಗಳನ್ನು ಕಂಡುಹಿಡಿದು ನಮಗೆ ತಿಳಿಸಿದ್ದರೆ ಕೆಲಸ ಕೈಮೀರಿ ಹೋಗುತ್ತಿರಲಿಲ್ಲ. ಆವಳ ಹಣೆಯಲ್ಲಿ ಬರೆದಂತೆ ಆಗುತ್ತದೆ. ಬ್ರಹ್ಮ ಬರೆದ ಲಿಖಿತವನ್ನು ನಾವು ತಪ್ಪಿಸುವುದು ಸಾಧ್ಯವೆ?"

"ಇದೆಲ್ಲಾ ನೋಡಿ ಕಷ್ಟಪಡೋದಕ್ಕೆ ನಮ್ಮಂಥ ಹಿರಿಯರು

ಜೀವಂತ ಇದ್ದೀವಿ. ಸಾಕಪ್ಪ ನಮ್ಮ ಬಾಳು.''

" ಭಾವಾ ನಾ ಇನ್ನು ಬರ್ತೀನಿ. ಸುಮ್ಮನೆ ಮನಸ್ಸಿಗೆ ಹಚ್ಚಿಕೊಂಡು ದೇಹಸ್ಥಿತಿ ಕೆಡಿಸಿಕೋಬೇಡ."

ಪಾಪ! ಅತಿ ಪ್ರೀತಿಯಿಂದ ಬೆಳೆಸಿದ ತನ್ನಮಗಳ ಜೀವನ ಹೀಗೆ ಹದ ಗೆಟ್ಟು ದುಃಖಮಯವಾಯಿತಲ್ಲಾ ಎಂದು ಆ ಮುದುಕ ಮರುಗಿದ. ಕಣ್ಮುಚ್ಚಿ ಕುಳಿತುಬಿಟ್ಟ.

—o—o—

" ಶೇಷಮ್ಮಾ! ಹೇಗಿದ್ದೀಯಮ್ಮಾ? ಹುಡುಗರು ಎಲ್ಲಿದ್ದಾರೆ?" ಎಂದು ಮುಂಜಾನೆಯ ಗಾಡಿಗೆ ಬಂದ ವೆಂಕಟರಾಮಯ್ಯ ಮಗಳ ಮುಖ ವನ್ನು ಕೆಳಗೆ ಮೇಲೆ ನೋಡುತ್ತ ಮಾತನಾಡಿಸಿದ.

" ಎಲ್ಲಾ ಕ್ಷೇಮ, ಅಪ್ಪ, ಕಕ್ಕಿ, ಮನೆಯ ಹುಡುಗರೂ ಕ್ಷೇಮತಾನೆ? ಇದೇನಪ್ಪ ಇತ್ತೀಚಿಗೆ ಪತ್ರಗಳೇ ಬಂದಿಲ್ಲ ನಿನ್ನಿಂದ?" ಎಂದು ಹೇಳಿ ಒಳಗೆ ಕರೆದುಕೊಂಡು ಹೋಗಿ ಕಾಫಿ ಕೊಟ್ಟಳು.

ಅವಳ ಕ್ಷೀಣಿಸಿದ ಸ್ಥಿತಿಯನ್ನು ಕಂಡು ಆತನು ಗಾಬರಿಯಾದ. ಸುಂದರಿ ಯಾದ ಶೇಷಮ್ಮ ಕ್ಷಯರೋಗಿಯಂತೆ ಕಂಡು ಬಂದುದರಿಂದ ಅವನು ಯೋಚನೆಗೊಳಗಾದ" ಏನಮ್ಮಾ ಹೀಗಿದ್ದೀ? ಏನಾದರೂ ಬೇನೆಯೆ? ಔಷದ ಉಪಚಾರ ನಡೆದಿದೆ ತಾನೆ? ಕಾಗದ ಏತಕ್ಕೆ ಹಾಕಲಿಲ್ಲವಮ್ಮ?" ಎಂದು ಕೇಳಿ ಇವಳಿಗೆಂದು ತಂದಿದ್ದ ಸೀರೆ, ಹುಡುಗರಿಗೆ ಅರಿವೆಗಳನ್ನೂ, ಗೊಂಬೆಗಳನ್ನೂ ತೆಗೆದು ಕೊಟ್ಟ.

" ಶೇಷಮ್ಮ ನೋಡಿಲ್ಲಿ. ಮೊನ್ನೆ ಜನನವಾದ ನಿನ್ನ ತಮ್ಮ ಹೇಗಿ ದ್ದಾನೆ? ಅವನ ಪೋಟೋ ಇದು. ನಿಮ್ಮ ಕಕ್ಕಿ ದಿನವೂ ನಿನ್ನ ನೆನೆಸು ತ್ತಾಳೆ. ಇವನು ನಿನ್ನನ್ನು ಹೋಲುತ್ತಿದ್ದಾನಂತೆ. ಆದುದರಿಂದಲೇ ಇವನನ್ನು ಶೇಷಗಿರಿಯೆಂದು ಹೆಸರಿಟ್ಟು ಕರೆಯುತ್ತಿದ್ದಾಳೆ."

" ಅವರನ್ನೇತಕ್ಕೆ ಕರೆದುಕೊಂಡು ಬರಲಿಲ್ಲ? ಕಕ್ಕೀನ ನೋಡದೆ ಆರುವರ್ಷಗಳಾದವು. ತಂಗಿ ಚೆನ್ನಾಗಿದ್ದಾಳಾ? ಶಾಲೆಗೆ ಹೋಗುತ್ತಿರು ವಳೇನು?"

"ಗ್ರಹಚಾರ ಅವರನ್ನು ಬೇರೆ ಕರೆದುಕೊಂಡು ಬರಬೇಕಾಗಿತ್ತು. ಈ

ಲಕ್ಷಣಕ್ಕೇ ? ನಾನು ಬಂದದ್ದೇ ಪೇಚಾಟದ ಮಾತು. ಹಬ್ಬಗಳಿಗೆ ಬರಬೇ ಕೆಂದು ನಾನು ಪತ್ರಹಾಕಿದಾಗೆಲ್ಲಾ ನೀನು ಬಾರದೇ ಸುಮ್ಮನಿದ್ದು ಬಿಟ್ಟೆ. ಒಂದು ದಿನವಾದರೂ ನಿನ್ನಗಂಡ ನಿನ್ನೊಂದಿಗೆ ನಮ್ಮ ಮನೆಗೆ ಬಂದನೇ ? ಏನೋ ಹಡೆದ ಹೊಟ್ಟೆಯು ಅಭಿಮಾನ, ನೋಡಿ ಹೋಗೋಣ ವೆಂದು ಕನಿಷ್ಟ ಆರುತಿಂಗಳಿಗೊಂದುಸಲ ಬಂದು ಹೋಗುತ್ತಿದ್ದೇನೆ. ಏನು ಮಾಡೋದು ಹೇಳು ? " ಎಂದು ಹೇಳುವಾಗ ಅವನು ಸಿಟ್ಟಿನಿಂದಲೂ ಅನುತಾಪದಿಂದಲೂ ನಡುಗುತ್ತಿದ್ದನು.

" ಏನಪ್ಪ ನೀನೇ ಹೀಗೆ ಮಾತನಾಡಿದ್ರೆ ? ಮದುವೆ ಶಾಸ್ತ್ರ ಮುಗಿ ದನಂತರ ಗಂಡನಮನೆಯೇ ಹೆಣ್ಣಿಗೆ ಗತಿಯಲ್ಲವೆ ? ಅವರು ಕಳಿಸಿದರಲ್ಲವೆ ನಾನು ಬರುವುದು ? ನಾನೇನು ಮಾಡಲಿ ? ಕರೆದಾಗಲೆಲ್ಲ ನಿಮ್ಮ ಮನೆಗೆ ಬರುವುದಕ್ಕಾಗುತ್ತದೆಯೆ ? "

" ಶೇಷಮ್ಮಾ ! ಮಾಧವರಾಯನು ಊರಲ್ಲಿಲ್ಲವೆ ? ಮನೆಯೊಳಗಿ ಲ್ಲವಲ್ಲ ? " ಎಂದು ಕೇಳಿ ಅವಳ ಮುಖವನ್ನೇ ದಿಟ್ಟಿಸಿ ನೋಡಿದ.

" ಈಗ ಅವರನ್ನು ಕಂಪನಿಯಲ್ಲಿ ಮೇನೇಜರನ್ನಾಗಿನೇಮಿಸಿದ್ದಾರೆ. ಈ ಕೆಲಸಕ್ಕೆ ಬಂದನಂತರ ಅವರು ಅನೇಕ ಸಲ ಮುಂಬಯಿಗೆ ಪುಣೆಗೆ ಹೋಗಬೇಕಾಗುತ್ತದೆ. ಈಗ ಅವರು ಅವಸರದ ಕೆಲಸದ ಮೇಲೆ ಪುಣೆಗೆ ಹೋಗಿರುವರು. ಇಲ್ಲಿಯ ಗುಮಾಸ್ತನ ಮೂಲಕ ಒಂದು ತಿಂಗಳು ರಜೆಯ ಮೇಲೆ ಪುಣೆಯಲ್ಲಿಯೇ ಇರಬೇಕಾಗಿದೆ ಯೆಂದು ಹೇಳಿಕಳಿಸಿರುವರು." ಎಂದು ತಲೆತಗ್ಗಿಸಿ ಕೊಂಡೇ ಮಾತನಾಡಿದಳು.

ಸಣ್ಣವಯಸ್ಸಿನಲ್ಲಿ ಬಹಳ ಚುರಕಾದ ಶೇಷಮ್ಮ ಗಂಡನ ಚಾತು ರ್ಯದ ಮಾತುಗಳನ್ನು ಮುಗ್ಧಳಂತೆ ನಂಬಿದ್ದನ್ನು ಕಂಡು ವೆಂಕಟರಾಮಯ್ಯ ಮರುಗಿದ; ಇವಳಗತಿ ಹೀಗೇಕಾಯಿತೆಂದು ಯೋಚಿಸಿದ.

" ಶೇಷಮ್ಮ ನಾನು ನಾಲ್ಕು ದಿನ ರಜೆಯ ಮೇಲೆ ಬಂದಿದ್ದೇನೆ. ನಿಮ್ಮೆ ಲ್ಲರನ್ನೂ ನಮ್ಮೂರಿಗೆ ಕರೆದುಕೊಂಡು ಹೋಗಬೇಕೂಂತ ಮಾಡೀನಿ. ನಾಳೆ ಸಾಯಂಕಾಲ ನಾವು ಹೊರಡಲೇ ಬೇಕು. " ಎಂದು ಹೇಳಿದ.

" ಇದೇನು ಮಾತು, ನಿಮ್ಮದು ? ಅವರು ಊರಲ್ಲಿಲ್ಲದ ಸಮಯದಲ್ಲಿ ಮನೆ ಬಾಗಿಲು ಹಾಕಿಕೊಂಡು ಹೋದರೆ ಅವರು ಏನೆಂದುಕೊಂಡಾರು?

ಎಲ್ಲಾರೂ ಸೇರಿ ಖಂಡಿತ ಬರುತ್ತೇವೆ. ”

“ ಹೂ ನಿನ್ನಗಂಡ ಬಂದುದಾಯಿತು, ನಿನ್ನ ಕರಕೊಂಡು ಬರೋದು ಆಯಿತು, ಹುಚ್ಚು ಹುಡುಗಿ ” ಎಂದು ಮನದಲ್ಲಿಯೇ ಗೊಣಗಿ ಕೊಳ್ಳುತ್ತಾ ಹೊರಗೆ ಹೋಗಿ ಕಣ್ಣಲ್ಲಿ ಬಂದ ನೀರನ್ನು ಓರೆಸಿಕೊಂಡು ಮತ್ತೆ ಮನೆ ಯೊಳಗೆಬಂದ.

ಮೂರನೆಯ ದಿನ ಊಟವಾದ ನಂತರ ವೆಂಕಟರಾಮಯ್ಯ ಮಂಚದ ಮೇಲೆ ಮಲಗಿಕೊಂಡು ಯೋಚನೆಯಲ್ಲಿ ಮುಳುಗಿದ. ಎಷ್ಟು ಪ್ರಯತ್ನಿ ಸಿದರೂ ನಿದ್ದೆ ಬರಲಿಲ್ಲ. ಶೇಷಮ್ಮ ತಾನಾಗಿಯೇ ಯಾವ ವಿಷಯವನ್ನೂ ಹೇಳುತ್ತಿರಲಿಲ್ಲ. ತನ್ನ ಮನೆಯ ಗುಟ್ಟನ್ನು ಹೊರಕೆಡುಹುವುದುಚಿತವಲ್ಲ ವೆಂದು ಸುಮ್ಮನಿದ್ದಳು. ಪುಣೆಯಲ್ಲಿ ಅವಳ ಗಂಡನ ಬಗ್ಗೆ ತಿಳಿದ ವಾರ್ತೆ ಯನ್ನು ಇವಳ ಮುಂದೆ ಹೇಳಿದರೆ ನಂಬಲಾರಳೆಂದು ನೆನೆದನು. ಅಲ್ಲದೆ ತನ್ನ ಮೇಲೆ ಕೋಪಿಸಿಕೊಂಡು ಮಾತನಾಡುವುದನ್ನೇ ಬಿಟ್ಟರೆ ಹೇಗೆಂದು ಯೋಚ ನೆಗೊಳಗಾದ. ಮಾಧವರಾಯನು ಬಾರದೆ ಅಲ್ಲೇ ಉಳಿದರೆ ಇವರ ಗತಿ ಏನು ? ಹೇಗೆ ಬದುಕುವರು ? ಇವರ ಸಹಾಯಕ್ಕೆ ಯಾರು ಬರುವರು ? ಹೊರಗೆ ತೋರಿಕೆಗೆ ಅವನ ವ್ಯಾಪಾರವು ಏನೂ ತಿಳಿಯದೆಂದು ಬಗೆದು, ತನ್ನ ಪತಿಯ ಮೇಲೆ ತೋರಿಸುವ ಇವಳ ಭಕ್ತಿ, ಶ್ರದ್ಧೆ ಇಂತಹ ಕಲಿಯು ಗದಲ್ಲಿ ವಿಚಿತ್ರವೆನಿಸಿತು. ಶೇಷಮ್ಮ ವಿಶಾಲಹೃದಯಿಯೆಂದು ಇವಳ ಈ ವರ್ತ ನೆಯನ್ನು ಮನದಲ್ಲಿಯೇ ಮೆಚ್ಚಿದ. ಸಂಜೆ ಕಾಫಿ ಕುಡಿಯುವಾಗ ಪ್ರಸಂಗ ನೋಡಿ ಅವನ ವಿಷಯ ಪ್ರಸ್ತಾಪಿಸಬೇಕೆಂದು ನಿರ್ಧರಿಸಿದ. ಅವನ ನೀಚ ಜೀವನದ ರಹಸ್ಯವನ್ನು ಅವಳಿಂದ ದೂರಿರಿಸಲು ವೆಂಕಟರಾಮಯ್ಯನಿಗೆ ಅಸಾ ಧ್ಯವೆನಿಸಿತು.

ಮಕ್ಕಳು ತಾಯಿಯನ್ನು ತಂದೆಯ ವಿಷಯವಾಗಿ ಪೀಡಿಸತೊಡ ಗಿದರು. ಮರೆಸುವ ಪ್ರಯತ್ನ ಮಾಡಿ ಶೇಷಮ್ಮ ತಂದೆಗೆ ಕಾಫಿ ತೆಗೆದು ಕೊಂಡು ಬಂದು ಅವನಿಗಿತ್ತು ಮಂಚದ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತಳು.

“ ನಾನು ಸಂಜೆ ರೈಲಿಗೆ ಹೋಗಲೇಬೇಕು. ರಜೆ ಇಲ್ಲ, ನಿನ್ನನ್ನು ಬಿಟ್ಟು ಹೋಗಲಾರೆ. ನಾನೆಷ್ಟುದಿನ ಕಾದುನಿಂತರೂ ಕೊನೆಗೆ ಹಿಂತುರುಗ

ಬೇಕಾದುದು ನಾನೊಬ್ಬನೇ ಅಲ್ಲವೇ ? ಎಂದು ಮೆಲ್ಲಗೆ ಹೇಳಿದ.

"ಆಗಲೇ ಹೋಗಬೇಕೆ? ತಾತ ತಾತ ಎಂದು ಹುಡುಗರು ಹಾರಾಡುತ್ತಿರುವರು. ಅವರ ಹಿಗ್ಗು ಹೇಳತೀರದು. ನಿನ್ನನ್ನು ನೋಡಿ ನಾನೂ ಬಂದು ಬಿಡಲೇ ಯೆಂದೆನಿಸುತ್ತಿದೆ. ಆದರೂ ಇನ್ನೂ ಕೆಲ ದಿನಗಳವರೆಗೆ ಇರುವುದಾದರೆ ಒಳಿತಲ್ಲವೆ ?"

"ನಾನಿರುವುದು ಶಕ್ಯವಿಲ್ಲ. ನೀನು ಬರುವುದಾದರೆ ಸಂತೋಷದಿಂದ ಕರೆದುಕೊಂಡು ಹೋಗುತ್ತೇನೆ. ಹುಡುಗರು ನನ್ನ ಹಿಂದೆ ಬರುವುದಕ್ಕೆ ಹಾತೊರೆಯುತ್ತಿರುವರು. ನನ್ನ ಮಾತು ಕೇಳು. ನನ್ನೊಂದಿಗೆ ಈಗಲೇ ಬಂದು ಬಿಡು." ಎಂದು ದೈನ್ಯದಿಂದ ಬೇಡಿಕೊಂಡ.

"ನನಗೇಕೋ ಮನಸ್ಸಿಲ್ಲ. ನಾನೀಗಲೇ ಬರಲಾರೆ. ನನ್ನ ಮನಸ್ಸಿಗೆ ನೆಮ್ಮದಿ ಇಲ್ಲ. ಹೇಗೋ ಅನಿಸುತ್ತದೆ." ಎಂದು ಹೇಳುವಾಗ ಅವಳು ತುಟಿ ಕಚ್ಚಿ ಸುಮ್ಮನಾದಳು.

"ಅದೇನಮ್ಮ? ನನ್ನ ಮುಂದೆ ಯಾವ ಸಂಕೋಚವಿಲ್ಲದೆ ಎಲ್ಲವನ್ನೂ ಹೇಳಿಬಿಡು. ಯಾವುದನ್ನೂ ಮುಚ್ಚಿಡಬೇಡ. ನಿನಗೇನು ನೆರವು ಬೇಕೆಂದರೂ ನಾನು ಸಹಾಯ ಮಾಡಲಾರನೆ? ನಾಚಿಕೆಯಿಂದ ಯಾವುದನ್ನೂ ಮುಚ್ಚಿಡಬೇಡ. ನಿನಗೇಕೆ ಇಷ್ಟು ಚಿಂತೆ? ಮೊನ್ನೆ ಜನಿಸಿದ ಮಗು ತೀರಿಕೊಂಡಿತೆಂದು ವ್ಯಸನವೆ? ಯಾಕಮ್ಮಾ ಈ ಬಗೆಯ ಚಿಂತೆ?"

ಈ ಮಾತುಗಳನ್ನು ಕೇಳಿ ಶೇಷಮ್ಮ ನಿರುತ್ಸಾಹದಿಂದ ನಕ್ಕು ಬಿಟ್ಟಳು.

"ನಿಸರ್ಗವು ನೀಡುವ ಸುಖದುಃಖಗಳನ್ನು ನಾವು ಬರಮಾಡಿಕೊಳ್ಳಬೇಕಲ್ಲದೆ, ಅವುಗಳನ್ನು ಎದುರಿಸುವ ಶಕ್ತಿ ನಮಗೆಲ್ಲಿದೆ ಅಪ್ಪಾ? ದುಃಖಗಳು ಮಾನವರನ್ನು ಹಣ್ಣು ಮಾಡುತ್ತವೆ. ಕಷ್ಟಗಳು ಅವರನ್ನು ಭಯಪಡಿಸುತ್ತವೆ. ಆದರೆ ಇಂತ ಸಣ್ಣಪುಟ್ಟ ಕಷ್ಟಗಳಿಗೆ ಗಾಬರಿಯಾಗುವ ಸ್ವಭಾವ ನನ್ನದಲ್ಲ. ಇದ್ದದ್ದರಲ್ಲೇ ತೃಪ್ತಿಪಟ್ಟು ಸಂತೋಷಪಡುವುದು ನನಗೆ ರೂಢಿಯಾಗಿದೆ. ನನ್ನ ಪ್ರಣಯಸೌಧದ ಸುತ್ತಲೂ ಕತ್ತಲೆ. ಕಾರ್ಮೋಡಗಳು ಕವಿದಂತೆ ಕಂಡುಬರುತ್ತದೆ. ಅವರು ನನ್ನ ಮೇಲೆ

ಒಂದು ಬಗೆಯ ಉದಾಸೀನತೆಯನ್ನು ತೋರುತ್ತಿರುವರು. ಆದರೂ ಎಂದು ನುಡಿದು ಸುಮ್ಮನಾದಳು.

"ಏನಮ್ಮ ಅದು ವಿಷಯ? ನೀನು ಏನನ್ನೋ ನನ್ನೆದುರು ಹೇಳಲು ಸಂಕೋಚ ಪಡುತ್ತಿರುವಂತೆ ಕಾಣುತ್ತದೆ. ಕೇಳಬೇಕೆಂದು ಮಾತಿನ ಅವಸರದಲ್ಲಿ ಮರೆತುಬಿಟ್ಟೆ. ಇಂದು ನಾನು ನಿಮ್ಮೂರಿಗೆ ಬಂದಾಗ ರೈಲು ನಿಲ್ದಾಣದಲ್ಲಿ ಓರ್ವನ ಪರಿಚಯವಾಯಿತು. ಆತ ನಿನ್ನ ಯಜಮಾನ ಮಾಧವರಾಯನ ಬಗ್ಗೆ ಏನೇನೋ ಹೇಳಿದ. ಎಲ್ಲವೂ ನಿಜವೇನೇ ತಾಯಿ?" ಎಂದು ಹೇಳಿ ಮಗಳಕಡೆ ರೆಪ್ಪೆ ಆಡಿಸದಂತೆ ನೋಡತೊಡಗಿದ.

"ಆ ಜನರ ಮಾತುಗಳಲ್ಲಿ ನನಗೆ ವಿಶ್ವಾಸವಿಲ್ಲ. ನನಗೇಕೋ...." ಎಂದು ಮುಖವನ್ನತ್ತಕಡೆ ತಿರಿವಿಕೊಂಡಳು.

"ಶೇಷಮ್ಮ, ಯೋಚಿಸಿನೋಡು. ಊರಲ್ಲಿರುವ ಪುಕಾರುಗಳು ಇದರ ಜತೆಗೆ ಮಾಧವರಾಯನ ಉದಾಸೀನತೆ–ಇವುಗಳೆರಡನ್ನು ಜೋಡಿಸಿ ದರೆ ನಿನಗೇ ತಿಳಿಯುತ್ತದಮ್ಮಾ! ನಾನೇನು ಹೇಳಲಿ," ಎಂದು ತಂದೆ ಹೇಳಿದ ಮಾತಿಗೆ ಅವಳು ತಲೆತಗ್ಗಿಸಿ "ಆದುದರಿಂದಲೇ ನಾನು ಯಾರ ಮುಂದೆ ಯಾವ ವಿಷಯವನ್ನು ತೆಗೆಯದೇ ಸುಮ್ಮನೇ ಮನೆಯಲ್ಲಿರುವುದು. ನಿಮ್ಮೂರಿಗೆ ಬಾರದೇ ಇರಲು ಕಾರಣವೂ ಇದೇ. ಲೋಕದ ಜನರಿಗೆ ತಾಳ್ಮೆ ಇಲ್ಲ; ಸಹನೆ ಇಲ್ಲ. ಜನರು ಹೆಚ್ಚಿನ ಅನುಮಾನದಿಂದ ಇನ್ನೊಬ್ಬರನ್ನು ಕಂಡು ಇಲ್ಲಸಲ್ಲದ ಅಪವಾದಗಳನ್ನು ಇತರರ ಮೇಲೆ ಹೊರಿಸುವುದೇ ಅವರಿಗೆ ತೃಪ್ತಿಯ ಕೆಲಸವೆನಿಸುತ್ತದೆ. ಕಷ್ಟದಲ್ಲಿರುವ ವನಿಗೆ ಸಹಾಯಮಾಡುವುದಿಲ್ಲ; ಅವನು ಗತಿಗೆಟ್ಟು ಹಾಳಾದರೆ ಸಂತೋಷ ಪಡುವರು. ಈ ಜನರನ್ನು ಕಂಡರೆ ನನಗೆ...." ಎಂದು ರೋಷದಿಂದ ಹೆಡೆ ತುಳಿದ ಹಾವಿನಂತೆ ಬುಸಗುಟ್ಟಿದಳು.

ಇವಳ ಮಾತನ್ನು ಕೇಳಿ ತಂದೆ ವೆಂಕಟರಾಮಯ್ಯನಿಗೆ ಮುಂದೆ ಆಡಲು ಮಾತೇ ಹೊರಡಲಿಲ್ಲ.

"ನೀನೂ ಅಂಥವರ ಮಾತುಗಳನ್ನು ನಂಬಿದೆಯಲ್ಲವೆ? ಇರಬಹುದು; ಆದರೆ ನನಗೆ ಮಾತ್ರ ಆ ಮಾತುಗಳಲ್ಲಿ ವಿಶ್ವಾಸವಿಲ್ಲ. ಬೆಳಗಾಂವಿಯಿಂದ ಬರೆದ ಅವರ ಕಾಗದದಲ್ಲಿ ನನ್ನ ಮೇಲೆಷ್ಟು ವಿಶ್ವಾಸತೋರಿರುವರು? ಹೀಗೆ

ಪ್ರೇಮ ತೋರಿದವರ ಮಾತುಗಳು ಸುಳ್ಳೆಂದು ಹೇಗೆ ತಿಳಿಯಲಿ? ಸೂರ್ಯ ನನ್ನು ಬೆಂಬತ್ತಿಹೋಗುವ ಕಮಲದಂತಿದೆ ನನ್ನ ಅವಸ್ಥೆ ಅಪ್ಪಾ. ನೀನೇಕೆ ನನ್ನನ್ನು ಅಷ್ಟು ಅನುರಾಗ ಮತ್ತು ಹೆಚ್ಚಿನ ಪ್ರೀತಿಯಿಂದ ಪೋಷಿಸಿದೆ? ನನ್ನಲ್ಲಿ ಆತ್ಮ ಗೌರವವು ನೆಲೆಸುವಂತೇಕೆ ಬೆಳೆಸಿದೆ?'' ಎಂದು ತನ್ನ ತಲೆ ಯನ್ನು ಹಿಡಿದುಕೊಂಡು ಕಣ್ಮುಚ್ಚಿಕೊಂಡು ಕುಳಿತಳು.

"ಜನರ ಮಾತುಗಳಲ್ಲಿ ನಿನಗೆ ವಿಶ್ವಾಸವಿರಬೇಕಮ್ಮಾ. ಎಲ್ಲರೂ ನಮ್ಮ ವೈರಿಗಳೆಂದು ತಿಳಿಯುವುದು ಒಳಿತಲ್ಲ. ನಿನ್ನ ಗಂಡನ ಮೇಲೆ ನಿನಗೆ ವಿಶ್ವಾಸವಿರಬಹುದು. ಆದರೆ ನಿನ್ನ ಅನುಭವಕ್ಕೆ ಬಂದ ಮಾತಿನಲ್ಲಿ ನೀನೇ ವಿಶ್ವಾಸತೋರದೇ ಹೋದರೆ ಹೊರಗಿನವರು ತಿಳಿದುಕೊಳ್ಳುವು ದಾದರೂ ಹೇಗೆ? ಸಮಯ ಬಂದಾಗ ನಿನ್ನ ಊಹೆ ತಪ್ಪೆಂದು ನಿನಗೆ ತಿಳಿದು ಬಂದರೆ, ಆಗ ನಿನಗೆ ಸಮಾಧಾನವಾಗಬಹುದು. ಹೆತ್ತ ಹೊಟ್ಟೆ ಉರಿದುದ್ದರಿಂದ ಇಷ್ಟು ದೂರ ಮಾತನಾಡಿದೆ. ಇದರ ಮೇಲೆ ನಿನ್ನ ಇಷ್ಟ'' ಎಂದು ಕೋಪದಿಂದ ಆವೇಶದಲ್ಲಿ ಮಾತನಾಡಿ, ಅವಳ ಮುಖ ನೋಡಿ ಮತ್ತೆ ಯೋಚನೆಗೊಳಗಾಗಿ "ತಾಯಿ ನನ್ನ ಮಾತು ಕೇಳು. ನಿನ್ನ ಈ ವ್ಯಥೆ ನೋಡಲಾರೆ. ನಿನಗೆ ಲಕ್ಷಣವಾದ ಗಂಡು ಮಗುವಿದೆ ನಿನಗಿನ್ನೇನು ಭಯ? ಗಂಡಸರಿಲ್ಲದ ಮನೆಯಲ್ಲಿ ಹುಡುಗರ ಓದು ಕೆಡು ತ್ತದೆ. ನಾನು ನಿನ್ನ ಆರೈಕೆಗೆ ಏರ್ಪಾಡು ಮಾಡುತ್ತೇನೆ. ಬಂದುಬಿಡು'' ಎಂದು ಹೇಳಿದನು.

"ತಂದೆಯಾದ ಮಾತ್ರಕ್ಕೆ ಚೆನ್ನಾದ ಯೋಚನೆ ಹೇಳಿದೆ. ಜೀವ ನಾಂಶಕ್ಕೆ ದಾವೆ ಹಾಕಿ ಅವರ ಮಾನ ತೆಗೆದು ನನ್ನನ್ನು ಪೋಷಿ ಸುವೆಯಾ? ನಿನ್ನ ಮನೆಯಲ್ಲಿ ಹುಡುಗರೆದುರಿಗೆ ಹೆತ್ತ ತಂದೆಯನ್ನು ದೂರುತ್ತ ಆತನ ನೀಚವರ್ತನೆಯನ್ನು ತೋರಿಸಿಕೊಡುವೆಯಲ್ಲವೆ? ಜನರೆಲ್ಲರೂ ಇವಳು ಗಂಡತೊರೆದ ಹೆಣ್ಣುಯೆಂದು ಬಾಯಿಗೆ ಬಂದಂತೆ ಮಾತನಾಡಲು ಆಸ್ಪದ ಕೊಡುವೆಯಲ್ಲವೆ? ನನ್ನಲ್ಲಿ ಏನೋ ಲೋಪ ವಿದೆಯೆಂದು ಲೋಕಕ್ಕೆ ಕಾಣುವಂತೆ ಮಾಡುವೆಯಲ್ಲವೆ? ಅವರು ಈ ಬಗೆಯಾಗಿ ನನ್ನನ್ನು ಅವಮಾನಿಸಿದರೆ ನಿನಗೆ ಸಮಾಧಾನವಾಗುವದಲ್ಲವೆ? ನನಗೆ ಇಲ್ಲಿಯೇ ಇರಲು ಸುಖವೆನಿಸುತ್ತದೆ. ಮದುವೆಯಾದ ಹೆಣ್ಣಿಗೆ

ಗಂಡನ ಮನೆಯೇ ಗತಿ. ಅವರ ವಿಷಯದಲ್ಲಿ ನಾನಾವ ಅನುಮಾನವನ್ನೂ ಮಾಡಲಾರೆ.” ಎಂದು ಹೇಳುವಾಗ ಶೇಷಮ್ಮನ ಮುಖ ಹಸಿದ ಹೆಣ್ಣು ಸಿಂಹದಂತಿತ್ತು.

“ ಆಗಲಮ್ಮಾ ಆಗಲಿ. ಇಲ್ಲೇ ಇದ್ದು ಬಿಟ್ಟರೆ ನಾಲ್ಕು ದಿನಗಳು ಕಳೆದ ಮೇಲಾದರೂ ನಿನ್ನ ಮಕ್ಕಳಿಗೆ ಅವರ ತಂದೆಯ ಕತೆ ತಿಳಿಯುವು ದಲ್ಲವೆ ? ನಿನ್ನ ಗಂಡನನ್ನು ಯಾವ ಆಧಾರವಿಲ್ಲದೆ ನಾನು ಅನುಮಾನಿ ಸುತ್ತಿರುವೆನೆಂದು ಭಾವಿಸಿರುವೆಯಾ ? ಅವನನ್ನು ನೀನು ಬೇಕಾದಷ್ಟು ಪೂಜಿಸು ನಾನು ಬೇಡೆನ್ನುವುದಿಲ್ಲ. ಆತ ಸತ್ಯಭಾಮೆಯೊಂದಿಗೆ ಪುಣೆಯಲ್ಲಿ ರುವನು. ಈಗಲೇ ಆತನಿಗೆ ಟೆಲಿಗ್ರಾಂ ಕಳಿಸುವೆನು.” ಎಂದು ಹೇಳುತ್ತ ಮಾಧವರಾಯನ ಬಗ್ಗೆ ಕೊಂಚ ಅನುಮಾನ ಉಂಟಾಗಲೆಂದು ಸೂಚಿಸಿದ.

“ ನೀನು ನಂಬಿದರೂ, ಇವರ ಮಾತುಗಳಲ್ಲಿ ನನಗೆ ಸ್ವಲ್ಪವೂ ವಿಶ್ವಾಸವಿಲ್ಲ. ನನ್ನ ಹುಡುಗರ ಮುಂದೆ ಇಂತಹ ಅವಹೇಳನದ ಮಾತು ಗಳನ್ನು ಆಡಬೇಡ.” ಎಂದು ಆವೇಶದಿಂದ ಮಾತನಾಡುವಾಗ ಅವಳು ಎಚ್ಚರದ ತಪ್ಪಿ ನೆಲದ ಮೇಲೆ ಬೀಳುವುದರಲ್ಲಿದ್ದಳು. ಅವಳನ್ನು ಹಿಡಿದೆತ್ತಿ ಮಂಚದ ಮೇಲೆ ಮಲಗಿಸಿದ. ಅವಳ ತಂದೆ ತನ್ನ ಮಗಳ ಅವಸ್ಥೆ ಹೀಗಾಯಿತಲ್ಲಾಎಂದು ಚಿಂತಿಸುತ್ತ ಅವಳನ್ನು ಸಂತೈಸಿದ. “ ನನಗೆ ಮುಪ್ಪಿನಲ್ಲಿ ಎಂಥ ಕಷ್ಟ ತಂದೆ ದೇವರೇ ” ಎಂದು ತಲೆ ಹಿಡಿದುಕೊಂಡು ಕುಳಿತು ಬಿಟ್ಟ.

———o———

ವೆಂಕಟರಾಮಯ್ಯ ನೆನೆದಂತೆ ಊರಿಗೆ ಅಂದು ಸಾಯಂಕಾಲ ಹೋಗು ವುದಾಗಲಿಲ್ಲ. ಅವಳಿಗೆ ಅಂದು ಜ್ವರ ಬರಲು ಡಾಕ್ಟರರನ್ನು ಕರತಂದು ಉಪಚರಿಸಬೇಕಾಯಿತು. ಕ್ಷೀಣಿಸಿದ ಶರೀರದಲ್ಲಿ ಶಕ್ತಿ ಕಡಿಮೆ ಇದ್ದುದ ರಿಂದ ಬೇನೆ ಬೇಗ ಗುಣವಾಗಲಿಲ್ಲ. ಅವಳ ಆರೈಕೆಗೆಂದು ಊರಿನಿಂದ ಹೆಂಡತಿ ಮಕ್ಕಳನ್ನು ಕರೆಸಿ ಹತ್ತು ದಿನಗಳಿಗೆ ರಜೆ ಹೆಚ್ಚಿಸಿದ. ಅವಳ ಬೇನೆ ಕ್ಷಯವಾಗಿ ಪರಿಣಮಿಸಬಹುದೆಂಬ ಡಾಕ್ಟರನ ಮಾತು ಕೇಳಿ ವೆಂಕಟ ರಾಮಯ್ಯ ಹೌಹಾರಿದ.

ಅಂದು ಶೇಷಮ್ಮಗೆ ವಿಪರೀತ ಜ್ವರ. ರಾತ್ರಿ ಹಗಲು ನಿದ್ರೆ ವಿಶ್ರಾಂತಿ

ಇಲ್ಲದೆ ಗಂಡ ಹೆಂಡಿರಿಬ್ಬರೂ ಉಪಚರಿಸಿದರು. ವೈದ್ಯನಿಂದ ಔಷದೋಪಚಾರವೂ ನಡೆದಿತ್ತು. ಆದರೆ ಕ್ಷೀಣಿಸಿದ ಅವಳ ಸದ್ಯದ ದೇಹಸ್ಥಿತಿಯಲ್ಲಿ ಬೇನೆ ಬಲವಾಗುತ್ತಿದ್ದುದು ಎಲ್ಲರಿಗೂ ಭೀತಿಯನ್ನುಂಟು ಮಾಡಿತು. ಅನೇಕಸಲ ಎಚ್ಚರವಿಲ್ಲದ ಸಮಯದಲ್ಲಿ ಪೇಚಾಟ ಹೆಚ್ಚಾಯಿತು. ಆ ಪೇಚಾಟದಲ್ಲಿ ಇವರ ದಾಂಪತ್ಯ ಜೀವನದ ಬಗ್ಗೆ ತಾನು ತಿಳಿಯ ಬಯಸಿದ ವಿವರಗಳೇನಾದರೂ ತಿಳಿಯುವವೇಯೆಂದು ಆತ ಆಶಿಸಿದ. ಆದರೆ ಅವಳ ಮುಖದಿಂದ ಯಾವ ವಿಶೇಷ ಸಮಾಚಾರವೂ ಹೊರಬೀಳಲಿಲ್ಲ. ಎಂಟನೇ ದಿನ ಜ್ವರ ಕೊಂಚ ತಗ್ಗಿತು; ಆದರೆ ನಿತ್ರಾಣದಿಂದ ಅವಳ ದನಿ ಕುಗ್ಗಿ ಹೋಗಿತ್ತು. ಮಾತು ಸ್ಪಷ್ಟ ಕೇಳಿಸುತ್ತಲೇ ಇರಲಿಲ್ಲ.

ಅಂದು ಮಧ್ಯಾಹ್ನ ಶೇಷಮ್ಮಗೆ ಪುಣೆಯಿಂದ ಒಂದು ಪತ್ರ ಬಂದಿತು. ಚಿಂತಾಜನಕವಾದ ಪರಿಸ್ಥಿತಿಯಲ್ಲಿ ಅವಳಿಗೆ ಪತ್ರ ತೋರಿಸುವುದು ಒಳಿತಲ್ಲವೆಂದು ನೆನೆದು, ಅದರಲ್ಲಿಯ ರಹಸ್ಯವನ್ನು ತಿಳಿಯುವ ಕಾರಣದಿಂದ ಆ ಲಕೋಟೆಯನ್ನು ಒಡೆದು ನೋಡಿದ.

" ಪ್ರಿಯ ಶೇಷೂ " ಪುಣೆ

ಇಲ್ಲಿಯ ಕೆಲಸ ಇನ್ನೂ ಮುಗಿದಿಲ್ಲ. ವ್ಯವಹಾರ ಬಹಳ ತೊಂದರೆಯಲ್ಲಿದೆ. ಆದುದರಿಂದ ನಾನು ಇನ್ನೂ ಕೆಲಕಾಲ ಇಲ್ಲಿಯೇ ಇರಬೇಕಾಗುತ್ತದೆ. ನೀನು ಮಕ್ಕಳೊಂದಿಗೆ ತವರುಮನೆಗೆ ಹೋಗಬಹುದು. ಎಲ್ಲ ವಿವರಗಳನ್ನೂ ಹಿಂದಿನಿಂದ ಮತ್ತು ಬರೆಯುತ್ತೇನೆ.

ನಿನ್ನ ಕ್ಷೇಮವನ್ನು ಕೋರುವ

**ಮಾಧವರಾವು"**

" ಇಷ್ಟಾದರೂ ಅವಳ ಕ್ಷೇಮವನ್ನು ಇವನು ಕೋರುವವನೆ ? ವ್ಯವಹಾರವು ತೊಂದರೆಯಲ್ಲಿದೇಯೆ ? ಇವಳ ವ್ಯವಹಾರವನ್ನು ಮಣ್ಣುಗೂಡಿಸಿ ಇವಳನ್ನು ಚಿಂತೆಯ ಚಿತೆಯಲ್ಲಿ ಬಳಲುವಂತೆ ಮಾಡಿದ ಯಮನಲ್ಲವೆ ಇವನು ? ಒಂದೇ ಮಾತಿನಲ್ಲಿ ನಾನು ಮತ್ತೊಂದು ಮದುವೆ ಮಾಡಿಕೊಂಡಿರುವೆನೆಂದು ಹೇಳಿ ಬಿಟ್ಟರೆ ಚೆನ್ನಾಗಿತ್ತು. ಈ ಕಾಗದವನ್ನು

ನೋಡಿದರೆ ಶೇಷಮ್ಮನ ಗತಿ ಏನಾಗಬೇಕು? " ಎಂದು ಮನದಲ್ಲಿಯೇ ಯೋಚಿಸಿದ.

ಮೂರನೆಯ ದಿನ ಕಾಫಿ ಕುಡಿಯುತ್ತ ಮಂಚದ ಮೇಲೆ ಮಲಗಿದ ಶೇಷಮ್ಮನನ್ನು ಕುರಿತು " ಶೇಷಮ್ಮ, ನಿನ್ನ ಜ್ವರ ಇಷ್ಟು ಬೇಗ ಕಡಿಮೆ ಯಾಗುವುದೆಂದು ನಾನು ಭಾವಿಸಲಿಲ್ಲ. ಮಾಧವರಾಯನಿಗೊಂದು ಟೆಲಿಗ್ರಾಂ ಕೊಡೋಣವೆಂದು ನೆನೆದೆ, ಆದರೆ ಡಾಕ್ಟರರು ತಡೆದರು. ನಮ್ಮ ಅದೃಷ್ಟ ಚೆನ್ನಾಗಿದೆ ಮುಖ್ಯ. " ಎಂದು ಹೇಳಿ ಅದರ ಪರಿಣಾಮ ಅವಳ ಮೇಲೆ ಹೇಗಾಗುವುದೆಂದು ಅವಳ ಮುಖವನ್ನೇ ನೋಡಿದ.

" ನನ್ನಂಥವರಿಗೆ ಸಾವು ಬೇಗ ಬರುವುದಿಲ್ಲಪ್ಪ. ನಾನು ಬಹಳ ನೊಂದಿ, ಸಾವನ್ನು ಜಯಿಸಿದೆ " ಎಂದು ವೈರಾಗ್ಯದ ಸ್ವರದಲ್ಲಿ ನುಡಿದಳು.

" ಅಮ್ಮ, ನಿನಗೆ ಜ್ವರ ಬಹಳ ಹೆಚ್ಚಾಗಿತ್ತೆಂದು, ನಿನ್ನ ಕಾಗದ ನಿನಗೆ ಕೊಡಲಿಲ್ಲ. " ಎಂದು ಕವರನ್ನು ಅವಳಿಗೆ ಕೊಟ್ಟ.

ಆ ಕವರು ಮೊದಲಿಗೊಂದು ಸಲ ಒಡೆದಿತ್ತೆಂದು ಅವಳಿಗೆ ತಿಳಿಯಲಿಲ್ಲ. ಕಾಗದದೊಳಗಿನ ವಿವರಗಳನ್ನು ಓದಿಕೊಂಡು ನಿಟ್ಟುಸುರನ್ನು ಬಿಟ್ಟು, ಹಾಸಿಗೆಯ ಆಕಡೆ ತಿರುಗಿ ಮಲಗಿದಳು. ಆದರೆ ವೆಂಕಟರಾಮಯ್ಯನು ಸುಮ್ಮನಿರಲಾರದೆ " ಯಾರಿಂದಮ್ಮಾ ಕಾಗದ ? ಏನು ಸಮಾಚಾರ? " ಎಂದು ಕೇಳಿದ.

" ಏನಿಲ್ಲಪ್ಪ ಅವರದೇ ಕಾಗದ; ವಿಶೇಷವೇನೂ ಇಲ್ಲವಂತೆ." ಎಂದು ನುಡಿದು ಸುಮ್ಮನಾದಳು.

ಈ ಸಭ್ಯತೆಗೆ ವೆಂಕಟರಾಮಯ್ಯನಿಗೆ ತಡೆಯಲಾರದಷ್ಟು ರೋಷ ಬಂತು. ರೋಗಿಯ ಮೇಲೆ ಕನಿಕರ ತೋರುವುದರ ಬದಲು ಕೋಪ ಹೆಚ್ಚಿತು. ನಿರ್ವಾಹವಿಲ್ಲದೆ " ನನಗೆಲ್ಲಾ ತಿಳಿದಿದೆ. ಈ ದುರ್ಗಂಧ ವನ್ನು ಇನ್ನೆಷ್ಟುದಿನ ಮುಚ್ಚಿಡುವೆ ? ನಿನ್ನ ಮಾಧವರಾಯನು ಬರೆದ ಈ ಕಾಗದವನ್ನು ನಾನು ಮೊದಲೇ ಒಡೆದು ನೋಡಿದೆ. ಬೇರೇ ತಿಳಿಯ ಬೇಡ. ಈ ಪುಣೆಯ ವ್ಯವಹಾರವೆಲ್ಲವೂ ನಿಮ್ಮ ಮಾವ ಕಾಂತರಾಯನ ಮೂಲಕ ತಿಳಿದಿದೆ. ಅವನೇ ಮಾಧವರಾಯನನ್ನು ಪ್ರತ್ಯಕ್ಷ ಕಂಡು, ಆತನು ತನ್ನ ಹೊಸ ಹೆಂಡತಿಯೊಂದಿಗೆ ಹೋಟಲನಲ್ಲಿ ನಲಿಯುತ್ತಿರುವ

ದನ್ನು ನೋಡಿ ಬಂದಿರುವನು. ಈ ವಿಷಯ ನಿನಗೆ ತಿಳಿಸದಂತೆ ನಮ್ಮ ಮನೆಗೆ ಕರೆದುಕೊಂಡು ಹೋಗಬೇಕೆಂದು ನೆನೆದಿದ್ದೆ. ಆದರೆ ಇಂದು ನಿಜ ಸ್ಥಿತಿಯನ್ನು ನಿನಗೆ ತಿಳಿಸಬೇಕಾಯಿತು. ಈಗಾದರೂ........'' ಎಂದು ಹೆತ್ತ ಹೊಟ್ಟೆಯ ದುಃಖವನ್ನು ತೋಡಿಕೊಂಡನು.

" ಈಗಲಾದರೂ ಸರಿ, ಯಾವಾಗಲಾದರೂ ಸರಿ, ನಾನು ಈ ಮನೆ ಬಿಟ್ಟು ಬರುವುದಿಲ್ಲ. ಜೀವನಾಂಶದಾವೆ ಹಾಕಿ ನನ್ನನ್ನು ಕೋರ್ಟಿಗೇರಿಸ ಬೇಕೆಂದಿರುವಯಲ್ಲವೆ? ಎಂದಿಗಾದರೂ ಮತ್ತೆ ಹೊಂದುಗೂಡುವ ನಮ್ಮ ಬಾಳನ್ನು ಹೋಳಾಗಿಸಿ ಒಂದಾಗದಂತೆ ಮಾಡುವೆಯಲ್ಲವೆ ? ನನಗೆ ಇಲ್ಲಿಯೇ ಸುಖವಿದೆ." ಎಂದು ಹೇಳಿ ಆಕಡೆ ತಿರುಗಿಬಿಟ್ಟಳು.

" ಆಯಿತಮ್ಮ ನಿನ್ನಿಷ್ಟ ಈ ಮುದುಕನನ್ನು ಇನ್ನೆಷ್ಟು ಗೋಳಿಟ್ಟು ಕೊಳ್ಳುವೆಯೋ? ಈ ಮಾತು ಕೇಳುವುದಕ್ಕೆಂದು ನಾನು ಇಲ್ಲಿ ನಿಂತಂತಾಯಿತು. ನನ್ನ ಗ್ರಹಚಾರ'' ಎಂದು ಹೇಳಿ ಕಣ್ಣಲ್ಲಿ ತುಂಬಿಬಂದ ಅಶ್ರುಗಳನ್ನು ಪಂಚೆಯಿಂದ ಒರೆಸಿಕೊಂಡ ವೆಂಕಟರಾಮಯ್ಯ.

# ಧರ್ಮ ಬುದ್ಧಿ

೧

ಧಡಂ! ಧಡಲ್!

ಹೀಗೇಕೆ ಶಬ್ದವಾಯಿತೆಂದು ನೋಡಲು ಒಳಗೆ ನಡುಮನೆಗೆ ಹೋದೆ.

ಅಲ್ಲಿಯ ದೃಶ್ಯ ನೋಡಿ ನನ್ನೆದೆ ಒಡೆಯಿತು. ಅವಳು ಕೆಳಗೆ-ಮೇಲೆ ನಿಚ್ಚಣಿಕೆ. ಮೈ ಬೆವರಿಬಿಟ್ಟಿತು.

ಮೇಲಿದ್ದ, ಭಾರವಾದ ನಿಚ್ಚಣಿಕೆಯನ್ನು ತೆಗೆದು, "ಪ್ರಭಾ! ಪ್ರಭಾ" ಎಂದು ಕೂಗಿದೆ.

ಅವಳು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಸಿಮೆಂಟಿನ ನೆಲದಮೇಲೆ ಬಿದ್ದುದರಿಂದ ಬಲವಾದ ಪೆಟ್ಟು ತಗಲಿರಬುದೆಂದು ಯೋಚಿಸಿದೆ. ಎಚ್ಚರ ವಿರಲಿಲ್ಲ. ಮುಖದಮೇಲೆ ಸ್ವಲ್ಪ ನೀರು ಚಿಮುಕಿಸಿ ಗಾಳಿ ಹಾಕಿದೆ. ಅಲು ಗಾಡಹತ್ತಿದಳು. ಧೈರ್ಯ ಬಂತು.

"ಪ್ರಭಾ! ಈಗ ಹೇಗಿದೆ?" ಎಂದು ಕೇಳಿದೆ.

"ಅಬ್ಬ....ಉಸ್ಸ್....ಅಬ್ಬ....!"....ಕೈಮುರಿದಂತೆ ಕಾಣಸ್ತವರೀ" ಎಂದು ನೋವಿನಿಂದ ನರಳಿದಳು.

ನನ್ನ ಉತ್ಸಾಹದ ಯೋಚನೆಗಳೆಲ್ಲವೂ ಗಾಳಿಗೆ ಮಾಯವಾದುವು. ಹಾಳು ಆದಿತ್ಯವಾರವೇಕೆ ಬಿಡುವೆಂದು ನಿರ್ಣಯಿಸಿದರೋ ತಿಳಿಯ ದಂತಾಯಿತು.

"ಆಸ್ಪತ್ರಿಗೆ (ದವಾಖಾನೆಗೆ) ಹೋಗುವ—"

"ಹಾಳು....ಆಸ್ಪತ್ರಿ....!"

"ಅಲ್ಲಿ ಹೋಗದೇ ಬೇರೆ ಮಾರ್ಗವೇ ಇಲ್ಲ."

ಸುಮ್ಮನೆ ನೋವಿನಿಂದ ನರಳುತ್ತಿದ್ದಳು. ಬೀದಿಯಲ್ಲಿ ಹಾದು ಹೋಗುವ ಕುದುರೆ ಗಾಡಿಯನ್ನು ನಿಲ್ಲಿಸಿ, ಅದರ ಸಹಾಯದಿಂದ ಆಸ್ಪತ್ರಿ ಸೇರಿದೆವು. ಡಾಕ್ಟರರ ಪರೀಕ್ಷೆ ಮುಗಿಯಿತು. "ಎಲುಬು ಮುರಿದಿದೆ,

ಕ್ಲೋರೋಫಾರಂ ಕೊಟ್ಟು, ಅವನ್ನು ಸರಿಪಡಿಸಬೇಕು. ಎಚ್ಚರಿಕೆ ತಪ್ಪಿಸಿ ಕೆಲಸ ಮಾಡಬೇಕು ” ಎಂದು ಡಾಕ್ಟರನು ಹೇಳಿದ ಮಾತುಗಳು ಪ್ರಭೆಳನ್ನು ಸ್ಥೈರ್ಯಗೆಡಿಸಿದುವು. ನನಗೂ ಭಯವೆನಿಸಿತು. ಆದರೂ ಧೈರ್ಯ ಹೇಳುವವರು ಬೇರೆ ಯಾರೂ ಇಲ್ಲದಿದ್ದುದರಿಂದ ನಾನೇ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಬೇಕಾಯಿತು. ಅಸಮಾಧಾನದ ಮೋರೆಯನ್ನು ನೋಡಿ “ನೀವೇನೂ ಭಯಪಡುವ ಅವಶ್ಯಕವಿಲ್ಲ. ಇದಾವ ಪ್ರಮಾದದ ವಿಷಯ? ಇದು ನಮ್ಮ ದಿನದ ಸಾಧಾರಣ ಕೆಲಸಗಳಲ್ಲೊಂದು. ಏಳೆಂಟು ದಿನಗಳು ನಮ್ಮ ಆಸ್ಪತ್ರೆಯಲ್ಲಿದ್ದರಾಯಿತು. ಅನಂತರ ಪೂರ್ಣ ಗುಣಹೊಂದಿ ಮನೆಗೆ ಹೋಗಬಹುದು ” ಎಂದು ಹೇಳಿದ ಡಾಕ್ಟರರ ಮಾತುಗಳು ನನಗೆ ಇನ್ನಷ್ಟು ಹೆಚ್ಚು ಧೈರ್ಯ ತಂದುಕೊಟ್ಟಿತು. ಅವಳನ್ನು ಚಿಕಿತ್ಸಾಲಯಕ್ಕೆ ತೆಗೆದುಕೊಂಡು ಹೋದ ಎರಡು ತಾಸಿನ ಮೇಲೆ ಅವಳನ್ನು ಪುನಃ ನೋಡಲು ವಾರ್ಡಿಗೆ ಹೋದೆ. ಮಲ್ಲಿಗೆ ಹೂವಿನಷ್ಟು ಮೃದುವಾದ ಹಾಸಿಗೆಯ ಮೇಲೆ ನನ್ನವಳನ್ನು ಮಲಗಿಸಿದ್ದರು. ಅವಳಿಗೆ ಹೆಚ್ಚು ಬಾಧೆ ಇದ್ದಂತೆ ಕಾಣಿಸಲಿಲ್ಲ. ಅವಳ ಮುಖ ನೀರಸವಾಗಿತ್ತು. ಕಳೆಗುಂದಿತ್ತು.

“ ಪ್ರಭಾ! ಈಗ ಹೇಗಿದೆ? ”

“ ಬಾಧೆತಡೆಯುವ ಹಾಗೆ ಇದೆ....ಹೀಗೇ ಕವಲದ ಹಾಗೆ ಒಂದು ವಾರದವರೆಗೆ ಮಲಗಿರಬೇಕಂತೆ....? ” ಮೈಮೇಲಿನ ಹೊದ್ದಿಕೆಯನ್ನು ತೆಗೆದು ಡಾಕ್ಟರರು ಕಟ್ಟಿದ್ದ ಪ್ಲಾಸ್ಟರ್ ಆಫ್ ಪ್ಯಾರಿಸದ ಕಟ್ಟನ್ನು ತೋರಿಸಿದಳು. ಅವಳಿಗಾದ ನೋವಿಗೆ ನನ್ನ ಸಹಾನುಭೂತಿ ಇದೆ ಎಂದು ತೋರಿಸಲೋಸುಗ ಉಸುರ್ಗರೆದು ಅವಳ ಹಣೆಯಮೇಲೆ ಕೈಸವರಿದೆ.

ಆ ಹೊತ್ತಿಗೆ ನರ್ಸ ಸ್ವಚ್ಛವಾದ ಗ್ಲಾಸಿನಲ್ಲಿ ಬಿಸಿ ಹಾಲನ್ನು ತಂದು ಕೊಟ್ಟಳು. ಅವಳಲ್ಲಿ ಕಂಡುಬಂದ ಶುಭ್ರತೆ, ಮುಖದ ಮೇಲೆ ತೋರಿ ಬರುವ ನಗುವಿನ ಧೈರ್ಯಸೂಚಕ ನೋಟ, ಇವುಗಳಿಂದ ನಾನೂ ಬೇನೆ ಯಿಂದ ಇಲ್ಲಿದ್ದಿದ್ದರೆ ಎಷ್ಟು ಒಳಿತೆಂದೆನಿಸಿತು. ಇಂತಹ ಸಂತೋಷವನ್ನು ಹೊರಸೂಸುವ ಜನರ ಮಧ್ಯೆ ಇದ್ದರೆ, ರೋಗವು ತಾನಾಗಿಯೇ ಗುಣ ವಾಗಬಹುದೇನೋ ?

ಪ್ರಭಳನ್ನು ನಾಜೂಕಾಗಿ ಎತ್ತಿಹಿಡಿದು ಹಾಲನ್ನು ಕುಡಿಸಿದಳು.

ಏನು ಅನುರಾಗವದು? ಹಣದಿಂದ ಕೊಳ್ಳಲಾಗದ ಅನೇಕ ತರಹದ ಸೌಖ್ಯವನ್ನು ಇವರು ಮಾನವ ಜಾತಿಗೆ ಕೊಡುತ್ತಿರುವುದು ನೆನಪಿನಲ್ಲಿ ಇಡತಕ್ಕ ವಿಷಯ.

"ಕೈ ಬಹಳ ನೋವಾಗಿದೆಯೋ?" ಎಂದು ನಯವಾಗಿ ಕೇಳಿದಳು ನರ್ಸ.

"ಇಲ್ಲಿ ಸ್ವಲ್ಪ ಎತ್ತರವಾದರೆ ನೋವು ಕಡಿಮೆಯಾಗಬಹುದು" ಎಂದು ಹೇಳಿದಳು ಪ್ರಭೆ. ತಕ್ಷಣವೇ ರಿಂಚಿನ ಸಹಾಯದಿಂದ ಮಂಚವನ್ನು ಬೇಕಾದ ಸ್ಥಳದಲ್ಲಿ ಎತ್ತರ ಮಾಡಿದಳು. ಎಂತಹ ವಿಶಾಲ ಹೃದಯ!

ಪ್ರಭಳ ಆಗಿನ ಸ್ಥಿತಿಯನ್ನು ನೋಡಿ, ಆವಳ ಮೇಲೆ ಅಸೂಯೆ ಬೆಳೆಯಿತು. ನಾನೂ ರೋಗಿಯಾಗಿದ್ದರೆ ಚೆನ್ನಾಗಿತ್ತು ಎಂದೆನಿಸಿತು. ಅದೇ ಆಸ್ಪತ್ರೆಯಲ್ಲಿದ್ದ ಇನ್ನಿತರ ರೋಗಿಗಳ ಕಡೆ ನನ್ನ ದೃಷ್ಟಿಯು ಹೋಯಿತು. ಯಾರೂ ನೋವಿನ ತಳಮಳದಲ್ಲಿರಲಿಲ್ಲ. ಆಸ್ಪತ್ರೆಯೆಂದರೆ ನರಕವೆಂಬ ನನ್ನ ಭಾವನೆ ತಪ್ಪೆಂದು ತಿದ್ದಿಕೊಂಡೆ. ಮನೆಯಲ್ಲಿ ಬೇನೆಯ ಆರೈಕೆ ಸರಿಯಾಗಿ ಆಗುವುದಿಲ್ಲವೆಂದು ಜನರು ಇಲ್ಲಿ ಸೇರಿ ತಮ್ಮ ರೋಗಗಳನ್ನು ಗುಣಪಡಿಸಿಕೊಂಡು ಹೋಗಲು ಸಂತೋಷದಿಂದ ಬರುವ ಸ್ಥಳವಿದು. ಇಲ್ಲಿಯ ಸ್ವಚ್ಛತೆ, ನಿರ್ಮಲವಾದ ಗಾಳಿ, ಇಲ್ಲಿಯ ನೌಕರರ ಹುಸಿನಗುವಿನ ನೋಟ, ನೊಂದ ಹೃದಯಗಳಿಗೆ ಹರುಷವನ್ನು ಕೊಡುತ್ತಿತ್ತು. ಇವರ ಗುಂಗಿನಲ್ಲಿ ಅವರ ಬೇನೆ ಸ್ವಲ್ಪ ಕಾಲದೊಳಗಾಗಿಯೇ ಗುಣವಾಗಲು ಅನುಕೂಲವಾಗುತ್ತಿತ್ತು.

ನರ್ಸ ಬಂದವಳೇ "ನೀವಿನ್ನು ಹೋಗಬೇಕು. ರಾತ್ರಿ ನೀವಿಲ್ಲಿ ಇರಲಾಗದು" ಎಂದು ಹೇಳಿದಳು.

"ಇವಳೋ........"

"ಅವರನ್ನು ನೋಡಿಕೊಳ್ಳಲು, ಅವರಿಗೆ ಯಾವ ನೋವೂ ಉಂಟಾಗದಂತೆ ನೋಡಿಕೊಂಡು ಅವರಿಗೆ ಉಪಚಾರ ಮಾಡಲು ನಾವಿದ್ದೇವೆ. ಮತ್ತೆ ನೀವು ನಾಳೆ ಬರಬಹುದು."

ಪ್ರಭಳನ್ನು ನೋಡಿದೆ.

"ನನಗೇನೂ ಭಯವಿಲ್ಲ.......ನಾಳೆ ಬಂದರಾಯಿತು" ಎಂದ

ಕ್ಲೋರೋಫಾರಂ ಕೊಟ್ಟು, ಅದನ್ನು ಸರಿಪಡಿಸಬೇಕು. ಎಚ್ಚರಿಕೆ ತಪ್ಪಿಸಿ ಕೆಲಸ ಮಾಡಬೇಕು" ಎಂದು ಡಾಕ್ಟರನು ಹೇಳಿದ ಮಾತುಗಳು ಪ್ರಭಳನ್ನು ಧೈರ್ಯಗೆಡಿಸಿದುವು. ನನಗೂ ಭಯವೆನಿಸಿತು. ಆದರೂ ಧೈರ್ಯ ಹೇಳುವವರು ಬೇರೆ ಯಾರೂ ಇಲ್ಲದಿದ್ದುದರಿಂದ ನಾನೇ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಬೇಕಾಯಿತು. ಅಸಮಾಧಾನದ ಮೋರೆಯನ್ನು ನೋಡಿ "ನೀವೇನೂ ಭಯಪಡುವ ಅವಶ್ಯಕವಿಲ್ಲ. ಇದಾವ ಪ್ರಮಾದದ ವಿಷಯ? ಇದು ನಮ್ಮ ದಿನದ ಸಾಧಾರಣ ಕೆಲಸಗಳಲ್ಲೊಂದು. ಎಳೆಂಟು ದಿನಗಳು ನಮ್ಮ ಆಸ್ಪತ್ರೆಯಲ್ಲಿದ್ದರಾಯಿತು. ಅನಂತರ ಪೂರ್ಣ ಗುಣಹೊಂದಿ ಮನೆಗೆ ಹೋಗಬಹುದು" ಎಂದು ಹೇಳಿದ ಡಾಕ್ಟರರ ಮಾತುಗಳು ನನಗೆ ಇನ್ನಷ್ಟು ಹೆಚ್ಚು ಧೈರ್ಯ ತಂದುಕೊಟ್ಟಿತು. ಅವಳನ್ನು ಚಿಕಿತ್ಸಾಲಯಕ್ಕೆ ತೆಗೆದುಕೊಂಡು ಹೋದ ಎರಡು ತಾಸಿನ ಮೇಲೆ ಅವಳನ್ನು ಪುನಃ ನೋಡಲು ವಾರ್ಡಿಗೆ ಹೋದೆ. ಮಲ್ಲಿಗೆ ಹೂವಿನಷ್ಟು ಮೃದುವಾದ ಹಾಸಿಗೆಯ ಮೇಲೆ ನನ್ನವಳನ್ನು ಮಲಗಿಸಿದ್ದರು. ಅವಳಿಗೆ ಹೆಚ್ಚು ಬಾಧೆ ಇದ್ದಂತೆ ಕಾಣಿಸಲಿಲ್ಲ. ಅವಳ ಮುಖ ನೀರಸವಾಗಿತ್ತು. ಕಳೆಗುಂದಿತ್ತು.

"ಪ್ರಭಾ! ಈಗ ಹೇಗಿದೆ?"

"ಬಾಧೆತಡೆಯುವ ಹಾಗೆ ಇದೆ....ಹೀಗೇ ಕವಲದ ಹಾಗೆ ಒಂದು ವಾರದವರೆಗೆ ಮಲಗಿರಬೇಕಂತೆ....?" ಮೈಮೇಲಿನ ಹೊದ್ದಿಕೆಯನ್ನು ತೆಗೆದು ಡಾಕ್ಟರರು ಕಟ್ಟಿದ್ದ ಪ್ಲಾಸ್ಟರ್ ಆಫ್ ಪ್ಯಾರಿಸದ ಕಟ್ಟನ್ನು ತೋರಿಸಿದಳು. ಅವಳಿಗಾದ ನೋವಿಗೆ ನನ್ನ ಸಹಾನುಭೂತಿ ಇದೆ ಎಂದು ತೋರಿಸಲೋಸುಗ ಉಸುರ್ಗರೆದು ಅವಳ ಹಣೆಯಮೇಲೆ ಕೈಸವರಿದೆ.

ಆ ಹೊತ್ತಿಗೆ ನರ್ಸ ಸ್ವಚ್ಛವಾದ ಗ್ಲಾಸಿನಲ್ಲಿ ಬಿಸಿ ಹಾಲನ್ನು ತಂದು ಕೊಟ್ಟಳು. ಅವಳಲ್ಲಿ ಕಂಡುಬಂದ ಶುಭ್ರತೆ, ಮುಖದ ಮೇಲೆ ತೋರಿ ಬರುವ ನಗುವಿನ ಧೈರ್ಯಸೂಚಕ ನೋಟ, ಇವುಗಳಿಂದ ನಾನೂ ಬೇನೆ ಯಿಂದ ಇಲ್ಲಿದ್ದಿದ್ದರೆ ಎಷ್ಟು ಒಳಿತೆಂದೆನಿಸಿತು. ಇಂತಹ ಸಂತೋಷವನ್ನು ಹೊರಸೂಸುವ ಜನರ ಮಧ್ಯೆ ಇದ್ದರೆ, ರೋಗವು ತಾನಾಗಿಯೇ ಗುಣ ವಾಗಬಹುದೇನೋ?

ಪ್ರಭಳನ್ನು ನಾಜೂಕಾಗಿ ಎತ್ತಿಹಿಡಿದು ಹಾಲನ್ನು ಕುಡಿಸಿದಳು.

ಏನು ಅನುರಾಗವದು? ಹಣದಿಂದ ಕೊಳ್ಳಲಾಗದ ಅನೇಕ ತರಹದ ಸೌಖ್ಯವನ್ನು ಇವರು ಮಾನವ ಜಾತಿಗೆ ಕೊಡುತ್ತಿರುವುದು ನೆನಪಿನಲ್ಲಿ ಇಡತಕ್ಕ ವಿಷಯ.

"ಕೈ ಬಹಳ ನೋವಾಗಿದೆಯೇ?" ಎಂದು ನಯವಾಗಿ ಕೇಳಿದಳು ನರ್ಸ.

"ಇಲ್ಲಿ ಸ್ವಲ್ಪ ಎತ್ತರವಾದರೆ ನೋವು ಕಡಿಮೆಯಾಗಬಹುದು" ಎಂದು ಹೇಳಿದಳು ಪ್ರಭ. ತಕ್ಷಣವೇ ರಂಚಿನ ಸಹಾಯದಿಂದ ಮಂಚವನ್ನು ಬೇಕಾದ ಸ್ಥಳದಲ್ಲಿ ಎತ್ತರ ಮಾಡಿದಳು. ಎಂತಹ ವಿಶಾಲ ಹೃದಯ!

ಪ್ರಭಳ ಆಗಿನ ಸ್ಥಿತಿಯನ್ನು ನೋಡಿ, ಅವಳ ಮೇಲೆ ಅಸೂಯೆ ಬೆಳೆಯಿತು. ನಾನೂ ರೋಗಿಯಾಗಿದ್ದರೆ ಚೆನ್ನಾಗಿತ್ತು ಎಂದೆನಿಸಿತು. ಅದೇ ಆಸ್ಪತ್ರೆಯಲ್ಲಿದ್ದ ಇನ್ನಿತರ ರೋಗಿಗಳ ಕಡೆ ನನ್ನ ದೃಷ್ಟಿಯು ಹೋಯಿತು. ಯಾರೂ ನೋವಿನ ತಳಮಳದಲ್ಲಿರಲಿಲ್ಲ. ಆಸ್ಪತ್ರೆಯೆಂದರೆ ನರಕ—ಎಂಬ ನನ್ನ ಭಾವನೆ ತಪ್ಪೆಂದು ತಿದ್ದಿಕೊಂಡೆ. ಮನೆಯಲ್ಲಿ ಬೇನೆಯ ಆರೈಕೆ ಸರಿಯಾಗಿ ಆಗುವುದಿಲ್ಲವೆಂದು ಜನರು ಇಲ್ಲಿ ಸೇರಿ ತಮ್ಮ ರೋಗಗಳನ್ನು ಗುಣಪಡಿಸಿಕೊಂಡು ಹೋಗಲು ಸಂತೋಷದಿಂದ ಬರುವ ಸ್ಥಳವಿದು. ಇಲ್ಲಿಯ ಸ್ವಚ್ಛತೆ, ನಿರ್ಮಲವಾದ ಗಾಳಿ, ಇಲ್ಲಿಯ ನೌಕರರ ಹುಸಿನಗುವಿನ ನೋಟ, ನೊಂದ ಹೃದಯಗಳಿಗೆ ಹರುಷವನ್ನು ಕೊಡುತ್ತಿತ್ತು. ಇದರ ಗುಂಗಿನಲ್ಲಿ ಅವರ ಬೇನೆ ಸ್ವಲ್ಪ ಕಾಲದೊಳಗಾಗಿಯೇ ಗುಣವಾಗಲು ಅನುಕೂಲವಾಗುತ್ತಿತ್ತು.

ನರ್ಸ ಬಂದವಳೇ "ನೀವಿನ್ನು ಹೋಗಬೇಕು. ರಾತ್ರಿ ನೀವಿಲ್ಲಿ ಇರಲಾಗದು" ಎಂದು ಹೇಳಿದಳು.

"ಇವಳೋ........"

"ಅವರನ್ನು ನೋಡಿಕೊಳ್ಳಲು, ಅವರಿಗೆ ಯಾವ ನೋವೂ ಉಂಟಾಗದಂತೆ ನೋಡಿಕೊಂಡು ಅವರಿಗೆ ಉಪಚಾರ ಮಾಡಲು ನಾವಿದ್ದೇವೆ. ಮತ್ತೆ ನೀವು ನಾಳೆ ಬರಬಹುದು."

ಪ್ರಭಳನ್ನು ನೋಡಿದೆ.

"ನನಗೇನೂ ಭಯವಿಲ್ಲ........ನಾಳೆ ಬಂದರಾಯಿತು" ಎಂದ

ಹೇಳಿದಳು ನಗುತ್ತ.

ಮನೆಗೆ ಹೋಗಲು ಮನಸ್ಸಿಲ್ಲದಿದ್ದರೂ ಹೊರಡಲೇಬೇಕಾಯಿತು. ಬೇಜಾರಾದ ಮನಸ್ಸಿನಿಂದ ಮನೆ ಸೇರಿದೆ.

೨

ರಾತ್ರಿಯೆಲ್ಲವೂ ನಿದ್ದೆಯಿಲ್ಲ. ಪ್ರಭೆಯ ಯೋಚನೆಯೇ. ನನಗೇನೋ ಭಯ. ಬೆಳಗಿನಲ್ಲೆದ್ದವನೇ ಅವಳನ್ನು ನೋಡಲು ಅವಸರದಿಂದ ಹೋದೆ. ಅವಳು ಎಂದಿನಂತೆ ಸುಖವಾಗಿದ್ದಂತೆ ತೋರಿತು. ರಾತ್ರಿ ಯೋಚನೆಯಿಲ್ಲದೆ ನಿದ್ರಿಸಿದವಳಂತೆ ಕಂಡುಬಂತು. ಅವಳ ಮುಖದಲ್ಲಿ ನೋವಿನ ಸೂಚನೆಯೇ ಇರಲಿಲ್ಲ.

"ಚೆನ್ನಾಗಿ ನಿದ್ದೆ ಮಾಡಿದೆಯಾ?"

"ಓ! ಇಲ್ಲಿ ಮನೆಗಿಂತಲೂ ನನಗೆ ಚನ್ನಾಗಿ ನಿದ್ದೆ ಬಂತು. ಇಲ್ಲಿ ಸೊಳ್ಳೆಕಾಟ ಇಲ್ಲ. ತಗಣೆ ಕಡಿತ ಇಲ್ಲ. ಮೆತ್ತನಾದ ಈ ಹಾಸಿಗೆಯ ಮೇಲೆ ಸುಖವಾಗಿ ನಿದ್ದೆ ಮಾಡಿದೆ"

"ಇಂದು ಹೇಗಿದೆ ನಿನ್ನ ನೋವು"

"ಇಷ್ಟೇಕೆ ನಿಮಗೆ ಯೋಚನೆ? ನನಗಾವ ನೋವೂ ಬಾಧಿಸುತ್ತಿಲ್ಲ. ಈ ನರ್ಸುಗಳು ನನ್ನ ಆರೋಗ್ಯವನ್ನು ವಿಚಾರಿಸಲು ಯಾವಾಗಲೂ ನನ್ನ ಹತ್ತಿರವೇ ಇರುವರು. ಆದುದರಿಂದ——"

ಅಂದು ಸಾಯಂಕಾಲ ಮತ್ತೂ ಹೋದೆ. ನಾನು ಅವಳನ್ನು ಕಾಣುತ್ತಿರುವಾಗಲೇ, ಪ್ರಭೆ "ಎಷ್ಟು ಚೆನ್ನಾಗಿದೆ ಇಲ್ಲಿ. ಸುಖತರವಾದ ಸ್ವಚ್ಛವಾದ ನೀರು, ಗಾಳಿ, ಮಲಗಲು ಎತ್ತರವಾದ ಬಂಗಲೆಯ ಮನೆ, ಸಾಕಷ್ಟು ಬೆಳಕು, ನಮಗೆ ಕೊಡುತ್ತಿರುವ ಈ ಚಿಕಿತ್ಸೆಗೆ ಏನಾದರೂ ಕೊಡಬಹುದು. ನನಗೆಂದು ಪ್ರತ್ಯೇಕವಾಗಿ ಮಲಗಲು ಮಂಚಕ್ಕೆ ದಿನವೊಂದಕ್ಕೆ ಒಂದು ರೂಪಾಯಿ ಇಷ್ಟೇನೇ?

"ಹೌದು—"

"ನಮಗೆ ಇಷ್ಟು ಸುಲಭವಾದ ಚಿಕಿತ್ಸೆ ಬೇರೊಂದು ಸ್ಥಳದಲ್ಲಿ ಸಿಗಬಹುದೆ? ಹಡೆದ ತಾಯಿಯು ಸಹಾ ಇಷ್ಟು ಅಕ್ಕರೆಯಿಂದ ನೋಡಿಕೊಳ್ಳ

ಲಾರಳು. ಸರಕಾರಿ ಆಸ್ಪತ್ರೆಯಾದುದರಿಂದ ಔಷಧಕ್ಕೆ ಹೆಚ್ಚು ಖರ್ಚಾ ಗುವುದಿಲ್ಲವೆಂತಲೇ ನಮ್ಮ ಪಾಡು ಸರಿಹೋಯಿತು ಇಲ್ಲದಿದ್ದರೆ ಈ ಪ್ರಸಂಗಕ್ಕೆ ಎಷ್ಟು ಖರ್ಚಾಗುತ್ತಿತ್ತೋ? ಈ ನರ್ಸುಗಳು—ನಿಜವಾಗಿ ದೇವಕನ್ಯೆಯರೆಂದೇ ಭಾವಿಸುತ್ತೇನೆ." ಅವಳೆಂದಂತೆ ನನಗೂ ಇವರು ದೇವತಾ ಮನುಷ್ಯರೆಂದೆನಿಸಿತು.

"ನನ್ನದೊಂದು ಇಚ್ಛೆ........" ಎಂದು ಮೆಲುಧ್ವನಿಯಲ್ಲಿ ನುಡಿದು ಸುಮ್ಮನಾದಳು, ಪ್ರಭೆ.

ಇಂಥಾ ಕಷ್ಟಸಮಯದಲ್ಲಿ ಅವಳ ಇಚ್ಛೆ ಎಂತಹದಾದರೂ ಪೂರೈಸಿ ಬಿಡಬೇಕೆಂದೆನಿಸಿತು. "ಆಗಲಿ, ಅದೇನು ಹೇಳು——ಎಂದು ಕೇಳಿದೆ.

"ಇಲ್ಲಿ ಹೊರಗಡೆ ಧನಸಹಾಯಕ್ಕೆಂದು ಧರ್ಮದ ಡಬ್ಬಿಯನ್ನಿಟ್ಟಿ ರುವರು. ಅದರಲ್ಲಿ ನಾವೆಷ್ಟು ಹಾಕಿದರೂ ಸಂತೋಷದಿಂದ ಸ್ವೀಕರಿ ಸುವರು. ಈ ಧನದಿಂದ ಬಡಜನರ, ಆಪತ್ತಿನಲ್ಲಿದ್ದ ರೋಗಿಗಳ, ಇನ್ನಿತರ ದೀನಜನರ ಸಹಾಯಕ್ಕೆಂದು ಉಪಯೋಗಿಸುವರಂತೆ. ನೋವಿನಿಂದ ನರುಳುವ ಜನರ ಉದ್ಧಾರಕ್ಕೆಂದು ಉಪಯೋಗಿಸಲ್ಪಡುವುದು. ನಾವು ಈ ರೀತಿ ಬಡಜನರಿಗೆ ಸಹಾಯ ಮಾಡಬೇಕೆಂದು ನನ್ನ ಮನಸ್ಸು ಹೇಳುತ್ತದೆ."

"ಸಂತೋಷವಾಗಿ, ಇಪ್ಪತ್ತು ರೂಪಾಯಿ ಧರ್ಮಾರ್ಥವಾಗಿ ಕೊಡುವ" ಎಂದು ಹೇಳಿದ ನನ್ನ ಮಾತಿಗೆ ಸಮ್ಮತಿಯನ್ನು ಸೂಚಿಸುತ್ತ "ಖಂಡಿತ ಕೊಡುವ. ಅಲ್ಲ ಯಾವನಾದರೂ ಪ್ರೈವೆಟ್ ಡಾಕ್ಟರನ ಹತ್ತಿರ ಉಪಚಾರ ನಡೆಸಿದ್ದರೆ, ಕನಿಷ್ಟ ನೂರು ರೂಪಾಯಿಯಾದರೂ ಬೇಕಾ ಗುತ್ತಿತ್ತು. ಹಣ ವೆಚ್ಚವಾದರೂ ಇಂತಹ ಒಳ್ಳೆಯ ಉಪಚಾರ ದೊರೆ ಯುತ್ತಿತ್ತೋ ಇಲ್ಲವೋ?

"ಹಾಗೆಯೇ ಮಾಡೋಣ. ನಿನಗೆ ಬೇಗ ಗುಣವಾಗಲಿ........ ಇಂಥಾ ಖರ್ಚು ನಾವೆಷ್ಟು ಮಾಡುವುದಿಲ್ಲ."

ನನ್ನ ಈ ಮಾತಿಗೆ ಅವಳು ತನ್ನದೊಂದು ಸಮ್ಮತಿ ಸೂಚಿಸುತ್ತ ಮೆಲ್ಲಗೆ ನಕ್ಕುಬಿಟ್ಟಳು.

ಹತ್ತು ದಿನಗಳಾದನಂತರ ಪ್ರಭೆಳು ಮನೆಗೆ ಹೋಗಬಹುದೆಂದು

ಹೇಳಿದರು. ಬಂದ ಗಂಡಾಂತರ ತಪ್ಪಿದುದರಿಂದ ಸಂತೋಷವೆನಿಸಿತು.... ಹೊರಡಲು ಎಲ್ಲವೂ ಸಿದ್ಧವಾಯಿತು.

"ಕುದುರೆ ಗಾಡಿ ಬಂತೆ?"

"ನಡೆಯಿರಿ ಹೋಗೋಣ."

ಅಂದು ನಾವಾಡಿಕೊಂಡ ಮಾತು ನೆನಪಿಗೆ ಬಂತು. ಹತ್ತು ರೂಪಾಯಿ ನೋಟುಗಳೆರಡನ್ನು ತೆಗೆದು ಅವಳ ಕೈಯಲ್ಲಿ ಕೊಟ್ಟು "ನೀನು ಇಚ್ಛಿಸಿದಂತೆ ಆಸ್ಪತ್ರೆಯವರಿಗೆ ದಾನ ಮಾಡುವೆನೆಂದು ಹೇಳಿದೆಯಲ್ಲವೆ? ಧರ್ಮದ ಡಬ್ಬಿಯಲ್ಲಿ ಹಾಕಿಬಿಡು. ಹೋಗಿಬಿಡುವ........"

ಪ್ರಭೆ ಆಶ್ಚರ್ಯದಿಂದ "ಇಪ್ಪತ್ತು ರೂಪಾಯಿಗಳೇ! ಸರಿ, ಸರಿ. ದಾನಧರ್ಮಕ್ಕೆ ನಮ್ಮಲ್ಲೆಲ್ಲಿದೆ ಅನವಸರದ ಹೆಚ್ಚಿನ ಹಣ? ನಾವೇನು ಭಾಗ್ಯವಂತರೆ; ಹೆಚ್ಚಿನ ಶ್ರೀಮಂತರೆ?"

"ಅಲ್ಲಾ, ಹತ್ತೂ ದಿನದ ಹಿಂದೆ ನೀನೇ ಈ ಮಾತನ್ನು ಆಡಿದೆಯಲ್ಲವೇ? ಆಸ್ಪತ್ರೆಯವರು ಬಡವರ ಉದ್ಧಾರಕ್ಕೆಂದು ಮಾಡುತ್ತಿರುವ ಕೆಲಸಕ್ಕೆ ನಮ್ಮ ಸಹಾಯ ಆಗಿಯೇ ತೀರಬೇಕೆಂದು ನೀನು ಹಠಹಿಡಿದೆ. ಆಗ ನಾವು ಭಾಗ್ಯವಂತರಾಗಿದ್ದೆವೇನು? ಬಡತನದ ನೋಗನ್ನು ನಾವೇ ಹಾಕಿಕೊಳ್ಳುತ್ತೇವೆ. ನಾವು ಮಾಡುವ ಹೆಚ್ಚಿನ ಖರ್ಚುಗಳೆಷ್ಟೋ? ಆದುದರಿಂದ........"

"ಸಾಕು, ನಿಮ್ಮ ಧರ್ಮ ಬುದ್ಧಿ....ಈಗ ಬಟ್ಟೆಗಳ ಬೆಲೆ ಇಳಿದಿವೆ. ಇದರಿಂದ ನನಗೊಂದು ಒಳ್ಳೇ ಸೀರೆ........"

"ಆಗಲಿ ಅದೂ ಕೊಳ್ಳಬಹುದು; ಅದು ಬೇರೆ ವಿಷಯ. ಸೀರೆಯನ್ನು ಕೊಳ್ಳುವುದು ನಮ್ಮ ವೈಯಕ್ತಿಕ ಸುಖಕ್ಕೆ. ನಾವು ಈಗ ದಾನ ಮಾಡುವುದು ನಮ್ಮ ದೇಶದ ಬಡ ಜನರ ಸಹಾಯಕ್ಕೆಂದು. ಕಷ್ಟದಿಂದ ನರಳುತ್ತಿರುವ ಮಾನವ ಜಾತಿಯು ಉದ್ಧಾರವಾಗಲು ನಾವು ನಮ್ಮ ಅಲ್ಪ ಸಹಾಯ ಮಾಡಿಯೇತೀರಬೇಕು. ನಮ್ಮ ಶಕ್ತಿಮೀರಿ ಸಹಾಯ ಮಾಡಿದಲ್ಲಿ ಹುಟ್ಟಿದುದಕ್ಕೆ ಸಾರ್ಥಕವಾದಂತಾಗುವುದು."

"ಅಬ್ಬ! ನಿಮ್ಮೊಂದಿಗೆ ನಾನು ವಾದಿಸಲಾರೆ. ಈ ಆಸ್ಪತ್ರೆಯವರು ಭರಿಸುತ್ತಿರುವ ಖರ್ಚನ್ನು ನಾವು ವಹಿಸುವುದು ಸಾಧ್ಯವೆ? ಅವರಿಗೆ ಪರ

ರಾಷ್ಟ್ರಗಳಿಂದ ಕೋಟಿಗಟ್ಲೆ ರೂಪಾಯಿಗಳ ಸಹಾಯ ದೊರೆಯುವುದು. ಇಲ್ಲದಿದ್ದರೆ ಇಂಥ ದೊಡ್ಡ ಖರ್ಚಿನ ಹವ್ಯಾಸಕ್ಕೆ ಯಾರಾದರೂ ಕೈ ಹಾಕುವರೆ? ನಮ್ಮ ಸಹಾಯದಿಂದ ಏನಾಗಬೇಕು ಇವರಿಗೆ! ನಡೆಯಿರಿ, ಸುಮ್ಮನೆ, ಹೊತ್ತಾಯಿತು. "

" ಅಲ್ಲ ಪ್ರಭ! ನಮ್ಮ ಶಕ್ತಿಗನುಸರಿಸಿ...."

" ಬಹಳಾಯಿತು, ನಿಮ್ಮ ಶಕ್ತಿ, ಸಾಮರ್ಥ್ಯ. ಹೀಗೆ ಹಣ ಖರ್ಚುಮಾಡಿದರೇನಂತೆ? "

ಮುಂದೆ ಈ ರೀತಿ ವಾದಿಸುವುದು ಒಳಿತಲ್ಲವೆಂದು ನೆನೆದು ಸುಮ್ಮನಾದೆ. ಅವಳೂ ಬೇಗ, ಬೇಗ ಆಸ್ಪತ್ರೆಯ ಮೆಟ್ಟಿಲುಗಳನ್ನಿಳಿದು ಗಾಡಿಯನ್ನೇರಿದಳು.

ನಾನು ಮುಂದೇನೂ ಹೇಳದೆ ಅವಳನ್ನು ಹಿಂಬಾಲಿಸಿದೆ.

ಕುದುರೆಗಾಡಿ ಆಸ್ಪತ್ರೆಯ ಆವರಣ ದಾಟಿದ ನಂತರ " ಅಲ್ಲರೀ. ಇಂಥಾ ಆಸ್ಪತ್ರೆಗಳಿರಬೇಕಾದುದು ಅವಸರವೇ. ಇವುಗಳಿಂದ ಬಡಜನರಿಗೆ, ನೋವಿನಿಂದ ಬಳಲುವವರಿಗೆ ಎಷ್ಟೋ ಸಹಾಯವಾಗುವುದು ಆದರೆ ಇದರಲ್ಲಿ ನಾವು ಸಹಾಯ ಮಾಡಬೇಕಾದ ಅವಶ್ಯಕತೆ ಎಲ್ಲಿದೆ? ಹೇಳ್ರಿ, ಮತ್ತೆ. ಅಲ್ಲಾ ಇನ್ನೊಂದು ಹತ್ತು ರೂಪಾಯಿ ಹಾಕಿದರೆ ನನಗೆ ರಡು ಸೀರೆಕೊಳ್ಳಬಹದು. ಇನ್ನೊಂದು ವರ್ಷ ನಿನುಗೆ ತೋಂಪರೆ ಇಲ್ಲ ನಾವು ಕೊಡುವ ಈ ಅಲ್ಪಸಹಾಯದಿಂದೇನಾಗಬೇಕು. ? " ಎಂದು ಹೇಳುತ್ತ ಕೈಯಲ್ಲಿಯ ರೂಪಾಯಿಗಳನ್ನು ಜಾಕೆಟಿನ ಕಿಸೆಯಲ್ಲಿ ಮಡಗಿದಳು. ವಾದದಲ್ಲಿ ತನ್ನ ಪಕ್ಷವೇ ಗೆದ್ದಿತೆಂಬ ಹೆಮ್ಮೆಯಿಂದ ಮೆಲ್ಲಗೆ ನಕ್ಕಳು

ನನಗೂ ನಗು ಬಂತು; ಆದರೆ ನಗಲಿಲ್ಲ.

# ಕತೆಗಾರನ ಕನಸು

“ ನೀನು ಕತೆಗಾರನಲ್ಲ! ನಿನಗೆ ಕತೆಬರೆಯಲು ಬರುವದಿಲ್ಲ! ನೀನು ಕತೆ ಬರೆಯಬಾರದು !!!” ಈ ಮಾತುಗಳು ಅವನೆದೆಯಲ್ಲಿ ಶೂಲದಂತೆ ನಾಟಿದವು; ಭಯವನ್ನುಂಟು ಮಾಡಿದವು; ಅವನ ರಚನಾಶಕ್ತಿಯನ್ನು ಕುಂಠಿಸಿದವು. ಆ ಮಾತುಗಳಿನ್ನೂ ಧ್ವನಿಸುತ್ತಿವೆ; ಅವುಗಳರ್ಥ ಪೂರ್ಣ ಮನಗತವಾಗಿದೆ. ಯಾರಮಾತುಗಳಿವು? ಎಲ್ಲಿಂದ ಆಡಲ್ಪಟ್ಟವೆ? ಎಲ್ಲಕಡೆಯೂ ನೋಡಿದ. ಯಾರೂ ಕಾಣಲಿಲ್ಲ? ಯಾರದಾಧ್ವನಿ? ಮಿತ್ರನದಾಗಿರಬಹುದೆ? ಇಲ್ಲದೆ ತಾನು ಬರೆಹಗಾರನಾಗಬಹುದೆಂದು ಅಸೂಯೆ ಪಡುವ ಶತ್ರುವಿನದಾಗಿರಬಹುದೆ? ಎಲ್ಲವೂ ಸಮಸ್ಯೆಯಾಗಿಯೇ ಉಳಿಯಿತು. ಅವನಿಗಲ್ಲಿ ನಿಲ್ಲಲಾಗಲಿಲ್ಲ. ಅಲ್ಲಿಂದ ಮುಂದಕ್ಕೆ ಅವಸರದಿಂದ ಓಡತೊಡಗಿದ.

ಅವನೆಷ್ಟು ದೂರ ಹಾಗೆ ಓಡಿದನೆಂಬುವುದು ಅವನಿಗೇ ತಿಳಿಯದು. ಕತೆ ಬರೆಯುವ ಕೆಲಸ ಬಿಟ್ಟರೆ ಬೇರೆ ಯಾವ ಕೆಲಸವೂ ಅವನಿಂದಾಗುತ್ತಿರಲಿಲ್ಲ. ಕತೆ ಬರೆಯುವುದೇ ಅವನ ಯೋಗ್ಯತೆ. ಇಷ್ಟುದಿನದಿಂದಲೂ ಕತೆಬರೆಯುವುದಕ್ಕೆಂದೇ ಜನನವಾಗಿರುವೆನೆಂದು ಬಗೆದ ಅವನ ಹೆಮ್ಮೆಯ ಈ ಮಾತುಗಳು ಅವನಿಗೆ ಶೂಲದಂತೆ ಇರಿದು ನಿಸ್ತೇಜನನ್ನಾಗಿ ಮಾಡಿದವು. ಅವನ ಅಹಂಕಾರಕ್ಕೆ ತಕ್ಕ ಪ್ರತಿಕಾರವಾದಂತಾಯಿತು. ಕತೆ ಬರೆಯುವದೇ ಅವನ ಜೀವನ ಧ್ಯೇಯವಾಗಿದ್ದಿತು. ಆದರೆ ಇಂಥ ಮಾತುಗಳಿಂದ ಅವನೆದೆ ಒಡೆಯಿತು; ಅವನು ಯೊಚನೆಗೊಳಗಾದನು.

ನಿರಾಶೆಯಿಂದ ಓಡಹತ್ತಿದ. ಇವನು ಕೆಲದೂರ ಹಾಗೆಯೇ ಹಾದಿ ಸಾಗಿದಮೇಲೆ ದಣುವಿನಿಂದ ನಗರದ ಹೊರಗಿನ ತೋಟವನ್ನು ಸಮೀಪಿಸಿ ವಿಶ್ರಮಿಸಿದ. ಹಾಗೇ ಕಣ್ಣು ಮುಚ್ಚಿಬಂತು. ಮೈ ಭಾರವೆನಿಸಿದುದರಿಂದ ಮಲಗಬೇಕೆಂದೆನಿಸಿತು. ಮಲಗಿದ; ನಿದ್ರೆಬಂತು. ನಿದ್ರಿಸಿದರೂ

ಮೇಲಿನ ಮಾತುಗಳು ಅವನ ಕಿವಿಯಲ್ಲಿನ್ನೂ ಗುಂಯ್ ಗುಡುತ್ತಿದ್ದವು. ಅಷ್ಟರಲ್ಲೇ ಕನಸಿನಲ್ಲಿ ಮಹಾಸ್ವರೂಪದರ್ಶನ! ಭೂಮ್ಯಾಕಾಶವನ್ನಾವರಿಸುವ ಆ ರೂಪವು ಮಹಾಭಯವನ್ನುಂಟು ಮಾಡಿತು. ಅದರ ಸುತ್ತು ಎಲ್ಲ ದಿಕ್ಕುಗಳಲ್ಲಿಯೂ ದಿವ್ಯ ಬೆಳಕು; ಪ್ರಕಾಶಮಯವಾದ ತೇಜ. ಆ ಮಹಾಪುರುಷನು ಮೂರುರಂಗಿನ ನಿಲುವಂಗಿಯನ್ನು ತೊಟ್ಟಿದ್ದನು. ಉಂಗುರುಂಗುರು ಕೂದಲುಳ್ಳ ಬಿಳಿಯ ಗಡ್ಡ ಅವನ ದಿವ್ಯ ಮುಖವನ್ನಾವರಿಸಿತ್ತು. ಅವನ ಎತ್ತರವಾದ ಆಕೃತಿ ಆಕಾಶವನ್ನು ಮುಟ್ಟುವಂತಿತ್ತು. ಎತ್ತರಕ್ಕೆ ಸರಿಯಾದ ಮೈಕಟ್ಟು; ಆ ಅಮಾನುಷ ಎತ್ತರವು ಅಸಹಜವೆನಿಸಿದರೂ ಮುಖದಲ್ಲಿಹೊಳೆದ ಕಾಂತಿ, ಅವನ ದಿವ್ಯ ತೇಜಸ್ಸು ಮನಮೋಹಕವಾಗಿತ್ತು. ಪೂಜ್ಯ ಭಾವನೆಯನ್ನುಂಟುಮಾಡುವಂಥ ವರ್ಚಸ್ಸು ಅವನದಾಗಿತ್ತು. ಅವನ ಅರೆತೆರೆದ ಕಣ್ಣುಗಳು ಯೋಚನೆಯಲ್ಲಿದ್ದಂತೆ ಕಂಡು ಬರುತ್ತಿತ್ತು. ಅವನ ಮೌನ, ಮುಖಕ್ಕೆ ಗಂಭೀರತೆಯನ್ನು ತಂದೊಡ್ಡಿತ್ತು. ಕೈಯಲ್ಲಿ ಬಹು ದೊಡ್ಡದಾದ ಗ್ರಂಥವು ಬೇರೆ. ಅದರ ಭಾರದಿಂದ ಕೈಬೆರಳುಗಳು ನಡುಗುತ್ತಿದ್ದವು, ಭುಜಗಳು ಕುಗ್ಗಿದ್ದವು; ಮೈಕಟ್ಟು ಸಡಿಲವಾದಂತಿತ್ತು. ಆ ಗ್ರಂಥದಲ್ಲಿ ಸಮುದ್ರದಲ್ಲಿರುವ ತರಂಗಗಳನ್ನು, ಆಕಾಶದಲ್ಲಿಯ ನಕ್ಷತ್ರಗಳನ್ನು, ಮೀರಿಸುವಷ್ಟು ಪುಟಗಳಿದ್ದವು. ಆ ಹಾಳೆಗಳ ಮೇಲೆ ಬಿಡುವಿಲ್ಲದೆ ಕಣ್ಣಿಗೆ ಕಾಣಿಸದ ಲಿಪಿಯಲ್ಲಿ ಅವಸರದಿಂದ ಅವನು ಬರೆಯತೊಡಗಿದ.

ಅವನನ್ನು ನೋಡಿದಕೂಡಲೆ ಒಂದು ಬಗೆಯ ಭಯ ಉತ್ಪನ್ನವಾಯಿತು; ಆದರೆ ಆ ಭಯವು ಭಕ್ತಿಯನ್ನುಂಟು ಮಾಡಿತು. ಆಗಲೆ ಅವನ ಕಾಲುಗಳ ಮೇಲೆ ಬಿದ್ದು ನಮಸ್ಕರಿಸುತ್ತ "ಓ ಮಹಾಮೂರ್ತಿ! ತಾವಾರು? " ಎಂದು ವಿನಯದಿಂದ ಕತೆಗಾರನು ಕೇಳಿದನು.

ವಿನಯದ ಸರತಿ ಮೀರಿತು. ಗಟ್ಟಿಯಾಗಿ ಒದರಿದನು. ಚೀರಿದನು ಏನು ಮಾಡಿದರೂ ಮಾತು ಬರಲೇ ಇಲ್ಲ ಅವನಿಂದ. ನೆಟ್ಟ ಮನಸ್ಸಿನಿಂದೇ ನನ್ನೋ ಆ ಪುಸ್ತಕದಲ್ಲಿ ಬರೆಯುತ್ತಿದ್ದನು. " ನೀನಾರೆಂಬುವುದು ಹೇಳಲಾರೆಯಾ ? ನೀನೀ ಗ್ರಂಥದಲ್ಲೇನು ಬರೆಯುತ್ತಿರುವಿ? ನನಗದು ತೋರಿಸಲಾರೆಯಾ ? " ಎಂಬ ವಿನಯದ ಮಾತುಗಳಿಂದ ಆ ಮಹಾ ಪುರುಷನ

ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಮತ್ತೆ ಕೇಳಿದನು. ಅವನು ತನ್ನ ನೋಟವನ್ನೂ ಬದಲಿಸಲಿಲ್ಲ. ಕೊನೆಯ ಪ್ರಯತ್ನವೆಂಬಂತೆ ಗದ್ಗದ ಸ್ವರದಿಂದ “ನನ್ನ ಮೇಲೆ ನಿನಗೆ ದಯೆ ಇಲ್ಲವೆ ? ನಿನ್ನ ಕರ್ತವ್ಯವೇನು ಹೇಳು ” ಎಂದು ಉಕ್ಕಿಬಂದ ದುಃಖದಿಂದ ಅತ್ತು ಬಿಟ್ಟನು. ಅವನ ಅಳುವಿನಿಂದ ಹೊರಬಿದ್ದ ನೀರು ಅವನ ಪಾದಗಳಮೇಲೆ ಬೀಳಲು ಆ ಮುದುಕನ ಮುಖದಲ್ಲಿಯ ಗಂಭೀರ ಮುದ್ರೆ ಬದಲಾಯಿತು. ಕರುಣಾರಸ ತಲೆದೋರಿತು. ಮೌನವನ್ನು ತೊರೆದು ಆಕಾಶದಲ್ಲಿ ಮಿಂಚಿನಂತೆ ಭೀಕರ ಸ್ವರದಿಂದ “ನಾನಾರೆಂಬುವುದು ನಿನಗೆ ತಿಳಿಯದೇನು ? ” ಎಂದು ಕೇಳಿದನು ಕತೆಗಾರ ತನ್ನ ಅಜ್ಞಾನವನ್ನು ಸೂಚಿಸುತ್ತ ತಲೆಬಾಗಿ ಮೌನದಿಂದಿದ್ದನು. ಅದನ್ನು ಕಂಡು ಅವನು “ನನ್ನ ಪರಿಚಯವಿನ್ನೂ ಆಗಲಿಲ್ಲವೆ? ಇನ್ನಾದರೂ ತಿಳಿಯದೆ? ನಾನು ಧರಿಸಿದ ಈ ಮೂರು ಬಣ್ಣದ ಅಂಗಿಯಿಂದ ಭೂತ, ಭವಿಷ್ಯದ್ವರ್ತಮಾನಾದಿಗಳು ನಿನಗೆ ತಿಳಿಯುವುದಿಲ್ಲವೆ ? ನನ್ನ ಕೈಯೊಳಗಿನ ಈ ಮಹಾಗ್ರಂಥದಲ್ಲಿ ಸೃಷ್ಟಿಮೊದಲಿನಿಂದಲೂ ನಡೆದು ಹೋದ ಘಟನೆಗಳೆಲ್ಲವನ್ನೂ ಕಥಾರೂಪದಲ್ಲಿ ಬರೆಯುತ್ತ ಬಂದಿದ್ದೇನೆ. ನಾನೇ ಜಗತ್ತಿನಲ್ಲಿ ಮೊದಲನೆಯ ಕತೆಗಾರ. ನನ್ನ ಹೆಸರು ಕಾಲನು .” ಇವನೇ ಕಾಲನೆಂದು ತಿಳಿದ ಕೂಡಲೇ ಕತೆಗಾರನು ಅವನ ಕಾಲುಗಳನ್ನು ಇನ್ನಿಷ್ಟು ಗಟ್ಟಿಯಾಗಿ ಹಿಡಿದುಕೊಂಡು “ಓ ಮಹಾ ಸ್ವಾಮಿಯಾದ ವಿಶ್ವ ಕತೆಗಾರನೆ ! ಈ ನಮಸ್ಕಾರಗಳನ್ನು ಸ್ವೀಕರಿಸಬೇಕು. ” ಎಂದು ಬೇಡಿಕೊಂಡನು

“ನೀನಾರು ? ” ಎಂದು ಕಾಲನು ಗರ್ಜಿಸಿದ.

“ನಾನು....ನಾನು.... ” ಎಂದು ಕತೆಗಾರನು ನಡುಗಿದನು.ಗಾಬರಿಯಿಂದ ಮಾತುಗಳೇ ಹೊರಬೀಳಲಿಲ್ಲ.

“ನೀನು ಕತೆಗಾರನೇನು ? ” ಎಂದು ಮತ್ತೆ ಹೇಳಿದ.

ಅಹುದೆಂದು ಕತೆಗಾರ ತಲೆಹಾಕಿದ ಮೌನದಿಂದ

ಅಲ್ಲಿಯವರೆಗೆ ಶಾಂತನಾಗಿ ಕಂಡು ಬಂದ ಆ ಕಾಲನು ಒಮ್ಮೆಲೆ ಸಿಟ್ಟಿಗೆದ್ದು “ನೀನೊಬ್ಬ ಕತೆಗಾರನೇನು;” ಎಂದು ಗದರಿಸಿ, ಕಾಲನು ಹತ್ತಿರ ಕುಳಿತಿದ್ದ ಆ ಕತೆಗಾರನನ್ನೂ ದೂರ ತಳ್ಳಿಬಿಟ್ಟು, ಮತ್ತೆ ಹಿಂದಿನಂತೆ ಆ ಪುಸ್ತಕದಲ್ಲಿ ಬರೆಯಲಾರಂಭಿಸಿದ.

ಮುಂದೇನು ಮಾಡಲು, ತೋಚದೆ ಕತೆಗಾರನು ದೈನ್ಯದಿಂದ "ನಾನು ಕತೆಗಾರನಾಗಲಾರೆನೆ ?" ಎಂದ ಮತ್ತೆ ಕೇಳಿದ.

ಇವನ ಸಾಹಸಕ್ಕೆ ಅವನು ಮೆಚ್ಚಿ, ಸಂತೋಷದಿಂದ "ನೀನು ಕತೆಗಳನ್ನು ಬರೆಯುವಿಯೆಂದು ನನಗೆಹೇಗೆತಿಳಿಯಬೇಕು.?" ಎಂದು ಕೇಳಿದನು

"ನಾನು ಬರೆದ ಅನೇಕ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿವೆ"

"ಪತ್ರಿಕೆಗಳಲ್ಲಿ ಪ್ರಕಟವಾದ ಮಾತ್ರಕ್ಕೆ ನೀನು ಕತೆಗಾರನಾಗುವಿಯೆಂದು ಯಾರು ಭರವಸೆಯನ್ನಿತ್ತರು ?" ಎಂದು ಹಾಸ್ಯ ಮುಖದಿಂದ ಕಾಲನು ಕೇಳಿದ.

ಕತೆಗಾರನು ಇಳಿ ಮುಖದಿಂದ "ಹಾಗೇನೂ ಅಲ್ಲ. ನನಗೆ ಕತೆಗಳೆಂದರೆ ಪ್ರೀತಿ. ಆದರೆ ಇತಿಹಾಸವನ್ನು ಬಲ್ಲೆ. ಚೆನ್ನಾಗಿ ಅಭ್ಯಾಸ ಮಾಡಿರುವೆನು. ನನ್ನ ಹೃದಯವನ್ನು ಬಿಚ್ಚಿ ಜನರ ಮುಂದೆ ಇಡಲು ನನಗೆ ಕತೆಯೇ ಸಹಾಯ ಮಾಡುವದೆಂದು ನಂಬಿರುವೆನು. ನನ್ನ ಜೀವನವನ್ನೂ ಚಿತ್ರಿಸಲು ಕತೆಯೇ ನನಗೆ ಸಾಧನೆ. ಇದರ ನೆರವಿನಿಂದ ನನ್ನ ಹೃದಯದಲ್ಲಿಯ ಭಾವನೆಗಳನ್ನು, ನನ್ನ ಜೀವನದ ಅನುಭವಗಳನ್ನು ಲಕ್ಷಣವಾಗಿ ಚಿತ್ರಿಸಬಲ್ಲೆ. ಇದರಂಥ ಸಹಾಯಕ ವಸ್ತು ಬೇರೊಂದಿಲ್ಲವೆಂದು ನನ್ನ ನಂಬಿಕೆ" ಎಂದು ಹೇಳಿ ಸುಮ್ಮನಾದ.

"ಆದರೆ ನೀನು ಕತೆಗಳನ್ನು ಬರೆಯುವುದಕ್ಕಾಗಿಯೇ ಜೀವಿಸಿರುವೆಯಾ ?" ಎಂದು ಭೀಕರರೂಪಿ ಕೇಳಿದನು.

"ಅಹುದು" ಎಂದು ಕತೆಗಾರನು ಉತ್ತರವಿತ್ತನು.

"ಆದುದರಿಂದಲೇ ನಿನಗೆ ಕತೆಗಳು ಬರೆಯಲು ಹಕ್ಕಿಲ್ಲವೆಂದು ಹೇಳಬಲ್ಲೆ" ಎಂದು ಹೇಳಿಬಿಟ್ಟನು.

ನಿರ್ದಾಕ್ಷಿಣ್ಯದ ಈ ಮಾತುಗಳನ್ನು ಕೇಳಿ ಕತೆಗಾರನು ಬೆದರಿದನು ಮನಸ್ಸು ಕಳವಳಗೊಂಡಿತು. ನಿರಾಶೆಯಿಂದ ಅವನಮುಖ ನಿಸ್ತೇಜವಾಯಿತು. ಏನನ್ನೋ ಹೇಳಬೇಕೆಂದು ಮುಂದರಿಯುವಷ್ಟರೊಳಗೆ ಕಾಲನು ನಿಶ್ಚಿತ ಮನಸ್ಸಿನಿಂದ "ಕತೆಗಳನ್ನು ಬರೆಯುವದೇ ಜೀವನದ ಉದ್ದೇಶವೆಂದು ನೆನೆದು ಒರೆಯುವವನಿಗೆ ಕತೆಬರೆಯಲು ಅರ್ಹತೆ ಇಲ್ಲ" ಎಂದು ಹೇಳಿದನು.

"ಮತ್ಯಾರಿಗಿದೆ?" ಎಂದು ಕತೆಗಾರನು ನಡುಗುವ ಧ್ವನಿಯಿಂದ

ಕೇಳಿದನು.

"ಯಾರಿಗೆ ಅರ್ಹತೆ ಇದೆಯೆಂಬುದನ್ನು ಹೇಳಬೇಕೆ? ಜೀವನದ ಪೂರ್ಣ ಗುರಿಯನ್ನು ತಿಳಿಯುವ ಮನಸ್ಸುಳ್ಳವನಿಗೇನೇ ಆ ಯೋಗ್ಯತೆ ಇದೆ. ಬದುಕಿನಲ್ಲಿ ಆಗಿ ಹೋಗಿರುವ ಮಹತ್ವದ ಘಟನೆಗಳಲ್ಲಿಯ ನಿಜವಾದ ಅರ್ಥ ನಿನಗಾಗಿದೆಯೆ? ಆಗು, ಹೋಗುಗಳ, ಸುಖ ದುಃಖಗಳ, ಕಷ್ಟ ನಷ್ಟಗಳ ಅನುಭವ ನಿನಗಾಗಿದೆಯೆ? ಅನುಭವವಿಲ್ಲದಿದ್ದರೆ ಅವುಗಳನ್ನು ತಿಳಿಯುವ ಮನಸ್ಸಾದರೂ ಇದೆಯೆ? ನಿನ್ನ ಬದುಕಿನ ನಿಜವಾದ ಗುರಿ ಏನೆಂಬುವುದನ್ನು ತಿಳಿಯಲು ಸಾಹಸ ಮಾಡಿರುವಿಯಾ; ಜೀವನದಲ್ಲಿ ಆಗುತ್ತಿರುವ ಸನ್ನಿವೇಶಗಳೆಲ್ಲಕ್ಕೂ ಒಂದಲ್ಲ ಇನ್ನೊಂದು ಕಾರಣವಿರಲೇಬೇಕೆಂಬ ಸತ್ಯ ನಿನಗೆ ತಿಳಿದು ಬಂದಿರುವುದೆ? ನಿನ್ನ ಅನುಭವದ, ನಗುವಿನ, ದುಃಖದ ಚಿತ್ರಗಳ ಹಿಂದೆ ಅಡಗಿ ಕೊಂಡಿದ್ದ ಸನ್ನಿವೇಶಗಳ ನೆನಪುನಿನಗಿದೆಯೋ? ಅವುಗಳಿಗೆ ಕಾರಣವೇನೆಂಬುವುದನ್ನು ತಿಳಿದಿರುವೆಯಾ? ಇಂತಹ ಅನುಭವಗಳಪರಿಣಾಮವೇನಾಗಿದೆ ನಿನ್ನ ಜೀವವನದ ಮೇಲೆ? ಜೀವನದ ಪ್ರತಿಯೊಂದು ಅನುಭವದ ನೆಲೆ ಏನೆಂಬುವುದನ್ನು ಅರಿಯಲು ಯತ್ನಿಸಿರುವಿಯಾ? ಬಡವರ ದೀನರ ಆರ್ತರ, ಸುಖ ದುಃಖಗಳ ಅರಿವೇನಾದರೂ ನಿನಗಾಗಿರುವುದೆ?'' ಈ ಪ್ರಶ್ನೆಗಳ ಸುರಿಮಳೆಗೆ ತಾಳಲಾರದೆ ಕತೆಗಾರ ತತ್ತರಿಸಿದ. ಆದರೆ ಕಾಲನು ಅಲ್ಲಿಗೇ ಸುಮ್ಮನಿರದೆ ಅವನನ್ನು ಸಮೀಪಿಸಿ ಮೈ ಕುಲುಕಿಸಿ "ಕೋಪ ಬಂತೆ? ನನ್ನ ಮಾತು ಕೇಳು. ಕತೆಗಳು ಬರೆದು ಸಾಹಿತಿಯಾಗಬೇಕೆಂದು ನಿನ್ನ ಇಚ್ಛೆ ಇದ್ದರೆ ಮೊದಲಿಗೆ ಜೀವನದ ರಹಸ್ಯ ತಿಳಿದುಕೋ. ನಿನ್ನ ಅಭಿಮಾನದ ಬಗ್ಗೆ ನಿನಗೆಷ್ಟು ಮಮತೆ ಇರುವುದೋ ಅಷ್ಟೇ ಇತರರ ಬಗ್ಗೆ ನಿನಗೆ ಸಹಾನುಭೂತಿ ಇರಬೇಕು. ನಿನ್ನ ನಡುವಿರುವ, ಸುತ್ತಲಿರುವ ಮಿತ್ರರ, ಇತರ ಕೀಳುಜನರ ಸುಖ ದುಃಖಗಳ ಕಡೆ ಆದರವಿರಬೇಕು. ಅವರ ಆಗು ಹೋಗುಗಳ ಬಗ್ಗೆ ನೀನು ಹೆಚ್ಚಿನ ಮಮತೆ ತೋರಬೇಕು. ಅಹಂಭಾವನ್ನು ತೊರೆದು, ಸಂಕುಚಿತ ಬುದ್ಧಿಯನ್ನು ದೂರಾಗಿರಿಸಬೇಕು. ಅಹಂಕಾರವನ್ನು ಬಿಟ್ಟು, ಇತರರ ನೋವನ್ನು ತಿಳಿದು ಅದಕ್ಕೆ ನಿವಾರಣೋಪಾಯವನ್ನು ಕಂಡು ಹಿಡಿಯಲು ಮನಸ್ಸು ಬೇಕು. ಇಂಥಾ

ಉದಾರ ಮನಸ್ಸಿನವನಾದಾಗಲೇ ಕತೆಬರೆಯುವ ಅರ್ಹತೆ ನಿನಗೆ ಬರುವದು. ಎಲ್ಲಿಯು ವರೆಗೆ ಅಹಂಕಾರ ಮಮಕಾರಾದಿಗಳನ್ನು ದೂರೀಕರಿಸಲು ನಿನಗಾಗುವುದಿಲ್ಲವೊ, ಎಲ್ಲಿಯವರೆಗೆ ಸಂಕುಚಿತ ಅಭಿಪ್ರಾಯಗಳು ನಿನ್ನಿಂದ ದೂರಾಗುವದಿಲ್ಲವೊ, ಅಲ್ಲಿಯು ವರೆಗೆ ನೀನೇನು ಬರೆದರೂ ನಿಜವಾದ ಕತೆಯಾಗಲಾರದು.” ಎಂದು ಮುಂದೆ ಮತ್ತೇನೋ ಹೇಳುವುದರಲ್ಲಿದ್ದನು. ಅಷ್ಟರಲ್ಲೇ ಕತೆಗಾರನ ಮುಖದಲ್ಲಿ ಹೆಚ್ಚು ಬದಲಾವಣೆಗಳು ಕಂಡುದರಿಂದ ಕಾಲನು ಅವನನ್ನು ಸಮಾಧಾನಿಸುವ ಇಚ್ಛೆಯಿಂದ ಅವನ ಕೈ ಹಿಡಿಯಲು, ಕತೆಗಾರನು ಬೆದರಿದನು. ಅದೇ ಬೆದರಿದ ನೋಟದಿಂದ “ನನಗೆ ಎಂದಾದರೂ ಕತೆ ಬರೆಯುವ ಶಕ್ತಿ ಬರುವುದೇ? ಇಲ್ಲವೆ ಹೀಗೆ ಸುಮ್ಮನೇ ಕುಳಿತು ಬಿಡಬೇಕೇ?”ಎಂದು ದೀನ ವದನದಿಂದ ಪ್ರಶ್ನಿಸಿದನು.

ಕಾಲನು ಮತ್ತೇನೂ ಮಾರುತ್ತರ ಹೇಳದೇ ತಾನು ಬರೆಯುತ್ತಲಿದ್ದ ಪುಸ್ತಕದಲ್ಲಿಯ ಹಾಳೆಯೊಂದನ್ನು ಹರಿದು ಹೊರಗೆ ತೆಗೆದು ಅವನ ಮುಂದೊಗೆದನು. ಅದರಲ್ಲೇನಿದೆ ಎಂದು ಆತುರದಿಂದ ನೋಡಹತ್ತಿದನು. ಮೇಲೆ ಕೆಳಗೆ ಆ ಒಂದು ಪುಟದಲ್ಲಿ ಸಮಸ್ತ ಜೀವಿಗಳ, ಪ್ರಾಣಿಕೋಟಿಗಳ ಆಕ್ರಂದನೆಗಳು, ಹಾಸ್ಯ ಲಹರಿಯ ದೃಶ್ಯಗಳೂ, ಶ್ರಾವಣದ ಮೇಘಗಳೂ, ಹೇಮಂತದ ಹನಿಗಳೂ, ವಸಂತದ ಸೌಂದರ್ಯವೂ, ಶಿಶಿರದ ಶಿಥಿಲವೂ ಎಲ್ಲವಿಧದ ನೋಟಗಳು ಅವನ ಕಣ್ಣೆದುರಿಗೆ ಬಂದು ನಿಂತವು. ಆ ಹಾಳೆಯನ್ನು ಕಣ್ಣಿಗೆ ಅದ್ದಿಕೊಂಡನು. ಅಮಿತ ಹರುಷದಿಂದ ಅದರಲ್ಲಿ ಅವನು ಬರೆಯಲೆಣಿಸುವ ಕತೆಗೆ ಅನೇಕ ಬಗೆಯ ಸಾಮುಗ್ರಿ ದೊರೆಯಿತು. ಆ ಕಾಗದವನ್ನೂ ಎದೆಗೆ ಅವಚಿಕೊಂಡು ಆನಂದ ಲಹರಿಯಲ್ಲಿ ತನನ್ನೂ ತಾನೇ ಮರೆತು ಬಿಟ್ಟನು. ನಿಧಾನವಾಗಿ ಕಣ್ತೆರೆದನು.

ಆದರೆ ಅಲ್ಲೇನಿದೆ? ಎಲ್ಲವೂ ಕನಸೇ. ಆ ಕಾಲಮಹಾತ್ಮನು ಹರಿದೋಗೆದ ಆ ಕಾಗದದ ತುಂಡಾದರೂ ಉಳಿದಿದ್ದರೆ ಎಷ್ಟೋ ಒಳಿತಾಗುತ್ತಿತ್ತು; ಎಲ್ಲಾ ಶೂನ್ಯ. ಅವನು ಮಲಗಿದ ಕೋಣೆಯಲ್ಲೇನಿದೆ ? ಒಂದು ಮೂಲೆಯಲ್ಲಿ ಶರತ್‌ಚಂದ್ರ, ಪ್ರೇಮಚಂದ್ರ, ಇನ್ನೊಂದು ಮೂಲೆ

ಯಲ್ಲಿ ಷೇಕ್ಸಪಿಯರ್ ಮತ್ತೊಂದರಲ್ಲಿ ರವೀಂದರ ಚಿತ್ರಗಳೂ, ಮೊಪಾಸಾ, ಗಾರ್ಕಿ ಇವರುಗಳ ವ್ಯಕ್ತಿಗಳೆಲ್ಲ ಎದುರಿನಲ್ಲಿ ನೃತ್ಯ ಮಾಡುತ್ತಿರುವಂತೆ ಕಂಡು ಬಂತು. ಅಲ್ಲಿ ಟೇಬಲಿನ ಮೇಲೆ ಸಂಪಾದಕನಿಂದ ಕತೆಗಾಗಿ ಬಂದ ಆಮಂತ್ರಣ ಪತ್ರವೂ ಇದ್ದಿತು. ಕತೆಗಾರನಿಗೆ ತಾನು ಕತೆ ಬರೆಯಬಲ್ಲನೇ ಎಂಬ ಪ್ರಶ್ನೆ ಒಗಟಾಗಿಯೇ ಉಳಿಯಿತು.

# ಆಶಾ ಜ್ಯೋತಿ

ಬೆಳ್ಳಂ ಬೆಳಕಾಗಿ ಉರಿಯುವ ದೀಪ ಕುಡಿಗಟ್ಟಿತು. ಅದರ ಬೆಳಕು ಕಡಿಮೆಯಾಯಿತು. ಕುಡಿಯನ್ನು ಚಿವುಟ ಬೇಕೆಂದು ದೀಪವನ್ನು ರಮಾ ದೇವಿ ಸಮೀಪಿಸಿದಳು. ಆದರೆ ಅವಳಿಗೇಕೊ ಭಯವೆನಿಸಿತು. ಚಿತೆಯಲ್ಲಿ ಕುಳಿತ ಸೀತಾದೇವಿಯಂತೆ ಕುಳಿತಿತ್ತು ಆ ಕುಡಿ ಜ್ಯೋತಿಯನಡುವೆ. ಕುಡಿಯನ್ನು ಅಲುಗಿಸಿ ಅದನ್ನು ಸ್ವಚ್ಛವಾಡಿದರೆ ದೀಪ ಚೆನ್ನಾಗಿ ಉರಿಯುವುದು. ಆದರೆ ಆ ಕುಡಿಯನ್ನು ಸರಿಮಾಡುವದರಲ್ಲಿ ದೀಪವೇ ಆರಿ ಹೋಗಬಹುದು. ದುರಾಶೆಯಿಂದ ದುಃಖವು ಆವರಿಸಬಹುದು. ಆದುದರಿಂದ ಕುಡಿಯನ್ನು ಸರಿಮಾಡಲು ಹೋದರೆ ದೀಪವೆಲ್ಲಿ ಆರುವುದೋ ಯೆಂಬ ಭಯದಿಂದ ದೂರನಿಂತಿದ್ದಳು. ತಾನಾರು ದೀಪದ ಕುಡಿಯನ್ನು ಆರಿಸುವುದಕ್ಕೆ? ಅದು ದೀಪಕ್ಕೆ ಸಂಬಂಧಿಸಿದ ವ್ಯವಹಾರ. ಕುಡಿ ಪೂರ್ತಿ ಬಿದ್ದು ಹೋಗುವಷ್ಟು ನಿಸ್ತೇಜವಾದಾಗ, ತಾನಾಗಿಯೇ ಬಿದ್ದುಹೋಗುವುದು. ಈ ಕೆಲಸಕ್ಕೆ ಹೆರವರ ಅವಶ್ಯಕತೆಯೇ ಬೇಕಿಲ್ಲ. ಇಲ್ಲದೆ ಪಾಪದಹೊರೆಯನ್ನು ತಾನೇಕೆ ತಂದುಕೊಳ್ಳಬೇಕು ?

ಗೀಚಿದ ಬೆಂಕಿಯ ಕಡ್ಡಿಗಾಗಿ ಹುಡುಕಿದಳು. ಆದರಿಂದ ದೀಪವನ್ನು ದೊಡ್ಡದಾಗಿಸಿದಳು. ಬಲಹೀನವಾದ ಆ ದೀಪದ ಬತ್ತಿಯು ಬಗ್ಗಿ ಜೋಲುಬಿದ್ದಿತು. ಸಿಟ್ಟುಬಂತೇನೋ ಎಂಬಂತೆ ಅದು ಚಟಪಟಿಸಿ ಸದ್ದುಮಾಡತೊಡಗಿತು. ಆರಿ ಹೋದಂತೆನಿಸಿತು.ಅವಳ ಎದೆ ಝಲ್ಲೆಂದಿತು ಭೀತಿಯಿಂದ ಹಾಸಿಗೆಯ ಮೇಲೆ ಮಲಗಿದ ಮಗುವನ್ನು ಸಮೀಪಿಸಿದಳು. ಎರಡು ತಿಂಗಳ ಆ ಕೂಸಿಗೆ ಎದೆನೋವು. ಮುಚ್ಚಿದ ಕಣ್ಣುತೆರೆಯುಲಾಗುತ್ತಿರಲಿಲ್ಲ; ಕೈಕಾಲು ಕದಲುತ್ತಿರಲಿಲ್ಲ.

ದೀಪವು ಆರಿಹೋಗಲಿಲ್ಲ: ಕೂಸು ಅಲುಗಾಡದೆ ಅಲ್ಲಿ ಸುಮ್ಮನೆ ಮಲಗಿತ್ತು.

ಅವಳ ಕಣ್ಣಲ್ಲಿ ನೀರು. ಜೀವನವು ಹಾವಿನಂತೆ ಅವಳನ್ನು ಮುಂಮೂಡುತ್ತಿತ್ತು.

ಅವಳು ವಿಧವೆ. ಆ ಹುಡುಗನಿನ್ನೂ ಹೊಟ್ಟೆಯಲ್ಲಿರುವಾಗಲೇ ಅವಳ ಗಂಡ ಮೃತನಾದ. ಅಂದೇ ಆತ್ಮಹತ್ಯ ಮಾಡಿಕೊಳ್ಳುವುದೆಂದು ನಿಶ್ಚಯಿಸಿದ್ದಳು. ಆ ನೆನಪನ್ನು ತಂದುಕೊಂಡಾಗಲೆಲ್ಲ ಹೊಟ್ಟೆಯಲ್ಲಿಯ ಮಗುವು ಬೇಡೆಂದು ಹೇಳುತ್ತಿರುವಂತೆನಿಸಿತು. ಆ ಮಗುವಿಗಾಗಿಯೇ ತಾನು ಜೀವಿಸಿರಬೇಕೆಂದು ನಿಶ್ಚಯಿಸಿದಳು.

"ಅಮ್ಮಾ" ಎಂದು ಎದುರಿಗೆ ಮಂಚದ ಮೇಲೆ ಕುಳಿತಿದ್ದ ಮಗಳು ಭಯದಿಂದ ಮಾತನಾಡಿಸಿದಳು.

ಅವಳು ಸುಮ್ಮನಿದ್ದಳು.

"ಅಮ್ಮಾ" ಎಂದು ಮತ್ತೆ ಮಾತನಾಡಿಸಿದಳು. ಅವಳ ವಯಸ್ಸು ಆರು. ಹಟಮಾರಿಹುಡುಗಿ. ನಿರ್ವಾಹ ವಿಲ್ಲದೆ "ಏನಮ್ಮ ?" ಎಂದು ಕೇಳಿದಳು.

"ತಮ್ಮನಿಗೆ ಜ್ವರ ಬರ್‍ತ್ತಾವೇನಮ್ಮ ?"

"ಅಹುದು ನನ್ನ ತಾಯಿ" ಎಂದು ಹೇಳಿ ಮುಂದೇನು ಪ್ರಶ್ನೆ ಹೊರಡುವುದೆಂದು ಭೀತಿಯಿಂದ ಕಾದಿದ್ದಳು

"ಬೇಗ ಗುಣವಾಗುತ್ತದೇನಮ್ಮಾ ?"

"ಖಂಡಿತ ಗುಣವಾಗುತ್ತದಮ್ಮಾ" ಎಂದು ಮಲಗಿದ ಆ ಮಗು ಎತ್ತಿಕೊಂಡು ಮಡಿಲಿನಲ್ಲಿರಿಸಿ ಕೊಂಡಳು. ಅವಳ ದೇಹದಲ್ಲಿ ನೂತನವನ್ನು ಚಲನ ಉಂಟಾದಂತಾಯಿತು. ಹಾಲುಕ್ಕಿ ಬಂದವು; ಕಣ್ಣಲ್ಲಿ ನೀರು ತುಂಬಿ ಕೆಳಗೆ ಹರಿಯ ತೊಡಗಿದವು. ತೊಟ್ಟ ಕುಪ್ಪಸ ತೊಯ್ದುದರಿಂದ ಅವಳ ಶರೀರ ತಣ್ಣಗಾಯಿತು.

"ಖಂಡಿತ ಗುಣವಾಗುತ್ತದೇನು ತಾಯಿ" ಎಂದು ಹುಚ್ಚಳಂತೆ ಅವಳು ತನ್ನ ಮಗಳನ್ನು ಆತುರದಿಂದ ಕೇಳಿದಳು.

"ಓ ನಿಜವಾಗಿ"

"ನಮ್ಮಮ್ಮಲ್ಲ ನೀನು ? ನಿನ್ನ ಹೊಟ್ಟೆ ತಣ್ಣಗಿರಲಿ" ಎಂದು ಒಂದು ಸಲ ಕಣ್ಮುಚ್ಚಿಕೊಂಡಳು. ಮುಚ್ಚಿದ ಕಣ್ಣಿನಿಂದ ನೀರು ಹರಿಯ

ತೊಡಗಿತು. ಆದರಿಂದ ಅವಳಿಗೆ ಅರೆತೆರೆದ ಕಣ್ಣಿನಿಂದ ನೋಡಿದಾಗ ಜಗತ್ತೆಲ್ಲ ನೀರಿನಿಂದ ತುಂಬಿದಂತೆ ಅವಳಿಗೆ ಭಾಸವಾಯಿತು. ಆ ಜಲಪ್ರಳಯದಲ್ಲಿ ಒಂದು ದೊಡ್ಡ ಆಲದ ಮರದ ಎಲೆ; ಅದರಮೇಲೆ ಮಗು! ಕಣ್ಣು ತೆರೆದು ನೋಡಿದಾಗ ಮಂಚದ ಮೇಲೆ ತನ್ನ ಮಡಿಲಲ್ಲಿದ್ದ ಮಗು ಶೇಷಶಾಯಿಯಂತೆ ಕಂಡು ಬಂದ.

ಛಳಿಗಾಳಿ ಬೀಸಿತು. ಆದರ ತನುವು ಕೂಸಿಗೆ ಒಳಿತಲ್ಲವೆಂದು ಹೊದಿಕೆಯಿಂದ ಮುಚ್ಚಿದಳು. ಹನಿ ಹನಿಯಾಗಿ ಔಷಧವನ್ನು ಮಗುವಿನ ಬಾಯಿಯಲ್ಲಿರಿಸಿದಳು; ಅದು ಚಪ್ಪರಿಸ ತೊಡಗಿತು.

" ನೋಡಿದೇನೇ ಅಮ್ಮಾ ತಮ್ಮನ ಬೂಟಾಟಿಕೆ ಏನೂ ತಿಳಿಯದವನಂತೆ ಔಷಧವನ್ನು ಒಂದೇಸಲ ಕುಡಿದುಬಿಟ್ಟ." ಎಂದು ಆರುವಯಸ್ಸಿನ ಮಗಳು ನುಡಿದು ಬಿಟ್ಟಳು.

ತಾಯಿಯ ಮುಖದಲ್ಲಿ ನಸುನಗು; ಮಗಳು ತಾಯಿಯ ತಲೆಯನ್ನು ನೇವರಿಸುತ್ತ ನಿಂತಿದ್ದಳು,

ಗೋಡೆಯಲ್ಲಿರಿಸಿದ್ದ ಗಡಿಯಾರವು ಗಂಟೆ ಹೊಡೆಯಿತು.

ಆ ಗಡಿಯಾರವನ್ನು ಅವಳ ಹೊಸ ಸಂಸಾರ ಆರಂಭವಾದ ದಿನಗಳಲ್ಲಿ ಕೊಂಡದ್ದು. ಅಂದಿನಿಂದ ತಮ್ಮ ಮನೆಯಲ್ಲಾದ ಬದಲಾವಣೆಗಳೇನು ? ಸುಖ ದುಃಖಗಳೇನು ! ಆದರೆ ಗಡಿಯಾರವು ಮಾತ್ರ ಒಂದೇ ಬಗೆಯಾಗಿ ತಿರುಗುತ್ತಿದೆ. ಅದರ ದಿನಚರಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಅದು ಅದರ ನಿತ್ಯದ ಕೆಲಸ. ಜೀವಿತದಲ್ಲಾಗುವ ಬದಲಾವಣೆಗೂ ಕಾಲದ ಗತಿಗೂ ಯಾವ ಸಂಬಂಧವಿದೆ ? ಸಮಯ ಸಾಧಿಸಿ ನಡೆದುಕೊಳ್ಳಬೇಕೆಂದು ಜನರಾಡುವ ಮಾತಿನಲ್ಲಿ ಸಮಯವೆಂಬ ವಸ್ತುವೆಲ್ಲಿದೆ? ಅದರ ರೂಪು ಎಂತಹದು ? ವಿಚಾರಮಾಡಿ ನೋಡಿದರೆ ಸಮಯವೆಂದು ನಾವು ತಿಳಿದಿರುವಂತಹ ವಸ್ತುವು ಇಲ್ಲವೆನ್ನಬಹುದು. ಕಾಲವೆಂಬೋದು ಇಲ್ಲವೆಂದೇ ಹೇಳಬಹುದು.

ಅವಳ ಗಂಡಗೆ ಈ ಗಡಿಯಾರವೆಂದರೆ ಬಹು ಪ್ರೀತಿ; ವಿಶ್ವಾಸ. ಅದನ್ನನುಸರಿಸಿ ಜೀವನವನ್ನು ಕಳೆದಂತೆ ಕಂಡು ಬಂತು. ಅದು ಅವನಿಗಾಗಿಯೇ ಜೀವಂತ ಇರುವಂತೆನಿಸಿತು. ಅವನ ನಂತರ ತನಗಾಗಿ ಅದು

ನಡೆಯುತ್ತಿರುವಂತಿದೆ. ಈ ನಟನೆಯ ಅರ್ಥವೇನು ? ಹೀಗೆ ನಂಬಿದವರನ್ನು ವಂಚಿಸಿ ಜೀವಿಸದಿದ್ದರೇನಂತೆ ? ಈಗ ಅದು 'ಟಿಕ, ಟಿಕ' ಎಂದು ಸದ್ದುಮಾಡುತ್ತ ಮುಂದೆ ಸಾಗಿರುವುದು; 'ನನಗಾಗಿ ನಾನು ಜೀವಿಸುತ್ತಿದ್ದೇನೆ' ಎಂದು ಸಾರುವಂತಿದೆ; ಅದು ಮಾಡುವ ಸದ್ದು ದಿನವೂ ಗಂಡನ ನೆನಪು ಮಾಡಿಕೊಡುತ್ತದೆ. ಆತನೊಬ್ಬ ಮುಗ್ಧಜೀವಿ; ಎಲ್ಲರನ್ನೂ ನಂಬುವ ಸರಳ ಸ್ವಭಾವ ಅವನದು. ಹಿಂದೆಲ್ಲ ನಡೆದು ಹೋದ ವಿಷಯವನ್ನು ಈಗ ನೆನೆದೇನು ಪ್ರಯೋಜನ ?

"ಏನಮ್ಮಾ, ಯೋಚನೆ ಮಾಡ್ತಾ ಇದ್ದೀ ?"

"ಏನೂ, ಇಲ್ಲಮ್ಮಾ" ಆದರೆ ಆ ಹುಡುಗಿ ತಾಯಿಯ ಮಾತನ್ನು ನಂಬಲಿಲ್ಲ.

"ಅಮ್ಮಾ. ನೀನು ಸ್ವಲ್ಪ ಮಲಕ್ಕೋ"

"ನನಗ್ಯಾಕಮ್ಮಾ ಈಗ ನಿದ್ರೆ ?"

"ನಿನ್ನೆ ನೀನು ನಿದ್ದೆ ಮಾಡಲೇ ಇಲ್ಲವಲ್ಲ ?"

"ಚಿಂತೆ ಇಲ್ಲ"

"ನಮಗೆ ಬೇನೇ ಬಂದರೆ ನೀನು ನಮಗೆಲ್ಲಾ ಉಪಚಾರ ಮಾಡುತ್ತಿ. ಆದರೆ ನೀನು ಮಲಗಿದರೆ ನಿನಗೆ ಯಾರು ಮಾಡ್ತಾರಮ್ಮಾ ?"

"ಭಗವಂತ" ಎಂದು ಸೂಚಿಸಬೇಕೆಂದಿದ್ದ ಅವಳು ಸುಮ್ಮನಿದ್ದುಬಿಟ್ಟಳು. ಮುಂದೆ "ನೀನು ಮಲಕ್ಕೋತಾಯಿ. ನನಗೇನೂ ತೊಂದರೆಯಾಗುವುದಿಲ್ಲ", ಎಂದು ಹೇಳಿದ ಮಾತಿಗೆ ಹುಡುಗಿ ಸುಮ್ಮನಿರದೆ "ಇಲ್ಲಮ್ಮಾ ನೀನು ಮಲಕ್ಕೋ. ತಮ್ಮನ್ನ ನಾನು ಇವತ್ತು ನೋಡ್ಕೋತೀನಿ." ಎಂದು ಹೇಳಿದ ಮಾತಿಗೆ ತಾಯಿ "ಇರಲಮ್ಮಾ; ನನ್ನ ಮಾತು ಕೇಳು. ಹೋಗಿ ಮಲಕ್ಕೋ" ಎಂದು ಸೂಚಿಸಿದಳು.

"ಅಮ್ಮಾ ನನಗೆ ನಿದ್ದೆ ಬರೋದಿಲ್ಲವಲ್ಲ" ಎಂದು ಹೇಳಿ ಕೊಂಚ ಸಮಯ ಹಾಗೇ ಕೂತುಬಿಟ್ಟಳು. ಆನಂತರ ಮತ್ತೇನನ್ನೋ ನೆನಪು ಮಾಡಿಕೊಂಡು "ಅಮ್ಮಾ ಇಲ್ನೋಡು. ನಾವಾಗಲಿಕ್ಕೆ ತಮ್ಮಗೆ ಬಂದಿರೋ ಈ ಬೇನೆಗೆ ಯಾವ ತೊಂದರೆ ಇಲ್ಲದೇ ನೋಡ್ಕೋತಾ ಇದ್ದೀವಿ. ಅಪ್ಪಾಜಿಇದಿ ಎಷ್ಟು ಸಂಕಟಪಡ್ತಾಯಿದ್ನೋ" ಎಂದು ಹೇಳಿದ ಮಗಳ ಮುಗ್ಧ

ಮಾತಿಗೆ ತಾಯಿ ನಿಟ್ಟುಸಿರನ್ನು ಬಿಟ್ಟು ಸುಮ್ಮನಾದಳು. ಮಗಳ ಮಾತು ನಿಜ. ಆತನಿಗೆ ಮಕ್ಕಳ ಬೇನೆಯೆಂದರೆ ಬಹು ಯೋಚನೆಗೊಳಗಾಗಿ ಎಲ್ಲ ರನ್ನೂ ಗಾಬರಿಪಡಿಸಿ ತಾನೂ ಗೊಂದಲದಲ್ಲಿ ಬೀಳುವ ಸ್ವಭಾವ. ಆತನು ಜೀವಂತ ಇದ್ದಾಗ ಅನುಭವಕ್ಕೆ ಬಂದ ಅನೇಕ ಸನ್ನಿವೇಶಗಳ ನೆನಪು ಬಂದು ಕಣ್ಣೀರು ಸುರಿಸಿದಳು. ಮಕ್ಕಳ ಬೇನೆ ಗುಣವಾಗುವುದೆಂದು ತಾನು ಹೇಳಿದರೂ ನಂಬದೆ, ಬೇಗ ಗುಣವಾಗುವುದೆ? ಖಂಡಿತ ಗುಣವಾಗು ವುದೆ? ದೇವರಾಣೆ ಗುಣವಾಗುವುದೆ? ಎಂಬ ಪ್ರಶ್ನೆಗಳಿಂದ ವೇದನೆ ಗೊಳಗಾಗುವ ಅವನ ಅಂತಃಕರಣದ ಜೀವನ ಚಿತ್ರ ಅವಳ ಮುಂದೆ ಬಂದು ನಿಲ್ಲುತ್ತಿತ್ತು. ಚಿಕ್ಕ ಹುಡುಗರಂತೆ ಅತಿ ಸರಳವಾದ ಆತನ ಮನಸ್ಸು ಬಹು ಮೃದುವಾದದ್ದು. ಅವನನ್ನು ಮತ್ತೊಂದು ಮಗುವೆಂದೇ ಭಾವಿಸಿ ಸಂತೈಸುತ್ತಿದ್ದಳು.

ಅವಳಿಗೆ ಎರಡನೆಯ ಹೆರಿಗೆಯ ಸಂದರ್ಭ ನೆನಪಿಗೆ ಬಂತು. ಬೇಡ ವೆಂದರೂ ಹೆರಿಗೆ ಆಸ್ಪತ್ರೆಯಲ್ಲಿಯೇ ಆಗಬೇಕೆಂದು ಅವನು ಹಿಡಿದ ಹಟ ಡಾಕ್ಟರುಗಳಲ್ಲಿ ಆತನಿಗಿದ್ದ ವಿಶ್ವಾಸ ದುರ್ದೈವದಿಂದ ಮಗುವು ಹುಟ್ಟಿದ ಆರನೇಯ ದಿನವೇ ಅದು ಮೃತಿ ಹೊಂದಿದಾಗ ಅವನು ಪಟ್ಟ ಕಷ್ಟ, ದುಃಖ ಎಲ್ಲವೂ ನೆನಪಿಗೆ ಬಂದು, ಅವಳಿಗೆ ಬಹು ವೇದನೆಯಾಯಿತು. ಮನೆಗೆ ಬಂದ ನಂತರ "ರಮಾ ನೀನು ಆಸ್ಪತ್ರಿಗೆ ಹೋಗದಿದ್ದರೆ ಮಗು ಬದುಕುತ್ತಿತ್ತೇನೋ" ಎಂದ ಮಾತು ಅವಳ ಹೃದಯವನ್ನು ಕಲಕಿತು.

"ಅಲ್ಲ ರಮಾ, ಇಂತಹ ಕಷ್ಟಗಳು ನಮಗೊಬ್ಬರಿಗೆ ಏತಕ್ಕೆ ಬರಬೇಕು. ನಾವು ಮಾತ್ರ ದೇವರಿಗೆ ಅಪರಾಧ ಮಾಡಿರುವೆವೆ?" ಎಂದು ಕೇಳಿದಾಗ "ಇಲ್ಲ್ರೀ. ಎಲ್ಲಾರಿಗೂ ಇಂತಹ ಅನುಭವಗಳು ಆಗುತ್ತವೆ. ನಮಗಾಗುವ ವೇದನೆಯಿಂದ ನಮಗೆ ಹಾಗೆ ಅನಿಸುತ್ತದೆ." ಎಂದು ಅನೇಕ ಸಲ ರಮಾ ಅವಳ ಗಂಡನನ್ನು ಮೃದುಮಾತುಗಳಿಂದ ಸಂತೈಸಬೇಕಾಗಿತ್ತು. ಅವಳ ಸಹೃದಯತೆಗೆ ಸಹನಶೀಲಕ್ಕೆ ಅವನು ಅನೇಕ ಸಲ ಆಶ್ಚರ್ಯಹೊಂದುತ್ತಿದ್ದ. ಆದರೆ ಅವಳ ಮನೋರಾಜ್ಯ ದಲ್ಲಾಗುತ್ತಿದ್ದ ಸಂಕಟ ವೇದನೆ ಅವನಿಗೆ ತಿಳಿಯುತ್ತಿರಲಿಲ್ಲ.

* * * *

ದೀಪ ಪ್ರಕಾಶಿಸುತ್ತಲಿದೆ. ಅದರ ಕುಡಿ ಹೆಚ್ಚಾಗುತ್ತಲಿದೆ. ದೀಪದ

ಜ್ಯೋತಿಗೆ ಕಾರಣವಾದ ಬತ್ತಿಯು ಕ್ರಮೇಣ ಕರಗುತ್ತಿರಲು ಅದು ದೇದೀಪ್ಯಮಾನವಾಗಿ ಮೆರೆಯುತ್ತಲಿದೆ. ಕುಡಿಯು ಉರಿದು ಕರಗಿದಂತೆಲ್ಲ ದೀಪದ ಬೆಳಕು ಕಾಲಾಂತರದಲ್ಲಿ ಕಡಮೆಯಾಗಬೇಕಲ್ಲವೆ? ಕುಡಿಯ ಸ್ವಭಾವ ತಿಳಿದಿದೆ. ಹಳೆಯ ಬತ್ತಿ ಆಗಿಹೋದರೆ ಹೊಸ ಬತ್ತಿ ಮತ್ತೊಂದು ಬರುವುದೆಂಬ ಭರವಸೆ ಇದೆ. ಇಂತಹ ಮತ್ತೊಂದು ಬತ್ತಿಯಿಂದ ಹಳೆಯ ದಾದ ತನಗೇ ಮರಣಾವಸ್ಥೆ ಉಂಟಾಗಬಹುದು. ಆದರೆ ಬೆಳೆಯದೆ, ಅನು ಭವ ವಿಲ್ಲದೆ, ಏರುತಗ್ಗುಗಳಿಲ್ಲದ ಜೀವನವು ದೀಪಕ್ಕೆ ಬೇಡೆಂದೆನಿಸುವುದು. ಹಾಗೆ ಹುರುಳಿಲ್ಲದ ಜೀವನದಕ್ಕಿಂತಲೂ ಚೆನ್ನಾಗಿ ಬೆಳೆದು, ಉತ್ಸಾಹದಿಂದ ತುಂಬಿದ ಕಳಾಪೂರ್ಣ ಜೀವನವು ಒಂದು ಕ್ಷಣವಾದರೂ ನಿಜವಾದ ಬದು ಕೆಂದೆನಿಸಿ ಕೊಳ್ಳುತ್ತದೆ. ಆನಂದದಿಂದ ಬಾಳುವ ಜೀವನ ಕ್ಷಣವಾದರೂ ಸುಖದಾಯಕವೇ, ಆದರ್ಶಮಯವೇ ಆದುದರಿಂದಲೇ ದೀಪ ತನ್ನನ್ನು ತಾನೇ ಸುಟ್ಟುಕೊಳ್ಳುತ್ತದೆ ಕುಡಿಗಟ್ಟಿದಂತೆಲ್ಲ ಬತ್ತಿ ಸಣ್ಣದಾದಂತೆಲ್ಲ ತನ್ನ ಆಯುಷ್ಯ ಕಡಿಮೆ ಆಗುವುದು. ಜೀವಿತವು ಕ್ಷಣಭಂಗುರವೆಂದು ಭಾವಿ ಸುವುದು.

ದೀಪ ಕುಂಕುಮದ ಬೊಟ್ಟಿನಂತೆ ಉರಿಯತೊಡಗಿತು. ಬತ್ತಿಗೆ ಎಣ್ಣೆ ಹತ್ತುವಂತಿಲ್ಲವೆಂದು ಭಾವಿಸಿತು. ಅವಳು ಪ್ರಣತೆಯಲ್ಲಿ ಎಣ್ಣೆ ಹಾ ಕಿದಳು. ಕದಲದಂತೆ ಅಮಗುವಿನ ಹತ್ತಿರ ಕೂತು ಕೊಂಡಳು. ಅಮಗುವು ಕೊಂಚಸಮಯದ ನಂತರ ಕದಲತೊಡಗಿತು. ಮುಷ್ಟಿಯನ್ನು ಮುಚ್ಚುವುದು, ತೆಗೆಯುವದು ಆರಂಭವಾಯಿತು. “ ತಾಯಿ, ಪಾಪನೋಡು. ಆಡಿಕೊಳ್ತಾ ಇದೆ. “ ಎಂದು ಹರುಷದಿಂದ ಹೇಳಿದಳು.

“ ಅಹುದಮ್ಮಾ. ”

ತಾಯಿ ಮಗುವಿನ ಕೈಯನ್ನು ಒತ್ತುತ್ತ ಕುಳಿತಿದ್ದಾಳೆ. ಅವಳ ಮೊದಲನೆಯ ಬೆರಳನ್ನು ತನ್ನ ಮುಷ್ಟಿಯಲ್ಲಿ ಹಿಡಿದುಕೊಂಡಿದ್ದಾನೆ. ಹಿಡಿತದಲ್ಲಿ ಸಿಕ್ಕ ಬೆರಳನ್ನು ಬಿಡಲು ಅವನಿಗಿಷ್ಟವಿಲ್ಲ. ಅವಳು ಸುಮ್ಮನೇ ಕುಳಿತಿದ್ದಳು.

ಇದ್ದಕ್ಕಿದ್ದಂತೆ ಅವನು ಕಣ್ತೆರೆದ. ಅವನ ದೃಷ್ಟಿಯಲ್ಲಿ ಕಾಂತಿ ಇತ್ತು. ನವಚೇತನದ ಕಳೆ ಇತ್ತು. ತಾಯಿಯನ್ನು ಗುರುತಿಸಿತು. ಆಕೆಗೆಂದು

ಯುಗಯುಗಗಳಿಂದ ಅಲೆಯುತ್ತಿರುವ ಅವನಿಗೆ ಇಂದು ಅವನ ಅಭೀಷ್ಟ ಕೊನೆಗಂಡಿತೆಂದು ತಿಳಿದನು. ಅವಳನ್ನು ನೋಡಲೆಂದೇ ತಾನು ಕಣ್ತೆರೆದನೋ ಎಂಬಂತಿತ್ತು. ಅವನ ಕಣ್ಣುಗಳು ಮಿಂಚತೊಡಗಿದವು. ಆ ನೋಟದಲ್ಲಿ ನಗುವಿನ ಛಾಯೆ ಇತ್ತು.

"ಯಾಕೆ ನನ್ನ ತಂದೆ ಹೀಗೆ ನೋಡುವೆ. ?"

"ಅಮ್ಮಾ ಇಲ್ಲಿ ಬಾ" ಎಂಬ ಮಗಳ ಕರೆ ಅವನನ್ನು ಎಚ್ಚರಿಸಿತು. ಅವನ ಹಿಡಿತ ಸಡಿಲವಾಯಿತು. ಮುಷ್ಟಿಯಲ್ಲಿ ಸಿಕ್ಕಿಬಿದ್ದ ಬೆರಳು ಹೊರ ಬಂತು. ತೆರೆದ ಹಸ್ತದಿಂದ ಮುಖವನ್ನು ನೇವರಿಸಿಕೊಂಡ

"ಛೀ, ಛೀ; ಛೀ, ಛೀ." ಎಂದು ಅವನು ನಗುವಂತೆ ಪ್ರಯತ್ನಿಸಿದಳು, ಅವಳ ಮಗಳು.

ನಿಜವಾಗಿಯೂ ಅವನು ನಕ್ಕುಬಿಟ್ಟಿದ್ದನು. ಆ ನಗುವಿನಲ್ಲಿ ಹಿರಿದಾದ ಅರ್ಥವಿತ್ತು. ಅದರಿಂದ ಅವನ ಶರೀರವೆಲ್ಲ ನಡುಗಿಬಿಟ್ಟಿತು. ಅವನಲ್ಲಿ ಮೊರಸೂಸಿ ಬಂದ ನಗುವು ಹೃದಯಾಂತರಾಳದಿಂದ ಬಂದಿರಬೇಕೆಂದೆನಿಸಿಸಿತು. ಅವನ ದೇಹವೆಲ್ಲವೂ ಅಲುಗಾಡಿತು.

"ನೋಡಿದೆಯಾ. ನನ್ನ ಮಾತು ನೀ ನಂಬಲಿಲ್ಲ."

"ಇರಲಿ ತಾಯಿ. ಸುಮ್ಮನಾಗಪ್ಪ. ಹೆಚ್ಚು ನಗುವುದು ಮುಂದೆ ಬರುವ ಅಳುವಿನ ಸೂಚಕವಂತೆ. ನಗಬೇಡ ಮಗು. ನಿನಗೆ ಪೂರ್ಣ ಗುಣವಾಗಿದೆ ತಾನೆ ?"

ಅವಳ ಹೃದಯ ಮತ್ತೂ ಮಿಸ್ಪಂದಿತು. ನಿರಾಕಾರದಿಂದ ಶರೀರವೆಲ್ಲವೂ ವ್ಯಾಪಿಸಿಕೊಂಡ ಅವಳ ಭೀತಿಗೆ ಒಂದು ಬಗೆಯ ಸ್ವರೂಪವೇರ್ಪಟ್ಟಿತು.

"ಮಗುವಿಗೆ ಗುಣವಾಗುವುದೇನಮ್ಮಾ?" ಎಂದು ಮಗಳು ಕೇಳಿದಳು.

"ಖಂಡಿತ ಗುಣವಾಗುವುದಮ್ಮಾ"

"ಖಂಡಿತ? !"

"ಖಂಡಿತವಾಗಿಯೂ," ಎಂದು ಹೇಳಬೇಕೆಂದು ರಮಾ ನಿಶ್ಚಯಿಸಿದಳು. ಆದರೆ ಆ ಮಾತು ಮುಖದಿಂದ ಹೊರಬೀಳುವಷ್ಟರಲ್ಲೇ ಅವಳ ಪತಿಯ ನೆನಪು ಬಂದಿತು. ಆತನೂ ರಮಾದೇವಿಯನ್ನು ಇದೇ ಬಗೆ

ಯಾಗಿ ಕೇಳುತ್ತಿದ್ದ. ಅವಳಲ್ಲಿ ಸಂಕೋಚವು ತಲೆದೋರುವಂತೆ ಮಾಡಿತು. ನಾಚಿಕೆಯಿಂದ ಅವಳಲ್ಲಿ ನೂತನ ಉತ್ಸಾಹ ಕಂಡುಬಂತು.

ಪತಿಯ ದರ್ಶನವಾಯಿತು!

ಅವಳು ನೂತನ ವಧುವಿನಂತೆ ಕಂಡುಬಂದಳು!

"ಕ್ಷೇಮವೆ ರಮಾ?"

"ಅದು ನಿಮಗೆ ತಿಳಿದಿರಬೇಕಲ್ಲವೆ?"

"ತಿಳಿದಿದೆ."

"ಗಾಳಿಯಲ್ಲಿಯ ತೇವದಂತಾಗಿದೆ ನನ್ನ ಜೀವನ"

"ಹಾಗೆಂದು ಭಾವಿಸಬೇಡ, ರಮಾ,"

"ಭಾವಿಸದೆ ಸುಮ್ಮನಿರುವುದಕ್ಕೆ ನನಗೆ ಸಾಧ್ಯವಿಲ್ಲ ದೇವಾ. ಯಾವಕಾರಣದಿಂದ ನನ್ನ ಭಾವನೆಯನ್ನು ಬದಲಾಯಿಸಲಿ?"

"ನಾನಂದು ಹೇಳಿದುದನ್ನು ಮರೆತುಬಿಟ್ಟೆಯಾ?"

"ಏನದು?"

"ಸಾವಾಗಲಿ, ಬದುಕಾಗಲಿ, ಕಷ್ಟವಾಗಲಿ, ಸುಖವಾಗಲಿ, ಇವುಗಳಿಗೆ ನಾವು ಮಹತ್ವವನ್ನು ಕೊಡಬಾರದು. ಪ್ರಪಂಚದಲ್ಲಿ ಮನುಷ್ಯನಾದವನು ಕಷ್ಟ, ಸುಖ, ಹುಟ್ಟು, ಸಾವು, ಇವುಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಇವುಗಳ ಬಗ್ಗೆ ಯೋಚಿಸಬಾರದು. ಇವುಗಳಿಗೆ ಅಂಟಿಕೊಂಡೂ, ಆಸಕ್ತಿ ಇಲ್ಲದಂತೆ ವರ್ತಿಸುವವನೇ ಜೀವನವನ್ನು ಜಯಿಸಿದವನೆಂದು ಹೇಳಬಹುದು. ಇದು ನಿನಗೆ ನೆನಪಿರಲಿಕ್ಕೆ ಸಾಕಲ್ಲವೆ?"

"ಅಹುದು."

"ಏನು ನೆನಪಿದೆ?"

"ನೀವು ಈಗ ಹೇಳಿದ್ದು ನೆನಪಿದೆ."

"ಸುಮ್ಮನೆ ನೆನಪಿದೆಯೆಂದು ಹೇಳಿದರೆ ಸಾಲದು. ನೀನು ನೆನಪಿಟ್ಟುಕೊಳ್ಳುವವಳು, ಅದು ನೆನಪಿಡತಕ್ಕ ವಿಷಯ — ಈ ತಾರತಮ್ಯ ಇರುವವರೆಗೂ ಸಂಕಟವಿದ್ದೇ ಇರುತ್ತದೆ. ನೀನೇ ಆ ನೆನಪು, ಆ ನೆನಪೇ ನೀನಾಗಬೇಕು, ತಿಳಿಯಿತೇ.?"

"ನಾನೇ ನೆನಪು; ನೆನಪೇ ನಾನು"

ಅವನು ಮಾಯವಾದ. ಅವಳು ಗಹಗಹಿಸಿ ನಕ್ಕುಬಿಟ್ಟಳು. ದೀಪ ಗುಪ್ಪೆಂದಿತ್ತು, ಆದರೆ ಆರಿ ಹೋಗಲಿಲ್ಲ. ಬತ್ತಿಯ ಕುಡಿ ಹೆಚ್ಚಿತು. ಅದು ತುಂಡಾಗಲಿಲ್ಲ. ಅವಳದನ್ನು ನೋಡಿದಳು. ಆದರೆ ಅವಳ ದೃಷ್ಟಿ ಒಂದೆಡೆ ನಿಲ್ಲಲಿಲ್ಲ. ಅದೊಂದು ದೀಪ ಅದಕ್ಕೊಂದು ಬತ್ತಿ; ಆ ಬತ್ತಿಗೊಂದು ಕುಡಿ. ಇದೊಂದು ಮಂಚ. ಅದರ ಮೇಲೆ ಅರಿವೆಗಳು; ಅವುಗಳಲ್ಲಿ ಮಗು. ಅವನಿಗೆ ಬೇನೆ. ಎದುರಿಗೆ ಅವಳ ಮಗಳು; ಅವಳೆದುರಿನಲ್ಲಿ ತಾನು. ಇದೆಲ್ಲವನ್ನೂ ನೋಡಲು ಅವಳಿಂದಾಗಲಿಲ್ಲ. ಇವೆಲ್ಲವೂ ಸೇರಿದರೆ ಅದಕ್ಕೇ ಜೀವನವೆನ್ನುವರು. ಜೀವನವೆಂಬುವುದೊಂದು ಇದೆಯೆಂದು ಭಾಸವಾಯಿತು. .......

ಮಗಳನ್ನು ಸಮೀಪಿಸಿ "ಮಗೂ, ಮಗೂ," ಎಂದು ಕೂಗಿ ಕೊಂಡಳು.

ಮಗಳು ರೆಪ್ಪೆತೆರೆದು ನೋಡಿದಳು; ಅವಳಿನ್ನೂ ಹಾಸಿಗೆಯ ಮೇಲೆ ಮಲಗಿರಲಿಲ್ಲ.

" ನೀನು ನಿದ್ದೆ ಕಾಯಲಾರೆ. ಮಲಗಮ್ಮಾ. "

" ನಿದ್ದೆ ಕಾಯ್ತೇನಮ್ಮಾ "

" ನಿನಗೆ ಬೇನೆ ಬರುತ್ತದಮ್ಮಾ "

" ಮತ್ತೆ ನೀನು ?

" ನಾನು ದೊಡ್ಡವಳು. "

" ನೀನು ದೊಡ್ಡವಳಾದರೆ, ನಾನೂ ಬೆಳೆದವಳಲ್ಲವೇನಮ್ಮಾ? ತಮ್ಮನಿಗಿಂತಲೂ ನಾನೆಷ್ಟೋ ದೊಡ್ಡವಳು " ಎಂದು ಮಂಚದಿಂದ ಎದ್ದು ನಿಂತಳು.

" ದೊಡ್ಡತನವೆಂದರೆ ಅದಲ್ಲ ತಾಯಿ "

" ಮತ್ತೇನು ? "

" ನೀನು ನಿಜವಾಗಿಯೂ ದೊಡ್ಡವಳಾದೆಯೆಂದರೆ ಆಗ ತಿಳಿಯುವುದು. "

" ಬಾಬು ಎಷ್ಟು ಚೆನ್ನಾಗಿ ನಿದ್ದೆ ಮಾಡುತ್ತಾನೆ ನೋಡು, ತಾಯಿ"

" ಅವನಲ್ಲಿ ತಂದೆಯವರ ಗುಣಗಳೇ ಅಳವಡಿಸಿಕೊಂಡಿವೆ "

" ನನಗೆ "

" ನಿನ್ನ ತಾಯಿಯ ಗುಣ; ನನ್ನಂತೆ "

ಆ ಹುಡಿಗೆ ಈಗ ಮಲಗಲು ಒಪ್ಪಿದಳು.

ತಾಯಿಗೆ ಅರ್ಥವಾಯಿತು.

ಆದರೆ ತಾಯಿ ಸ್ವಲ್ಪ ಸಕ್ಕ ಸಮಾಧಾನ ಹೊಂದಿದಳು. ಅವಳ ಪ್ರಿಯೂ ತನ್ನ ಪತಿದೇವನ ಗುಣಗಳಿರುವುದು ರಮಾದೇವಿಗೆ ಮಾತ್ರ ತಿಳಿದಿತ್ತು.

ಮಗಳು ಮಲಗಿದಳು. ಹೊದ್ದ ಶಾಲನ್ನು ಸರಿಸಿ ನಡುವೆ ದಿಗ್ಗೆಂದು ಎದ್ದು ಕೂತಳು. "ಅಮ್ಮಾ ನಾಳೆ ತಮ್ಮಗೆ ನಾನೇ ನೀರೆರೆಯುವೆನು. ನನ್ನ ಕಾಲಮೇಲೆ ಮಲಗಿಸಿಕೊಂಡು ನೀರು ಹಾಕುವೆ. ನನಗೆ ಲಡ್ಡು ಮಾಡಿಕೊಡುವೆಯಲ್ಲ?" ಎಂದು ಏನೇನನ್ನೋ ಗೊಣಗಿಕೊಳ್ಳುತ್ತ ಮಲಗಿಬಿಟ್ಟಳು; ಪೂರ್ಣ ನಿದ್ದೆ ಬಂದುಬಿಟ್ಟಿತು. ಹುಡುಗರ ಚರ್ಯೆಯೇ ಹೀಗೆ.

ರಮಾದೇವಿ ಮಗನ ಮೇಲಿನ ಹೊದಿಕೆಯನ್ನು ಸರಿಮಾಡಿದಳು. ಸರಿಮಾಡುವ ಮುನ್ನ ಅದರ ಮೈ ಮುಟ್ಟಿ ನೋಡಿದಳು. ಗಾಬರಿಯಾಯಿತು. ಯೋಚಿಸತೊಡಗಿದಳು. ತನ್ನ ತಂದೆ ತಾಯಿಗಳು ಅಣ್ಣ ತಮ್ಮ ಅಣ್ಣನ ಮದುವೆ ಎಲ್ಲವೂ ನೆನಪಿಗೆ ಬಂದವು. ತನ್ನ ಮದುವೆಯ ಮುಂಚಿತವಾಗಿಯೇ ತಂದೆ ಮರಣ ಹೊಂದಿದ. ತಂದೆಯ ಮರಣಾನಂತರ ಅಣ್ಣಂದಿರು ಭಾಗವಾದರು. ಅವರು ತನ್ನನ್ನೂ, ತನ್ನ ತಾಯಿಯನ್ನೂ ದೂರದವರಂತೆ ಕಂಡರು. ರಮಾದೇವಿಯ ತಾಯಿ ತನಗಾಗಿ ಜೀವದಿಂದಿದ್ದಳು. ಯಾರೋ ಓರ್ವನ ಕೈಯಲ್ಲಿ ನನ್ನನ್ನು ಕೊಟ್ಟು ಸುಮ್ಮನಿರಬೇಕೆಂದು ಬಗೆದಳು. ಮದುವೆಯಾಯಿತು. ಆನಂತರ ನಾನು ಮಕ್ಕಳ ತಾಯಿಯಾಗುವುದನ್ನು ನೋಡಬೇಕೆಂದು ಬಯಸಿದಳು. ಅದುವೇ ತನ್ನ ಕೊನೆಯ ಕೋರಿಕೆಯೆಂದು ನಿಶ್ಚಯಿದಳು. ಮೊದಲ ಮಗು ಹೆಣ್ಣು. ಅಯ್ಯೋ ಗಂಡು ಮಗುವಾಗಿದ್ದರೆ ಒಳಿತೆಂದು ಅರೆ ಹಿಗ್ಗಿದಳು. ಮೊಮ್ಮಗಳ ಮದುವೆ ನೋಡಬೇಕೆಂಬ ಆಶೆ ತಲೆದೋರಿತು. ಅಲ್ಲಿಯವರೆಗೆ ಒಂದು ವೇಳೆ ಅವಳು ಜೀವಿಸಿದ್ದರೆ ಮರಿಮೊಮ್ಮಗನನ್ನೂ ನೋಡಬಯಸುತ್ತಿದ್ದಳೇನೋ? ಬಯಕೆಗೆ, ಮಾನವನ ಆಶೆಗೆ ಕೊನೆಇಲ್ಲ. ಜೀವನದ ತಳಹದಿ ಆಶೆ. ಜೀವಿಸುವುದೆಂದರೆ ಆಶೆಪಡುವುದೇ, ಆಶಾಜ್ಯೋತಿ ಸರ್ವಕಾಲ

ಸರ್ವಾವಸ್ಥೆಗಳಲ್ಲಿಯೂ ಬೆಳಗುತ್ತಲೇ ಇರುವುದು. ಬದುಕಬೇಕು, ಜೀವಿಸಬೇಕು, ಎಂಬ ಪ್ರಶ್ನೆ ಅರ್ಥವಿಲ್ಲದ್ದೆಂದು ಆಡಿಕೊಳ್ಳುತ್ತಿದ್ದ ತನ್ನ ಪತಿಯ ಮಾತುಗಳು ನೆನಪಿಗೆ ಬಂದವು. ಬದುಕಿ ಬಾಳುವುದೇ ಆನಂದವೆಂದು ಆತನ ಎಣಿಕೆಯಾಗಿತ್ತು.

"ದೀಪದ ಕುಡಿ ಕೆಳಗೆ ಬಿತ್ತು. ದೀಪ ಒಂದು ಸಲ ದಿವ್ಯವಾಗಿ ಬೆಳಗಿತು. ಆ ಜ್ಯೋತಿಯಲ್ಲಿ ಸರೋವರದಲ್ಲಿಯ ಕುಮುದ ಪುಷ್ಪದಂತೆ ಮಿನುಗಿತು. ಮೂಡಲ ಮನೆಯಲ್ಲಿ ಬೆಳ್ಳಂ ಬೆಳಗಾಯಿತು.

# ಗದ್ದಲ

ಪಕ್ಕದ ಮನೆಯ ವೆಂಕಮ್ಮ ಹೇಳುವವರೆಗೂ ನಮ್ಮಮನೆಯ ಇತಿಹಾಸ ನನಗೆ ತಿಳಿದಿರಲಿಲ್ಲ. ನನ್ನ ತಂದೆ ಶಂಕರಯ್ಯ ಆ ಕಾಲದಲ್ಲಿ ನಮ್ಮ ಮನೆ ನಿರ್ಮಿತವಾದ ಸ್ಥಳವನ್ನು ಎಳಾಣೆಗೊಂದು ಗಜ ದಂತೆ ಕೊಡರಂತೆ. ಆಸಮಯಗಳಲ್ಲಿ ಅದೆಲ್ಲಾ ಅಡವಿಯಾಗಿದ್ದು ಕತ್ತಲಾದನಂತರ ಯಾರೂ ಆ ಕಡೆ ಹಾಯುತ್ತಿರಲಿಲ್ಲವಂತೆ. ಎಂತಹ ಮನೆ ಕಟ್ಟಬೇಕೆಂಬ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡಿಯಿತಂತೆ. ಮೊದಲಿಗೆ ಸರಿಯಾದ ಬುನಾದಿಯಮೇಲೆ ಭದ್ರವಾದ ಗೋಡೆಗಳನ್ನು ಮಾತ್ರ ನಿರ್ಮಿಸಿ ಅದರ ಮೇಲೆ ತಾಳೆಯ ಗರಿಗಳನ್ನು ಹೊದಿಸಬೇಕೆಂದು ನಿಶ್ಚಯವಾಯಿತಂತೆ. ನಿಧಾನವಾಗಿ ಅದರಮೇಲೆ ಮಂಗಳೂರು ಹಂಚು ಹೊದಿಸಬಹುದೆಂದು ಯೋಚಿಸಿದರಂತೆ.

ತಮ್ಮಲ್ಲಿಯ ಹಣವನ್ನು ಬಡ್ಡಿಗೆಂದು ಸಾಲವಾಗಿ ಕೊಡುವುದೋ, ಇಲ್ಲವೆ ದಿವಾಳೀ ತೆಗೆದವರ ಹೊಲ ಮನೆಗಳನ್ನು ಕೊಂಡುಕೊಳ್ಳುವುದೋ, ಇಲ್ಲವೆ ಬೆಳಕಿಲ್ಲದ ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡುವುದೋ, ಮುಂತಾದವೇ ಆ ಕಾಲದ ಶ್ರೀಮಂತರ ಕೆಲಸವಾಗಿತ್ತು. ಅವರಿಗೆ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂಬ ಮಾರ್ಗವೇ ತಿಳಿದಿರಲಿಲ್ಲ. ಅಂತವರಿಗೆ ಹೆಚ್ಚಿನ ಖರ್ಚು ಮಾಡುವ ಅವಸರವೇ ಇರಲಿಲ್ಲ. ಮಿತವಾಗಿ ಉಣ್ಣುವುದು, ಅವಸರವಿದ್ದ ಅರಿವೆಗಳನ್ನೂ ಧರಿಸುವುದು, ಅವರ ಖರ್ಚಿನ ಅಂಶಗಳೆನ್ನಬಹುದು. ಒಂದುವೇಳೆ ' ಧರ್ಮಾದಾಯ ' ವೆಂಬ ಹೆಸರಿನಲ್ಲಿ ಅವರು ತಮ್ಮ ವ್ಯಾಪಾರದಲ್ಲಿ ಜನರಿಂದ ವಸೂಲ ಮಾಡಿದ ಹಣದಿಂದ ಕಾಶೀರಾಮೇಶ್ವರ ಯಾತ್ರೆ ಮಾಡಿ ಬರುವುದು ಅವರು ಖರ್ಚು ಮಾಡುವ ವಿವರಗಳಲ್ಲಿಯ ಒಂದಂಶವೆಂದು ಹೇಳಬಹುದು. ಇಲ್ಲದೇ ಹೋದರೆ ಮನೆಯಲ್ಲಿಯ ಚಿನ್ನ ಒಡವೆ, ನಗದು ಹಣವನ್ನು ಕಳ್ಳರು

ಅಪಹರಿಸುವರೆಂಬ ಭಯದಿಂದ ಮನೆಗಳಲ್ಲಿ ಕುಣಿತೋಡಿ ಅವರಲ್ಲಿ ಹೂಳಿಟ್ಟು ಮೇಲೆ ಹಾಸಿಗೆ ಹಾಸಿಕೊಂಡು ಮಲಗಿ ಪ್ರಾಣಬಿಡುವುದು ಕೆಲವರ ಪದ್ಧತಿಯಾಗಿತ್ತು.

ಬಡ್ಡಿ ಕೊಡುವುದಕ್ಕಾಗಲಿ, ಮನೆಗಳನ್ನು ಕಟ್ಟಿಸುವುದಕ್ಕಾಗಲಿ, ನನ್ನ ತಂದೆಯವರು ಸಮರ್ಥರಿರಲಿಲ್ಲ. ಅನ್ನ ಅರಿವೆಗಳನ್ನು ಪೂರೈಸಿ ಮಾನದಿಂದ ಬಾಳುವಷ್ಟು ಆದಾಯ ಅವರದು. ಇರಲು ಮನೆ ಇರಲಿಲ್ಲ ವಾದುದರಿಂದ, ಒಂದು ಮನೆಯನ್ನು ಕಟ್ಟಿಸಬೇಕೆಂದು, ಅವರು ನಿಶ್ಚ ಯಿಸಿದರು,

"ಏನ್ರೀ, ಶಂಕರಯ್ಯನೋರೇ, ಸ್ವಲ್ಪವೇ ಬುನಾದಿಹಾಕಿ ಮನೆ ಕಟ್ಟುವಿರಲ್ಲ?" ಎಂದು ವೆಂಕಮ್ಮನ ಗಂಡ ಕೇಳಿದನಂತೆ ನನ್ನ ತಂದೆ ಯವರನ್ನು.

"ಇರಲ್ಲಿರೀ, ಏನಾಗ್ತದೆ"

"ಮಕ್ಕಳಂದಿಗರ ಮನೆ ಕೊಂಚ ಗಟ್ಟಿಯಾಗಿರಬೇಕೆಂದು ಹೇಳಿದೆ ಅಷ್ಟೆ"

"ಸುಮ್ಮನೇ ಮಾತನಾಡುವವರ ಮಾತು ಕಟ್ಟಿಕೊಂಡು ಮಾಡೋ ದೇನು? 'ಮನೆ ಕಟ್ಟಿನೋಡು ಮದುವೆ ಮಾಡಿ ನೋಡು' ಎಂಬ ಹಿರಿ ಯರ ಮಾತು ನೆನಪು ಮಾಡಿಕೊಂಡರೆ ನನ್ನ ಎದೆ ಧಸ್ಸೆನ್ನುತ್ತದೆ. ನನ್ನ ವಿಷಯ ನಿಮಗೆಲ್ಲಾ ತಿಳಿದೇ ಇದೆ. ಮತ್ತೇನು?

"ಹೌದು. ಆದ್ರೆ ಆರಂಭಿಸಿದ ಕಾರ್ಯ ಸರಿಯಾಗಿ ಮುಗಿಸ ಬೇಕೆಂಬುದು ಅವಸರವಲ್ಲವೆ? ನಿಮಗೆ ಹೇಳುವ ಸಾಮರ್ಥ್ಯ ನನಗಿಲ್ಲ ನಾನಿನ್ನೂ ವಯಸ್ಸಿನಲ್ಲಿ ಚಿಕ್ಕವನು"

"ಇರಲ್ಲಿರಪ್ಪ ಇಲ್ಲಿ ನೋಡ್ರಿ! ಜಾಗಾ ಸ್ವಲ್ಪ ಬೆಲೆಗೆ ದೊರೆಯಿ ತೆಂದು ಕೆಲಸ ಆರಂಭಿಸಬೇಕಾದರೇನೇ ಎಷ್ಟು ಖರ್ಚು ಬಂದಿತ್ತೆಂದು ಭಾವಿಸುವಿರಿ? ಬುನಾದಿ ಕೆಲಸ ಪೂರ್ತಿಯಾಗುವಷ್ಟರಲ್ಲೇ ನಮ್ಮ ರಾಘ ವಯ್ಯ ದಿವಾಳಿ ತೆಗೆಯಲಿಲ್ಲವೆ? ಪಾಪ ಅವನಿಗೆ ಗೃಹಪ್ರವೇಶವಮಾಡುವ ಭಾಗ್ಯಕೂಡ ಇರಲಿಲ್ಲ" ಎಂದು ಸಮಾಧಾನ ಹೇಳಿ ವೆಂಕಮ್ಮನ ಗಂಡ ನನ್ನು ಮಾತಿನಲ್ಲಿ ಸೋಲಿಸಿದರಂತೆ ನನ್ನ ತಂದೆಯವರು.

ನಮ್ಮ ಮನೆ ಕಟ್ಟುವ ಕಾರ್ಯ ಮುಗಿಯಿತು. ನಮ್ಮ ಬಳಗದವರೆಲ್ಲಾರೂ ಬಂದು ಮಣ್ಣಿನ ಗೋಡೆಗಳೇಕೆ ಕಟ್ಟಿದಿರೆಂದು ಆಕ್ಷೇಪಿಸಿರಂತೆ ತಂದೆಯವರು ಮಣ್ಣಿನ ತ್ಯಾಪಿಯನ್ನು ಕೆದರಿಸಿ ಅದು ತಿಳಿಯಬಾರದೆಂದು ಸುಣ್ಣ ಬಳಿಸಿದರಂತೆ. ಅಂದಿನಿಂದ ನೋಡುವುದಕ್ಕೆ ಅದು ಗಚ್ಚಿನಮನೆಯಂತೆ ಕಾಣಿಸತೊಡಗಿತು. ಆದರೆ 'ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ' ಎಂಬುವಂತೆ ನಮಗೇನೋ ನಮ್ಮ ಮನೆ ಭದ್ರವಾಗಿಲ್ಲವೆಂಬ ಅನುಮಾನವಿದ್ದೇ ಇತ್ತು.

ಈ ಸಮಾಚಾರವನ್ನೆಲ್ಲಾ ನನಗೆ ಇತರರು ಹೇಳಿದಂತೆ ನಿಮಗೆ ತಿಳಿಸುತ್ತಿದ್ದೇನೆ. ನನ್ನ ತಂದೆ ನಾನು ಸಣ್ಣವನಾಗಿರುವಾಗಲೇ ಸತ್ತು ಹೋದುದರಿಂದ ನನಗವರ ನೆನಪಿಲ್ಲ. ನನ್ನನ್ನು ಇಂಥವರ ಮಗನೆಂದು ಜನರು ಕರೆಯುವುದರಿಂದ ನನ್ನ ತಂದೆ ಬಹಳ ಹೆಸರುಗಳಿಸಿದವರಾಗಿರಬೇಕೆಂದು ನಾನು ಭಾವಿಸಿದೆ.

ನನ್ನ ತಂಗಿ ಮದುವೆ ಮಾಡಿಕೊಂಡು ಗಂಡನ ಮನೆ ಸೇರಿದಳು. ನಮ್ಮಣ್ಣ ನನ್ನ ಮದುವೆಯನ್ನೂ ಮಾಡಿಮುಗಿಸಿದ. ನನ್ನ ಹೆಂಡತಿ ಮನೆಗೆ ಬಂದಮೇಲೆ ನಾದಿನಿಯರ ಮನಸ್ಸುಗಳು ಹೊಂದುಗೂಡಲಿಲ್ಲ. ಆದುದರಿಂದ ಪಾಲುಹಂಚಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದೆವು. ತಂದೆತಾಯಿಗಳಿಬ್ಬರೂ ಇಲ್ಲದ ನಮ್ಮ ವಿಭಾಗದ ಪ್ರಕರಣಕ್ಕೆ ಹೆರವರ ನೆರವು ಬೇಕಾಯಿತು. ಅಣ್ಣತಮ್ಮಂದಿರುಗಳು ದೊಡ್ಡವರಾದ ಮೇಲೆ ಮನೆಯ ಆಸ್ತಿ ಪಾಲುಮಾಡಿಕೊಳ್ಳುವುದು ನ್ಯಾಯವಾದ ಪದ್ಧತಿಯೆಂದು ಅನೇಕರ ಅಭಿಪ್ರಾಯ. ನನ್ನ ಮದುವೆಯ ಮುಂಚೆಯೇ ಮನೆಯಲ್ಲಿ ವೈನಿಯವರು ಆಡುವ ಚುಚ್ಚು ಮಾತುಗಳು ನನ್ನಲ್ಲಿ ಅನೇಕಸಲ ಕೋಪವನ್ನುಂಟುಮಾಡಿದರೂ ಗಂಡುಸಾದ ನಾನು ಅದನ್ನು ಸಹಿಸಿದೆ.ಈ ಸಹನೆಗೆ ನನ್ನನ್ನು ನಾನೇ ಮೆಚ್ಚಿಕೊಂಡೆ. ಆದರೆ ಹೆಂಡತಿಮನೆಗೆ ಬಂದನಂತರ ವಿಷಯ ಬೇರೆ ಹಾದಿ ಹಿಡಿಯಿತು. ಮೊದಲಿಗೆ ನನ್ನ ಹೆಂಡತಿ ಹೊಸವಾತಾವರಣದಲ್ಲಿ ಕೊಂಚ ಸೌಮ್ಯರೀತಿಯಲ್ಲಿ ವರ್ತಿಸಿದಳೆನ್ನಬಹುದು. ಆದರೆ ಕೆಲ ಸಮಯವನಂತರ ಅವಳಲ್ಲಿ ಬದಲಾವಣೆ ಕಂಡುಬಂತು. ಮನೆಯಲ್ಲಿ ಪರಿಸ್ಥಿತಿಗಳು ಬದಲಾಯಿಸಿದವು. ನನ್ನ ಮಾವನವರಿಗೆ ನಾವಿಬ್ಬರೂ ಭಾಗವಾ

ಗುವುದು ಬೇಕಾಗಿತ್ತು. ಅಲ್ಲದೆ ನನ್ನಣ್ಣನ ಮಾವನವರಿಗೂ ಇದೇ ಬಗೆಯ ಅಭಿಪ್ರಾಯವಿದ್ದಂತೆ ಕಂಡುಬಂತು. ನನ್ನ ಹೆಂಡತಿಯ ಮನಸ್ಸಿನಲ್ಲಿ ನಾವು ಭಾಗವಾಗುವುದು ತೀರ ಅವಶ್ಯಕತೆಯೆಂಬಂತೆ ತೋರಿತು. ನನ್ನನಾತಿಗೆ ಕಾರಣವಿಲ್ಲದೆ ಅವಳು ಕೊಸರಿ ಕೊಳ್ಳುವುದು, ಮುರಮುರನೆ ನೋಡು ವುದು, ಮನೆಯ ಪಾತ್ರೆಸಾಮಾನುಗಳನ್ನು ಸುಮ್ಮನೆ ಕೆಳಗೆ ಕೆಡವಿ ಗಲ ಭೆಮಾಡುವುದು, ಇವೆಲ್ಲವನ್ನು ಕಂಡು ನನಗೆ ಬಹಳ ಆಶ್ಚರ್ಯವೆನಿಸಿತು. ಇಷ್ಟಾದರೂ ನಾನು ಏನು ತಿಳಿಯದವನಂತೆ ಸುಮ್ಮನಿದ್ದುಬಿಟ್ಟದು ಅವ ಳನ್ನು ಮತ್ತಿಷ್ಟು ಸಿಟ್ಟಿಗೆಬ್ಬಿಸಿರಬೇಕು. ಅವಳ ಈ ಬಗೆಯ ವರ್ತನೆ ನನಗೆ ಸರಿಯೆಂದು ಕಂಡುಬರಲಿಲ್ಲ. ಅಂತೂ ಈ ನಾದಿನಿಯರ ಜಗ ಳದಲ್ಲಿ ನಾನು ಪ್ರವೇಶಿಸುವುದು ಒಳಿತಲ್ಲವೆಂದು ಸುಮ್ಮನಿದ್ದುಬಿಟ್ಟೆ.

ನಾವಿಬ್ಬರೂ ಕೂಡಲೇ ಭಾಗವಾಗದೆ ಸುಮ್ಮನಿದ್ದುದಕ್ಕೆ ಪ್ರಬಲವಾದ ಮತ್ತೊಂದು ಕಾರಣವೆಂದರೆ ನಮ್ಮ ಮನೆಯಲ್ಲಿ ಆರಂಭವಾದ ಗೆದ್ದಲಿನ ( White ant ) ಕಾಟ. ಇವು ಮೊದಲು ಅಣ್ಣನ ಕೋಣೆಯಲ್ಲಿ ತಮ್ಮ ವಿಜಯ ಯಾತ್ರೆಯನ್ನು ಆರಂಭಿಸಿದವು. ಅಲ್ಲಿಯ ದೊಡ್ಡ ಜಾಜಿಕಾಂಯ ಪೆಟ್ಟಿಗೆಯ ತಳವನ್ನೆಲ್ಲ ತಿಂದುಬಿಟ್ಟಿದ್ದವು. ಅವನ್ನು ತೆಗೆದು ಹೊರಗೆ ಎಸೆದುಬಿಟ್ಟೆವು. ಮುಂದೆ, ನನ್ನವಳು ಇರಿಸಿದ್ದ ಸೀರೆ ಕುಂಚ ಹರಿದು ಹೋಗಿರಲು ಅಲಮೇರಾ ತೆಗೆದು ಮೂಲೆಯಲ್ಲಿ ನೋಡಿದೆವು. ಕತ್ತಲಿದ್ದ ಸ್ಥಳದಲ್ಲೆಲ್ಲ ಅವು ತಮ್ಮ ಬಿಡಾರವನ್ನು ನಿರ್ಮಿಸಿದ್ದವು. ಮನೆಯ ಗೋಡೆಗಳನ್ನು ಅಲ್ಲಲ್ಲಿ ಕೆದರಿ ನೋಡಿದೆವು. ಅಲ್ಲಿಯೂ ಅವು ಮನೆಮಾಡಿ ಕೊಂಡಿದ್ದವು. ದಿನವೂ ನಮ್ಮ ತಲೆ ಕೆಡಿಸುವಷ್ಟು ಗೆದ್ದಲು ಎಲ್ಲ ಸ್ಥಳಗಳ ಲ್ಲಿಯೂ ಕಾಣಿಸತೊಡಗಿದವು. ಮನೆಗೆ ಪೂರ್ತಿ ತಾರು ಬಳಿಸಿದರೆ ಇವು ಗಳ ಕಾಟ ತಪ್ಪುವುದೆಂದು ಹೇಳಿದರು. ಕೆಲವು ಸ್ಥಳಗಳಲ್ಲಿ ತಾರು ಬಳಿ ದೆವು;ಆದರೂ ಅವುಗಳ ಕಾಟ ತಪ್ಪಲಿಲ್ಲ. ತಾರು ಬಳಿದ ಸ್ಥಳದಲ್ಲಲ್ಲದೆ ಇತರ ಭಾಗಗಳಲ್ಲಿ ಅವು ಕಾಣಿಸಿಕೊಂಡವು. ಮನೆಯೊಳಗಿನ ಗ್ರಂಥಗಳು, ಅಲಮಾರಗಳು, ಮಾಳಿಗೆಯ ದೊಡ್ಡ ದೊಡ್ಡ ಜಂತಿಗಳು, ಅಂಕಣಗಳ ನಡುವೆ ಹಾಕಿದ ಸಣ್ಣ ಬಿದುರಿನ ತುಂಡುಗಳು, ಎಲ್ಲದರಲ್ಲಿಯೂ ಇವುಗಳ ಕಾಟ ಆರಂಭವಾಗಿ ನಾವು ಊಟಮಾಡುವುದು ಇರುವುದೂ ಕಷ್ಟವೆನಿ

ಸಿತು. ಮಾಳಿಗೆಗೆ ಹಾಕಿದ ಮೇಲು ಹೊದಿಕೆಯನ್ನು ಬಿಚ್ಚಿ ಮತ್ತೆ ಹಾಕಿಸಬೇಕೆಂದು ನೆರೆಮನೆಯವರು ಸೂಚಿಸಿದರು. ಈ ಗೆದ್ದಲನ್ನು ಗೆಲ್ಲುವ ಯೋಚನೆಯಲ್ಲಿ ನಮ್ಮ ಆಸ್ತಿ ವಿಭಾಗದ ಮಾತೇ ಮರೆತು ಹೋಯಿತು.

ಒಂದು ಒಳ್ಳೆಯ ದಿನ ನೋಡಿ ಮನೆಯ ಚಪ್ಪರದ ಹಂಚುಗಳನ್ನು ಬಿಚ್ಚಿಸಿದೆವು. ಹಂಚುಗಳನ್ನು ತೆಗೆಯುವ ಯತ್ನದಲ್ಲಿ ಗೆದ್ದಲುಗಳು ಮನೆಯನ್ನೆಲ್ಲ ಹಾಳುಮಾಡಿದಂತೆ ಕಂಡುಬಂತು. ಸಮಯಕ್ಕೆ ಸರಿಯಾಗಿ ನಾವು ಎಚ್ಚೆತ್ತುಕೊಳ್ಳದಿದ್ದರೆ, ಮನೆಯು ನಮ್ಮ ಮೇಲೆ ಕುಸಿದು ಬಿದ್ದು ಪ್ರಮಾದವೇ ಆಗುತ್ತಿತ್ತು. ಚಪ್ಪರದ ತಂಟೆ ತೀರಿತೆಂದು ಸಮಾಧಾನ ಹೊಂದುವ ಹೊತ್ತಿಗೆ, ಅವು ಗೋಡೆಗಳ ನಡುವೆ ಮನೆಮಾಡಿಕೊಂಡ ಸಂಕಟ ನಮ್ಮನ್ನು ಅಧೀರರನ್ನಾಗಿಸಿತು. ಈ ಹೊಸ ಸಂಕಟದಿಂದ ಪಾರಾಗುವ ಯೋಚನೆ ಹೊಳೆಯದಂತಾಯಿತು.

"ಹೀಗೆ ಮಾಡುವುದು ಒಳಿತಲ್ಲ. ಒಂದೊಂದೇ ಇಟ್ಟಿಗೆ ತೆಗೆದರೆ ಇವು ಹೋಗುವುದಿಲ್ಲ. ಪೂರ್ಣ ಗೋಡೆಗಳನ್ನು ಕೆಡವಿ. ಅವುಗಳನ್ನು ಪೂರ್ತಿ ನಾಶನ ಮಾಡದಹೊರತು ಇವುಗಳ ಸಂಕಟ ದೂರಾಗುವುದಿಲ್ಲ. ಇವುಗಳ ಮೂಲ ಸ್ಥಾನವೆಲ್ಲಿದೆಯೋ ಕಂಡುಹಿಡಿಯಿರಿ" ಎಂದು ಹೇಳಿದ ವೆಂಕಮ್ಮನ ಮಾತು ಸರಿಯೆಂದು ತೋರಿತು. ಗೆದ್ದಲಿನ ಮೂಲಸ್ಥಾನ ಕಂಡುಹಿಡಿಯುವುದು ನದಿಯ ಜನ್ಮಸ್ಥಾನ ಹುಡುಕಿದಂತೆ. ನನಗೇನೂ ತೋಚಲೇ ಇಲ್ಲ. ಅಣ್ಣನಂತೂ ಬೇಸತ್ತು ಕುಳಿತುಬಿಟ್ಟ. ವೆಂಕಮ್ಮನ ಮಾತಿನಂತೆ ಗೋಡೆಗಳನ್ನು ಕೆಡವಬೇಕೆಂಬ ಕಷ್ಟಕ್ಕೆ ಅಣ್ಣ ಮರುಗಿದ.

ಇಷ್ಟರಲ್ಲಿ ನಾವಿದ್ದ ಪೇಟೆಯಲ್ಲಿ ದೊಡ್ಡ ಪ್ರಮಾದವೇರ್ಪಟ್ಟಿತು. ಕಾರಣವೇನೆಂಬುದರ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿದ್ದವು. ಅಂತೂ ಬೀದಿಯ ನಡುವೆ ಇದ್ದ ಒಂದು ಮನೆಯಲ್ಲಿ ಆರಂಭವಾದ ಬೆಂಕಿಯು ಅನಾಹುತ ಅಲ್ಲಿಯ ಅನೇಕ ಮನೆಗಳನ್ನು ಸುಟ್ಟು ಬೂದಿಮಾಡಿದವು. ಪುಣ್ಯಕ್ಕೆ ನಮ್ಮ ಮನೆಯಲ್ಲಿ ಸುಡಲು ಯಾವ ಬಗೆಯ ಕಟ್ಟಿಗೆಯ ಸಾಮಾನುಗಳಿಲ್ಲದಿದ್ದುದರಿಂದ ನಮಗೆ ಬೆಂಕಿಯ ಅನಾಹುತದ ಪರಿಚಯವಾಗಲಿಲ್ಲ. ಈ ಗೊಂದಲದಲ್ಲಿ ಅನೇಕರು ತಮ್ಮ ತಮ್ಮ ಸಾಮಾನುಗಳನ್ನು ಕಳೆದುಕೊಂಡರು. ವೈನಿಯವರ ಪೆಟ್ಟಿಗೆ ಕಳೆದು ಹೋದುದಕ್ಕೆ ಮನೆ

ಯಲ್ಲಿ ರಾಧ್ಯಾಂತವೇ ಆಗಿಹೋಯಿತು. ಕಳ್ಳರ ಹಾವಳಿ ಬಹಳವಾದುದ ರಿಂದ ರಾತ್ರಿ ನಾವು ಸರ್ತಿಯ ಮೇಲೆ ಕಾವಲು ಇದ್ದು ಮುಂದೆ ಆ ಬೀದಿ ಯಲ್ಲಿ ಕಳ್ಳತನ ನಡೆಯದಂತೆ ನೋಡಿಕೊಂಡೆವು. ಈ ಬೆಂಕಿಯ ಅನಾಹುತ ಯಾರೋ ಸಿಗರೇಟು ಸೇದಿ ಬಿಸಾಡಿದ ತುಂಡಿನ ಪ್ರಭಾವವೆಂದು ಎಲ್ಲಾರೂ ಊಹಿಸಿದ್ದುದರಿಂದ, ಯಾರೂ ನಮ್ಮ ಬೀದಿಯಲ್ಲಿ ಸಿಗರೇಟು ಸೇದುವ ಗೊಡವೆಗೆ ಹೋಗಲೇ ಇಲ್ಲ. ಯಾವನೋ ಹೊಸಬನೊಬ್ಬನು ತಿಳಿ ಯದೇ ಸೇದಿ ಸಿಗರೇಟಿನ ತುಂಡನ್ನು ಬಿಸಾಟಿದುದರಿಂದ ಅವನನ್ನು ಕಾಡಿಬಿಟ್ಟರು. ಚೇಳು ಕಡಿದ ಮೂರನೆಯ ದಿನದಿಂದ ಎಲ್ಲಾರೂ ಕಾಲಲ್ಲಿ ಚಪ್ಪಲಿಗಳು ಧರಿಸಿದಂತೆ ಆತನನ್ನು ವೇಧಿಸಿದರು; ಅವನು ಗಲ್ಲಗಲ್ಲ ಬಡಿ ದುಕೊಂಡು ಕ್ಷಮಾಪಣೆ ಬೇಡಿದನಂತರ ಆವನನ್ನು ಬಿಟ್ಟುಬಿಟ್ಟರು.

ಮಳೆ ಪ್ರವೇಶವಾಗುವುದರ ಮುಂಚೆಯೇ ಆ ಬೀದಿಯ ಜನರು ತಮ್ಮ ಮನೆಗಳನ್ನು ಕಾಳೆಯ ಗರಿಗಳಿಂದ ಮುಚ್ಚತೊಡಗಿದರು. ಎಂದಿ ನಂತೆ ಎಲ್ಲಾರೂ ತಮ್ಮ ಮನೆಗಳನ್ನು ನಿರ್ಮಿಸಿಕೊಂಡರು. ಆದರೆ ನಮ್ಮ ಮನೆಯ ಮಾತು ಬಗೆಹರಿಯದಂಥ ಗಂಭೀರ ಪ್ರಶ್ನೆಯಾಗಿಯೇ ಉಳಿಯಿತು. ಗೋಡೆಗಳಲ್ಲಿಯ ಗೆದ್ದಲುಗಳನ್ನು ಓಡಿಸಿ, ಉತ್ತಮ ಬುನಾ ದಿಯಿಂದ ಮನೆ ಕಟ್ಟದ ಹೊರತು ನಾವು ಇವುಗಳ ಕಾಟದಿಂದ ದೂರಾಗು ವಂತಿರಲಿಲ್ಲ. ಈ ಪ್ರಶ್ನೆ ಬಗೆಹರಿಯದ ಹೊರತು ಭಾಗ ಹಂಚಿಕೊಳ್ಳುವ ಮಾತು ದೂರವೇ ಉಳಿಯಬೇಕಾಯಿತು. ಈ ಗೆದ್ದಲುಗಳ ರಾಯಭಾರ ದಿಂದ ನಮ್ಮ ಬಾಳು ಹೋಳಾಗಲಿಲ್ಲ. ಅಂತೂ ನಮ್ಮ ಮನೆಯ ಗೆದ್ದಲಿನ ಪ್ರಕರಣ ಎಲ್ಲರೆದುರು ನಗೆಚಾಟಿಕೆಯ ಮಾತಾಗಿ ಉಳಿಯಿತು.

# ಹಸಿವು

ಈ ಪ್ರಪಂಚದಲ್ಲಿ ಹುಟ್ಟುವುದು ತಪ್ಪು. ಜನ್ಮತಾಳಿದ ಮೇಲೆ ತಪ್ಪು ಮಾಡುವುದು ಮತ್ತಿಷ್ಟು ತಪ್ಪಿನ ಕೆಲಸವೇ ಸರಿ. ಮನುಷ್ಯನು ಜನ್ಮತಾಳಿ ತಪ್ಪುಮಾಡದೇ ಇರಲು ಸಾಧ್ಯವಿಲ್ಲ; ಸಾಧ್ಯವಾದಷ್ಟು ಸುತ್ತಮುತ್ತಲಿನ ಜನರಿಗೆ ಹಿಂಸೆಕೊಡದೆ, ತನ್ನ ದಾರಿಯಲ್ಲಿ ತಾನು ನಡೆದುಕೊಂಡು, ಇತರರಿಗೆ ಅನುಕೂಲವಾಗುವಂತೆ ವರ್ತಿಸಿ, ಅವರ ಮೆಚ್ಚುಗೆ ಪಡೆದು ಜೀವಿಸುವಂಥವನನ್ನು ನಾನು ಮೆಚ್ಚುವೆನು; ಅವರನ್ನು ಹೊಗಳುವೆನು; ದೇವರೆಂದು ಪೂಜಿಸಲೂ ಹಿಂಜರಿಯುವುದಿಲ್ಲ.

ಹುಟ್ಟಿ, ಹೆಜ್ಜೆಹೆಜ್ಜೆಗೂ ತಪ್ಪುಮಾಡುವ ಮಾನವರನ್ನು ನಾನು ಪ್ರೀತಿಸುವುದಿಲ್ಲ. ಸ್ವಾರ್ಥದ ಗುಂಗಿನಲ್ಲೇ ಮಗ್ನರಾಗಿ, ಸುತ್ತಲಿರುವವರ ಕಷ್ಟಸುಖಗಳ ಕಡೆ ಲಕ್ಷ್ಯಕೊಡದೆ, ಯಾವಾಗಲೂ ತಮ್ಮ ಸುಖದುಃಖಗಳಲ್ಲಿಯೇ ಮೈಮರೆತು, ತಮ್ಮ ಸ್ವಸುಖದಲ್ಲಿಯೇ ಪ್ರಪಂಚವಿದೆಯೆಂದು ಭಾವಿಸಿ, ಜೀವನದಲ್ಲಿ ಎದುರು ಬರುವ, ಹುವ್ವು, ಬಳ್ಳಿ, ಮುಗ್ಗಿ, ಇವುಗಳೆಲ್ಲವೂ ತನಗೆ ಸುಖಕ್ಕೆ ಕಾರಣವಾಗದಿದ್ದರೂ, ಅವುಗಳೇಕೆ ಸೃಷ್ಟಿಯಾದವೆಂದು ಜರಿದು, ಕಾಲಿನಿಂದ ತುಳಿದು, ಎಂಜಲಿನಿಂದ ಮೈ ತೊಳೆದು, ಜೀವಿಸುವಂಥ ಜನರು ಜನ್ಮತಾಳಿದುದು ತಪ್ಪೆಂದು ನನ್ನ ಭಾವನೆ; ಜನ್ಮತಾಳಿದಮೇಲೆ ಇಂಥವರು ಬಹಳದಿನ ಬದುಕಬಾರದು. ಇಂಥವರಿಂದ ಸಂಘಕ್ಕೆ ಸಮಾಜಕ್ಕೆ, ಜಾತಿಗೆ, ಮತಕ್ಕೆ, ಪ್ರಪಂಚಕ್ಕೇನೆ ಇವರು ಗೆದ್ದಲಿನಂತೆ ಹಾನಿಯುಂಟು ಮಾಡುವರು. ಜಗತ್ತಿನಲ್ಲಿ ಆನಂದ, ಸುಖ, ಸಂಪತ್ತು ಇರುವುದು ಲೋಕದ ಕಲ್ಯಾಣಕ್ಕೆಂದು ಭಾವಿಸದೆ, ತಮ್ಮ ಆತ್ಮಸುಖಕ್ಕೆ, ಇತರರನ್ನು ಹಿಂಸಿಸಿ, ದುಃಖಿಗಳ ಲಲಿತ ಹೃದಯಗಳು ದುಃಖದಿಂದ ವ್ಯಥೆ ಪಡುತ್ತಿದ್ದರೆ ನೋಡಿ ಹಿಗ್ಗುವ ಇಂತಹ ಸ್ವಾರ್ಥಿಗಳು ಪೂರ್ಣನಾಶ ಹೊಂದುವ ಮಾರ್ಗವನ್ನು ನಾವು ಕಂಡುಹಿಡಿಯಲೇಬೇಕು. ಇದು ಸಾಧ್ಯ

ವಾಗದೇ ಹೋದರೆ ಇಂಥವರು ತಮ್ಮ ತಪ್ಪನ್ನು ತಿಳಿದು ಪಶ್ಚಾತ್ತಾಪಪಡು ವಂತೆಯಾದರೂ ಮಾಡಲೇಬೇಕು. ಎಂದು ಇಂಥವರ ಸಂಖ್ಯೆ ಕಡಿಮೆ ಯಾಗುವುದೋ, ಎಂದು ಈ ಬಗೆಯ ಜನರು ಇತರರ ಸುಖದುಃಖಗ ಳನ್ನು ಅರಿತು ಇತರರ ನೋವು, ಕಷ್ಟ ತನ್ನದೆಂದು ಭಾವಿಸುವರೋ ಅಂದೇ ಜಗತ್ತು ಮುಂದರಿದು, ಜಗತ್ತಿನ ಮಾನವಕೋಟಿ ಬೆಳೆದು ಜೀವನ ಸಾರ್ಥ ಕತೆಯನ್ನು ಪಡೆಯುವುದೆಂದು ಭಾವಿಸಬಹುದು. ಇಂತಹ ವಿಶ್ವಮಾನವ ಸೌಹಾರ್ದ್ರತೆ ಎಂದು ನೆಲೆಗೊಳ್ಳುವುದೋ ಅಂದೇ ಮಂಗಳದಿನಗಳು ಉದಯಿಸಿದವೆಂದು ತಿಳಿಯಬಹುದು; ಲೋಕ ಕಲ್ಯಾಣದ ಸೌಖ್ಯದ ದಿನ ಅಂದಿನಿಂದಲೇ ಆರಂಭವಾಯಿತೆಂದು ತಿಳಿಯಬಹುದು.

ಭಗ್ನಹೃದಯಿಯಾದ ನಾತು ಕಷ್ಟಕೂಪದಲ್ಲಿ ಮುಳುಗಿ ಮುಳುಗಿ, ಬೇಸತ್ತು ನೆರವಿಗಾಗಿ ಅಲೆದಾಡಿ ನಿರಾಶೆಹೊಂದಿ, ಲೋಕವು ಮಾಡಿದ ಅನ್ಯಾಯವನ್ನು ನೆನೆಯುತ್ತ, ಹಣ್ಣಾಗಿ, ತಲೆಯೆತ್ತಲಾಗದ ಸ್ಥಿತಿಯಲ್ಲಿ ಇದ್ದಾಗ ಈ ಬಗೆಯಾಗಿ ಯೋಚಿಸಿದೆ. ನನ್ನಂಥ ನಿರಾಶಾ ಜೀವಿಗಳು ಅನೇಕರು ಇರುವರೆಂದು ಭಾವಿಸಿದ್ದೇನೆ. ಧೈರ್ಯವಿಲ್ಲದೆ, ಸಮಾಜದಿಂದ ಬಹಿಷ್ಕರಿಸಲ್ಪಟ್ಟು, ನಾಲ್ಕು ಮಂದಿ ಆಡಿಕೊಳ್ಳುವ ಮಾತುಗಳಿಗೆ ಕುಗ್ಗುತ್ತ ನನ್ನ ಆಶಯಗಳನ್ನು, ಹಿಗ್ಗನ್ನು, ಸುಖವನ್ನು ನನ್ನಲ್ಲಿಯೇ ಹುದುಗಿಸಿಟ್ಟು, ನನ್ನ ಮಾತುಗಳನ್ನು ನಂಬಲಾರರೆಂಬ ಸಂಶ ಯದಿಂದ ಮನದಲ್ಲಿಯೇ ಮರುಗಿ, ಅತಿಶಯ ದುಃಖದಿಂದ ನನ್ನ ನಿರ್ಭಾಗ್ಯ ಜೀವನಚರಿತ್ರೆಯನ್ನು ನಿಮಗೆ ಹೇಳುತ್ತೇನೆ. ನೀವೇನಾದರೂ ಭಾವಿಸಿ ಕೊಳ್ಳಿ; ಯಾವ ಬಗೆಯಲ್ಲಾದರೂ ಯೋಚಿಸಿಕೊಳ್ಳಿ. ನನ್ನ ಕಥೆ ಕೇಳಿ ನೀವು ಅಭಿಮಾನ ತೋರಿದರೂ ಸರಿಯೇ; ನನ್ನಲ್ಲಿ ದೋಷ ಕಂಡು ಜರಿ ದರೂ ಸರಿಯೇ; ನಿಮ್ಮ ಮುಂದೆ ನನ್ನ ದೌರ್ಭಾಗ್ಯದ ಕಥೆಯನ್ನು ನಿರೂ ಪಿಸುವೆನು. ಹೀಗೆ ಮಾಡಿದಲ್ಲಿ ನನ್ನ ಮನಸ್ಸು ಹಗುರಾದೀತೆಂದು ಭಾವಿಸು ತ್ತೇನೆ. ಕಂದಿ ಕಮರುತ್ತಿರುವ ಈ ಹೂವಿಗೆ ನೀರೆರೆದರೆ ಅದು ಬೆಳೆಯು ವುದು; ಇಲ್ಲದಿದ್ದರೆ ಅದು ಅಳಿಯುವುದು.

* * * *

ನಾನು ತಂದೆ ತಾಯಿಇಲ್ಲದ ಅನಾಥೆಯಾಗಿ ಬೆಳೆದೆ. ಹುಟ್ಟಿದ ಹತ್ತನೇ

ದಿನದಲ್ಲಿಯೇ ನನ್ನ ತಾಯಿ ಬಾಣಂತಿಬೇನೆಯಿಂದ ಮರಣಿಸಿದಳಂತೆ. ನನ್ನ ಆರೈಕೆಯಲ್ಲಿ ದುಃಖಪಟ್ಟು ಒಂದು ವರುಷದ ನಂತರ ತಂದೆ, ತಾಯಿಯ ಹಾದಿಯನ್ನೇ ಹಿಡಿದನೆಂದು ನನ್ನನ್ನು ಬೆಳೆಸಿ ದೊಡ್ಡವಳನ್ನಾಗಿಸಿದ ಚಿಕ್ಕಪ್ಪ ಹೇಳಿದುದು ನನ್ನ ನೆನಪಿನಲ್ಲಿದೆ. ಚಿಕ್ಕಪ್ಪ ನನ್ನನ್ನು ಬಹು ಅಕ್ಕರೆಯಿಂದ ಬೆಳೆಸಿದ.

ನನ್ನ ತಾಯಿ ಬಹು ಸುಂದರಿಯಂತೆ. ಆಕೆಯ ಚೆಲುವೆಲ್ಲವೂ ನನ್ನಲ್ಲಿ ಮೂರ್ತೀಭವಿಸಿದೆಯಂತೆ. ನನ್ನನ್ನು ನೋಡಿದರೆ ನನ್ನ ತಾಯಿಯೇ ಜೀವಂತ ಎದ್ದು ಬಂದಿರುವಳೆಂಬಂತೆ ತೋರುತ್ತದೆಂಬ ಮಾತು ನನಗೆ ಹರುಷವನ್ನುಂಟು ಮಾಡಿತು. ತಾಯಿಯ ಸುಗುಣಗಳು, ಅಂದಚಂದವು, ನನ್ನಲ್ಲಿ ಪೂರ್ಣ ನೆಲೆಗೊಳಿಸಿ ಹರುಷವನ್ನುಂಟುಮಾಡಿದುದಕ್ಕೆ ಪರಮಾತ್ಮನಿಗೆ ನನ್ನ ಪ್ರಣಾಮಗಳನ್ನು ಅರ್ಪಿಸುವೆ.

ಚಿಕ್ಕಪ್ಪನವರಿಗೆ ಹೆಣ್ಣು ಸಂತತಿ ಇರಲಿಲ್ಲ. ಆದುದರಿಂದ ನಾನು ಪರಊರಿಗೆ ಓದಲು ಹೋದಾಗ ನನಗೆ ಕಷ್ಟವಾಗ ಬಹುದೆಂದು ಗಂಡ ಹೆಂಡಿರಿಬ್ಬರೂ ಮನೆಮಾಡಿಕೊಂಡು ಇದ್ದುಬಿಟ್ಟರು. ಹೆಣ್ಣಿಗೆ ಹೆಚ್ಚು ಓದು ಕಲಿಸುವ ಪದ್ಧತಿ ಹೊಸತಾದರೂ, ಚಿಕ್ಕಪ್ಪ ಮಡಿವಂತರ ಮಾತಿಗೆ ಬೆಲೆ ಕೊಡದೆ, ನನಗೆ ಹೆಚ್ಚಿನ ವಿದ್ಯಾದಾನ ಮಾಡಿದ. ಈ ಪ್ರಗತಿಪರ ಮಾರ್ಗದಿಂದ ಆತನು ಅನೇಕ ಕಷ್ಟಗಳನ್ನು ಅನುಭವಿಸಿದ. 'ಲೋಕವು ನಮ್ಮನ್ನು ಆಡಿಕೊಳ್ಳುತ್ತಿದೆ' ಎಂದು ಹೇಳಿದಾಗ ಆತನು "ತಾಯಿ ನೀನು ಈ ಜನರ ಮಾತಿಗೆ ಬೆಲೆ ಕೊಡಬೇಡ. ನೀನು ಅವರಿಗಾಗಿ ಜನಿಸಿಲ್ಲ. ಯಾವಾಗಲೂ ಲೋಕವು ಮೆಚ್ಚುವಂತೆ ನಡೆಯುವುದು ಸಾಧ್ಯವಿಲ್ಲ. ಈ ಹಾಳು ಸಮಾಜ ನಿನ್ನ ತಂದೆಗೆ ಮಾಡಿದ ಹಾನಿಯನ್ನು ನೋಡಿ ನನಗೆ ಬಹು ಕೋಪ ಬಂದಿದೆ; ದ್ವೇಷವೂ ಉಂಟಾಗಿದೆ. ಆದುದರಿಂದ ಲೋಕದ ಮಾತಿಗೆ ನಾವು ಗಮನ ಕೊಡುವುದು ಅನವಶ್ಯಕ. ನಾನು ಅದನ್ನು ಆದರಿಸುವುದಿಲ್ಲ. ನಾನದರ ಟೀಕೆಗೆ ಕಿವುಡನೇ ಸರಿ. ಅದಕ್ಕೆ ಮನ್ನಣೆಯನ್ನೀಯಲಾರೆ." ಎಂದು ಆಡಿದ ಮಾತುಗಳು ನನಗೆ ಹೆಚ್ಚಿನ ಶಕ್ತಿಯನ್ನು ತಂದು ಕೊಟ್ಟವು. ನನ್ನ ತಂದೆಗೆ ಈ ಲೋಕವೇನು ಮಾಡಿತು? ಸಮಾಜ ಮಾಡಿದ ಅನ್ಯಾಯದಿಂದ ಅವರಿಗೆ ಯಾವ ನೋವಾಯಿತು?

ಎಂಬ ಈ ವಿಷಯಗಳು ನನ್ನನ್ನು ನೋಯಿಸಿ ನನಗೆ ಹೆಚ್ಚಿನ ಅಸಮಾಧಾನವನ್ನುಂಟುಮಾಡಿದವು. ಹೀಗೇಕಾಯಿತೆಂದು ಚಿಕ್ಕಪ್ಪನವರನ್ನು ನಾನೆಷ್ಟು ಸಲ ಕೇಳಿದರೂ ಅವರು ಸಮಾಧಾನವೇ ಹೇಳಲಿಲ್ಲ. ಅವರ ಈ ವರ್ತನೆ ನನಗೆ ಅರ್ಥವಾಗಲಿಲ್ಲ.

* * * *

ನನ್ನ ಉನ್ನತವಿದ್ಯೆಯ ಕಾರಣದಿಂದ ಅದೇ ನಗರದಲ್ಲಿ ನಾನು ಶಾಲೆಯಲ್ಲಿ ಮಾಸ್ತರಿಣಿಯಾಗಿ ಕೆಲಸಕ್ಕೆ ನಿಂತೆ. ನನ್ನನ್ನು ಸಾಕಿ ಬೆಳೆಸಿದವರಿಗೆ ಸಹಾಯಕಳಾಗುವಂತೆ ಈ ಬಗೆಯಾಗಿ ನನಗೆ ಟೀಚರ್ ಕೆಲಸ ದೊರೆತುದು ನನ್ನ ಸುದೈವವೆಂದು ಭಾವಿಸಿದೆ; ದೇವರಿಗೆ ನಮಿಸಿದೆ.

ಹಿಂದಿನ ಕ್ರಿಸಮಸ ಹಬ್ಬದ ದಿನದಲ್ಲಿ........ನ ಪರಿಚಯವಾಯಿತು; ಪರಿಚಯ ಸ್ನೇಹದ ರೂಪ ತಾಳಿತು. ಸ್ನೇಹಬೆಳೆದು ಪ್ರೇಮವಾಗಿ ಪರಿಣಮಿಸಿತು. ಆ ಸ್ನೇಹವು ನಮ್ಮಿಬ್ಬರ ಹೃದಯಗಳನ್ನು ಒಂದಾಗಿಸಿತು. ಲೋಕದ ಸಂತುಷ್ಟಿಗಾಗಿ ನಾವಿಬ್ಬರೂ ಸತಿಪತಿಯಾರಾಗುವುದೆಂದು......

" ನಿನ್ನ ತಂದೆಯನ್ನು ಸಮಾಜವು ತಿರಸ್ಕರಿಸಿತು. ಅದನ್ನು ನಿಮ್ಮ ತಂದೆ ಅಲಕ್ಷಿಸಿದ. ಅವನನ್ನು ನಾವು ಬಹಿಷ್ಕರಿಸಿದೆವು. ಆದುದರಿಂದ ನಾವು ಯಾರೂ ನಿನ್ನ ಮದುವೆಯ ಉತ್ಸವದಲ್ಲಿ ಭಾಗವಹಿಸುವದಿಲ್ಲ. ನಿನ್ನಿಷ್ಟದಂತೆ ನೀನು ವರ್ತಿಸು. ಯಾವನಾದರೂ ನಮ್ಮ ನಿಯಮಗಳಿಗೆ ಎದುರು ನಡೆದನೆಂದರೆ, ಅವನಿಗೂ, ನಿನಗೂ, ಇಬ್ಬರಿಗೂ ನಿನ್ನ ತಂದೆಗಾದ ಗತಿ ಎಂದು ತಿಳಿ " ಎಂದು ಸಮಾಜವು ಬೆದರಿಸಿತು.

" ನಿನ್ನ ಮತವೇ ಬೇರೆ. ನಿನಗೆ ಮತನಿಯಮಗಳಿಲ್ಲ. ಆ ತಂದೆ ತಾಯಿಗೆ ಹುಟ್ಟಿದ ಮಗುವಲ್ಲವೆ ನೀನು ? " ಎಂದು ಮತವು ಕೇಳಿತು.

" ಒಂದು ಸಮಾಜಕ್ಕೆ, ಮತಕ್ಕೆ, ಜಾತಿಗೆ ಸೇರದ ಮನುಷ್ಯರಿಗೆ ಮದುವೆಯ ನಿಯಮವೇಕೆ ? ನೀತಿ ಬಾಹಿರರಾದ ನಿಮಗೆ ನೀತಿಯುತ ಜೀವನವೇಕೆ ? ಇದು ಧನದಾಶೆಗೆಂದು ಮಾಡುವ ಅನ್ಯಾಯವಲ್ಲವೆ ?" ಎಂದು ಲೋಕವು ಹಾಸ್ಯಮಾಡಿ ನಗತೊಡಗಿತು.

ಹೀಗಾದುದರಿಂದ ಮೊದಲಿಗೆ ನನಗೆ ಹುಚ್ಚು ಹಿಡಿದಂತಾಯಿತು. ನನ ಆಶಾಗೋಪುರವು ಕಳಚಿ ಬಿದ್ದಂತಾಯಿತು. ನನ್ನ ಚಿಕ್ಕಪ್ಪನ ಮಾತು

ನೆನಪಿಗೆ ಬಂತು. ಅಹುದು ನೀನು ಲೋಕಕ್ಕಾಗಿ ಜನಿಸಿಲ್ಲ " ಎಂದು ನನ್ನ ಹೃದಯ ಹೇಳಿತು.

ಕೈಕೈಸೇರಿಸುವುದು, ಹೂಮಾಲೆಗಳನ್ನು ಕೊರಳಲ್ಲಿ ಹಾಕಿ ಕೊಳ್ಳುವುದು, ಪಕ್ಕದಲ್ಲಿರಿಸಿದ್ದ ಕ್ರಿಸಮಸ್ ಕೇಕನ್ನು ಮುರಿದು ತಿನ್ನುವುದು, ಇವುಗಳೇ ನಮ್ಮಿಬ್ಬರ ಹೃದಯಗಳನ್ನು ಹತ್ತಿರ ಸೇರುವಂತೆ ಮಾಡಿದವು. ಕತ್ತಲಲ್ಲಿ ಕತ್ತಲು ಸೇರಿ ಕಗ್ಗತ್ತಲಾಗಿಸುವಂತಾಯಿತು. ಈಗ ನಾವಿಬ್ಬರೂ ಒಂದಾದೆವು. ನಾನೇ ಆತ; ಆತನೇ ನಾನು.

ಹೀಗೆ ನಡೆದುದು ನನ್ನ ಸಾಕಿದವರಿಗೆ ಸಂತೋಷವನ್ನುಂಟು ಮಾಡಿತು. ಇವರೆಲ್ಲರೂ ನಮ್ಮನ್ನು ಹರಸಿದರು. " ಹುಲಿಯ ಹೊಟ್ಟೆಯಲ್ಲಿ ಇಲಿ ಎಂದಾದರೂ ಜನಿಸುವುದೆ ? " ಎಂದು ಚಿಕ್ಕಪ್ಪ ಹಿಗ್ಗಿದ.

ಇಷ್ಟಾದ ಮೇಲೆ ನನಗೆ ಮದುವೆಯಶಾಸ್ತ್ರ ಬೇರೆ ಬೇಕೇ ? ಮಂಗಳ ಸೂತ್ರ ಬಂಧನ ಏಕೆ ಬೇಕು ? ನಾಲ್ಕುಮಂದಿಗೆ ನಾನು ಮದುವೆಯಾದೆನೆಂದು ಪ್ರಕಟಿಸ ಬೇಕೆ ? ಅವರೆಲ್ಲಾರೂ ಬಂದುನೋಡಬೇಕೆ ? ಈ ಪ್ರಶ್ನೆಗಳೇ ನನಗೆ ಬೇಕಾದ ಉತ್ತರಗಳನ್ನು ಸೂಚಿಸಿದವು. ಸಮಾಧಾನವಾದಂತಾಯಿತು.

" ಅಹುದು, ಸುಖವಾಗಿ ಜೀವಿಸುವುದಕ್ಕೆ, ಹೃದಯಗಳು ಮಿಲನವಾದಾಗ, ತೋರಿಕೆಗೆ ಮದುವೆ ಬೇರೆ ಬೇಕೇನು ? ನನಗೆ ಹುಟ್ಟಿದ ಮಕ್ಕಳು ನಿನ್ನವಲ್ಲವೆಂದು ಅವು ಎದುರಾಡುವುದಿಲ್ಲವಲ್ಲ ? ಹೀಗಿರುವಾಗ ಲೋಕವು ಮೆಚ್ಚುವುದಕ್ಕೆಂದು ಭಯಬಿದ್ದು ವಿವಾಹ ಮಾಡಿಕೊಳ್ಳಬೇಕೆ ? ಬೇಡ, ನೀನು ಲೋಕಕ್ಕಾಗಿ ಜನಿಸಿಲ್ಲ. ನನಗೆ ಲೋಕಾನುಗ್ರಹ ಬೇಡ " ಎಂಬ ಮಾತುಗಳು ಎಲ್ಲಿಂದಲೋ ಯಾರೋ ಹೇಳಿದಂತೆನಿಸಿತು. ಈ ಮೇಲಿನ ಪ್ರಶ್ನೆಗಳಲ್ಲಿಯೇ ಉತ್ತರ ಅಡಕವಾಗಿದ್ದವು.

* * * *

ಲೋಕ, ಮೊದಲಿಗೆ ನಾನು ಆತನು, ಸುಖದಿಂದಿರುವುದನ್ನು, ಕಂಡು ಬೆರಗುಗೊಂಡಿತು. ಆಶ್ಚರ್ಯದಿಂದ ನೋಡಿತು, ಏನು ಮಾಡಬೇಕೆಂಬುದು ತೋಚದೆ ಮರುಗಿತು. ಕಡೆಗೆ ಅದು ಸೋಲನ್ನೊಪ್ಪಿಕೊಂಡಿತು.

"ಅವಳ ಚೆಲುವಿಗೆ ಮೊಹಿತನಾಗಿದ್ದಾನೆ. ತನ್ನ ದಾಹವನ್ನು ತೀರಿ

ಸಿಕೊಳ್ಳಲು ಅವಳನ್ನು ಸೇರಿದ್ದಾನೆ ಅಭೀಷ್ಟ ನೆರವೇರಿದನಂತರ ಹುಚ್ಚು ನಾಯಿಯಂತೆ ಹೊರಬೀಳುತ್ತಾನೆ.'' ಎಂದು ಕೆಲವರು ಊಹಿಸಿದರು.

"ಅವಳೊಬ್ಬ ದುರ್ನಡತೆಯ ಹೆಣ್ಣು. ಏನೋ ಹುಡುಗ ನೋಡುವುದಕ್ಕೆ ಚೆನ್ನಾಗಿದ್ದಾನೆಂದು ತನ್ನ ಬಲೆಯಲ್ಲಿ ಹಾಕಿಕೊಂಡಿದ್ದಾಳೆ. ಅವನಲ್ಲಿಯ ಹಣ ತೀರಿತೆಂದರೆ ಮತ್ತೊಬ್ಬನ ಮೇಲೆ ಜಾಲಹೂಡುವಳು.'' ಎಂದು ಹಲಕೆಲವರು ತರ್ಕಿಸಿದರು.

"ಎಲ್ಲಿದೆ ನೀತಿ? ಶಾಲಾ ಶಿಕ್ಷಕಿಗೆ ನೀತಿ ಇದೆಯೋ? ನಿಯಮಗಳಿವೆಯೋ? ಇವಳು ಬಹಳ ಬುದ್ಧಿವಂತಳೆಂದು ಅವರಾಗಿಯೇ ಶಾಲೆಯಲ್ಲಿ ಕೆಲಸ ಕೊಟ್ಟಿರುವರೇನು? ಯಾವ ಇನ್ಸ್‌ಪೆಕ್ಟರನೊ, ಬೋರ್ಡ ಮೆಂಬರೋ ಅಥವಾ ಪ್ರೆಸಿಡೇಂಟೋ ಆಸ್ಥೆವಹಿಸಿ ಕೆಲಸ ಕೊಡಿಸಿರಬೇಕು.'' ಎಂದು ಇನ್ನಿತರರು ಆಡಿಕೊಂಡರು.

"ಇವಳಿಗೆ ಹುಟ್ಟುವಮಗ ಯಾರನ್ನಾದರೂ ಪೂರ್ತಿಯಾಗಿ ಹೋಲಬಹುದು. ಇವನಿಗೆ ಹುಟ್ಟಲಿಲ್ಲವೆಂದೇ ಭಾವಿಸಬೇಕು'' ಎಂದು ಆಗದವರು ಆಡಿಕೊಂಡರು.

ಈ ರೀತಿಯಾಗಿ ಜನರು ನಮಗೆ ಕೇಳಿಸಿಯೂ ಕೇಳಿಸದಂತೆ ಆಡಿಕೊಳ್ಳುವುದನ್ನು ಕೇಳಿದೆ. ಅನೇಕ ಸ್ಥಳಗಳಲ್ಲಿ ನಮ್ಮಿಬ್ಬರ ವಿವಾಹದ ಬಗ್ಗೆ ಗೋಡೆಗಳ ಮೇಲೆ ಏನೇನನ್ನೋ ಬರೆದು ಹಾಸ್ಯಮಾಡಿದರು. ಮತ್ತೂ ಇನ್ನಿತರ ವಿಧಗಳಲ್ಲಿ ಹಿಂಸಿಸತೊಡಗಿದರು.

"ಯಾರೂ ಯಾವ ಮಾತನ್ನೂ ಆಡಿಕೊಳ್ಳದಂತೆ ನಾನು ನೋಡಿಕೊಳ್ಳುತ್ತೇನೆ. ನನ್ನ ಸ್ವಸಾಮರ್ಥ್ಯದಿಂದ ಅವರ ಬಾಯಿ ಮುಚ್ಚುತ್ತೇನೆ. ಒಂದುಸಲ ನನ್ನ ಹತ್ತಿರ ಬಂದು ಮಾತನಾಡಿಕೊಂಡು ಹೋಗೆಂದು ಹೇಳು'' ಎಂದು ಓರ್ವ ಭಾರಿವಶೀಲಿಯುಳ್ಳ ದೊಡ್ಡಮನುಷ್ಯ ಹೇಳಿ ಕಳುಹಿಸಿದ.

"ಸಂಘ, ಸಮಾಜವು ನಿನ್ನ ಮೇಲೆ ಹಾಕಿದ ಬಹಿಷ್ಕಾರವನ್ನು ತೆಗೆದು ಹಾಕಿ ಮತ್ತೆ ನಿನ್ನನ್ನು ಕುಲದಲ್ಲಿ ಸೇರಿಸಿಕೊಳ್ಳುವಂತೆ ಮಾಡುವೆನು. ನನ್ನನ್ನು ಕಾಣಬೇಕೆಂದು ಹೇಳು'' ಎಂದು ಹೊಸದಾಗಿ ನೇಮಕವಾದ ಮಠಾಧಿಕಾರಿ ಅಪ್ಪಣೆ ಕೊಡಿಸಿದ.

ಅವಳಿಗೆ ಸಾಕಷ್ಟು ಹಣ ಕೊಡುವೆನು. ಸುಖವಾಗಿ ಕಾಲ ಕಳೆಯ ಬಹುದು. ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ನನ್ನ ಹತ್ತಿರ ಬಂದು ಬಿಡಲಿ '' ಎಂದು ಸೂಚಿಸಿದ ಓರ್ವ ಕೊಬ್ಬಿದ ಶ್ರೀಮಂತ.

" ಈ ನಗರದಲ್ಲಿ ಇನ್ನು ಅವಳು ತಲೆ ಎತ್ತುವಂತಿಲ್ಲ. ಆದುದರಿಂದ ಬೇರೆ ಯಾವ ಊರಿಗಾದರೂ ವರ್ಗ ಮಾಡಿಸಿಕೊಳ್ಳಲು ಅರ್ಜಿ ತೆಗೆದು ಕೊಂಡು ನನ್ನನ್ನು ಕಾಣೆಂದು ಹೇಳು " ಎಂಬ ಸಲಹೆ ಶಾಲಾಇನ್ಸ್ಪೆಕ್ಟ ರನಿಂದ ಬಂತು.

" ಹತ್ತಿರವೇ ಇರುವ ಊರಿನಲ್ಲಿ ಹೆಡ್‌ಮಿಸ್ಟ್ರೆಸ್ ಕೆಲಸ ಖಾಲೀ ಇದೆ. ಅಲ್ಲಿಗೆ ವರ್ಗಾಯಿಸುವೆನು. ಒಂದು ಸಲ ಕಾಣೆಂದು ತಿಳಿಸು '' ಎಂದು ಪ್ರೆಸಿಡೆಂಟನಿಂದ ಸೂಚನೆ ಬಂತು.

" ನಿನ್ನ ಸಂಬಳ ಈಗಲೇ ಒಂದು ನೂರು ರುಪಾಯಿಗಳಿಗೆ ಹೆಚ್ಚಿಸುವ ಸಾಮರ್ಥ್ಯ ನನಗಿದೆ. ಹೆಡ್‌ಮಾಸ್ತರ ನನ್ನ ಕೈಗೊಂಬೆ ನೋಡಿಕೊ........ ಎಂಬ ಬೆದರಿಕೆ ಸಹೋದ್ಯೋಗಿಯಾದ ಟೀಚರನಿಂದ ಬಂತು.

" ಈ ಸಮಾಜದ ಕಾಗಿಗಳ ಮೇಲೆ ಮಾನನಷ್ಟದಾವೆ ಹಾಕಿಬಿ ಡುವ ನನ್ನ ಕಛೇರಿಗೆ ಬಂದು ವಕಾಲತ್‌ನಾಮಾದ ಮೇಲೆ ಸಹಿ ಹಾಕಿ ಹೋಗಲಿ " ಎಂದು ಊರ ಪ್ರಸಿದ್ಧ ವಕೀಲರು ಸೂಕ್ತ ಸಲಹೆಯನ್ನಿತ್ತರು.

" ಪಾಪ, ಈ ಜನರ ಕಾಟದಿಂದ ಆ ಪುಣ್ಯಾತ್ಮಳು ಬಡವಾಗಿ ಹೋಗಿದ್ದಾಳೆ. ಅವಳ ಆರೋಗ್ಯವು ಕೆಟ್ಟು ಹೋದಂತಿದೆ. ಶಕ್ತಿವೃದ್ಧಿಯಾ ಗಲು ಔಷಧ ಕೊಡುತ್ತೇನೆ. ಪರೀಕ್ಷೆ ಮಾಡಬೇಕು. ಒಂದು ಸಲ ನನ್ನ ಆಸ್ಪತ್ರಿಗೆ ಬರಲಿ '' ಎಂದು ಡಾಕ್ಟರನು ಹೇಳಿ ಕಳುಹಿದನು.

* * * *

ಹೀಗೆ ಯಾರಿಗೆ ಹೇಗೆ ತೋಚಿತೋ ಹಾಗೆ ಆಡಿಕೊಳ್ಳುವುದಕ್ಕೆ ಆರಂಭಿಸಿದರು. ಇಂಥ ಧುರಭಿಮಾನಿಗಳನ್ನು ನೋಡಿ ನನಗೆ ಮೊದಲು ನಗು ಬಂತು. ಅವರ ಸಂದೇಶಗಳನ್ನು ಕೇಳಿ ನನಗೆ ಕೋಪ ಬಂತು. ಇಂತಹ ಸಭ್ಯಗೃಹಸ್ಥರು, ಸಮಾಜದಲ್ಲಿ ಸ್ಥಾನಮಾನ ಉಳ್ಳವರು, ನೀತಿ ಯಿಂದ ಬಾಳುವೆಯನ್ನು ಸಾಗಿಸುವ ನನ್ನಂಥ ಗೃಹಿಣಿಯ ಬಗ್ಗೆ ತಾಳುವ ಈ ನೀಚ ಅಭಿಪ್ರಾಯಗಳಿದೆ ನನ್ನೆಗೆ ಉರಿಯತೊಡಗಿತು; ಸಂಕಟದಿಂದ

ನನ್ನ ಹೃದಯ ತಳಮಳಗೊಂಡಿತು. ಅವರಲ್ಲಿ ಅವಿಶ್ವಾಸ ತಲೆದೋರಿತು. ಇಂಥವರ ಹೃದಯಗಳು ಎಂದಿಗಾದರೂ ಪರಿವರ್ತನೆ ಹೊಂದಬಹುದೇ ಎಂದು ಯೋಚಿಸತೊಡಗಿದೆ. ಆದರೆ ಅವರ ಈ ನೀಚ ವರ್ತನೆ ಇನ್ನಿಷ್ಟು ಹೆಚ್ಚುತೊಡಗಿತೇ ಹೊರತು ಅವರ ಮನೋಭಾವನೆ ಬದಲಾಗಲಿಲ್ಲ. ಇವರು ಸತ್ತರೂ ಸಮಾಜವು ಬೇರಾಗುವಂತಿರಲಿಲ್ಲ. ಎಷ್ಟು ವರುಷಗಳುರುಳಿದರೂ ಸಂಘವಾಗಲಿ ಲೋಕವಾಗಲಿ ಸುಧಾರಿಸಲಾರದೆಂದು ನನ್ನ ನಂಬಿಕೆ. ಆದರೂ ಆಶೆ ಮಾತ್ರ ಇನ್ನೂ ದೂರಾಗಿಲ್ಲ. ನನ್ನ ಹೃದಯದ ಒಳದನಿಯೊಂದು ಹೇಳುತ್ತಿದೆ. ಮುಂದೆ ಎಂದಿಗಾದರೂ ಇವರ ಮನೋಗತ ಸುಧಾರಿಸಿ ನಮ್ಮಂಥವರ ಜೀವನ ಸುಗಮವಾಗುವ ಕಾಲ ಬರುವುದೆಂಬ ಹಂಬಲ ನನ್ನದಾಗಿದೆ. ನನ್ನ ಈ ಆಶೆ ಫಲಿಸುವ ಕಾಲ ಎಂದು ಬರುವುದೆಂಬುವುದನ್ನು ಕಾಯುತ್ತ ಕಳಿತಿದ್ದೇನೆ.

# ನಮಶ್ಶಿವಾಯ

## ೧

ದೇವರ ಗುಡಿಯ ಪೂಜೆಗೆ ಆರಂಭವಾದ ದಿನದಿಂದ ಅರ್ಚಕನಾದ ನಮಶ್ಶಿವಾಯನು ಗುಡಿಯಲ್ಲಿ ಹೋಗಿ ಬರುವ ಸುಳಿವೇ ಜನರಿಗೆ ತಿಳಿಯುತ್ತಿರಲಿಲ್ಲ. ಭಕ್ತರು ಗುಡಿಗೆ ಬರುವುದಕ್ಕೆ ಮುಂಚಿತವಾಗಿಯೇ ಸಂಜೆಯ ಅರ್ಚನೆಯನ್ನು ಆರಂಭಿಸಿ ಬಿಡುತ್ತಿದ್ದನು. ಹೆಂಡತಿ ಪಾರ್ವತಿ ಹೂಮಾಲೆಯ ಕೆಲಸವನ್ನು ಮಾಡುತ್ತಿದ್ದಳು.

ನಮಶ್ಶಿವಾಯನ ಭಕ್ತಿಗೆ ಮಲ್ಲೇಶ್ವರ ಸ್ವಾಮಿಯು ಪ್ರಸನ್ನನಾಗಿದ್ದನು. ಪೂಜೆಗೆಂದು ಭಕ್ತಾದಿಗಳು ಹಣ್ಣುಹಂಪಲಗಳನ್ನು, ಇತರ ಕಾಣಿಕೆಗಳನ್ನು ತರುವಂತೆ ಮಾಡಿದನು. ಅವನ ಹಸ್ತದಿಂದ ಕೊಡಲ್ಪಡುವ ಪ್ರಸಾದವನ್ನು ದೈವದತ್ತವೆಂದು, ಅದರಿಂದ ಅನೇಕ ಜನರು ತಮ್ಮ ರೋಗಾದಿಗಳು, ಕಷ್ಟನಷ್ಟಗಳು ದೂರಾಗುವವೆಂದು ನಂಬಿದ್ದರು. ಅವನು ಪುರಾಣ ಪ್ರವಚನ ಮಾಡುತ್ತಿರುವಾಗ ಕೋಗಿಲೆಗಳು ಕೂಡ ಆಲಿಸುತ್ತಿದ್ದವಂತೆ. ಆ ಹಳ್ಳಿಯಲ್ಲಿ ಅವನ ವಿಷಯದಲ್ಲಿ ಎಲ್ಲರೂ ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದರು.

ನಮಶ್ಶಿವಾಯನಿಗೆ ಅನಾನುಕೂಲವಾದಾಗ ಅಳಿಯ ಲಿಂಗಯ್ಯನನ್ನು ಕರೆತಂದು ಪೂಜೆ ನಿಲ್ಲದಂತೆ ನೋಡಿಕೊಳ್ಳುತ್ತಿದ್ದನು.

ನಮಶ್ಶಿವಾಯನ ಮಗ ಮಲ್ಲಯ್ಯ ವಯಸ್ಸಿಗೆ ಬಂದ. ಓದು ಬರಹ ಬಲ್ಲವನು; ಭೂ ಸಾಗುವಳಿ ಕೆಲಸದ ಪೂರ್ಣ ಅರಿವು ಅವನಿಗಿತ್ತು. ಅವನ ಭಾವಮೈದುನ ಲಿಂಗಯ್ಯನೂ ಅವನಿಗೆ ಅನೇಕ ವಿಧದಲ್ಲಿ ನೆರವಾಗುತ್ತಿದ್ದನು.

ಇದರಿಂದ ನಮಶ್ಶಿವಾಯನಿಗೆ ಸಂಸಾರದ ಹೊರೆ ಕಡಿಮೆಯಾಯಿತು. ಅವನಿಗೆ ವಯಸ್ಸು ಅರವತ್ತು. ಅಳಿಯ ಮಗ ಇವರಿಬ್ಬರಲ್ಲೊಬ್ಬರು

ದೇವರ ಗುಡಿಯ ಅರ್ಚನೆ ಮುಂತಾದ ಕೆಲಸಗಳನ್ನು ನೋಡಿಕೊಂಡು ಹೋಗುತ್ತಿದ್ದುದರಿಂದ ತನಗೆ ಇಳಿ ವಯಸ್ಸಿನಲ್ಲಿ ಬೇಕಾದ ವಿಶ್ರಾಂತಿ ದೊರೆಯಿತು.

"ಮನಸ್ಸೇ ದೇವಾಲಯವಾದಮೇಲೆ ಮನುಷ್ಯನು ಇದ್ದಲ್ಲಿಯೇ ದೇವರನ್ನು ಕಂಡು ಪೂಜಿಸಬಲ್ಲ" ಎಂಬ ಮಾತನ್ನು ಅರಿತ ಇವನು ಈ ಬಗೆಯ ವಿಶ್ರಾಂತಿ ದೊರೆತಿರುವುದು ತನ್ನ ಆತ್ಮ ಸಂಸ್ಕಾರಕ್ಕೆ ಅನುಕೂಲವಾಯಿತೆಂದು ಬಗೆದನು. "ಆತ್ಮಲಿಂಗವೇನೆಂಬುದನ್ನು ಅರಿಯದವನು ಗುಡಿಯಲ್ಲಿ ಪೂಜಿಸುವುದು ಕಲ್ಲೇ" ಎಂದು ಅವನ ಭಾವನೆ.

ಆತನು ದಿನವೂ ಗ್ರಾಮದಲ್ಲಿ ಸುತ್ತಿಬರುವುದು ರೂಢಿ. ಊರ ನಡುವೆ ಇರುವ ಅರಳಿಗಿಡವನ್ನು ಸಮೀಪಿಸಿ ಅದರ ಸುತ್ತಾ ಪ್ರದಕ್ಷಿಣೆ ಹಾಕುವಾಗ ಅಲ್ಲಿ ಕತ್ತೆಯಾಗಲಿ, ನಾಯಿಯಾಗಲಿ ಇದ್ದರೂ, ಅವುಗಳಿಗೆ ನಮಸ್ಕರಿಸಿ, ಅವುಗಳಲ್ಲಿಯೇ ದೇವರು ಮೂರ್ತಿಭವಿಸಿ, ಮಾನವರನ್ನು ಕಾಪಾಡುವನೆಂದು ಸ್ತುತಿಸುತ್ತ, ಭಕ್ತಿಯಿಂದ ದೇವರನ್ನು ಮತ್ತೆ ಮತ್ತೆ ನೆನೆದು ಮನೆಗೆ ಹಿಂತಿರುಗುವುದು ಆತನಿಗೆ ರೂಢಿಯ ಕೆಲಸವಾಗಿತ್ತು.

ಕೆಲವರು ಇವನಿಗೆ ಹುಚ್ಚು ಹಿಡಿದಿದೆಯೆಂದು ಭಾವಿಸಿದರು. ಮತ್ತೆ ಕೆಲವರು ಇವನು ಯೋಗಿಯೆಂದು ಇವನಾಡುವ ಮಾತುಗಳಿಗೆ ಬೆಲೆಕೊಟ್ಟು ಪೂಜಿಸತೊಡಗಿದರು. ಅವನು ಯಾತ್ರೆಗೆಂದು ಶ್ರೀಶೈಲ ಮುಂತಾದ ಕ್ಷೇತ್ರಗಳಿಗೆ ಹೋಗಿಬಿಟ್ಟನು.

ನಮುಶ್ಶಿವಾಯನಿಗೆ ಇಪ್ಪತ್ತು ಎಕರೆ ಭೂಮಿ ಇತ್ತು. ಅದರಲ್ಲಿ ಎಲ್ಲವೂ ಸಾಗುವಳಿಯಾಗುತ್ತಿರಲಿಲ್ಲ. ಮಗ ಅಳಿಯಂದಿರು ಸ್ವತಃ ಸಾಗುವಳಿ ಮಾಡುತ್ತಿದ್ದುದರಿಂದ ಅವರ ಆದಾಯವು ಹೆಚ್ಚಿತ್ತು. ಸಂಸಾರದ ಆದಾಯವು ಬೆಳೆದು ಅವರ ಮನೆತನಕ್ಕೆ ಕೀರ್ತಿ, ಅಂತಸ್ತು ಬಂದಿತು. ಮಗನಿಗೊಬ್ಬ ಗಂಡುಮಗು, ಮಗಳಿಗೊಂದು ಹೆಣ್ಣು ಕೂಸು ಜನನವಾಗಿ ಆ ಮುದುಕನಿಗೆ ಆನಂದವನ್ನುಂಟುಮಾಡಿತು. ಈ ಬಗೆಯಾಗಿ ದೇವರ ಕೃಪೆಯಿಂದ ಅವರ ಮನೆತನ ಬೆಳೆದು ಮನೆಯಲ್ಲಿ ಸುಖಶಾಂತಿ ನೆಲೆಸಿದುದರಿಂದ ಅವರಿಗೆ ತಮ್ಮ ಗುಡಿಯ ಈಶ್ವರನ ಮೇಲೆ ಭಕ್ತಿಹೆಚ್ಚಿತು. ಇದೆಲ್ಲ

ವನ್ನೂ ನೋಡಿ ಆನಂದಿಸುವ ಪ್ರಮೇಯ ಯಾತ್ರೆಗೆಂದು ಹೋಗಿದ್ದ ನಮುಶ್ಶಿವಾಯಗೆ ಆಗಲಿಲ್ಲವೆಂದು ಅವನ ಹೆಂಡತಿಯಾದ ಪಾರ್ವತಿ ಮರುಗಿದಳು.

೨

ಕೆಲ ಸಮಯದನಂತರ ಎಂಡೋಮೇಟು ಬೋರ್ಡಿನ ಆಫೀಸರ್ ಆ ಊರಿಗೆ ಬಂದ. ಇಂಥ ಸಣ್ಣಗ್ರಾಮದಲ್ಲಿ ಅವನಿಗೆ ಎದ್ದು ಕಾಣುತ್ತಿದ್ದುದು ಮಲ್ಲೇಶ್ವರನ ದೇವಾಲಯವೇ.

ಗುಡಿಯ ಅರ್ಚಕ ಗ್ರಾಮದ ಪಾಟೀಲ ಕುಲಕರ್ಣಿಗಳು ಬಂದು ಈ ಅಧಿಕಾರಿಗೆ ಆತಿಥ್ಯವನ್ನಿತ್ತು ಚಾವಡಿಗೆ ಕರೆದು ಕೊಂಡು ಹೋದರು. ಪ್ರವಾಸದ ಶ್ರಮವನ್ನಾರಿಸಿ ಕೊಳ್ಳಲು ಆತನು ಮಂಚದ ಮೇಲೆ ಮಲಗಿದ ನಂತರ ಅರ್ಚಕರು ಮುಂತಾದವರು ತಮ್ಮ ಮನೆಗಳಿಗೆ ತೆರಳಿದರು. ಪಾಟೀಲ್ ಹೋಗಬೇಕೆಂದು ಆತನ ಅಪ್ಪಣೆ ಬೇಡಿದಾಗ ನಿಮ್ಮೊಂದಿಗೆ ಮಾತನಾಡಬೇಕಾಗಿದೆ.” ಎಂದು ಹೇಳಿದ.

“ ಆಗಬಹುದು. ”

“ ನಿಮ್ಮೂರ ದೇವಾಲಯದ ಪರಿಸ್ಥಿತಿ ಹೇಗಿದೆ ? ”

“ ಚೆನ್ನಾಗಿಯೇ ನಡೆದಿದೆ. ”

“ ಅರ್ಚಕರು ? ”

“ ಕೆಟ್ಟವರಲ್ಲ ”

‘ ನಿಮ್ಮೂರ ಗುಡಿಗೆ ಒಂದು ಟ್ರಸ್ಟ ನೇಮಿಸ ಬೇಕಾಗಿದೆ.” ಎಂದು ಹೇಳಿದಾಗ ಮತ್ತಾರೋ ಇಬ್ಬರು ಹೊಸಬರು ಬಂದು ನಮಸ್ಕರಿಸಿ ಕುಳಿತುಕೊಂಡರು.

“ ಇವರಾರು ? ”

“ ಈ ದೇವಾಲಯವನ್ನು ಕಟ್ಟಿಸಿದ ಈಲಹಳ್ಳಿ ಮನೆತನದವರು-ಇವರ ಹೆಸರು ಚಲಮಯ್ಯ; ಇವರ ಹೆಸರು ಮಲ್ಲಿಕಾರ್ಜುನ ಬಹಳ ಒಳ್ಳೆಯವರು ”

“ ಚೆನ್ನಾಯಿತು. ನೀವು ಬಂದುದು ಒಳಿತು. ನಿಮ್ಮ ದೇವಾಲಯಕ್ಕೆ ‘ ಟ್ರಸ್ಟು ’ ಏರ್ಪಡಿಸಬೇಕೆಂದು ಬಂದಿದ್ದೇನೆ ”

" ಅಲ್ಲ ಮಹಾಸ್ವಾಮಿ; ಇಲ್ಲಿ ಎಲ್ಲವೂ ಸುರಕ್ಷಿತವಾಗಿ ನಡೆಯುತ್ತಿರುವಾಗ "ಟ್ರಸ್ಟು" ಏತಕ್ಕೆ?"

" ಅವಲ್ರೀ. ಈಗೆಲ್ಲಾ ಸಮವಾಗಿರಬಹುದು. ಮುಂದೆಯೂ ಹೀಗೇ ನಡೆಯುವುದೆಂದು ನಂಬಬಹುದೆ?"

"ಟ್ರಸ್ಟಿನ ಜನರು ಸರಿಯಾಗಿ ವರ್ತಿಸುವರೆಂದು ನೀವು ಹೇಗೆ ಹೇಳುವಿರಿ?"

" ಬೋರ್ಡು ಇರೋದು ಮದರಾಸಿನಲ್ಲಿ. ನಾವು ಇರೋದು ಈ ಹಳ್ಳಿಯಲ್ಲಿ. ಇವೆರಡಕ್ಕೆ ಸಂಬಂಧ ಹೇಗೆ ಕುದುರುವುದು? ಅದೇನೋ ಅಂತಾರಲ್ಲ ಕಾಸಿನ ಸೂಳೀಗೆ......."

" ಗುಡಿಯ ಧರ್ಮಕರ್ತರೇ, ನೀವು ಹೀಗೆ ಮಾತನಾಡಿದರೆ ನಾವೇನು ಹೇಳಬೇಕು? ಒಬ್ಬರು ಎತ್ತೂಂದ್ರೆ ಇನ್ನೊಬ್ಬನು ಕತ್ತೇ ಅಂದಾಂತ ಅಂತಾರಲ್ಲ, ಹಾಗಾಯಿತು ನೀವು ಆಡುವ ಮಾತು."

" ದೇವಾಲಯದಲ್ಲಿ ಪೂಜೆ ಪುನಸ್ಕಾರಾದಿಗಳು ಚೆನ್ನಾಗಿ ನಡೆಯದಿದ್ದರೆ, ಊರಿನ ಜನರೇ ಅದನ್ನು ಸರಿಪಡಿಸಿಕೊಳ್ಳುವರು. ಈಗ ಊರಲ್ಲಿ ಉತ್ಸವಾದಿಗಳು ನಡೆಯುವುದಿಲ್ಲವೆ? ಇರೋದನ್ನು ಕೆಡಿಸಿಬಿಟ್ಟು ಮತ್ತೆ 'ಟ್ರಸ್ಟು' ಏತಕ್ಕೆ ಮಹಾಸ್ವಾಮಿ" ಎಂದು ಮಲ್ಲಿಕಾರ್ಜುನ ಕೇಳಿದ.

" ನಿಮ್ಮ ಮಾತು ನನಗರ್ಥವಾಗುತ್ತಿಲ್ಲ........"

" ಆ ಮಾತು ಹಾಗಿರಲಿ. ನಮ್ಮ ದೇವಸ್ಥಾನಕ್ಕೆ ಹೆಚ್ಚಿನ ಭೂಸ್ಥಿತಿ ಆದಾಯವಿಲ್ಲವಲ್ಲ? ಇತರ ತೊಂದರೆಗಳೇನಾದರೂ ಇದ್ದಿದ್ದರೆ ಸರಕಾರವು ಪ್ರವೇಶ ಮಾಡಬಹುದು." ಎಂದು ಚಲಮಯ್ಯ ಸೂಚಿಸಿದ.

" ಏನ್ರಿ, ನಿಮ್ಮ ಮಾತು? ಧರ್ಮದ ಸಂಸ್ಥೆಗಳೆಲ್ಲವನ್ನೂ ಸರಿಪಡಿಸಿ ಒಂದು ವ್ಯವಸ್ಥೆಯ ಆಡಳಿತೆಯನ್ನು ತರಬೇಕೆಂದು ಸರಕಾರದವರು, 'ರಿಲಿಜಿಯಸ್ ಎಂಡೊಮೆಂಟುಬೋರ್ಡನ್ನು Religious Endowment Board) ಸ್ಥಾಪಿಸಿರುವರು. ಇದರ ದೃಷ್ಟಿಯಲ್ಲಿ ಎಲ್ಲರೂ ಒಂದೇ; ಎಲ್ಲ ಸಂಸ್ಥೆಗಳು ಒಳ್ಳೇ ರೀತಿಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡುವುದೇ ಇದರ ಮುಖ್ಯ ಉದ್ದೇಶ. ಇದು ಕಾನೂನಿನಂತೆ ನಡೆಯುವ ಸಂಸ್ಥೆ. ಇದರ ದೃಷ್ಟಿಯಲ್ಲಿ ಶ್ರೀ ತಿರುಪತಿ ದೇವಸ್ಥಾನವೂ ಒಂದೇ ನಿಮ್ಮ

ಬಡ ಗುಡಿಯೂ ಒಂದೇ ”

“ ಏನು ನಿಮ್ಮ ಕಾನೂನು ? ಅಲ್ಲಾ ಶ್ರೀ ತಿರುಪತಿ ದೇವಸ್ಥಾನ ವೆಂದರೆ ಅದೊಂದು ದೊಡ್ಡ ಸಂಸ್ಥಾನ. ಅದಕ್ಕೆ ಅನೇಕ ಲಕ್ಷದಷ್ಟು ಆದಾಯ. ಈ ಊರ ಜನಸಂಖ್ಯೆ ಎರಡು ಸಾವಿರ. ಇವರಿಂದ ದೇವರಿಗೆಷ್ಟು ಕಾಣಿಕೆ ಸಲ್ಲಬಹುದು ? ನೀವೇ ಯೋಚಿಸಿ, ಈ ಭಾಗ್ಯಕ್ಕೆ ಈ ಗ್ರಾಮ ವಲ್ಲಿ ಎರಡು ಕಕ್ಷಿಗಳು ಬೇರೆ. ಇನ್ನು ನಿಮ್ಮ ಪ್ರಭುತ್ವದ ಪ್ರವೇಶವೂ ಆಯಿತೆಂದರೆ ಊರಲ್ಲಿ ಶಾಂತಿಭಂಗವಾದಂತೇ ಸರಿ ” ಎಂದು ಮಲ್ಲಿಕಾ ರ್ಜುನನು ಅಡ್ಡ ಮಾತನಾಡಿದನು.

“ ಪಾರ್ಟಿಗಳಿದ್ದರಲ್ಲವೆ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುವವು. ಎರಡೂ ಪಕ್ಷದ ಜನರನ್ನು ಸೇರಿಸಿ ‘ ಟ್ರಸ್ಟು ’ ಮಾಡಿದರೆ ಒಳಿತಲ್ಲವೆ ” ಎಂದು ಆಫೀಸರ್ ಸೂಚಿಸಿದ.

ಈ ಹೊತ್ತಿಗಾಗಲೇ ಊರಲ್ಲಿ ಸುದ್ದಿ ಹರಡಿಕೊಂಡಿತು. ಎರಡೂ ಪಾರ್ಟಿಯ ವತಿಯಿಂದ ನೂರರಷ್ಟು ಜನ ಗುಡಿಯ ಆವಾರದಲ್ಲಿ ಸೇರಿದ್ದರು. ‘ಟ್ರಸ್ಟು’ಗೆ ಹಿರಿಯನಾದ ಕುಲಕರ್ಣಿಯನ್ನು ಛೇರಮನ್ನರನ್ನಾಗಿ ಸರ್ವಾನುಮತದಿಂದ ಆರಿಸಿದುದಾಯಿತು. ಇನ್ಸ್ಪೆಕ್ಟರನು ಸರಕಾರದ ಧೋರಣೆಯನ್ನು ಕುರಿತು ಸಣ್ಣ ಭಾಷಣವನ್ನು ಮಾಡಿದ ಈ ಬಗೆಯ ಚುನಾವಣಿಯಿಂದ ದೇವಾಲಯದ ಆಡಳಿತದಲ್ಲಿ ಜನಸಾಮಾನ್ಯರಿಗೆ ಹಕ್ಕು ಇದೆಯೆಂಬ ದೊಡ್ಡ ಪ್ರಜಾಸತ್ತಾತ್ಮಕ ವಿಷಯವನ್ನು ಜನರು ತಿಳಿದುಕೊಂಡು ಹಿಗ್ಗಿದರು.

೨

ಕುಲಕರ್ಣಿಯು ಸರತಿಯಾದನಂತರ ಪಾಟೀಲನ ಹಿರಿತನದಲ್ಲಿ ಮತ್ತೊಂದು ವರುಷ ಕಳೆಯುವುದರಲ್ಲಿರುವಾಗ ಮಲ್ಲಯ್ಯನಿಗೂ, ಆತನ ಹೊಲಗಳ ಪಕ್ಕದಲ್ಲಿದ್ದ ರೈತರಿಗೂ ಸಣ್ಣವ್ಯಾಜ್ಯ ತಲೆದೋರಿತು. ಇವರ ಹೊಲದ ಒಂದು ಮೂಲೆಯಲ್ಲಿ ಹುಲ್ಲಿನ ಬಣವಿಗೆಂದು ಮಣ್ಣಿನ ಗೋಡೆಯ ಕಾಂಪೌಂಡು ನಿರ್ಮಿತವಾಗಿತ್ತು. ಅದು ಬಿದ್ದುಹೋಗಲು, ಮುಂದೆ ಅದನ್ನು ಸರಿಮಾಡುವುದಕ್ಕೆ ಮುನ್ನವೇ ಪಕ್ಕದ ಹೊಲದ ರೈತರು ಆ ಸ್ಥಳ ದಲ್ಲಿ ತಮ್ಮ ಬಣವಿಯ ವ್ಯವಸ್ಥೆ ಮಾಡಿಕೊಂಡು ಆ ನೆಲ ತಮ್ಮದೆಂದು

ತಕರಾರು ತೆಗೆದರು. ಮಲ್ಲಯ್ಯ ಇದ್ದ ವಿವರವನ್ನು ತಿಳಿಸಿ ಕುಲಕರ್ಣಿ ಪಾಟೀಲರ ಮುಂದೆ ಫಿರ್ಯಾದು ಮಾಡಿದ. ಆ ಹೊಲದವರೂ ತಮ್ಮ ಪಕ್ಷ ದವಾದವನ್ನು ಹೇಳಿದರು. ವಿಚಾರಣೆಯನ್ನು ಮಲ್ಲಯ್ಯನಂತೆ ತೀರ್ಪು ಹೇಳಲ್ಪಟ್ಟಿತು. ಮಲ್ಲಯ್ಯ ಯಾವ ದೌರ್ಜನ್ಯವನ್ನೂ ತೋರದೆ ಆ ಒಯಲು ಸೀಮೆಯನ್ನು ಸ್ವಾಧೀನಪಡಿಸಿಕೊಂಡ.

ಇದಾದ ಕೆಲವೇ ದಿನಗಳಲ್ಲಿ ಎಂಡೋಮೆಂಟು ಬೋರ್ಡಿಗೆ ಮೂಕ ಅರ್ಜಿಗಳು ತಲುಪಿದವು.ಅದರಂತೆ 'ಟ್ರಸ್ಟಿ'ನ ಯಜಮಾನ, ಮತ್ತು ದೇವ ಸ್ಥಾನದ ಅರ್ಚಕರು ದೇವರ ದುಡ್ಡನ್ನು ಅಪಹರಿಸುತ್ತಿರುವರೆಂದು ಸೂಚಿಸ ಲ್ಪಟ್ಟಿತ್ತು. ಈ ಅರ್ಜಿಯ ಮೇರೆಗೆ ಬೋರ್ಡಿನವರು ವೀರಾಚಾರಿ, ವೆಂಕ ಟನಾಯುಡು, ಸಾತಾನಿಜಿಯ್ಯರು, ಈ ಮೂರು ಜನರನ್ನೊಳಗೊಂಡ ಹೊಸ 'ಟ್ರಸ್ಟ'ನ್ನು ನೇಮಿಸಿದರು.

ಇದಾವ ಕೆಲವು ದಿನಗಳ ನಂತರ ವೀರಾಚಾರಿ ಜಿಲ್ಲಾ ಕೋರ್ಟಿನವರಿ ಗೊಂದು ವಿನಂತಿ ಕಳುಹಿದನು. "ಕಮೀಷನರ ಕಛೇರಿಯವರು ನೇಮಿಸಿದ ಮೂರು ಮಂದಿ ಟಸ್ಟಿಗಳಲ್ಲಿ ಇತರ ಇಬ್ಬರು ನನ್ನನ್ನೇ ಮೇನೇಜಿಂಗ್ ಟ್ರಸ್ಟಿಯಾಗಿ ಆರಿಸಿರುವುದರಿಂದ, ಹಿಂದೂ ರಿಲಿಜಿಯಸ್ ಎಂಡೋಮೆಂಟ ಕಾನೂನಿನ ೭೮ರ ಸೆಕ್ಷನದಂತೆ ದೇವಸ್ಥಾನದ ಆಸ್ತಿಯೆಲ್ಲಕ್ಕೂ ನಾನೇ ಸರ್ವಾಧಿಕಾರಿಯೆಂದು ನಿರ್ಣಯವಾದಂತಾಯಿತು.ಆದುದರಿಂದ ಅರ್ಚಕರ ಅನುಭೋಗದಲ್ಲಿರುವ ಭೂಮಿಯೆಲ್ಲವನ್ನೂ ನನ್ನ ಸ್ವಾಧೀನದಲ್ಲಿ ಒರು ವಂತೆ ಅಪ್ಪಣೆ ಕೊಡಿಸಬೇಕು" ಎಂದು ಅರ್ಜಿಯಲ್ಲಿ ವಿವರಿಸಿದನು.

ಈ ಅರ್ಜಿಯನ್ನು ಕೋರ್ಟಿನವರ ಪರಿಶೀಲನದಲ್ಲಿರುವಾಗಲೇ ಹೊಲದಿಂದ ಬೆಳೆ ಮನೆ ಸೇರುವ ಸಮಯ ಬಂದುದರಿಂದ ಈ ಕೆಳಗಿನಂತೆ ಮತ್ತೊಂದು ಅರ್ಜಿ ಕಳಿಸಿದ.

"ಬೆಳೆ ಮನೆಸೇರುವ ಸಮಯ ಸಮೀಪಿಸಿದೆ. ಈ ದೇವಸ್ಥಾನದ ಆದಾಯದ ವಿಷಯಕ್ಕೆ ಓರ್ವ ರಿಸೀವರರನ್ನು ನಿಯಮಿಸುವುದು ಅವ ಶ್ಯಕ. ಅರ್ಚಕರು ಬಲವಂತರು. ಊರಲ್ಲಿ ಅವರ ಮಾತು ನಡೆಯುವುದು. ದೇವಸ್ಥಾನದ ಆದಾಯ ಅವರ ಕೈ ಸೇರಿತೆಂದರೆ ಮತ್ತೆ ಅದು ನಮ್ಮ ಕೈ ಸೇರಲಾರದು. ಆದುದರಿಂದ ಈ ಬೆಳೆಯನ್ನು ನನ್ನ ಸ್ವಾಧೀನಕ್ಕೆ ಒರು

ವಂತೆ ಪೋಲೀಸರ ನೆರವಿನಿಂದ ಸಹಕರಿಸಬೇಕೆಂದು ಕೋರುತ್ತೇನೆ"

ಇದರ ಪರಿಣಾಮವಾಗಿ ಕೋರ್ಟಿನವರು ಒಬ್ಬ ರಿಸೀವರನನ್ನು ನೇಮಿಸಿ ದೇವಸ್ಥಾನದ ಆ ವರುಷದ ಆದಾಯವನ್ನು ವೀರಾಚಾರಿಯ ವಶಕ್ಕೆ ಒಪ್ಪಿಸಲಾಯಿತು. ಕೆಲ ಸಮಯದ ನಂತರ ಕೋರ್ಟಿನವರು ಕೊಟ್ಟ ತೀರ್ಪು ಹೀಗಿತ್ತು.

"ಈಲಹಳ್ಳಿಯ ಶ್ರೀ ಮಲ್ಲೇಶ್ವರ ದೇವರ ಭೂಮಿಗಳೆಲ್ಲವನ್ನೂ ಅರ್ಚಕರಿಂದ ಶ್ರೀ ವೀರಾಚಾರಿಯು ಸ್ವಾಧೀನ ಮಾಡಿಕೊಳ್ಳಬಹುದು"

ವೀರಾಚಾರಿಯ ಸಂತೋಷಕ್ಕೆ ಮೇರೆಯೇ ಇರಲಿಲ್ಲ. ಕೋರ್ಟಿನ ತೀರ್ಪಿನಂತೆ ಎಲ್ಲವನ್ನೂ ಸ್ವಾಧೀನಪಡಿಸಿಕೊಂಡನು. ಇದು ನಡೆಯುವಾಗ ರೈತರು ಆಡಿದ ಚುಚ್ಚು ಮಾತುಗಳು ಮಲ್ಲಯ್ಯನನ್ನು ಬಹು ನೋಯಿಸಿದವು. ಆದರೂ ಒಳ್ಳೆಯ ಕಾಲ ಮುಂದೆ ಬರಬಹುದೆಂದು ತಾಳ್ಮೆಯಿಂದ ಸಹಿಸಿಕೊಂಡನು.

೪

ನಮಶ್ಶಿವಾಯ ಎಲ್ಲಿರುವನೆಂಬುದನ್ನು ಮಲ್ಲಯ್ಯ ಹೇಗಾದರೂ ಮಾಡಿ ಪತ್ತೆ ಹಚ್ಚಬೇಕೆಂಬ ಯತ್ನಗಳಲ್ಲಿ ಯಶಸ್ವಿಯಾಗಲಿಲ್ಲ. ಲಿಂಗಯ್ಯನೂ ಮಾವನನ್ನು ಹುಡುಕಿ ಹುಡುಕಿ ಬೇಸತ್ತನು. ಹೀಗಿರಲು ಒಂದು ದಿನ ಎಲ್ಲಿಂದಲೋ ಏನೋ ಆತ ಕಾಣಿಸಿಕೊಂಡನು. ಪಾರ್ವತಿ ಹೊಸ ವಧುವಿನಂತೆ ಆತನನ್ನು ಉಪಚರಿಸಿದಳು. ಮನೆಯಲ್ಲಿ ಮಿಕ್ಕವರೆಲ್ಲರೂ ಆತನಿಗೆ ಉಪಚಾರ ಮಾಡಿದರು. ಎಲ್ಲರೂ ಅದೊಂದು ಸುದಿನವೆಂದು ಹಿಗ್ಗಿದರು.

ತನ್ನ ಯಾತ್ರಾವಿವರಗಳನ್ನು ಹೇಳುವನೆಂದು ಜನರು ಗುಂಪು ಗುಂಪಾಗಿ ಸೇರಿದರು. ಆದರೆ ಆತನು ಮೌನದಿಂದಿದ್ದು ಬಿಟ್ಟು, "ಊರಲ್ಲಿ ಬದಲಾವಣೆಯಾದರೆ ಮಲ್ಲೇಶ್ವರನು ಎಂದೂ ಒಂದೇ ರೀತಿಯೇ" ಎಂಬ ಅಭಿಪ್ರಾಯವನ್ನು ಸೂಚಿಸುವ ದೃಷ್ಟಿಯಿಂದ ದೇವಾಲಯದ ಕಡೆ ಬೆರಳುಮಾಡಿ ತೋರಿಸುತ್ತಿದ್ದ.

ಇವನ ಈ ಮೌನವ್ರತಕ್ಕೆ ಊರ ಜನರು ತಮಗೆ ತೋರಿದಂತೆ ಆಡಿಕೊಂಡರು. ಮೊದಲೇ ಹುಚ್ಚನಾದವನು, ಮೂಕನೂ ಆದನೆಂದು

ಜನರು ಮರುಗಿದರು.

ತಮಗೆ ತಿನ್ನುವುದಕ್ಕಾಗಲಿ, ದೇವನಿಗೆ ಸಮರ್ಪಿಸುವುದಕ್ಕಾಗಲಿ, ಮನೆಯಲ್ಲಿ ಧಾನ್ಯವೇ ಇರಲಿಲ್ಲ.

ನಮಗಿತ್ತುದನ್ನೆಲ್ಲ ಕಸಿದುಕೊಂಡೆಯೊ ಇಂದು
ಮನೆಯಲ್ಲಿ ಏನಿಲ್ಲ ನೀಡಲಿಕ್ಕೆ ನಿನಗಿಂದು
ಹೆತ್ತವನು ಓದೇವ ದಯತೋರು ಬಂದಿಂದು,
ಕೆಟ್ಟವರ ಸೊಕ್ಕನಿದೆ ಮುರಿದು ಪೊರೆನೀನಿಂದು.

ಎಂದು ಮಲ್ಲಯ್ಯ, ಲಿಂಗಯ್ಯ ದೇವರ ಮುಂದೆ ಕುಳಿತು ದಿನವೂ ಪ್ರಾರ್ಥನೆಯನ್ನು ಸಲ್ಲಿಸಿದರು. ಮುಂದೇನುಮಾಡುವುದನ್ನು ಅರಿಯದೆ ಬೆಲೆಬಾಳುವ ಎತ್ತುಗಳನ್ನು ಮಾರಿ ಸಾಲವನ್ನು ತೀರಿಸಿ ಮಿಕ್ಕ ಹಣ ದಿಂದ ಕೊಂಚ ಧಾನ್ಯವನ್ನು ಕೊಂಡು ಜೀವಿಸತೊಡಗಿದರು.

ರೈತರು ತಮ್ಮ ಹೊಲಗಳಲ್ಲಿ ಕೆಲಸವನ್ನೆಲ್ಲ ನಿರ್ವಹಿಸುತ್ತಿದ್ದರು. ಭೂಮಿತಾಯಿ ಹತ್ತರಷ್ಟು ಬೆಲೆಯನ್ನು ಕೊಡುವಳೆಂಬ ಆಶೆಯಿಂದ ಸೇವೆ ಮಾಡುತ್ತಿದ್ದರು. ಮಳೆ ಇಲ್ಲದೆ ನೆಲವು ಬಿರುಕು ಬಿಟ್ಟನಿಂತ ತಗ್ಗುಗಳಲ್ಲಿ ದನಕಾಯುವವರು ನರ್ತನ ಮಾಡುತ್ತಿದ್ದರು. ನಿಸರ್ಗದ ಬಯಲಿನಲ್ಲಿ ಇವರು ಹೀಗೆ ನರ್ತಿಸುವ ನೋಟ ಜಗತ್ತು ಶೂನ್ಯವೆಂದು ಸಾರುತ್ತಿತ್ತು. ಆ ಅನಂತ ಬಯಲಿನಲ್ಲಿ ದನಗಳು ಮೇಯುವ ಆ ನೋಟ ಆನಂದವನ್ನುಂಟು ಮಾಡುತ್ತಿತ್ತು. ಹಸಿರು ಹುಲ್ಲನ್ನು ಮೇಯುತ್ತಲಿದ್ದ ಅದೇ ಬಯಲಿ ನಲ್ಲಿ ಪೈರಿನ ಭಾಗ್ಯವನ್ನು ನೋಡುವೆವೆಂಬ ಆಶೆಅವುಗಳ ಮೂಕ ನೋಟ ಸಾರುತ್ತಿತ್ತು. ವೀರಾಚಾರಿ ಕೋರ್ಟಿನ ಹುಳ. ವ್ಯಾಜ್ಯವೆಂದರೆ ಅವನೆದೆ ಕುಣಿಯುತ್ತಿತ್ತು ಎಲ್ಲಾ ಬಗೆಯ ವ್ಯವಹಾರಗಳಲ್ಲಿ ಅನುಭವವುಳ್ಳ ಅವನಿಗೆ ಕೋರ್ಟ ಮತ್ತು ಕಾಯಿದೆಯ ಎಲ್ಲ ವಿವರಗಳೂ ತಿಳಿದಿದ್ದವು. ಅವನಿಗೆ ಒಂದು ಇಂಚೂನೆಲವಿರಲಿಲ್ಲ. ರೈತನಕೆಲಸವಂತೂತೀರ ಹೊಸತು. ಆದುದ ರಿಂದ ತನ್ನ ಸ್ವಾಧೀನಕ್ಕೆ ಬಂದ ದೇವಸ್ಥಾನದ ಇಪ್ಪತ್ತು ಎಕರೆ ಭೂಮಿ ಯನ್ನು ಸ್ವಂತಸಾಗುವಳಿ ಮಾಡುವ ಗೋಜಿಗೆ ಹೋಗದೆ ಮಲ್ಲಯ್ಯನಿಗೆ ಕೊಟ್ಟರೆ ಅವನೆಷ್ಟು ತಿಂದುಬಿಡುವನೋಯೆಂಬ ಭಯದಿಂದ, ವೆಂಕಟನಾ ಯುಡು ಮತ್ತು ಸಾಶಾನಿಜಿಯ್ಯರ ಇವರಿಗೆ ಗುತ್ತಿಗೆಗೆ ಕೊಟ್ಟುಬಿಟ್ಟನು.

ದಿನಗಳುರುಳಿದಂತೆಲ್ಲ ನಮಶ್ಶಿವಾಯನ ಮನೆಯಲ್ಲಿ ದಾರಿದ್ರ್ಯ ದೇವತೆ ತಾಂಡವವಾಡಹತ್ತಿದಳು. ಊರುಬಿಟ್ಟು ಹೋದರೆ ಅವರು ಸುಖದಿಂದ ಜೀವಿಸಬಹುದೆಂಬ ಯೋಚನೆ ತಲೆದೋರಿತು. ಆದರೆ ತಲೆತಲೆಗಳಿಂದ ಸೇವೆಮಾಡಿಕೊಂಡು ಬಂದ ಮಲ್ಲೇಶ್ವರನ ಪೂಜೆ ತೊರೆದು ಹೋಗುವು ದುಚಿತವಲ್ಲವೆಂದು ಊರುಬಿಡದೆ ಆತನ ಸೇವೆಯಲ್ಲಿ ನಿರತರಾದರು.

ಮಲ್ಲಯ್ಯ ಲಿಂಗಯ್ಯ ತಮ್ಮೊಳಗೆ ತಾವೇ ಯೋಚಿಸಿದರು. ಊರು ಬಿಡಬಾರದು; ಊರಲ್ಲಿಯೇ ಇದ್ದು ಬಂದ ಕಷ್ಟದಿಂದ ದೂರಾಗಬೇಕು. ಇವೆರಡೂ ನೆರವೇರುವ ಹಾದಿ ಕಂಡುಹಿಡಿಯಬೇಕೆಂದು ಯೋಚಿಸಿದರು. ಪಾಟೀಲ ಕುಲಕರ್ಣಿಯವರನ್ನು ಕಂಡು ಮುಂದಿನ ಹಾದಿ ನಿರ್ಧರಿಸ ಬೇಕೆಂದು ಅವರ ಮನೆಗೆ ಹೋಗಲು ಅವರಲ್ಲಿರಲಿಲ್ಲ. ಚಾವಡಿಯಲ್ಲಿರ ಬಹುದೆಂದು ನೆನೆದು ಅಲ್ಲಿಗೆ ಹೋದರು.

ಅವರನ್ನು ಕಂಡು ಇಬ್ಬರೂ "ನಾವು ನಿಮ್ಮಿಬ್ಬರಲ್ಲಿ ಭೂ ಸಾಗುವಳಿ ಮಾಡಲು ಬಂದಿದ್ದೇವೆ. ನಮಗೆ ಜೀವಿಸಲು ಬೇರೆ ಮಾರ್ಗವೇ ಇಲ್ಲವೆಂದು ಹೇಳಲು "ನಾಳೆ ನೀವು ಮನೆಗೆ ಬನ್ನಿ, ಸಿಧಾನವಾಗಿ ವಿಚಾರಿಸುವ. ಈಗ ಬೇಡ. ನನ್ನ ಮಾತು ಕೇಳಿ'' ಎಂದು ಸಾಮಾಧಾನ ಹೇಳಿ ಕಳಿಸಿದರು

ಗ್ರಾಮ ಪ್ರದಕ್ಷಿಣ ಮಾಡುತ್ತಿದ್ದ ನಮಶ್ಶಿವಾಯನಿಗೆ ಇವರ ಈ ಮಾತುಗಳು ಶೂಲದಂತೆ ಚುಚ್ಚಿದವು.

ಪಾಟೀಲ ಕುಲರ್ಣಿಯರಿಬ್ಬರೂ ಸೇರಿ ಹಳೆಯ ರಿಕಾರ್ಡುಗಳೆಲ್ಲವನ್ನೂ ಹುಡಿಕಿ ಒಂದು ಅರ್ಜಿಯನ್ನು ಸಿದ್ಧಪಡಿಸಿದರು. ಅದರ ವಿವರ ಹೀಗಿತ್ತು:

" ನಮಶ್ಶಿವಾಯನವರು ಈಲಹಳ್ಳಿಯಲ್ಲಿ ಸ್ಥಾಪಿತವಾಗಿರುವ ಶ್ರೀ|| ಮಲ್ಲೇಶ್ವರ ದೇವರ ದೇವಾಲಯದಲ್ಲಿ ವಂಶಪಾರಂಪರ್ಯವಾಗಿ ಪೂಜೆ ಮಾಡುತ್ತ ಬಂದ ಅರ್ಚಕ ಮನೆತನದವರು. ಇವರ ತಾತ ಮುತ್ತಾತಂದಿ ರುಗಳು ಇಲ್ಲಿಯೇ ಮನೆಮಾಡಿಕೊಂಡಿದ್ದರು. ಈ ದೇವಾಲಯ ನಿರ್ಮಿತ ವಾದಂದಿನಿಂದ ಇಂದಿನವರೆಗೂ ಇವರ ಮನೆಯವರೇ ತಪ್ಪದಂತೆ ಅರ್ಚಕ ರಾಗಿರುವರು.

ಇದು ಸುಮಾರು ನೂರು ವರುಷದ ಹಿಂದೆ ನೆಲೆಸಿದ ದೇವಾಲಯ. ಮಂತ್ರಿಗಳೂ, ಶಿವಭಕ್ತರೂ ಆದ ಶ್ರೀ ವಿಯ್ಯಣ್ಣರೆಂಬ ಮಂತ್ರಿಗಳು

ಇವನ್ನು ಕಟ್ಟಿಸಿದರು. ಜಮೀನ್ದಾರರಿಗೆ ಇವರ ಮೇಲಿದ್ದ ಅಭಿಮಾನ ದಿಂದ ನಿತ್ಯ ನೈವೇದ್ಯ ದೀಪಾರಾಧನೆಗೆಂದು ಅರ್ಚಕರಿಗಿದ್ದ ಭೂಮಿಯ ಮೇಲಿನ ಒಂದು ನೂರಾ ಎರಡು ರೂಪಾಯಿಯ ಕಂದಾಯವನ್ನು ಮಾಫೀ ಮಾಡಿಸಿದರು.

"ಇದರ ಒಕ್ಕಣಿಕೆ ಜಮೀಂದಾರರ ಲೆಕ್ಕಪತ್ರಗಳಲ್ಲಿದೆ. ಅಲ್ಲಿ ಈ ದೇವಾಲಯವಾಗಲಿ ಈ ಇನಾಂಭೂಮಿಗಳ ವಿಚಾರವಾಗಲಿ ಇನಾಂ ಕಮೀಷನರರ ತಪಾಸಣೆಯಲ್ಲಿ ಬಂದಿಲ್ಲ. ಅವರ ವಿಲಾವರಿ ಪಟ್ಟಿಯಲ್ಲಿ ನಮುಶ್ಶಿವಾಯರವರ ಭೂಮಿಗಳ ಉಲ್ಲೇಖನವೇ ಇಲ್ಲ. ಇನಾಂ ಪಟ್ಟಿಯಲ್ಲಿಯೂ ಈ ಭೂಮಿಗಳ ವಿವರಗಳಾವೂ ಇಲ್ಲ.

ಆದುವರಿಂದ ಮೇಲ್ಕಾಣಿಸಿದನಮುಶ್ಶಿವಾಯಳವರ ಭೂಮಿಗಳಮೇಲೆ ಹಿಂದೂ ರಿಲಿಜಿಯಸ್ಸು ಎಂಡೋವ್ಮೆಂಟು ಬೋರ್ಡಿನವರಿಗೆ ಯಾವ ಅಧಿಕಾರವೂ ಇಲ್ಲ. ಒಂದು ವೇಳೆ ಅಧಿಕಾರವೇನಾದರೂ ಇದ್ದರೆ, ಪ್ರತಿವರುಷವೂ ಸಲ್ಲಿಸಬೇಕಾಗಿರುವ ಶಿಸ್ತು ಹಣವಾದ ಒಂದು ನೂರಾ ಎರಡು ರೂಪಾಯಿಗಳಮೇಲೆ ಈ ಬೋರ್ಡಿಗೆ ಅಧಿಕಾರವಿದೆ. ಮಂತ್ರಿ ಗಳು ಮಾಫಿ ಮಾಡಿಸಿದಂತೆ ಅದನ್ನು ಮಾಫಿ ಮಾಡಿಸಿ ಕೊಳ್ಳುವ ವಿಚಾರ ಮುಂದೆ ವಿಚಾರಮಾಡಲಾತು."

ಈ ಅರ್ಜಿಯ ವಿವರವನ್ನು ಮಲ್ಲಯ್ಯ ಲಿಂಗಯ್ಯ ನೋಡಿದರು. ಈ ಮಾತು ಮಲ್ಲಯ್ಯಗೆ ಆತನ ಅಜ್ಜ ಹೇಳಿದಂತೆ ನೆನಪಿತ್ತು. ಅವರಿ ಬ್ಬರೂ ಸೇರಿ ಮುಂದೆನು ಮಾಡಬೇಕೆಂದು ಕೇಳಿದರು.

"ನೀವು ಟ್ರಸ್ಟಿಗಳಮೇಲೆ ಕೇಸುಮಾಡಲೇ ಬೇಕು. ನಿಮಗೆ ಬೇಕಾದ ಧನ ಸಹಾಯ ನಾವು ಮಾಡುವೆವು. ಅದನ್ನು ನೀವು ಹಿಂದಿನಿಂದ ಮೆಲ್ಲಗೆ ತೀರಿಸಬಹುದು. ಈಗಲೇ ನಿಮ್ಮ ಹೊಲಗಳನ್ನು ನೀವೇ ಸಾಗು ವಳಿಮಾಡುವ ವ್ಯವಸ್ಥೆ ಮಾಡಿರಿ. ನಿಮ್ಮ ಎದುರಾಳಿಗಳಿಂದ ಏನಾದರೂತಕ ರಾರು ಬಂದರೆ ನಿಮ್ಮ ಜನರ ನೆರವಿನಿಂದ ಅವರನ್ನು ಪ್ರತಿಭಟಿಸಿರಿ. ಸ್ವಲ್ಪ ವಿಕೋಪಕ್ಕಿಟ್ಟುಕೊಂಡು ಅವರೊಂದಿಗೆ ಕೈಗೆ ಕೈ ಹಚ್ಚಿ ಹೆಣ ಗಾಡುವ ಪ್ರಸಂಗ ಬಂದರೂ ಹಿಂಜರಿಯಬೇಡಿ. ನಾವು ಹಿಂದೆನಿಂತು ಸಹಾಯಮಾಡುವೆವು." ಎಂದು ಪಾಟೀಲರು ಹೇಳಿದರು.

ಈ ಮಾತಿಗೆ ಮಲ್ಲಯ್ಯ "ನಮ್ಮ ಕೇಸು ಕೋರ್ಟಿನಲ್ಲಿ ಸೋತು ಹೋದರೆ ? "

" ನಿಮಗೆ ಜಯವೆಂದಿಗೂ ಕಟ್ಟಿದ ಬುತ್ತಿಯೇ. ಬೋರ್ಡಿನವರು ನಿಮ್ಮ ವಿಷಯದಲ್ಲಿ ಅನ್ಯಾಯ ಮಾಡಿರುವರು. ನಿಮಗೆ ಕಾಗದ ಪತ್ರಗಳ ಒಲವಿದೆ. ದ್ರವ್ಯಸಹಾಯ ನಾವು ಮಾಡುವೆವು. ಜನರ ನೆರವೂ ನಿಮಗೆ ದೊರೆಯುವುದು. ನಿಮಗೆ ಗೆಲುವು ಖಂಡಿತ." ಎಂದು ಕುಲಕರ್ಣಿ ಸೂಚಿಸಿದ.

" ಯುದ್ಧದಲ್ಲಿ, ಕೋರ್ಟಿನ ವ್ಯವಹಾರದಲ್ಲಿ ಜಯಾಪಜಯಗಳು ನಿರ್ಧರಿಸುವುದು ಕಷ್ಟ. ಆದುದರಿಂದ ನಮಗೆ ಅನುಕೂಲವಾಗದಿದ್ದರೆ, ನಾವು ಜೀವಿಸುವುದೇ ಕಷ್ಟವಾಗಬಹುದಲ್ಲವೆ?" ಎಂದು ಮಲ್ಲಯ್ಯ ಅನುಮಾನದಿಂದ ಮಾತನಾಡಿದ.

" ಪಾಟೀಲ, ಕುಲಕರ್ಣಿಯರ ಸಹಾಯ ಸಿಕ್ಕಿರುವಾಗ ಯಾಕಯ್ಯಾ ಯೊಚನೆ. ನಾವೆಲ್ಲಾ ಇದ್ದೀವಿ." ಎಂದೊಬ್ಬ ರೈತ ಹೇಳಿದ.

." 'ಹೇಳುವವರ ಮಾತು ಕೇಳಿ ಮಾಡಿದವ ಕೆಟ್ಟಾಂತ' ಎಂಬ ಮಾತಿನಂತೆ ನೀನೂ ಕೆಡಬೇಡಯ್ಯ" ಎಂದು ವಿರುದ್ಧಪಕ್ಷದ ರೈತನೊಬ್ಬನು ಹೇಳಿದ.

ಮುಂದೆ ವ್ಯವಹಾರವು ಸರಿಯಾಗುವುದಿಲ್ಲವೆಂದು ಭಾವಿಸಿ ಮೂರನೆಯ ದಿನ ನಿರ್ಧಾರಕ್ಕೆ ಬರುವುದೆಂದು ನಿಶ್ಚಯಿಸಿದರು. ಮಲ್ಲಯ್ಯ ಲಿಂಗಯ್ಯ ತಮ್ಮ ಮನೆಗೆ ಹೋದರು.

ಊರಲ್ಲಿ ಕಕ್ಷಿಗಳಿರುವಾಗ ಯಾವುದೂ ಸಮವಾಗಿ ನಡೆಯುವುದಿಲ್ಲ. ಇಂತಹ ವಿರುದ್ಧಪಕ್ಷದವರಲ್ಲಿ ಸ್ನೇಹ ಬೆಳೆಯಬಾರದೆಂದು ಯತ್ನಿಸುವವರೇ ಬಹಳ. ಈ ಎಲ್ಲ ಮಾತುಗಳು ಚಾವಡಿಯಲ್ಲಿ ಕೂತು ಕೇಳುತ್ತಿದ್ದ ಸಾತಾನಿಜಿಯ್ಯರನಿಗೆ ಕೋಪಬಂತು."ಅಲ್ಲರೀ, ಕುಲಕರ್ಣಿರಾಯರೇ, ಪೂಜಾರಿಗೆ ಮನಸ್ಸಿಲ್ಲ. ನಿಮ್ಮದೇನು ಇದರಾಗ ಪುಸಲತ್ತು? ನೀವು ಸುಮ್ಮನಿರ್ರಿ" ಎಂದು ಹೇಳಿದ.

" ಇದರಲ್ಲಿ ನಿನಗೇನಾಗೋದದೆ ? ನೀನು ಸುಮ್ಮನಿರು." ಎಂದು ಕುಲಕರ್ಣಿ ಪ್ರತಿಭಟಿಸಿದ.

ಮಾತಿಗೆ ಮಾತು ಬೆಳೆಯಿತು. ರೋಷಹೆಚ್ಚಿತು. ಚಾವಡಿಯ ಮುಂದೆ ವಿರುದ್ಧಪಕ್ಷದವರಿಂದ ಸೇರಿದ ಜನರಲ್ಲಿ ಗಲಭೆಯಾಗುವ ಸಂಭವವಿತ್ತು.

ಈ ಹೊತ್ತಿಗೆ 'ಹಾದಿ, ಹಾದಿ' ಎಂಬ ಗಂಭೀರದ ಕೂಗು ಕೇಳಿ ಬಂತು. ಆದಾರದಾಗಿರಬಹುದೆಂದು ನೆನೆದು ಕಾಳಗವಾಡಲು ನಿಂತ ಜನರು ತಮ್ಮ ಕೈಕೋಲುಗಳನ್ನು ಕೆಳಗಿರಿಸಿ, ಆಗಂತುಕನಿಗೆ ದಾರಿ ಬಿಟ್ಟು ನಿಂತುಕೊಂಡರು. ನಮಃಶಿವಾಯ ಚಾವಡಿಯ ಕಟ್ಟೆಯನ್ನೇರಿ ಎಲ್ಲರನ್ನೂ ಕುಳ್ಳಿರುವಂತೆ ಸೂಚಿಸಿ "ರೈತರೆ, ಊರ ಮುಖ್ಯಜನರೇ. ಈ ಸಣ್ಣ ವಿಷಯಕ್ಕೆ ನಿಮ್ಮಲ್ಲಿ ಜಗಳ ಬೇಡ. ಜನರಲ್ಲಿರುವ ಲೋಪದೋಷಗಳನ್ನು ತಿದ್ದುವುದು ಯಾರಿಂದ ಸಾಧ್ಯ? ಶಿವಪರಮಾತ್ಮನು ತನ್ನ ತಲೆಯ ಮೇಲಿದ ಚಂದ್ರನ ಡೊಂಕನ್ನು ತಿದ್ದಲು ಆತನಿಗೂ ಸಾಧ್ಯವಾಗಲಿಲ್ಲ. ಭಕ್ತರಿಷ್ಟುಮಂದಿಗಳಿರುವಾಗ ಮಲ್ಲೇಶ್ವರನಿಗೇನು ಕಡಿಮೇ? ಅವನೇಕೆ ಉಪವಾಸವಿರಬೇಕು?" ಎಂದು ಹೇಳಿ ತನ್ನನ್ನು ಹಿಂಬಾಲಿಸಿಬಂದು ಹಿಂದೆ ನಿಂತಿದ್ದ ಮಗ ಅಳಿಯರನ್ನು ನೋಡಿ, "ಮಕ್ಕಳಿರಾ, ನಿಮ್ಮ ಭಿಕ್ಷಾಪಾತ್ರೆ ಅಕ್ಷಯವಾಗಲಿ. ನೀವೂ ನನ್ನಂತೆ ಜೋಳಿಗೆ ಹಾಕಿಕೊಂಡು ಭಿಕ್ಷೆಗೆನಡೆಯಿರಿ. ಈ ಊರಲ್ಲಿಯ ನೆರವು ಕಡಿಮೆಯಾದರೆ, ನೆರೆಯ ಊರುಗಳಿರುವವಲ್ಲ. ಹೊರಡಿ" ಎಂದು ತಾನು ಧರಿಸಿದ್ದ ಅಂಗವಸ್ತ್ರವನ್ನು ಎರಡು ತುಂಡುಮಾಡಿ. 'ಭವತೀ ಭಿಕ್ಷಾಂದೇಹಿ' ಎಂದು ಬೇಡುತ್ತ ಅಲ್ಲಿ ನೆರೆದಿದ್ದ ಜನರಮುಂದೆ ಮೂರೂಮಂದಿ ಬಂದು ನಿಂತರು.

## ಮೂಲ ಲೇಖಕರ ಪರಿಚಯ

**(೧) ಹೂ ಅರಳಿತು**— ಶ್ರೀ ಗುಡಿಪಾಟಿ ವೆಂಕಟಾಚಲಂ— ಏಲೂರು.

ತೆಲುಗು ಸಾಹಿತ್ಯದಲ್ಲಿ ಹೊಸ ಸಂಪ್ರದಾಯಕ್ಕೆ ಕಾರಣರಾದ ವೀರೇಶಲಿಂಗಂ ಪಂತುಲು ಇವರ ಶಿಷ್ಯರು ಸಣ್ಣ ಕತೆ ಮೂಲಪುರುಷರಾದ ಶ್ರೀ ಗುರಿಜಾಡ ಅಪ್ಪಾರಾಯರ ಹಾದಿಯನ್ನು ಅನುಸರಿಸಿ, ಇದರ ಸ್ವರೂಪವನ್ನು ಬೆಳೆಸಿದ ಕೀರ್ತಿ ಇವರದು. ಕತೆ, ಕಾದಂಬರಿ, ಪ್ರಭಂಧ, ನಾಟಕಗಳಲ್ಲಿ ಇವರು ಕೈಯಾಡಿಸಿದ್ದಾರೆ. ವಿದ್ಯಾಖಾತೆಯಿಂದ ನಿವೃತ್ತರಾದ ಇವರದು ಮೊದಲಿನಿಂದಲೂ ಸಮಾಜವನ್ನು ಸುಧಾರಿಸುವಧ್ಯೇಯ ಇವರ ಲೆಕ್ಕಣಿಕೆ ಕನ್ನಡದ ಶ್ರೀರಂಗರಂತೆ ಬಹು ಚುರುಕು; ವೇಗದಿಂದ ಓಡುತ್ತದೆ. ಸಾಹಿತ್ಯದಲ್ಲಿ ವಾಸ್ತವಿಕತೆ ಇರಲೇಬೇಕೆಂಬುವರಲ್ಲಿ ಇವರು ಮುಖ್ಯರು. ಮೂವತ್ತು ಗ್ರಂಥಗಳಿಗೆ ಮಂಚಿದಷ್ಟು (ಗ್ರಂಥಗಳನ್ನು) ಬರೆದಿದ್ದಾರೆ. ಈಗಾಗಲೇ ಇವರ ಕಾದಂಬರಿ "ವಿಧಿ ತಂದ ವಧು" ವೆಂಬ ಹೆಸರಿನಲ್ಲಿ ಶ್ರೀ ವೆಂಕೋಬಾಚಾರ್ಯರು ಕನ್ನಡಕ್ಕೆ ತಂದಿದ್ದಾರೆ. ಸ್ತ್ರೀ ಸಮಾಜದ ಅಭಿವೃದ್ಧಿಗಾಗಿ ದುಡಿದು ಹಣ್ಣಾಗಿ, ಜೀವನದಲ್ಲಿ ದುಃಖ ಪರಂಪರೆಗಳನ್ನು ಅನುಭವಿಸಿ, ಈಗ ಶ್ರೀ ರಮಣ ಮಹರ್ಷಿಗಳ ಶಿಷ್ಯರಾಗಿ ಶಾಂತಿ ಪಡೆಯಲು ತವಕಿಸುತ್ತಿರುವರು.

**(೨) ಮೂವರು ಮುದುಕರು** :— ಶ್ರೀ ಕಪ್ಪಗಂತಲ ಸತ್ಯನಾರಾಯಣ–ಮದ್ರಾಸ್

ಇವರಿನ್ನೂ ಯುವಕರು. (Madras Mail ಪತ್ರಿಕೆಯ ಉಪಸಂಪಾದಕರು. "ಪ್ರಪಂಚದರ್ಶನ" ವೆಂಬ All India Directory) ತೆಲುಗಿನಲ್ಲಿ ಪ್ರತಿ ವರುಷವೂ ಹೊರಡಿಸುತ್ತಿರುವರು. ಇವರ ಕಥಾಸಂಗ್ರಹಗಳು ಆರು ಪ್ರಕಟವಾಗಿರುವುದಲ್ಲದೆ ನಾವು ಆರಿಸಿರುವ ಈ ಕತೆ ಭಾರತದ ಇತರ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟಿದೆ.

**(೩) ಆಣೆಕಲ್ಲಿನ ಮಳೆ :—** ಶ್ರೀ ಅಡವಿ ಬಾಪಿರಾಜು–ಭೀಮವರಂ

ಇವರು ಸಾಹಿತ್ಯ— ಕಲಾರಾಧನೆಗೆ ತಮ್ಮ ಜೀವನ ಮೀಸಲಾಗಿರಿಸಿರುವರು. ೧೯೩೦ ರಲ್ಲಿ ವಕೀಲ ವೃತ್ತಿಗೆ ಶರಣು ಹೊಡೆದು, ಕಾಂಗ್ರೆಸ್ಸನ್ನು ಸೇರಿ, ಜೇಲನ್ನು ಹೊಕ್ಕು ಸ್ವತಂತ್ರ ವೃತ್ತಿಯಲ್ಲಿರುವರು. ಇವರು ಉಜ್ವಲ ಕವಿಗಳು. ಇಲ್ಲಿ ಶ್ರೀ ಬೇಂದ್ರೆ, ಪುಟ್ಟಪ್ಪನವರಂತೆ, ಅಲ್ಲಿ ಬಾಪಿರಾಜು, ವಿಶ್ವನಾಥ ಸತ್ಯನಾರಾಯಣರ ಹೆಸರುಗಳು ಮನೆಮಾತಾಗಿವೆ. ಇವರ ಕಾದಂಬರಿ "ನಾರಾಯಣರಾವು" ಆಂಧ್ರ ವಿಶ್ವವಿದ್ಯಾಲಯದ ಪ್ರಥಮ ಬಹುಮಾನ ಪಡೆದಿದೆ. "ಇವರ ಕೈಯಲ್ಲಿ ಕುಂಚವೂ, ದನಿಯಲ್ಲಿ ಕಾವ್ಯವೂ ಇದೆ" ಕವಿ ಶಿಲ್ಪಿಯಾದ ಶ್ರೀ ಆನಂದರಂತೆ ಇವರ ಕೃತಿಯಲ್ಲಿ ಮೃದುವಾದ ಕಲ್ಪನೆ ಬಹಳ. ಇಲ್ಲಿ ಆರಿಸಿದ ಇವರ ಕತೆಯು "ಭಾರತಿ" ರಜತೋತ್ಸವ ಸಂಚಿಕೆಯಲ್ಲಿ ಪ್ರಕಟವಾಗಿದೆ.

**(೪) ತಪ್ಪು ತಿಳುವಳಿಕೆ :—** ಶ್ರೀ ಕೆ. ಕುಟುಂಬರಾವು ಬಿ. ಎ. ಮದ್ರಾಸ್.

ಶ್ರೀಯುತರು ರಭಸದ ಬರಹಗಾರರು. ಕಾಶೀ ವಿದ್ಯಾಪಿಠದಲ್ಲಿ ವ್ಯಾಸಂಗಮಾಡಿ, ಸರಕಾರ ಪ್ರಕಟನಾ ಶಾಖೆಯಲ್ಲಿದ್ದು ಈಗ ಆಂಧ್ರ ಪತ್ರಿಕೆಯ ಉಪಸಂಪಾದಕರಾಗಿರುವರು. ಇವರ ಕಥಾರಚನಾಶಕ್ತಿ ಅದ್ಭುತವಾದುದು. ಇವರ ಕತೆ ಇಲ್ಲದ ಪತ್ರಿಕೆ ಇಲ್ಲವೆನ್ನಬಹುದು. ಇವರ ಕಾದಂಬರಿಗಳಲ್ಲಿ ಮುಖ್ಯವಾದ "ಕುಲಂಲೇನಿ ಮನಿಷಿ" ಕನ್ನಡಕ್ಕೆ "ಕುಲವಿಲ್ಲದ ಹೆಣ್ಣು" ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ರಸಿಕರು ಅವರ ಮನೆಯೊಂದು ಸರಸ್ವತೀನಿಲಯ. ಇಲ್ಲಿ ಆರಿಸಿದ ಕತೆ "ಪಶ್ಚಾತ್ತಪ್ತುಡು" ಎಂಬ ಕತೆಯ ಅನುವಾದ.

**(೫) ಸಭ್ಯತೆ :—** ಶ್ರೀ ನಾರ್ಲ ವೆಂಕಟೇಶ್ವರರಾವು ಎಂ. ಎ. ಮದ್ರಾಸು.

ಬಹುಜನ ಪ್ರಿಯವಾದ "ಆಂಧ್ರಪ್ರಭಾ" ದಿನಪತ್ರಿಕೆಯ ಸಂಪಾದಕರಾದರೂ, ವಾರ, ಮಾಸಿಕ, ವಿಶೇಷ ಸಂಚಿಕೆಗಳಿಗೆ ಬರೆಯುವ ಇವರ ಸೌಜನ್ಯ ಸಾಹಿತ್ಯಪ್ರೇಮ ಮೆಚ್ಚತಕ್ಕದ್ದೇ. "ಕಥಾತೋರಣ" ದಲ್ಲಿಯ "ಸಭ್ಯತ" ಎಂಬ ಕತೆಯ ಅನುವಾದವಿದು. ಇವರು ಪ್ರ

ಭಾವಂತ ಲೇಖಕರು. ಉತ್ತಮ ಭಾಷಣಕಾರರೂ ಅಹುದು. ಇವರ ಏಕಾಂಕನಾಟಕಗಳು ಬಹು ಹಾಸ್ಯಮಯವಾಗಿರುತ್ತವೆ. ಇವರ ಈ ಕತೆ ಬಿಕ್ಷುಕನ ನಿತ್ಯತೃಪ್ತಿಯ ಜೀವನವನ್ನು, ಸಮಾಜದ "ತೋರಿಕೆಯ ಸಭ್ಯತೆ"ಯನ್ನು ಸೂಚಿಸುತ್ತದೆ

**(೬) ನಿನ್ನ ಋಣ ತೀರಿಸಿಕೊಂಡೆ :**— ಶ್ರೀ ವಿಶ್ವನಾಥ ಸತ್ಯನಾರಾಯಣ, ವಿಜಯವಾಡ.

ಕವಿವರ್ಯ ಸತ್ಯನಾರಾಯಣರ ಕವನಗಳನ್ನು ಓದದೆ, ಕೇಳದೆ ಇರುವ ಆಂಧ್ರನಿಲ್ಲ. ವಿಜಯವಾಡದ ಎಸ್. ಆರ್. ಆರ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ರಸಮಯ ಸೃಷ್ಟಿ, ನಿಸರ್ಗದಲ್ಲಿಯ ಸೊಬಗನ್ನು ಕಂಡು ಅದರ ಚಿತ್ರಣದಲ್ಲಿ ಆನಂದವನ್ನೂ ಸವಿಯುವ ಈ ವ್ಯಕ್ತಿಗೆ ಸೌಜನ್ಯವೇ ಪ್ರಧಾನ ಗುಣವೆಂದು ಹೇಳಬಹುದು. ಇವರ ಭಾವ ಪ್ರಧಾನವಾದ ಕೃತಿಗಳು ಜನರನ್ನು ಮೆಚ್ಚಿಸಿದೆ. ಪಂಡಿತರನ್ನು ತಲೆತೂಗಿಸಿದೆ. ಇವರ ಶೈಲಿಯಲ್ಲಿ ಬಿಗುವಿದೆ. ಹಿಡಿತದಿಂದ ಬರೆಯುವ ಇವರ ಬರೆಹಗಳಿಗೆ ಬೆಲೆಯಿದೆ. "ನೀ ಋಣಂ ತೀರ್ಚುಕೊನ್ನಾ" ಎಂಬ ಈ ಕತೆಯನ್ನು "ಕಥಾತೋರಣ"ದಿಂದ ಆರಿಸಲಾಗಿದೆ.

**(೭) ಸಂಕ್ರಾಂತಿ ಹಬ್ಬ :**— ಶ್ರೀ ಮುನಿಮಾಣಿಕ್ಯಂ ನರಸಿಂಹ ರಾವ್, ಮಚಲೀಪಟ್ನಂ.

ಇವರು ಮಚಲೀಪಟ್ಟಣದ ಹಿಂದೂ ಹೈಸ್ಕೂಲಿನಲ್ಲಿ ಅಧ್ಯಾಪಕರು ತಿಳಿ ಹಾಸ್ಯ ಪ್ರಧಾನವಾದ ಇವರ ಸಣ್ಣ ಕತೆಗಳು ತೆಲುಗು ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇವರನ್ನರಿಯದ ಆಂಧ್ರರ ಮನೆಯೇ ಇಲ್ಲವೆಂದು ಹೇಳಬಹುದು. ಕಣ್ಮರೆಯಾದ ತಮ್ಮ ಪತ್ನಿ ಶ್ರೀಮತಿ ಕಾಂತಂ, ಇವರ ಕತೆಗಳ ನಾಯಕಿ ತಮ್ಮ ಸಂಸಾರ ಜೀವನದ, ಮಿತ್ರ, ಬಂಧು ವರ್ಗದವರ, ಸುತ್ತಲೂ ಸಂಭವಿಸುವ ಸನ್ನಿವೇಶಗಳನ್ನೊಳಗೊಂಡ ಇವರ ಚಿತ್ರಗಳು ಸಾಹಿತ್ಯದಲ್ಲಿ ಸತ್ಯವನ್ನು ನಿರೂಪಿಸುವವು. ಈಗಾಗಲೇ ಇವರ ಹತ್ತಿಪ್ಪತ್ತು ಪುಸ್ತಕಗಳು ಹೊರಬಿದ್ದಿವೆ. ಏಕಾಂಕಗಳನ್ನು ಬರೆದಿದ್ದಾರೆ. ಅವುಗಳು ಆಕಾಶವಾಣಿಯ ಮೂಲಕ ಪ್ರಸಾರವಾಗಿವೆ. "ಹಾಸ್ಯ ಸ್ವರೂಪ-ಪ್ರಯೋಜನ" ವೆಂಬುದರ ಬಗ್ಗೆ ಹೆಚ್ಚು ಅಧ್ಯ

ಯನನ್ನೂ ಮಾಡಿರುವರು. ವಿನೋದ ಪೂರ್ಣವಾದ ಕತೆಗಳು ಇವರಿಂದ ಹುಟ್ಟರದಿದ್ದರೂ ಬೆಳೆಯಿಸಲ್ಪಟ್ಟವೆ. ಕನ್ನಡದ ಕತೆಗಾರರಾದ ಶ್ರೀ ಮಾಸ್ತಿ ಅವರ ರಂಗಪ್ಪನ ಮದುವೆ, ಇಂದಿರೆಯೋ ಅಲ್ಲವೋ, ರಂಗಸ್ವಾಮಿಯ ಅವಿವೇಕ ಇವುಗಳಲ್ಲಿ ಕಂಡುಬರುವ ಸೂಕ್ಷ್ಮ ಹಾಸ್ಯ ಮಾನಸಿಕ ನಿರೀಕ್ಷಣೆ ಇವರ ಸೊತ್ತು ಇಲ್ಲಿ ಆರಿಸಿರುವ ಈ ಕತೆ ಇಂತಹದೆಂದೇ ನಮ್ಮ ಭಾವನೆ.

**(೮) ಪಿತೃಹೃದಯ**:— ಶ್ರೀಮತಿ ಇಲ್ಲಿಂದಲ ಸರಸ್ವತೀದೇವಿ ಹೈದರಾಬಾದ್.

ಹೈದರಾಬಾದದ ಪ್ರೊ. ಕೆ. ಸೀತಾರಾಮರಾಯರ ಪತ್ನಿ. ಇವರ "ಪಂಡುಗ ಒಹುಮಾನಂ" ಎಂಬ ಕಥಾಸಂಗ್ರಹದಿಂದ ಇದನ್ನು ಆರಿಸಿಕೊಳ್ಳಲಾಗಿದೆ. ಹೈದರಾಬಾದದ ಆಂಧ್ರ ಯುವತೀ ಮಂಡಲಿಯ ಮುಖ್ಯರು. ತೆಲಂಗಾಣಾದಲ್ಲಿ ಆಂಧ್ರ ಸಾಹಿತ್ಯಾಭಿರುಚಿಯನ್ನುಂಟುಮಾಡಿದವರಿವರು. ಇವರ ಕತೆಗಳಿಗೆ ಆಂಧ್ರರಲ್ಲಿ ಹೆಚ್ಚು ಬೆಲೆ ಇದೆ. ಅವರು ಚಿಕ್ಕವರಾಗಿರುವುದರಿಂದ ಉತ್ತಮ ಕತೆಗಳು ಹೆಚ್ಚು ಹೊರಬಂದು ಆಂಧ್ರ ಸಾರಸ್ವತವು ಬಲಗೊಳ್ಳಲೆಂದು ನಮ್ಮಾಶೆ.

**(೯) ಧರ್ಮಬುದ್ಧಿ**:— ಶ್ರೀ ಧನಿಕೊಂಡ ಹನಮಂತರಾವು ತೇನಾಲಿ.

ಇವರ "ಲೋಕಚರಿತ್ರೆ ಇಲವೇಲ್ಪು ಮುಂತಾದಕಾದಂಬರಿಗಳು. ಕನ್ನಡಕ್ಕೆ ಅನುವಾದವಾಗಿವೆ. 'ಧನ್ವಂತ್ರಿ' ಮುಂತಾದ ಕತೆಗಳು "ಸುಭೋದ" ದಲ್ಲಿ ಪ್ರಕಟವಾಗಿದೆ. ಇವರು ದಾಂಪತ್ಯ ವಿಜ್ಞಾನ ಸಾಹಿತ್ಯವನ್ನು ಹರಡಿಸಿ, ಜನರನ್ನು ಎಚ್ಚರಿಸುವ ದೃಷ್ಟಿಯಿಂದ "ಕಲಿಯುಗ"ದ ಗೋಪಾಲಕೃಷ್ಣರಾಯರಂತೆ; "ಅಭಿಸಾರಿಕೆ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಪ್ರಗತಿಶೀಲ ಲೇಖಕರಾದ ಇವರ ಕತೆಗಳು ಇತರ ಭಾಷೆಗಳಲ್ಲಿಯೂ ಅನುವಾದವಾಗಿವೆ.

**(೧೦) ಕತೆಗಾರನ ಕನಸು**:— ಶ್ರೀ "ಅಮರೇಂದ್ರ" ಪ್ರೊ. (ಸಿ. ನರಸಿಂಹಶಾಸ್ತ್ರಿ ಎಂ. ಎ) ಗುಂಟೂರು.

ಗುಂಟೂರಿನ ಹಿಂದೂ ಕಾಲೇಜಿನ ಇಂಗ್ಲೀಷ ಪ್ರಾಧ್ಯಾಪಕರು.

ಇವರು ಆಗಾಗ್ಗೆ "ಭಾರತಿ ಆಂಧ್ರಜ್ಯೋತಿ''ಗಳಲ್ಲಿ ಬರೆಯುವುದುಂಟು. ರಾಜಕೀಯ ರಂಗದಲ್ಲಿ ನಾವು ಸಾಧಿಸಲಿರುವ ಐಕ್ಯತೆಯನ್ನು ಸಾಹಿತ್ಯಕಲೆಗಳಿಂದ ಸಾಧಿಸಬಹುದೆಂದು ಭಾವಿಸುವವರಲ್ಲಿ ಇವರೊಬ್ಬರು.

**(೧೧) ಆಶಾಜ್ಯೋತಿ :**— ಟಿ. ಗೋಪಿಚಂದ್ ಬಿ. ಎ. ಬಿ. ಎಲ್. ಮದ್ರಾಸ್.

ವಕೀಲ ವೃತ್ತಿಯೊಂದಿಗೆ ಬೆರೆತಿರುವ ಇವರ ಕಲಾಮಯ ಜೀವನ ಆದರ್ಶವೆನ್ನಬಹುದು. ಅನೇಕ ಉತ್ತಮ ತೆಲುಗು ಚಿತ್ರಗಳಿಗೆ ಕತೆ ಭಾಷಣಗಳನ್ನು ಬರೆಯುವುದಲ್ಲದೆ, ಕೆಲವು ಚಿತ್ರಗಳನ್ನು ನಿರ್ದೇಶಿಸಿರುವರು. ಇವರೊಬ್ಬ ಆಶಾಜೀವಿಗಳು. ತೆಲುಗಿನ ಉತ್ತಮ ಪತ್ರಿಕೆಗಳಲ್ಲಿ ಇವರ ಕತೆಗಳನೇಕ ಪ್ರಕಟವಾಗುತ್ತಿವೆ.

**(೧೨) ಗಡ್ಡಲು :**— ಶ್ರೀ ಕೆ. ಕೃಷ್ಣಮೂರ್ತಿ. ಮುಂಬಯಿ.

ನೂತನ ಕಥಾಸಾಹಿತ್ಯದ ಪ್ರಭಾವಶಾಲಿಯಾದ ಶ್ರೀ ಕುಟುಂಬರಾಯರ ತಮ್ಮಂದಿರು. ಇವರ "ಮಾಲೋಮೋಮು'' ಎಂಬ ಕಥಾಸಂಗ್ರಹವು ಹೊರಬಿದ್ದಿದೆ. ಇದೂ ಶ್ರೀ ಮುನಿಮಾಣಿಕ್ಯಂರವರದಂತೆ ಸ್ವಂತಅನುಭವ ಚಿತ್ರವೆನ್ನಬಹುದು. ಭಾರತಿಯಲ್ಲಿ ಇವರ ಅನೇಕ ಕತೆಗಳು ಪ್ರಕಟವಾಗಿವೆ. "ಚೆದಲು" ಎಂಬ ಇಲ್ಲಿಯ ಈ ಕತೆ ಒಂದು ವ್ಯಂಗಾರ್ಥವನ್ನು ನಿರೂಪಿಸುವ ಚಿತ್ರವೆನ್ನಬಹುದು. ಇವರು ಮುಂಬಯಿಯಲ್ಲಿ ಆಂಧ್ರ ಭಾಷಾ ಪ್ರಚಾರ ಕಾರ್ಯದ ಸಂಸ್ಥೆಯಲ್ಲಿ ಕೆಲಸಕ್ಕಿರುವರು. ಕಲಾನಿಧಿ ಎಂಬ ಮಾಸಪತ್ರಿಕೆಯನ್ನು ೧೯೩೫ ರಲ್ಲಿ ಹೊರಡಿಸಿ ನಿಲ್ಲಿಸಿದ್ದಾರೆ. Bombay P. T. I. ದಲ್ಲಿದ್ದರು.

**(೧೩) ಹಸಿವು :**— ಶ್ರೀ ಕೆ. ಲಿಂಗರಾಜು. ಹನುಮನಕೊಂಡ.

೧೯೩೯ ರಿಂದಲೂ ಬರೆಯುತ್ತ ಬಂದಿರುವ ಇವರ ವ್ಯಕ್ತಿ ಚಿತ್ರಗಳು, ಹಾಸ್ಯ ಲೇಖನಗಳು, ಕತೆಗಳು ಕನ್ನಡಕ್ಕೆ ಬರುವುದೇ ಇದೇ ಮೊದಲನೆಯ ಸಲ. ಇವರಿಗೆ ಕನ್ನಡ ತಿಳಿಯುವುದೆಂದು ನಮ್ಮ ಭಾವನೆ. ಇವರ ಕತೆಗಳಲ್ಲಿ ಕರುಳಿನ ಮಿಡಿತ ಹೆಚ್ಚಾಗಿ ಕಾಣುವುದು. ಅಲ್ಲದೆ ಸಮಾಜದ ಲೋಪದೋಷಗಳನ್ನು ತಿದ್ದುವ ದೃಷ್ಟಿಯಿಂದ ಅನೇಕ ವಾಸ್ತವಿಕ ಚಿತ್ರಗಳನ್ನು ಬರೆದಿರುವರು. 'ಹಸಿವು' ಎಂಬಲ್ಲಿ ಅವರು ಅನುಸ

ರಿಸಿದ ಕಥಾ ನಿರ್ವಹಣ ಹೊಸತೆಂದು ಆರಿಸಲಾಗಿದೆ. ಇವರು ಓರಂಗಲ್ ಜಿಲ್ಲೆಯ ಹನುಮನಕೊಂಡದಲ್ಲಿ ರೆವಿನ್ಯೂ ಖಾತೆಯಲ್ಲಿರುವರು.

**(೧೪) ನಮಶ್ಶಿವಾಯ :**— ಶ್ರೀ ವೇಲೂರಿ ಶಿವರಾಮ ಶಾಸ್ತ್ರಿಗಳು. ಆತಕೂರು.

ಇವರು ಉಭಯ ಭಾಷಾ ಪಂಡಿತರು. ವಿಜ್ಞಾನ, ಭೂಗೋಳ ಶಾಸ್ತ್ರಗಳನ್ನು ಸಂಸ್ಕೃತ ಗ್ರಂಥಗಳ ಮೂಲಕ ಅಧ್ಯಯನ ಮಾಡಿರುವರು. ಸುಮಾರು ೨೫ ವರುಷಗಳಿಂದ "ಭಾರತಿ"ಯಲ್ಲಿ ತಪ್ಪದೇ ಕತೆಗಳನ್ನು ಬರೆಯುತ್ತ ಬಂದಿರುವರು. ಇವರದು ಆಧ್ಯಾತ್ಮಿಕ ದೃಷ್ಟಿ. ಇವರ ಶೈಲಿ ಹೆಚ್ಚು ಗ್ರಾಂಥಿಕವೇ. "ಶಾಸ್ತ್ರಿಗಳ ಉಕ್ತಿ ಸೌಲಭ್ಯ ತೆಲುಗಿನ ಬರಹದಲ್ಲೇ ಕಡಿಮೆ. ಗಾಳಿಯಿಂದ ಬರವಣಿಗೆ ಓಡುತ್ತದೆ. ವಿಮರ್ಶೆಯಲ್ಲಿ ಒಳ್ಳೆಯ ಪ್ರತಿಭೆ." ಪ್ರಕಟವಾದ ಈ ಕತೆಯನ್ನು ತೆಲುಗು "ಭಾರತಿ" ಯಿಂದ ಆರಿಸಲಾಗಿದೆ.

---

## BLESSINGS

Kannada is certainly enriched if highly original works in other languages are translated or adapted in chaste Kannada.

**HON. R. R. DIWAKAR.,**
MINISTER FOR INFORMATION AND
BROADCASTING GOVT. OF INDIA

I think it is really a good idea to translate into Kannada western literature particularly of high standard.................·····your's therefore is an attempt in the right direction and is bound to be appreciated.

**Y. R. GHORPADE**
RAJASAHEB OF SANDUR

# ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು:— ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ.)

ಇದಕ್ಕೆ

## ಬೇಗ ಚಂದಾದಾರರಾಗಲು ಕಾರಣಗಳು

೧. ೬೦೦ ಪುಟಗಳಷ್ಟು ನಾಲ್ಕು ಪುಸ್ತಕಗಳಿಗೆ ವಾರ್ಷಿಕ ಚಂದಾ ರೂ. ೫–೪–೦

೨. ಸುಂದರ ಮುಖಪುಟದ ಉತ್ತಮ ಕಾಗದಗಳ ಪ್ರತಿ.

೩. ಸರಸ ಹೆಸರಾಂತ ಸಾಹಿತ್ಯ ಕೃತಿಗಳು.

ಇದಕ್ಕೆ

## ಏಜಂಟರಾಗಲು ಸಕಾರಣಗಳು:

೧. ಧಾರಾಳವಾದ ಕಮೀಷನ್

೨. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ಸವಲತ್ತುಗಳು.

## ಮಾಲೆಯ ಈ ಕೆಳಗಿನ ಪುಸ್ತಕಗಳು ಮಾರಟಕ್ಕೆ ಸಿದ್ಧವಾಗಿವೆ.

೧. ಅರ್ಪಣ (ಮೊಪಾಸಾನ ಕಥಾಸಂಗ್ರಹ) ೧—೮—೦

೨. ಹೂ ಅರಳಿತು (ಪ್ರಸಿದ್ಧ ತೆಲುಗು ಕಥಾಸಂಗ್ರಹ) ೨—೪—೦

ವಿವರಗಳಿಗೆ ಬೇಗ ಬರೆಯಿರಿ.

**ಪಿ. ವ್ಹಿ. ಆಚಾರ್ಯ & ಕಂ.**

ಸಂಚಾಲಕರು

೩೧೬೦ ಗೌಳಿಗಲ್ಲಿ (ದುರ್ಗದಬೈಲು) ಹುಬ್ಬಳ್ಳಿ.



## ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ.

ಇವರು ೧೯೩೯ ರಿಂದ ಪದವೀಧರರಾಗಿ ೧೯೪೬ ರಲ್ಲಿ ಅಚ್ಮೀರ ಜನರಲ್ ಅಶ್ಯೂರನ್ಸ್ ಕಂಪನಿಯನ್ನು ಸೇರಿ ಶಾಖಾ ಮೆನೇಜರರಾಗಿ ೧೯೪೫ ರಲ್ಲಿ ಹುಬ್ಬಳ್ಳಿಗೆ ವರ್ಗಾಯಿಸಲ್ಪಟ್ಟರು. ಇಲ್ಲಿ ಅನೇಕ ಸಾಹಿತ್ಯ, ಸಾಮಾಜಿಕ ಚಟುವಟಿಕೆಗಳಲ್ಲಿ ಮುಖ್ಯ ಭಾಗವಹಿಸಿರುವರಲ್ಲದೆ, ಧಾರವಾಡ ಜಿಲ್ಲೆಯ ಆರನೆಯ ಸಾಹಿತ್ಯಸಮ್ಮೇಲನ, ಮತ್ತು ಶ್ರೀ ಸತ್ಯಬೋಧ ವಾಚನಾಲಯದ ೧೨ ನೆಯ ವಾರ್ಷಿಕೋತ್ಸವದಲ್ಲಿ ಪ್ರಮುಖ ಪಾತ್ರ ವಹಿಸಿರುವರು. ಇವರ ಸಾಹಿತ್ಯ ಗುರು, ಕವಿವರ್ಯ ಶ್ರೀ ದ ರಾ. ಬೇಂದ್ರೆ, ಎಂ. ಎ. ಪಾಶ್ಚಾತ್ಯ ಮತ್ತು ಭಾರತದ ವಿವಿಧ ಭಾಷೆಯ ಕತೆ, ಕಾದಂಬರಿಗಳನ್ನು ಕನ್ನಡಕ್ಕೆ ತರುವ ಬಹು ಅಭಿರುಚಿ ಇವರದು. "ಪಥಿಕಂದ ವಧು" "ಕುಲವಿಲ್ಲದ ಹೆಣ್ಣು" "ವೃಂದ" ಇವುಗಳನ್ನು ಇವರು ತೆಲುಗಿನಿಂದ ತಂದ ಕಾದಂಬರಿಗಳು. ಇವರು ಬರೆದ "ಅರ್ಪಣ" (ಮೊಪಸಾನ ಕಥಾಸಂಕಲನ) ಇದೇ ಗ್ರಂಥಮಾಲೆಯ ಮೊದಲನೆ ಕುಸುಮವಾಗಿ ಅರಳಿ ಬಹು ಜನ ಪ್ರಿಯವಾಗಿವೆ. ಇದಲ್ಲದೆ ಇವರು ಬರೆದ ನೂರಾರು ಕತೆಗಳು ವಿವಿಧ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಇಲ್ಲಿಯ ರೋಟರಿ ಕ್ಲಬ್ಬಿನ ಸದಸ್ಯರಾಗಿದ್ದಾರೆ.

ಇವರ ಜನನ ಬಳ್ಳಾರಿ ಜಿಲ್ಲೆಯಲ್ಲಿ (೧೯೧೫). ಸಣ್ಣವಯಸ್ಸಿನಿಂದಲೂ ಸಾಹಿತ್ಯ, ನಾಟಕ, ನೃತ್ಯಗಳಲ್ಲಿ ಆಸಕ್ತಿ ಹೆಚ್ಚು. ಇವರು ದಿವಂಗತ ನಟ ಸಾಮ್ರಾಟ್ ಟಿ. ರಾಘವಾಚಾರ್ಯರ ಶಿಷ್ಯರು. ಅನೇಕ ನಾಟಕಗಳಲ್ಲಿ ಭಾಗ ವಹಿಸಿದ್ದಾರೆ. ಇವರ ಚಿರಂಜೀವಿಗಳಾದ ಕುಮಾರ ಆನಂದ ಮತ್ತು ಕುಮಾರಿ ಲೀಲಾ, ಇವರ ನೃತ್ಯ ಪ್ರದರ್ಶನ ಹುಬ್ಬಳ್ಳಿಯಲ್ಲಿ ಅನೇಕ ಸಲ ನಡೆದಿವೆ. ಇವರ ಚಿರಂಜೀವಿಗಳಾದ ಪಿ. ವೇಣುಗೋಪಾಲರು ತಮಿಳು ಮತ್ತು ತೆಲಗು ಭಾಷೆಯಿಂದ ಸಣ್ಣ ಕಥೆಗಳನ್ನು ಅನುವಾದಿಸಿ ಕನ್ನಡ ಸಾಹಿತ್ಯ ಸೇವೆ ಮಾಡುತ್ತಿರುವರು. ಇವರ ಮನೆ ಅದೊಂದು ಸಾಹಿತ್ಯ 'ಮಂದಿರ' ಕಲಾಮಂಟಪವೆಂದರೂ ತಪ್ಪಲ್ಲ.